ಶುಕ್ರವಾರ, ಅಕ್ಟೋಬರ್ 18, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಂಗಳೂರಿನಲ್ಲಿ ಗುರುವಾರ ಆಯೋಜಿಸಲಾಗಿದ್ದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಜಾನಪದ ಕಲಾವಿದರು ಪ್ರದರ್ಶನ ನೀಡಿದರು

1 ಮಹಡಿ ಲಕ್ಷ ರೇಷ್ಮೆ ಸೀರೆಗಳು

ಉಡುಪುಗಳ ಸಂಗ್ರಹ

ಸೊಗಸಾದ ರೇಷ್ಮೆ ಸೀರೆಗಳು, ಲೆಹಂಗಾ ಮತ್ತು ಚೋಲಿ, ಮೈಸೂರು ಸಿಲ್ಕ್ಸ್, ಬಾಲಕರ ಮತ್ತು ಬಾಲಕಿಯರ ಚಿತ್ತಾಕರ್ಷಕ ಉಡುಪುಗಳು, ರೇಮಂಡ್ಸ್ ಮತ್ತು ಇನ್ನಿತರ ಬ್ರಾಂಡ್‌ನ ಶರ್ಟಿಂಗ್ ಮತ್ತು ಸೂಟಿಂಗ್ ಸೆಟ್ಸ್, ಪುರುಷರಿಗಾಗಿ ಪ್ರಮುಖ ಬ್ರಾಂಡೆಡ್ ಸಂಗ್ರಹಗಳು ಮತ್ತು ಇನ್ನೂ ಅನೇಕ ಸಂಗ್ರಹಗಳು...

Colourful DIWALI Collections
The Chennai Silks

2 ವಿಶಾಲವಾದ ಮಹಡಿಗಳಲ್ಲಿ ಅತೀ ಹೆಚ್ಚು ಸಂಗ್ರಹಗಳು

ಆಭರಣಗಳ ಸಂಗ್ರಹ

ರಾಗಿಣಿ ವಿವಾಹ ಆಭರಣಗಳ ಸಂಗ್ರಹಗಳು, ಪಾರಂಪರಿಕ ನಾಗಾಸ್ ಆಭರಣಗಳ ಸಂಗ್ರಹಗಳು, ಸಾಂಪ್ರದಾಯಿಕ ಟೆಂಪಲ್ ಆಭರಣಗಳ ಸಂಗ್ರಹಗಳು, ಧೂಲಿಕಾಸ್ ವಜ್ರದ ಸಂಗ್ರಹಗಳು, ಅರೋರಾ ವಿವಾಹ ಬೆಳ್ಳಿ ಆಭರಣಗಳು, ರೋಸ್ ಗೋಲ್ಡ್ ಸಿಗ್ನೇಚರ್ ಸಂಗ್ರಹಗಳು ಮತ್ತು ಇನ್ನೂ ಅನೇಕ...

ನಮ್ಮ ಮನಮೋಹಕ ಉಡುಪು ಮತ್ತು ಆಭರಣಗಳ ಸಂಗ್ರಹಗಳ ಜೊತೆಗೆ ನಿಮ್ಮ ಹಬ್ಬದ ಸಡಗರವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳಿರಿ.

ಈ ಹಬ್ಬದ ಋತುವಿನಲ್ಲಿ ನಿಮ್ಮ ಪ್ರೀತಿಪಾತ್ರರಿಗೆ ನಮ್ಮ ಉಡುಪು ಮತ್ತು ಆಭರಣಗಳ ಗಿಫ್ಟ್ ವೌಚರ್‌ಗಳನ್ನು ಉಡುಗೊರೆಯಾಗಿ ನೀಡಿರಿ.

ಬೆಂಗಳೂರಿಗೆ ಸಮೀಪದಲ್ಲಿರುವ ಬೃಹತ್ ಫ್ಯಾಮಿಲಿ ಶಾಪಿಂಗ್ ತಾಣ

ದಿ ಚೆನ್ನೈ ಸಿಲ್ಕ್ಸ್™

ಸಂಭ್ರಮಾಚರಣೆಗಳು ಆರಂಭವಾಗಲಿ!

ಭಾರತದ ಅತ್ಯಂತ ವಿಶ್ವಾಸರ್ಹ ಚಿನ್ನದ ಮಳಿಗೆ

ಶ್ರೀ ಕುಮರನ್ ಜ್ಯುವೆಲರ್ಸ್

ಚಿನ್ನ • ವಜ್ರ • ಪ್ಲಾಟಿನಂ • ಬೆಳ್ಳಿ

EV CHARGING STATION
AVAILABLE @ HOSUR PREMISES

ಹೊಸೂರ್ (ಟೆಕ್ಸ್‌ಟೈಲ್ & ಜ್ಯುವೆಲ್ಲರಿ), ಬೆಂಗಳೂರು ಹೆದ್ದಾರಿ 96777 61978, 96294 70888.
ಮೈಸೂರು (ಜ್ಯುವೆಲ್ಲರಿ), ಬಿ ಎನ್ ರಸ್ತೆ, ಲಷ್ಕರ್ ಮೊಹಲ್ಲಾ (ಸಬ್ ಅರ್ಬನ್ ಬಸ್ ನಿಲ್ದಾಣದ ಹತ್ತಿರ) – 570001.
0821-2418916 / 2419916, 94916 85000.

ಕರ್ನಾಟಕ | ತೆಲಂಗಾಣ | ಕೇರಳ | ತಮಿಳುನಾಡು | ಪುದುಚೇರಿ

SCAN TO REACH US

ನಾಲ್ಕು ವರ್ಷ ಹತ್ತು ತಿಂಗಳಲ್ಲಿ ₹612.83 ಕೋಟಿ ವಂಚನೆ: ಇಲ್ಲಿಯವರೆಗೆ ₹77.25 ಕೋಟಿಯಷ್ಟೇ ಜಪ್ತಿ

ನೌಕರಿ ಆಮಿಷ: ವಂಚನೆ ಪ್ರಕರಣ ಹೆಚ್ಚಳ

● ಆದಿತ್ಯ ಕೆ.ಎ.

ಬೆಂಗಳೂರು: ಸ್ಥಳೀಯವಾಗಿ ಹಾಗೂ ವಿದೇಶದಲ್ಲಿ ನೌಕರಿ ಕೊಡಿಸುವುದಾಗಿ ಸಾಮಾಜಿಕ ಜಾಲತಾಣಗಳ ಮೂಲಕ ಯುವಕರಿಗೆ ಆಮಿಷವೊಡ್ಡಿ ಸೈಬರ್ ವಂಚಕರು ಕಳೆದ ನಾಲ್ಕು ವರ್ಷ ಹತ್ತು ತಿಂಗಳಲ್ಲಿ ರಾಜ್ಯದಲ್ಲಿ ₹612.83 ಕೋಟಿ ವಂಚಿಸಿದ್ದಾರೆ.

ಹೂಡಿಕೆ ಹಣ ದ್ವಿಗುಣದ ಆಮಿಷ, ಪಿನ್ ನಂಬರ್ ಪಡೆದು ವಂಚನೆಯ ಜತೆಗೆ ವರ್ಷದಿಂದ ವರ್ಷಕ್ಕೆ ಉದ್ಯೋಗದ ಆಮಿಷ ಪ್ರಕರಣಗಳೂ ರಾಜ್ಯದಲ್ಲಿ ಹೆಚ್ಚುತ್ತಿವೆ. ವಂಚನೆ ನಡೆಸುವಲ್ಲಿ ಸೈಬರ್ ಕಳ್ಳರು ಚಾಣಾಕ್ಷತನ ತೋರಿಸುತ್ತಿದ್ದಾರೆ. ಇದರಿಂದ ಪ್ರಕರಣಗಳ ಪತ್ತೆ ಹಚ್ಚುವಿಕೆ, ಹಣ ಜಪ್ತಿ ಹಾಗೂ ಆರೋಪಿಗಳ ಬಂಧನ ಪೊಲೀಸರಿಗೆ ಸವಾಲಾಗುತ್ತಿದೆ.

ನಾಲ್ಕು ವರ್ಷ ಹತ್ತು ತಿಂಗಳಲ್ಲಿ ಸೈಬರ್ ಅಪರಾಧ ಕೃತ್ಯ ಎಸಗಿದವರಿಂದ ₹77.25 ಕೋಟಿಯಷ್ಟೇ ಜಪ್ತಿ ಮಾಡಿಕೊಳ್ಳಲು ಪೊಲೀಸರಿಗೆ ಸಾಧ್ಯವಾಗಿದೆ. ರಾಜ್ಯದಾದ್ಯಂತ ಸೈಬರ್ ವಂಚನೆ ಜಾಲ ವಿಸ್ತಾರಗೊಂಡಿದ್ದರೂ 219 ಮಂದಿಯ ಬಂಧನ ವಷ್ಟೇ ಆಗಿದೆ. ಈ ಅವಧಿಯಲ್ಲಿ ಸೈಬರ್ ಠಾಣೆಗಳಲ್ಲಿ 9,798 ಪ್ರಕರಣಗಳು ದಾಖಲಾಗಿದ್ದು, 1,843 ಪ್ರಕರಣಗಳಲ್ಲಿ ಮಾತ್ರ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಸೈಬರ್ ಠಾಣೆಯ ಜತೆಗೆ ಇತರೆ ಠಾಣೆಗಳಲ್ಲೂ ಸೈಬರ್ ವಂಚನೆಗೆ ಸಂಬಂಧಿಸಿದ ದೂರು ಸ್ವೀಕರಿಸಿ ತಕ್ಷಣವೇ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ಸೂಚಿಸಲಾಗಿದೆ

ಜಿ.ಪರಮೇಶ್ವರ, ಗೃಹ ಸಚಿವ

'ಹೊಸ ಹೊಸ ಮಾರ್ಗಗಳ ಮೂಲಕ ಹಾಗೂ ವಿದೇಶದಲ್ಲಿ ಕುಳಿತು ಆರೋಪಿಗಳು ಕೈಚಳಕ ತೋರುತ್ತಿರುವ ಕಾರಣಕ್ಕೆ ಪ್ರಕರಣಗಳನ್ನು ತ್ವರಿತವಾಗಿ ಪತ್ತೆ ಹಚ್ಚಲು ಸಾಧ್ಯವಾಗುತ್ತಿಲ್ಲ' ಎಂದು ಪೊಲೀಸರು ತಿಳಿಸಿದರು.

2020ರಿಂದ 2022ರ ಅವಧಿಯಲ್ಲಿ ಉದ್ಯೋಗದ ಹೆಸರಿನಲ್ಲಿ ವಂಚನೆ ನಡೆಸುತ್ತಿದ್ದ ಜಾಲ ದೊಡ್ಡಮಟ್ಟದಲ್ಲಿ ಸಕ್ರಿಯ ಆಗಿರಲಿಲ್ಲ. ಆದರೆ, 2023ರಿಂದ ಈಚೆಗೆ ಸಾಮಾಜಿಕ ಜಾಲತಾಣ ಬಳಸಿಕೊಂಡು ಸುಳ್ಳು ಜಾಹೀರಾತು ಪ್ರಕಟಿಸಿ ಮೋಸ ಮಾಡುತ್ತಿರುವ ಪ್ರಕರಣಗಳು ಹೆಚ್ಚಾಗಿವೆ. ಕಳೆದ ವರ್ಷವೇ ಉದ್ಯೋಗದ ಹೆಸರಿನಲ್ಲಿ ₹347.70 ಕೋಟಿ ವಂಚಿಸಿದ್ದಾರೆ. ಈ ಅವಧಿಯಲ್ಲಿ 1,036 ಪ್ರಕರಣಗಳನ್ನು ಪತ್ತೆ ಹಚ್ಚಿ 60 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರಿನಲ್ಲೇ ಹೆಚ್ಚು: 'ಸೈಬರ್ ವಂಚನೆ ಪ್ರಕರಣಗಳಲ್ಲಿ ರಾಜ್ಯದಾದ್ಯಂತ ದಾಖಲಾದ ಪ್ರಕರಣಗಳಿಗೆ ಹೋಲಿಸಿದರೆ, ಬೆಂಗಳೂರು ನಗರದಲ್ಲೇ ಅಧಿಕ ಪ್ರಕರಣಗಳು ವರದಿಯಾಗಿವೆ' ಎಂದು ಮೂಲಗಳು ತಿಳಿಸಿವೆ.

'ಕೋವಿಡ್ ನಂತರದ ದಿನಗಳಲ್ಲಿ ಉದ್ಯೋಗದ ಸಮಸ್ಯೆ ತೀವ್ರವಾಗಿದೆ. ಕೆಲವು ಕಂಪನಿಗಳು ನೌಕರರನ್ನು ಕೆಲಸದಿಂದ ವಜಾಗೊಳಿಸಿವೆ. ಇದನ್ನೇ ಬಂಡವಾಳ ಮಾಡಿಕೊಂಡಿರುವ ಸೈಬರ್ ವಂಚಕರು, ನಿರುದ್ಯೋಗಿಗಳಿಗೆ ಆಮಿಷವೊಡ್ಡಿ ವಂಚಿಸುತ್ತಿದ್ದಾರೆ. ವಂಚನೆಗೆ ಒಳಗಾಗದಂತೆ ಇಲಾಖೆಯಿಂದ ಜಾಗೃತಿ ಮೂಡಿಸಿದ್ದರೂ ಪ್ರಕರಣಗಳು ಹೆಚ್ಚುತ್ತಲೇ ಇವೆ' ಎಂದು ಪೊಲೀಸ್ ಇನ್‌ಸ್ಪೆಕ್ಟರ್ ಒಬ್ಬರು ತಿಳಿಸಿದರು.

'ಸೈಬರ್ ಅಪರಾಧ ತಡೆಗಟ್ಟುವಿಕೆ, ಸೈಬರ್ ಅಪರಾಧ ಪತ್ತೆಹಚ್ಚಿ ತನಿಖೆ ನಡೆಸಲು ಪೊಲೀಸರಿಗೆ ತರಬೇತಿ ನೀಡಲಾಗಿದೆ. ನಕಲಿ ಜಾಹೀರಾತು ಹಾಗೂ ವೆಬ್‌ಸೈಟ್‌ಗಳ ಬಗ್ಗೆ ಸಾರ್ವಜನಿಕರೇ ಎಚ್ಚರಿಕೆ ವಹಿಸಬೇಕು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದರು.

ಆನ್‌ಲೈನ್ ಉದ್ಯೋಗ ವಂಚನೆ ಪ್ರಕರಣ

ವರ್ಷ	ಪ್ರಕರಣ	ವಂಚನೆ ಮೊತ್ತ	ಜಪ್ತಿಯಾದ ಮೊತ್ತ (ಕೋಟಿಗಳಲ್ಲಿ)
2020	394	₹5.67	₹0.80
2021	570	₹12.31	₹2.21
2022	977	₹23.11	₹3.95
2023	4,470	₹347.70	₹46.73
2024(ಸೆ.30)	2,000	₹190.18	₹18.71
ಒಟ್ಟು	8,411	₹578.97	₹72.4

ಆ್ಯಪ್ ಮೂಲಕ ವಂಚನೆ

ವರ್ಷ	ಪ್ರಕರಣಗಳು	ವಂಚನೆ ಮೊತ್ತ	ಜಪ್ತಿಯಾದ ಮೊತ್ತ (ಕೋಟಿಗಳಲ್ಲಿ)
2020	51	₹0.98	₹0.25
2021	209	₹1.64	₹0.44
2022	411	₹13.80	₹1.30
2023	517	₹6.88	₹1.28
2024(ಸೆ.30)	150	₹6.61	₹0.40
ಒಟ್ಟು	1,338	₹29.91	₹3.67

ವಿದೇಶಿ ಕಂಪನಿಗಳ ಹೆಸರಿನಲ್ಲಿ ವಂಚನೆ

ವರ್ಷ	ಪ್ರಕರಣ	ವಂಚನೆಯ ಮೊತ್ತ (ಕೋಟಿಯಲ್ಲಿ)
2020	2	₹0.57
2021	1	₹0.15
2022	2	₹0.35
2023	28	₹1.99
2024 (ಸೆ.30)	10	₹0.89
ಒಟ್ಟು	43	₹3.95

ಸುದ್ದಿ 2 ನಿಮಿಷ

'ಲೋಕಸಭೆ ಚುನಾವಣೆಯಲ್ಲಿ ಕೋಟ್ಯಂತರ ರೂಪಾಯಿ ಹಣ ಹಂಚಿಕೆ'

ಹಾಸನ: 'ಸಿಎಂ, ಡಿಸಿಎಂ ಸೂಚನೆಯಂತೆ ಹಣ ಹಂಚಬೇಕು. ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಪಟೇಲ್ ₹5 ಕೋಟಿ ಕೊಡುತ್ತಾರೆ. ವಿಧಾನ ಪರಿಷತ್ ಮಾಜಿ ಸದಸ್ಯ ಗೋಪಾಲಸ್ವಾಮಿ ₹1 ಕೋಟಿ, ನಾನು ₹ 1 ಕೋಟಿ ಕೊಡುತ್ತೇನೆ. ಒಟ್ಟು ₹7 ಕೋಟಿ ಹಂಚಿಕೆಯಾಗಬೇಕು'

– ಜಿಲ್ಲೆಯ ಅರಸೀಕೆರೆ ಶಾಸಕ ಕೆ.ಎಂ. ಶಿವಲಿಂಗೇಗೌಡ-ರದ್ದು ಎನ್ನಲಾದ ಈ ಆಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಗುರುವಾರ ಹರಿದಾಡಿತ್ತು. ಲೋಕಸಭಾ ಚುನಾವಣೆ ವೇಳೆ ಜಿಲ್ಲೆಯಲ್ಲಿ ಕೋಟ್ಯಂತರ ರೂಪಾಯಿ ಹಂಚಿಕೆ ಮಾಡಿರುವ ಬಗ್ಗೆ 17 ನಿಮಿಷ 16 ಸೆಕೆಂಡ್‌ನ ಆಡಿಯೊದಲ್ಲಿ ಪ್ರಸ್ತಾಪವಾಗಿದೆ.

'ಪ್ರತಿ ವೋಟಿಗೆ ₹500 ಕೊಡಬೇಕು. ಶೇ 68 ರಿಂದ ಶೇ 70 ರಷ್ಟು ಜನರಿಗೆ ಹಣ ಕೊಡಿ. ಯಾರು ನಮಗೆ ವೋಟು ಹಾಕುತ್ತಾರೆ ಎಂಬುದು ಗೊತ್ತಿರುತ್ತೆ. ಅವರಿಗೆ ಕೊಡಿ. ಪ್ರತಿಪಕ್ಷದವರು ಶೇ 30 ಮತ ತೆಗೆದುಕೊಳ್ತಾರೆ, ಅವರಿಗೆ ಮತ ಹಾಕುವವರಿಗೆ ಕೊಡೋದು ಬೇಡ. ಸಿಎಂ, ಡಿಸಿಎಂ, ಉಸ್ತುವಾರಿ ಅವರೇ ತೀರ್ಮಾನ ಮಾಡಿದ್ದಾರೆ. ಅದರಂತೆ ಹಂಚಲಿ' ಎಂದು ಶಿವಲಿಂಗೇಗೌಡ ಹೇಳಿರುವುದು ಆಡಿಯೊದಲ್ಲಿದೆ.

ಮಾಜಿ ಸಚಿವ ಬಿ. ಶಿವರಾಂ ಬಗ್ಗೆಯೂ ಶಿವಲಿಂಗೇಗೌಡ ಆಕ್ಷೇಪ ವ್ಯಕ್ತಪಡಿಸಿರುವುದು ಆಡಿಯೊದಲ್ಲಿದೆ. '500 ಹಂಚಬೇಕೆಂದು ತೀರ್ಮಾನವಾಗಿದೆ. ಅಷ್ಟು ಹಂಚದಿದ್ದರೆ ಚೆನ್ನಾಗಿರಲ್ಲ' ಎಂಬ ಮಾತು ಆಡಿಯೊದಲ್ಲಿದೆ.

ಕಾಳಿ ನದಿ ಸೇತುವೆ ಅವಶೇಷ ತೆರವಿಗೆ ಎರಡು ಬಾರ್ಜ್ ಸಿದ್ಧ

ಕಾರವಾರ: ಇಲ್ಲಿನ ಕೋಡಿಬಾಗದಲ್ಲಿ ಆಗಸ್ಟ್ 7ರಂದು ಬಿದ್ದ ಕಾಳಿ ನದಿಯ ಹಳೆ ಸೇತುವೆಯ ಅವಶೇಷ ತೆರವುಗೊಳಿಸುವ ಎರಡನೇ ಹಂತದ ಕಾರ್ಯಾಚರಣೆಗೆ ಎರಡು ಬಾರ್ಜ್ ಸಿದ್ಧವಾಗಿವೆ.

ಸೇತುವೆಯ ಕಾಂಕ್ರೀಟ್ ಅವಶೇಷಗಳನ್ನು ಒಡೆಯುವುದರ ಜೊತೆಗೆ ನದಿಯಿಂದ ಅವುಗಳನ್ನು ಮೇಲೆತ್ತಲು ಕ್ರೇನ್, ಇನ್ನಿತರ ಯಂತ್ರ ಒಳಗೊಂಡ ಬಾರ್ಜ್ ಬುಧವಾರ ಸೇತುವೆ ಸಮೀಪದ ಜೆಟ್ಟಿ ತಲುಪಿತ್ತು. ಗುರುವಾರ ಇನ್ನೊಂದು ಬಾರ್ಜ್ ಕೂಡ ಬಂದಿದೆ. ಇದು ನದಿಯಿಂದ ಮೇಲೆತ್ತಿದ ಅವಶೇಷಗಳನ್ನು ಹೊತ್ತು ದಡಕ್ಕೆ ತಂದು ದಾಸ್ತಾನು ಮಾಡಲಿದೆ.

'ನದಿಯಲ್ಲಿ ಕಾರ್ಯಾಚರಣೆ ನಡೆಸಲು ಕ್ರಿಯಾಯೋಜನೆ ಸಲ್ಲಿಕೆ ಜೊತೆಗೆ ಪೂರ್ವಾನುಮತಿ ಪಡೆಯಬೇಕು. ಕಂಪನಿಯು ಈವರೆಗೆ ಕ್ರಿಯಾಯೋಜನೆ ಪಟ್ಟಿ ಸಲ್ಲಿಸಿಲ್ಲ. ಆದರೆ, ಅವರಿಗೆ ಅನುಕೂಲ-ವಾಗಲೆಂದು ಜೆಟ್ಟಿಗೆ ಸ್ಥಳಾವಕಾಶ ಕಲ್ಪಿಸಲಾಗಿದೆ' ಎಂದು ಬಂದರು ಜಲಸಾರಿಗೆ ಮಂಡಳಿಯ ನಿರ್ದೇಶಕ ಕ್ಯಾಪ್ಟನ್ ಸಿ.ಸ್ವಾಮಿ ಹೇಳಿದರು.

ಉದ್ಯಮಿ ಕೊಲೆ: ಪತ್ನಿ ಸೇರಿ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ರಿಯಲ್ ಎಸ್ಟೇಟ್ ಉದ್ಯಮಿ ಸಂತೋಷ ದುಂಡಪ್ಪ ಪದ್ಮಣ್ಣವರ (47) ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಗುರುವಾರ ಮೂವರನ್ನು ಬಂಧಿಸಿ, ನ್ಯಾಯಂಗ ವಶಕ್ಕೆ ಒಪ್ಪಿಸಿದ್ದಾರೆ.

ಮುಖ್ಯ ಆರೋಪಿ, ಉದ್ಯಮಿಯ ಪತ್ನಿ ಉಮಾ (41), ಅವರ ಫೇಸ್‌ಬುಕ್ ಸ್ನೇಹಿತ, ಕೊಡಗು ಜಿಲ್ಲೆಯ ಶನಿವಾರಸಂತೆ ಗ್ರಾಮದ ಶೋಭಿತ್ ಗೌಡ (30) ಮತ್ತು ಪವನ್ (27)ಬಂಧಿತರು. ಮನೆಗೆಲಸದವರಾದ ನಂದಾ ಕುರಿಯಾ, ಪ್ರಕಾಶ ಕುರಿಯಾ ಅವರ ಕೈವಾಡದ ಬಗ್ಗೆ ಪೊಲೀಸರಿಗೆ ಮಾಹಿತಿ ಸಿಕ್ಕಿಲ್ಲ.

ತಮ್ಮ ತಂದೆ ಹೃದಯಾಘಾತದಿಂದ ಮೃತಪಟ್ಟಿಲ್ಲ. ಅವರ ಕೊಲೆಯಾದ ಶಂಕೆ ಇದೆ ಎಂದು ಸಂತೋಷ ಅವರ ಪುತ್ರಿ ಸಂಜನಾ ದೂರು ನೀಡಿದ್ದರು. ಅ. 9ರಂದು ಸಂತೋಷ ಮೃತಪಟ್ಟಿದ್ದರು. ಅಕ್ಟೋಬರ್ 10ರಂದು ಹೂಳಲಾಗಿದ್ದ ಅವರ ಶವವನ್ನು ಬುಧವಾರ ಹೊರತೆಗೆದು ತನಿಖೆ ಕೈಗೊಳ್ಳಲಾಗಿದೆ.

ಉಮಾ

ಶೋಭಿತ್ ಗೌಡ

ಪವನ್

'ಸಂಶಯಾಸ್ಪದ ವ್ಯಕ್ತಿಗಳನ್ನು ಬಂಧಿಸಲಾಗಿದೆ. ಸಂತೋಷ ಅವರ ಮರಣೋತ್ತರ ಪರೀಕ್ಷೆಯ ವರದಿ ಇನ್ನೂ ಕೈ ಸೇರಿಲ್ಲ. ಅದು ಬಂದ ಬಳಿಕ ಪ್ರಕರಣದ ಸ್ಪಷ್ಟ ರೂಪ ತಿಳಿಯಲಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಇ.ಡಿ ಪಕ್ಷದ ಏಜೆಂಟ್ ಆಗಬಾರದು: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾರಿ ನಿರ್ದೇಶನಾಲಯ, ಸಿಬಿಐ ಮತ್ತು ಆದಾಯ ತೆರಿಗೆ ಇಲಾಖೆಯಂತಹ ಸಂಸ್ಥೆಗಳು ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಬೇಕು. ಆದರೆ ಕೇಂದ್ರ ಸರ್ಕಾರದ ಅಣತಿಯಂತೆ ಕೆಲಸ ಮಾಡುತ್ತಿವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ವಾಲ್ಮೀಕಿ ನಿಗಮದ ಹಣ ದುರ್ಬಳಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯ ಹೆಸರು ಹೇಳಲು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಒತ್ತಡ ಹೇರಿದ್ದರು ಎಂದು ಬಿ.ನಾಗೇಂದ್ರ ಹೇಳಿರುವ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಅವರು ಉತ್ತರಿಸಿದರು.

'ನನ್ನ ಮತ್ತು ಶಿವಕುಮಾರ್ ಅವರ ಹೆಸರು ಹೇಳುವಂತೆ ಇ.ಡಿ ಅಧಿಕಾರಿಗಳು ಒತ್ತಾಯ ಮಾಡಿದರು ಎಂಬುದನ್ನು ನಾಗೇಂದ್ರ ನನಗೂ ಹೇಳಿದರು. ಅಂತಹ ಸಂಸ್ಥೆಗಳು ಯಾವುದೋ ಪಕ್ಷದ ಏಜೆಂಟಾಗಿ ಕೆಲಸ ಮಾಡಬಾರದು' ಎಂದರು.

'ಬಾಂಧವ್ಯಕ್ಕೆ ಧಕ್ಕೆ; ಟ್ರುಡೊ ಹೊಣೆ'

ಕೆನಡಾ ದರ್ಪದ ನಡವಳಿಕೆ: ವಿದೇಶಾಂಗ ವ್ಯವಹಾರಗಳ ಸಚಿವಾಲಯ ಆರೋಪ

ನವದೆಹಲಿ (ಪಿಟಿಐ/ ರಾಯಿಟರ್ಸ್): 'ಭಾರತ-ಕೆನಡಾ ನಡುವಣ ರಾಜತಾಂತ್ರಿಕ ಸಂಬಂಧಕ್ಕೆ ಆಗಿರುವ ಹಾನಿಯ ಹೊಣೆಗಾರಿಕೆಯು ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಅವರ ಮೇಲಿದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಗುರುವಾರ ತಿಳಿಸಿದೆ.

'ಖಾಲಿಸ್ತಾನಿ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತದ ಏಜೆಂಟ್‌ಗಳ ಪಾತ್ರ ಇದೆ ಎಂದು ಆರೋಪಿಸಿದಾಗ ನನ್ನಲ್ಲಿ ಯಾವುದೇ ಬಲವಾದ ಪುರಾವೆಗಳು ಇರಲಿಲ್ಲ. ಗುಪ್ತಚರ ಮಾಹಿತಿ ಮಾತ್ರ ಇತ್ತು' ಎಂದು ಟ್ರುಡೊ ಬುಧವಾರ ಹೇಳಿಕೆ ಕೊಟ್ಟಿದ್ದರು.

ಚುನಾವಣಾ ಪ್ರಕ್ರಿಯೆಗಳಲ್ಲಿ ಹಾಗೂ ಪ್ರಜಾತಾಂತ್ರಿಕ ಸಂಸ್ಥೆಗಳಲ್ಲಿ ವಿದೇಶಿ ಶಕ್ತಿಗಳ ಹಸ್ತಕ್ಷೇಪ ಕುರಿತ ವಿಚಾರಣೆ ನಡೆಸುತ್ತಿರುವ ತನಿಖಾ ಆಯೋಗದ ಮುಂದೆ ಟ್ರುಡೊ ಅವರು ಒಟ್ಟಾವದಲ್ಲಿ ಹೇಳಿಕೆ ನೀಡಿದ ಬೆನ್ನಲ್ಲೇ ಗುರುವಾರ ಬೆಳಿಗ್ಗೆ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಪ್ರಕಟಣೆ ಹೊರಡಿಸಿದೆ.

'ನಾವು ನಿರಂತರವಾಗಿ ಹೇಳುತ್ತಾ ಬಂದಿರುವುದನ್ನು ಟ್ರುಡೊ ಅವರ ಮಾತುಗಳು ದೃಢಪಡಿಸುತ್ತವೆ. ನಮ್ಮ ರಾಜತಾಂತ್ರಿಕ ಅಧಿಕಾರಿಗಳ ವಿರುದ್ಧದ ಗಂಭೀರ ಆರೋಪಗಳನ್ನು ಪುಷ್ಟೀಕರಿ-ಸುವಂತಹ ಯಾವುದೇ ಪುರಾವೆಗಳನ್ನು ಕೆನಡಾ ಇದುವರೆಗೂ ಒದಗಿಸಿಲ್ಲ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

'ಕೆನಡಾದ ದರ್ಪದ ನಡವಳಿಕೆ-ಯಿಂದಾಗಿ ಉಭಯ ದೇಶಗಳ ನಡುವಣ ಸಂಬಂಧಕ್ಕೆ ಹಾನಿ ಉಂಟಾಗಿದ್ದು, ಅದರ ಸಂಪೂರ್ಣ ಹೊಣೆಗಾರಿಕೆಯು ಟ್ರುಡೊ ಅವರ ಮೇಲಿದೆ' ಎಂದಿದ್ದಾರೆ.

ಅಭಿವ್ಯಕ್ತಿ ಸ್ವಾತಂತ್ರ್ಯ ರಕ್ಷಿಸಬೇಕು-ಟ್ರುಡೊ (ವಾಷಿಂಗ್ಟನ್ ವರದಿ): 'ರಾಜಕೀಯ ಭಿನ್ನಾಭಿಪ್ರಾಯ ಅಥವಾ ಇತರ ಕಾರಣಗಳಿಂದ ಹಲವರು ತಮ್ಮ ತಾಯ್ನಾಡನ್ನು ತೊರೆದು ಕೆನಡಾಕ್ಕೆ ಬಂದಿದ್ದಾರೆ. ಅವರು ಹೊಂದಿರುವ ರಾಜಕೀಯ ದೃಷ್ಟಿಕೋನ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸುವುದು ಕೆನಡಾ ಸರ್ಕಾರದ ಜವಾಬ್ದಾರಿಯಾಗಿದೆ' ಎಂದು ಟ್ರುಡೊ ತನಿಖಾ ಆಯೋಗದ ಮುಂದೆ ಹೇಳಿದ್ದಾರೆ.

'ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಕುರಿತು ಭಿನ್ನಾಭಿಪ್ರಾಯ ಹೊಂದಿರುವ ಕೆನಡಾ ಪ್ರಜೆಗಳ ಬಗ್ಗೆ ಮಾಹಿತಿಯನ್ನು ಭಾರತದ ರಾಜತಾಂತ್ರಿಕರು ಸಂಗ್ರಹಿಸಿ, ಅದನ್ನು ಭಾರತ ಸರ್ಕಾರದ ಉನ್ನತ ಹುದ್ದೆಗಳಲ್ಲಿ ಇರುವವರಿಗೆ ಹಾಗೂ ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್‌ನಂತಹ ಕ್ರಿಮಿನಲ್ ಸಂಘಟನೆಗಳಿಗೆ ರವಾನಿಸುತ್ತಿದ್ದಾರೆ' ಎಂದು ಆರೋಪಿಸಿದ್ದಾರೆ.

ಹಿಂಸಾಚಾರ ತಡೆಗಟ್ಟುವ ಉದ್ದೇಶ: ಕೆನಡಾ ಪ್ರಧಾನಿ

ಟೊರಂಟೊ (ಎಪಿ): ಕೆನಡಾದಲ್ಲಿ ಕೊಲೆ, ಸುಲಿಗೆ ಸೇರಿದಂತೆ ಹಿಂಸಾತ್ಮಕ ಕೃತ್ಯಗಳಿಗೆ ಕಡಿವಾಣ ತೊಡಿಸುವ ಉದ್ದೇಶದಿಂದ ಕೆನಡಾ ಪೊಲೀಸರು ಭಾರತದ ರಾಜತಾಂತ್ರಿಕರ ವಿರುದ್ಧದ ತನ್ನ ಆರೋಪಗಳನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಿದ್ದಾರೆ ಎಂದು ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಬುಧವಾರ ಹೇಳಿದ್ದಾರೆ.

ಜಸ್ಟಿನ್ ಟ್ರುಡೊ

ಸಿಖ್ ಪ್ರತ್ಯೇಕತಾವಾದಿ ನಾಯಕನ ಹತ್ಯೆಯಲ್ಲಿ ಕೆಲವು ಭಾರತೀಯ ರಾಜತಾಂತ್ರಿಕರು ಭಾಗಿಯಾಗಿದ್ದಾರೆ ಎಂದು ರಾಯಲ್ ಕೆನಡಿಯನ್ ಮೌಂಟೆಡ್ ಪೊಲೀಸ್ (ಆರ್‌ಸಿಎಂಪಿ) ಸೋಮವಾರ ಆರೋಪಿಸಿತ್ತು.

'ಭಾರತವನ್ನು ಪ್ರಚೋದಿಸಲು ಅಥವಾ ಅವರೊಂದಿಗೆ ಹೋರಾಟ ನಡೆಸಲು ನಾವು ಬಯಸುವುದಿಲ್ಲ' ಎಂದು ಅವರು ಇದೇ ವೇಳೆ ಸ್ಪಷ್ಟಪಡಿಸಿದರು.

'ಕೆನಡಾದ ಸುರಕ್ಷತೆ ಮತ್ತು ಸಾರ್ವಭೌಮತ್ವದಲ್ಲಿ ಆಕ್ರಮಣಕಾರಿಯಾಗಿ ಮಧ್ಯಪ್ರವೇಶಿಸಬಹುದು ಎಂದು ಭಾವಿಸುವ ಮೂಲಕ ಭಾರತವು ಬಲುದೊಡ್ಡ ತಪ್ಪು ಮಾಡಿದೆ. ಕೆನಡಾ ಪ್ರಜೆಗಳ ಸುರಕ್ಷತೆಯನ್ನು ಖಾತರಿಪಡಿಸಿ-ಕೊಳ್ಳಲು ನಾವು ಪ್ರತಿಕ್ರಿಯಿಸಬೇಕಾಗಿತ್ತು' ಎಂದಿದ್ದಾರೆ.

'ಜನರ ಸುರಕ್ಷತೆಯನ್ನು ಖಾತರಿಪಡಿಸುವ ಉದ್ದೇಶದೊಂದಿಗೆ ಆರ್‌ಸಿಎಂಪಿಯು ಕೆಲವೊಂದು ವಿಷಯಗಳನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಿದೆ. ಕೆನಡಾದಲ್ಲಿ ನಡೆಯುತ್ತಿರುವ ಗುಂಡಿನ ದಾಳಿ, ಮನೆಗಳ ಅತಿಕ್ರಮ ಪ್ರವೇಶ, ಸುಲಿಗೆ ಪ್ರಕರಣ ಮತ್ತು ಕೊಲೆಗಳ ಸರಣಿಗೆ ಕಡಿವಾಣ ತೊಡಿಸುವುದು ಇದರ ಹಿಂದಿನ ಉದ್ದೇಶವಾಗಿತ್ತು' ಎಂದು ಟ್ರುಡೊ ಅವರು ಹೇಳಿದ್ದಾರೆ.

ಕೆನಡಾ ಕ್ರಮ ಕೈಗೊಂಡಿಲ್ಲ: ರಣಧೀರ್ ಜೈಸ್ವಾಲ್

'ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್‌ನ ಸದಸ್ಯರು ಸೇರಿದಂತೆ ಹಲವರ ಬಗ್ಗೆ ನಾವು ಕೆನಡಾ ಸರ್ಕಾರದೊಂದಿಗೆ ಮಾಹಿತಿ ಹಂಚಿಕೊಂಡಿದ್ದೇವೆ ಮತ್ತು ಅವರನ್ನು ಬಂಧಿಸಲು ಅಥವಾ ಕಾನೂನಿನ ಪ್ರಕಾರ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಕೇಳಿಕೊಂಡಿದ್ದೇವೆ' ಎಂದು ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

'ಆದರೆ ಅವರ ವಿರುದ್ಧ ಕೆನಡಾ ಯಾವುದೇ ಕ್ರಮ ಕೈಗೊಂಡಿಲ್ಲ. ಇದು ನಿಜಕ್ಕೂ ಅಚ್ಚರಿ ಉಂಟುಮಾಡಿದೆ' ಎಂದಿದ್ದಾರೆ.

'ನಾವು ಯಾರನ್ನು ಗಡೀಪಾರು ಮಾಡುವಂತೆ ಮತ್ತು ಯಾರ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಕೇಳಿಕೊಂಡಿದ್ದೇವೋ, ಅವರು ಮಾಡಿರುವ ಅಪರಾಧ ಕೃತ್ಯಗಳಿಗಾಗಿ ಕೆನಡಾ ಪೊಲೀಸರು ಭಾರತವನ್ನು ದೂಷಿಸುತ್ತಿದ್ದಾರೆ' ಎಂದು ಟೀಕಿಸಿದ್ದಾರೆ.

'ಕಳೆದ ಒಂದು ದಶಕದಲ್ಲಿ 26 ಮಂದಿಯನ್ನು ಹಸ್ತಾಂತರಿಸಬೇಕೆಂಬ ಮನವಿಯನ್ನು ಕೆನಡಾ ಮುಂದಿಟ್ಟಿದ್ದೇವೆ. ಒಬ್ಬರನ್ನೂ ಹಸ್ತಾಂತರಿಸಿಲ್ಲ' ಎಂದಿದ್ದಾರೆ.

ಯತ್ನಾಳ ವಿರುದ್ಧ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ರಾಜ್ಯ ಸರ್ಕಾರದ ಪತನಕ್ಕೆ ಮುಖಂಡರೊಬ್ಬರು ₹ 1,000 ಕೋಟಿ ತೆಗೆದಿಟ್ಟಿದ್ದಾರೆ' ಎಂಬ ಆರೋಪ ಮಾಡಿರುವ ವಿಜಯಪುರದ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ಇಲ್ಲಿನ ಗಾಂಧಿನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್ ಅವರು ಬೆಂಗಳೂರಿನ ಹೈಗ್ರೌಂಡ್ಸ್ ಠಾಣೆಗೆ ನೀಡಿದ ದೂರು ಇಲ್ಲಿನ ಗಾಂಧಿನಗರ ಠಾಣೆಗೆ ವರ್ಗಾವಣೆಗೊಂಡಿದ್ದು, ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

'ರಾಜ್ಯದ ಮತದಾರರು ಕಾಂಗ್ರೆಸ್‌ಗೆ 135 ಸ್ಥಾನಗಳನ್ನು ನೀಡಿ ಐದು ವರ್ಷ ಸುಭದ್ರ ಆಡಳಿತ ನಡೆಸಲು ಜನಾದೇಶ ಕೊಟ್ಟಿದ್ದಾರೆ. ಅಧಿಕಾರ-ವಿಲ್ಲದೇ ಹತಾಶರಾಗಿರುವ ಬಿಜೆಪಿಯ ಕೆಲ ನಾಯಕರು ರಾಜ್ಯ ಸರ್ಕಾರವನ್ನು ಪತನಗೊಳಿಸಲು ಸಂಚು ರೂಪಿಸಿದ್ದು ಯತ್ನಾಳ ಅವರ ಹೇಳಿಕೆಯಿಂದ ಸ್ಪಷ್ಟವಾಗಿದೆ. ಅಕ್ರಮ ಹಣ ವರ್ಗಾವಣೆ ನಡೆಯುತ್ತಿದ್ದು, ಹೇಳಿಕೆ ನೀಡಿದ ಯತ್ನಾಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು' ಎಂದು ಮನೋಹರ್ ದೂರಿನಲ್ಲಿ ತಿಳಿಸಿದ್ದಾರೆ.

2028ರಲ್ಲೂ ಕಾಂಗ್ರೆಸ್‌ಗೆ ಗದ್ದುಗೆ 'ಗ್ಯಾರಂಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಡವರ ಬದುಕಿಗೆ ಆಸರೆಯಾಗಿರುವ 'ಗ್ಯಾರಂಟಿ' ಯೋಜನೆಗಳನ್ನು ವಿರೋಧಿಸುವ ಬಿಜೆಪಿಗೆ ಜನರು ತಕ್ಕ ಉತ್ತರ ನೀಡಲಿದ್ದು, 2028ರ ಚುನಾವಣೆಯಲ್ಲೂ ಕಾಂಗ್ರೆಸ್ ಮತ್ತೆ ಅಧಿಕಾರ ಹಿಡಿಯಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯಾ ರೆಡ್ಡಿ ಅವರ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಅವರು ಮಾತನಾಡಿದರು.

'ಮುಂದಿನ ಚುನಾವಣೆಯಲ್ಲೂ ಅಧಿಕಾರಕ್ಕೆ ಬಂದು ಮಹಿಳೆಯರಿಗೆ ಆರ್ಥಿಕ ಶಕ್ತಿ ನೀಡುತ್ತಿರುವ ಗ್ಯಾರಂಟಿ ಕಾರ್ಯಕ್ರಮಗಳನ್ನು ಮುಂದುವರಿಸು-ತ್ತೇವೆ. ನೀವು ನಮಗೆ ರಾಜಕೀಯ ಶಕ್ತಿ ಕೊಡಿ. ನಾವು ನಿಮಗೆ ಆರ್ಥಿಕ ಶಕ್ತಿ ನೀಡುತ್ತೇವೆ' ಎಂದರು.

'ಬಿಜೆಪಿ ಅನ್ನಭಾಗ್ಯ, ಗೃಹಲಕ್ಷ್ಮಿ ಯೋಜನೆಯನ್ನೂ ವಿರೋಧಿಸುತ್ತಿದೆ. ಬಹುಜನರ, ದುಡಿಯುವ ವರ್ಗಗಳ, ಶ್ರಮಿಕ ಸಂಸ್ಕೃತಿಯ ವಿರೋಧಿಯಾಗಿದೆ. ಮಹಿಳಾ ಮೀಸಲಾತಿ, ಮಹಿಳಾ ಹಕ್ಕುಗಳನ್ನೂ ವಿರೋಧಿಸುತ್ತದೆ. ರಾಜ್ಯದ 1.21 ಕೋಟಿ ಕುಟುಂಬಗಳಿಗೆ ಪ್ರತಿ ತಿಂಗಳು ಆರ್ಥಿಕ ಶಕ್ತಿ ನೀಡುತ್ತಿರುವ ಗೃಹಲಕ್ಷ್ಮಿ ಯೋಜನೆಯನ್ನು ಅತ್ತೆ- ಸೊಸೆ ಜಗಳ ಆಡ್ತಾರೆ ಎನ್ನುವ ಸುಳ್ಳು ನೆಪ ಮುಂದಿಟ್ಟು ಮಹಿಳೆಯರ ಖಾತೆಗೆ ಹೋಗುವ ಹಣ ತಡೆಯಲು ಷಡ್ಯಂತ್ರ ನಡೆಸಿತ್ತು' ಎಂದು ಆರೋಪಿಸಿದರು.

ಎಐಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಅಲ್ಕಾ ಲಂಬಾ, ಸಚಿವರಾದ ಕೃಷ್ಣ ಬೈರೇಗೌಡ, ಲಕ್ಷ್ಮಿ ಹೆಬ್ಬಾಳಕರ್, ಶಾಸಕ ಹ್ಯಾರಿಸ್, ಮುಖಂಡೆ ಪುಷ್ಪಾ ಅಮರನಾಥ್, ರಾಷ್ಟ್ರೀಯ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಉಪಸ್ಥಿತರಿದ್ದರು.

ಬೆಂಗಳೂರಿನನಲ್ಲಿ ಗುರುವಾರ ನಡೆದ ಪದಗ್ರಹಣ ಸಮಾರಂಭದಲ್ಲಿ ಕೆಪಿಸಿಸಿ ಮಾಜಿ ಅಧ್ಯಕ್ಷೆ ಪುಷ್ಪಾ ಅಮರನಾಥ್ ಅವರು ನೂತನ ಅಧ್ಯಕ್ಷೆ ಸೌಮ್ಯಾರೆಡ್ಡಿ ಅವರಿಗೆ ಕಾಂಗ್ರೆಸ್ ಬಾವುಟವನ್ನು ನೀಡುವ ಮೂಲಕ ಅಧಿಕಾರ ಹಸ್ತಾಂತರಿಸಿದರು. ಲಕ್ಷ್ಮಿ ಹೆಬ್ಬಾಳಕರ್, ಅಲ್ಕಾ ಲಂಬಾ, ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ, ಬಿ.ವಿ. ಶ್ರೀನಿವಾಸ್ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

'ಕೆಪಿಸಿಸಿ ಅಧ್ಯಕ್ಷತೆ ಎಷ್ಟು ದಿನವೋ ಗೊತ್ತಿಲ್ಲ'

'ನಾನು ಕೆಪಿಸಿಸಿ ಅಧ್ಯಕ್ಷನಾಗಿ ಎಷ್ಟು ದಿನ ಇರುತ್ತೇನೋ ಗೊತ್ತಿಲ್ಲ. ಆದರೆ, 2028ರ ವಿಧಾನಸಭೆ, 2029ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ಶ್ರಮಿಸುತ್ತೇನೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವದ ನೆನಪಿಗೆ ರಾಜ್ಯದಲ್ಲಿ 100 ಬ್ಲಾಕ್‌ಮಟ್ಟದ ಕಾಂಗ್ರೆಸ್ ಕಚೇರಿ ನಿರ್ಮಾಣ ಮಾಡಲಾಗುವುದು

ಡಿ.ಕೆ. ಶಿವಕುಮಾರ್, ಅಧ್ಯಕ್ಷ, ಕೆಪಿಸಿಸಿ

'ನಮ್ಮ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಅವರು ಎಐಸಿಸಿ ಅಧ್ಯಕ್ಷ ಸ್ಥಾನ ಅಲಂಕರಿಸಿದ್ದಾರೆ. ನಾವೆಲ್ಲರೂ ಅವರ ಕೈ ಬಲಪಡಿಸಬೇಕು. ದೇಶದಲ್ಲಿ ಮತ್ತೆ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತರಬೇಕು. ಪಕ್ಷದ ವಿಚಾರ ಹಾಗೂ ಯೋಜನೆಗಳನ್ನು ರಾಜ್ಯದ ಮೂಲೆ ಮೂಲೆಗೂ ತಲುಪಿಸಬೇಕು. ಬಿಜೆಪಿ ಏನೇ ತಿಪ್ಪರಲಾಗ ಹಾಕಿದರೂ, 2028ಕ್ಕೆ ನಮ್ಮದೇ ಸರ್ಕಾರ ಬರುತ್ತದೆ' ಎಂದರು.

'ಯಾವ ರೀತಿ ರಾಜಕಾರಣ ಮಾಡಬೇಕು ಎನ್ನುವುದು ಗೊತ್ತಿದೆ. ಅವರು ಏನೇ ಚದುರಂಗ ಆಟವಾಡಿದರೂ ಹೇಗೆ ಚೆಕ್‌ಮೇಟ್ ನೀಡಬೇಕು ಎಂದು ಕಲಿತಿರುವೆ. ರಾಜಕಾರಣ ಫುಟ್ಬಾಲ್ ಅಲ್ಲ, ಅದು ಚದುರಂಗದಾಟ' ಎಂದರು.

ಮೀನು ಮಾರಾಟ...

ಮಂಗಳೂರಿನ ಹಳೆ ಬಂದರಿನಲ್ಲಿರುವ ದಕ್ಕೆಯಲ್ಲಿ ಗುರುವಾರ ಬೆಳಿಗ್ಗೆ ಮೀನು ವ್ಯಾಪಾರ ಜೋರಾಗಿತ್ತು ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.

ಬಿಜೆಪಿ ನಾಯಕರಿಗೆ ಸಚಿವ ಪ್ರಿಯಾಂಕ್ ಖರ್ಗೆ ಸವಾಲು '₹50 ಸಾವಿರ ಕೋಟಿ ಆಸ್ತಿ ಹುಡುಕಿಕೊಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಫೇಕ್ ಫ್ಯಾಕ್ಟರಿ ಸ್ಥಾಪಿಸಿ ಸುಳ್ಳು ಹರಡುವ ಬಿಜೆಪಿ ಹಿಂದಿನಿಂದಲೂ ಆರೋಪ ಮಾಡುತ್ತಾ ಬಂದಿರುವ ನಮ್ಮ ಕುಟುಂಬದ ₹50 ಸಾವಿರ ಕೋಟಿ ಆಸ್ತಿ ತೋರಿಸದೇ ನಿರಾಸೆ ಮೂಡಿಸಿದೆ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಹೇಳಿಕೆ ಬಿಡುಗಡೆ ಮಾಡಿರುವ ಅವರು, '₹50 ಸಾವಿರ ಕೋಟಿ ಆಸ್ತಿಯ ಆರೋಪ ಮಾಡಿದ್ದ ಬಿಜೆಪಿಯ ಕೆಲ ಪುಡಿ ಮುಖಂಡರಿಗೆ ಲೀಗಲ್ ನೋಟಿಸ್ ಕಳುಹಿಸಿದ್ದೆ. 11 ವರ್ಷಗಳಿಂದ ಕೇಂದ್ರದಲ್ಲಿ ನರೇಂದ್ರ ಮೋದಿ ಅವರು ಅಧಿಕಾರದಲ್ಲಿ ಇದ್ದಾರೆ. ಐ.ಟಿ, ಇ.ಡಿ, ಸಿಬಿಐ ಅವರ ಕೈಯಲ್ಲೇ ಇವೆ. ಹೀಗಿದ್ದೂ ನಮ್ಮ ಆಸ್ತಿ ಹುಡುಕಲು ಸಾಧ್ಯವಾಗದಿ-ರುವುದು ಏಕೆ? ದಮ್ಮು, ತಾಕತ್ತಿನ ಬಿಜೆಪಿ ನಾಯಕರು ಎಲ್ಲಾ ತನಿಖಾ ಸಂಸ್ಥೆಗಳನ್ನೂ ಕಳಿಸಲಿ, ಎಲ್ಲಿ ಬೇಕಾದರೂ ದಾಳಿ ಮಾಡಿಸಲಿ, ನಮ್ಮ ₹50 ಸಾವಿರ ಕೋಟಿಯ ಆಸ್ತಿಯನ್ನು ಹುಡುಕಿಕೊಡಲಿ' ಎಂದು ಸವಾಲು ಹಾಕಿದ್ದಾರೆ.

ಪ್ರಿಯಾಂಕ್ ಖರ್ಗೆ

'ಸಿಎ ನಿವೇಶನ ಹೇಗೆ ಅಕ್ರಮ ಎನ್ನುವುದನ್ನು ನಿರೂಪಿಸಲು ಬಿಜೆಪಿಗೆ ಸಾಧ್ಯವಾಗಿಲ್ಲ. ಆದರೆ, ಬಿಜೆಪಿ ಅವಧಿಯಲ್ಲಿ ನಾನು ಬಯಲಿಗೆಳೆದಿದ್ದ ಪಿಎಸ್‌ಐ ಹಗರಣವನ್ನು ಅವರೇ ಒಪ್ಪಿದ್ದಾರೆ. ಅಧಿಕಾರಿಗಳು, ಆರೋಪಿಗಳ ಬಂಧನವಾಗಿದೆ. ಬಿಟ್‌ಕಾಯಿನ್ ಹಗರಣದಲ್ಲಿ ಪೊಲೀಸ್ ಅಧಿಕಾರಿಗಳ ಬಂಧನವಾಗಿದೆ. ಗಂಗಾ ಕಲ್ಯಾಣ, ಭೋವಿ ನಿಗಮದ ಅಕ್ರಮವೂ ಸಾಬೀತಾಗಿದೆ. ಟ್ರಕ್ ಟರ್ಮಿನಲ್ ಹಗರಣದಲ್ಲಿ ಬಿಜೆಪಿ ನಾಯಕರ ಬಂಧನವಾಗಿದೆ. ಕೋವಿಡ್ ಹಗರಣದಲ್ಲಿ ಅಧಿಕಾರಿಗಳ ತಲೆದಂಡವಾಗಿದೆ. ಪರಶುರಾಮ ಥೀಮ್‌ಪಾರ್ಕ್ ಹಗರಣ ಜನರ ಮುಂದೆ ಬಯಲಾಗಿದೆ, ಕಿಯೋನಿಕ್ಸ್ ಹಗರಣದ ಬಗ್ಗೆ ಸಿಎಜಿ ವರದಿಯಲ್ಲಿ ಪುರಾವೆ ಸಿಕ್ಕಿದೆ' ಎಂದು ಬಿಜೆಪಿ ಅವಧಿಯ ಹಗರಣಗಳ ಪಟ್ಟಿಯನ್ನೇ ನೀಡಿದ್ದಾರೆ.

'ಬಿ.ಎಸ್. ಯಡಿಯೂರಪ್ಪ ಅವರ ಮೇಲೆ ಪೋಕ್ಸೊ ಪ್ರಕರಣ ಇರುವುದು ಸುಳ್ಳಾ? ಭ್ರಷ್ಟಾಚಾರದಲ್ಲಿ ಅವರು ಜೈಲಿಗೆ ಹೋಗಿದ್ದು ಸುಳ್ಳಾ? ಬಿಜೆಪಿ ಶಾಸಕ ಮುನಿರತ್ನ ಇಬ್ಬರು ಮಾಜಿ ಮುಖ್ಯಮಂತ್ರಿಗಳಿಗೆ ಹನಿಟ್ರಾಪ್ ಮಾಡಿದ್ದು ಸುಳ್ಳಾ? ಬಿಜೆಪಿಯ 15ಕ್ಕೂ ಹೆಚ್ಚು ನಾಯಕರು ಸಿ.ಡಿ ಪ್ರಸಾರ ಮಾಡದಂತೆ ತಡೆಯಾಜ್ಞೆ ತಂದಿದ್ದು ಸುಳ್ಳಾ? ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಶಾಲೆ ಹೆಸರಲ್ಲಿ ನಿವೇಶನ ಪಡೆದು ಬಿರಿಯಾನಿ ಹೋಟೆಲ್ ಮಾಡಿದ್ದು ಸುಳ್ಳಾ' ಎಂದು ಪ್ರಶ್ನಿಸಿದ್ದಾರೆ.

ಚರ್ಚೆಗಳೇ ಬದಲಾವಣೆಗೆ ನಾಂದಿ: ಮಹೇಶ ಜೋಶಿ ಹೇಳಿಕೆ

ನ.12ರಂದು ಸಾಹಿತ್ಯ ಸಮ್ಮೇಳನಾಧ್ಯಕ್ಷರ ಆಯ್ಕೆ

ಪ್ರಜಾವಾಣಿ ವಾರ್ತೆ

ಮಂಡ್ಯ: '87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಆಯ್ಕೆ ವಿಷಯವು ವಿವಾದದ ಸ್ವರೂಪ ಪಡೆದಿದೆ. ಸಾಹಿತಿಗಳು ಅಥವಾ ಸಾಹಿತ್ಯೇತರರಲ್ಲಿ ಯಾರು ಅಧ್ಯಕ್ಷರಾಗಬೇಕೆಂಬ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕ ಚರ್ಚೆ ನಡೆಯುತ್ತಿದ್ದು, ಅದನ್ನು ನಾನಾಗಲೀ ಅಥವಾ ಸಾಹಿತ್ಯ ಪರಿಷತ್ತಾಗಲಿ ಆರಂಭಿಸಿಲ್ಲ' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ಸ್ಪಷ್ಟಪಡಿಸಿದರು.



ಮಹೇಶ ಜೋಶಿ

'ಕನ್ನಡ ಸಾಹಿತ್ಯ ಪರಿಷತ್ತಿನ ನಿಬಂಧನೆ (33) ನಿಯಮ (5)ರ ಪ್ರಕಾರ, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಗೆ ಆಯಾ ವರ್ಷದ ಸಮ್ಮೇಳನಾಧ್ಯಕ್ಷರನ್ನು ಆಯ್ಕೆ ಮಾಡುವ ಅಧಿಕಾರವಿರುತ್ತದೆ. ಹೀಗಾಗಿ ನ.12ರಂದು ಕಾರ್ಯಕಾರಿ ಮಂಡಳಿಯ ಸಭೆ ನಡೆಸಿ, ಕೂಲಂಕಶವಾಗಿ ಚರ್ಚೆ ನಡೆಸಿ ಅಧ್ಯಕ್ಷರ ಆಯ್ಕೆ ಬಗ್ಗೆ ನಿರ್ಣಯಿಸುತ್ತೇವೆ' ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಅಧ್ಯಕ್ಷರ ಆಯ್ಕೆ ಬಗ್ಗೆ ಸಾರ್ವಜನಿಕ ವಲಯದಿಂದ ಸಲಹೆ, ಸೂಚನೆ, ಅಭಿಪ್ರಾಯಗಳು ಬಂದಿವೆ. ಚರ್ಚೆಗಳು ತೀವ್ರವಾಗಿ ನಡೆದಷ್ಟೂ ಉತ್ತಮ ಫಲಿತಾಂಶ ಸಿಗುತ್ತದೆ. ಬದಲಾವಣೆಗೆ ನಾಂದಿ ಹಾಡುತ್ತದೆ. ಚರ್ಚೆಗಳು ಪ್ರಜಾಸತ್ತೆಯ ಜೀವಾಳ' ಎಂದು ಅವರು ಹೇಳಿದರು.

'ಸಿದ್ದರಾಮಯ್ಯ, ದೇವೇಗೌಡರ ಹೆಸರೂ ಶಿಫಾರಸು'

'ರಾಷ್ಟ್ರ ಮತ್ತು ರಾಜ್ಯ ರಾಜಕಾರಣದಲ್ಲಿ ಛಾಪು ಮೂಡಿಸಿರುವ ಎಚ್.ಡಿ.ದೇವೇಗೌಡ, ಎಸ್.ಎಂ.ಕೃಷ್ಣ, ಮುಖ್ಯಮಂತ್ರಿ ಸಿದ್ದರಾಮಯ್ಯನವರೇಕೆ ಸಮ್ಮೇಳನಾಧ್ಯಕ್ಷ-ರಾಗಬಾರದು ಎಂಬ ಸಲಹೆಗಳೂ ಕೇಳಿ ಬಂದಿವೆ' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದರು.

'ಸಾಹಿತ್ಯದ ಜೊತೆಗೆ ಕನ್ನಡ- ಕನ್ನಡಿಗ- ಕರ್ನಾಟಕದ ಅಭಿವೃದ್ಧಿಗೆ ಸೇವೆ ಸಲ್ಲಿಸಿದವರನ್ನೂ ಅಧ್ಯಕ್ಷತೆಗೆ ಏಕೆ ಪರಿಗ-ಣಿಸಬಾರದು ಎಂಬ ಪ್ರಶ್ನೆ ಸಾರ್ವಜನಿಕ ವಲಯದಿಂದ ಕೇಳಿ ಬಂದಿದೆ. 26 ಮಠಾಧೀಶರು ಈ ಪ್ರಶ್ನೆ ಎತ್ತುವ ಮೂಲಕ ಸಾರ್ವಜನಿಕ ಚರ್ಚೆಗೆ ನಾಂದಿ ಹಾಡಿದರು. ಆದಿಚುಂ-ಚನಗಿರಿಶ್ರೀ, ಸುತ್ತೂರು ಶ್ರೀ, ಸಿದ್ಧಗಂಗಾಶ್ರೀ, ಸಾಣೆಹಳ್ಳಿ ಶ್ರೀ, ಕೊಪ್ಪಳದ ಗವಿಸಿದ್ಧೇಶ್ವರ ಶ್ರೀಗಳು ಸೇರಿದಂತೆ ವಿವಿಧ ಮಠಾಧೀಶರ ಪರ ಮನವಿಗಳು ಬಂದಿವೆ' ಎಂದರು.

'ವಿವಿಧ ಕ್ಷೇತ್ರಗಳಲ್ಲಿ ಕರ್ನಾಟಕದ ಕೀರ್ತಿಯನ್ನು ಬೆಳಗಿಸಿರುವ ಸಿ.ಎನ್.ಆರ್.ರಾವ್, ಬಾಹ್ಯಾಕಾಶ ವಿಜ್ಞಾನಿ ಕಿರಣ್‌ಕುಮಾರ್, ಸುಧಾ ಮೂರ್ತಿ, ವಾಟಾಳ್ ನಾಗರಾಜ್, ಕರವೇ ಅಧ್ಯಕ್ಷ ನಾರಾಯಣಗೌಡ, ಕ್ರಿಕೆಟಿಗ ಜಿ.ಆರ್. ವಿಶ್ವನಾಥ್, ಪ್ರಕಾಶ ಪಡುಕೋಣೆ ಅವರನ್ನೇಕೆ ಪರಿಗಣಿಸಬಾರದು ಎಂಬ ಸಲಹೆಗಳು ಬಂದಿವೆ' ಎಂದರು.

'ಡಾ.ಲತಾ ರಾಜಶೇಖರ್, ಡಾ.ರಾಮೇಗೌಡ (ರಾಗೌ), ನಾಗತಿಹಳ್ಳಿ ಚಂದ್ರಶೇಖರ್, ಬಿ.ಟಿ.ಲಲಿತಾ ನಾಯಕ್, ಟಿ.ವಿ. ವೆಂಕಟಾಚಲಶಾಸ್ತ್ರಿ, ಮಾಲತಿ ಪಟ್ಟಣಶೆಟ್ಟಿ, ಪ್ರೊ.ಕೆ.ಎಸ್.ಭಗವಾನ್, ದೇವನೂರು ಮಹಾದೇವ, ಕುಂ. ವೀ, ಗಿರೀಶ ಕಾಸರವಳ್ಳಿ ಪರ ಶಿಫಾರಸುಗಳು ಬಂದಿವೆ' ಎಂದು ತಿಳಿಸಿದರು.

'ಕನ್ನಡ ಭಾಷೆ–ಸಂಸ್ಕೃತಿಯ ರಾಯಭಾರಿಯಾಗಿದ್ದ ಡಾ.ರಾಜ್‌ಕುಮಾರ್ ಅವರನ್ನು ಪರಿಗಣಿಸಲೇ ಇಲ್ಲವೆಂಬ ಅಸಮಾಧಾನ ಚಿತ್ರರಂಗದಿಂದ ಕೇಳಿಬಂದಿದೆ. ಮಾಧ್ಯಮ ಕ್ಷೇತ್ರ, ನ್ಯಾಯಾಂಗ ಕ್ಷೇತ್ರಗಳಲ್ಲಿರುವವರನ್ನೂ ಪರಿಗಣಿಸಿ ಎಂದು ಮನವಿಗಳು ಬಂದಿವೆ' ಎಂದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ಒಳ್ಳೆಯ ಅವಕಾಶಗಳು ಬರುತ್ತಿವೆ'
ಚಿತ್ರೋದ್ಯಮದಲ್ಲಿ ಉತ್ತಮ ಅವಕಾಶ ಪಡೆಯುತ್ತಿರುವ ನಟ ಅಭಿಮನ್ಯು ಕಾಶಿನಾಥ್ ಜೊತೆಗಿನ ಮಾತುಕತೆ

ಅನುಭವ ಮಂಟಪ
ಮಾಧುಸ್ವಾಮಿ ಸಮಿತಿ ವರದಿಯೇ ಆಧಾರವಾಗಲಿ...
'ಅನುಮಾನದ ಆಧಾರದಲ್ಲಿ ಶಿಕ್ಷೆ ನೀಡಲಾಗದು' 10
ಜಾತಿ ಸಮೀಕರಣ: ಕಾಂಗ್ರೆಸ್‌ಗೆ ಸತ್ವ ಪರೀಕ್ಷೆ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,006 ▼	24,749 ▼	₹80,450 (ಬೆಂಗಳೂರು) ▲	₹96,600 (ಬೆಂಗಳೂರು)	84.06 ▼

ಟಿಕೆಟ್‌ಗಾಗಿ ಮೂರೂ ಕಡೆ ಜಂಗೀ ಕುಸ್ತಿ

ಚನ್ನಪಟ್ಟಣ, ಶಿಗ್ಗಾವಿ ಮತ್ತು ಸಂಡೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣಾ ಕಣ ಕಳೆಗಟ್ಟುತ್ತಿದೆ. ಮೂರೂ ಕ್ಷೇತ್ರಗಳಲ್ಲಿ ಟಿಕೆಟ್‌ಗಾಗಿ ಪೈಪೋಟಿ ತೀವ್ರಗೊಂಡಿದ್ದು, ರಾಜಕೀಯ ಚಟುವಟಿಕೆ ಗರಿಗೆದರಿದೆ. ಗುರುವಾರದ ಬೆಳವಣಿಗೆಗಳೂ ಇದಕ್ಕೆ ಹೊರತಾಗಿರಲಿಲ್ಲ. ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಬಿಡದಿಯ ತಮ್ಮ ತೋಟದ ಮನೆಯಲ್ಲಿ ಅಭ್ಯರ್ಥಿ ಆಯ್ಕೆ ಸಂಬಂಧ ಸಭೆ ನಡೆಸಿದರು. ಸಂಸದ ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್‌.ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಚರ್ಚಿಸಿದರು. ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಬುಧವಾರ ರಾತ್ರಿ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯವರ ಜತೆ ಸಮಾಲೋಚನೆ ನಡೆಸಿ, ಗೆಲ್ಲುವ ಅಭ್ಯರ್ಥಿಗಳನ್ನೇ ಕಣಕ್ಕೆ ಇಳಿಸಬೇಕು ಎಂದು ತಾಕೀತು ಮಾಡಿದ್ದಾರೆ. ಈ ಎಲ್ಲ ಬೆಳವಣಿಗೆಗಳ ಬೆನ್ನಲ್ಲೇ ಹೊಸ ಹೊಸ ಆಕಾಂಕ್ಷಿಗಳು ಹುಟ್ಟಿಕೊಳ್ಳುತ್ತಿದ್ದಾರೆ. ತಮಗೇ ಟಿಕೆಟ್ ಬೇಕೆಂದು ಪಟ್ಟು ಹಿಡಿಯುತ್ತಿದ್ದಾರೆ.

ಚನ್ನಪಟ್ಟಣ

'ನಾನೇ ಅಭ್ಯರ್ಥಿ'– 'ತೀರ್ಮಾನ ನನ್ನದು'

ತೀವ್ರ ಕುತೂಹಲ ಕೆರಳಿಸಿರುವುದು ಚನ್ನಪಟ್ಟಣ ಕ್ಷೇತ್ರ. ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಅಭ್ಯರ್ಥಿ ಯಾರು ಎಂಬುದು ಇನ್ನೂ ನಿರ್ಧಾರವಾಗಿಲ್ಲ. ಮೂಲಗಳ ಪ್ರಕಾರ, ಬಿಜೆಪಿ ಈ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡಲಿದೆ. ಆದರೆ ಬಿಜೆಪಿ ಟಿಕೆಟ್ ಆಕಾಂಕ್ಷಿ ಸಿ.ಪಿ.ಯೋಗೇಶ್ವರ್ ಗುರುವಾರವಷ್ಟೇ, 'ಇಲ್ಲಿ ನಾನೇ ಎನ್‌ಡಿಎ ಅಭ್ಯರ್ಥಿ. ಒಂದೆರಡು ದಿನದಲ್ಲಿ ನನ್ನ ಹೆಸರು ಘೋಷಣೆಯಾಗುತ್ತದೆ ನೋಡಿ' ಎಂದಿದ್ದಾರೆ. ತಮಗೆ ಟಿಕೆಟ್ ಸಿಗದಿದ್ದರೆ, ಕಾರ್ಯಕರ್ತರು ಹೇಳಿದಂತೆ ಕೇಳುತ್ತೇನೆ ಎಂದಿದ್ದಾರೆ. ಜತೆಗೆ, 'ಉದ್ಯಮಿಯಾಗೇ ಇರು ಎಂದು ಡಿ.ಕೆ.ಶಿವಕುಮಾರ್ ಬಹಳ ಹಿಂದೆ ಹೇಳಿದ್ದನ್ನು ನಾನು ಕೇಳಬೇಕಿತ್ತು' ಎಂದೂ ಹೇಳಿದ್ದಾರೆ.

ಅವರ ಮಾತಿಗೆ ಪ್ರತಿಕ್ರಿಯಿಸಿರುವ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ.ಕುಮಾರಸ್ವಾಮಿ, 'ಇಲ್ಲಿ ಅಭ್ಯರ್ಥಿ ಯಾರಾಗಬೇಕು ಎಂಬುದನ್ನು ನಿರ್ಧರಿಸುವ ಅಧಿಕಾರವನ್ನು ದೆಹಲಿ ನಾಯಕರು ನನಗೇ ನೀಡಿದ್ದಾರೆ. ಚರ್ಚಿಸಿ ಇದನ್ನು ತೀರ್ಮಾನಿಸಲಾಗುತ್ತದೆ' ಎಂದಿದ್ದಾರೆ.

9ನೇ ಪುಟ ನೋಡಿ

ಶಿಗ್ಗಾವಿ

ಬೊಮ್ಮಾಯಿ ಪುತ್ರ ಕಣಕ್ಕೆ?

ಶಿಗ್ಗಾವಿ ಕ್ಷೇತ್ರದಲ್ಲಿ ಸಂಸದ ಬಸವರಾಜ ಬೊಮ್ಮಾಯಿ ಅವರ ಮಗ ಭರತ್ ಬೊಮ್ಮಾಯಿ ಅವರನ್ನು ಕಣಕ್ಕೆ ಇಳಿಸಲಾಗುತ್ತದೆ ಎಂಬ ಮಾತು ದಿನೇದಿನೇ ಗಟ್ಟಿಯಾಗುತ್ತಿದೆ. ಮಗನಿಗೆ ಟಿಕೆಟ್ ಕೊಡಿಸಲು ಅವರು ತೆರೆಮರೆಯ ಯತ್ನ ನಡೆಸಿದ್ದಾರೆ ಎಂದು ಬಿಜೆಪಿ ಮೂಲಗಳು ಹೇಳಿವೆ. ಆದರೆ ಅವರು ಇದನ್ನು ನಿರಾಕರಿಸಿದ್ದಾರೆ. 'ಪಕ್ಷ ಯಾರನ್ನೇ ನಿಲ್ಲಿಸಿದರೂ ಗೆಲ್ಲಿಸಿಕೊಂಡು ಬರಲು ಸಿದ್ಧನಿದ್ದೇನೆ' ಎಂದು ಅವರು ಗುರುವಾರ ಹೇಳಿದ್ದಾರೆ.

ಬಿ.ಎಸ್‌.ಯಡಿಯೂರಪ್ಪ ಅವರನ್ನು ಅವರ ನಿವಾಸದಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದ ಅವರು, 'ಚುನಾವಣೆಗೆ ಸಿದ್ಧತೆ ಬಗ್ಗೆ ವಿವರಿಸಿದ್ದೇನೆ. ಅಭ್ಯರ್ಥಿ ಆಯ್ಕೆ ಬಗ್ಗೆ ಚರ್ಚಿಸಲಾಯಿತು' ಎಂದಿದ್ದಾರೆ.

ಇನ್ನೊಂದೆಡೆ ಕಾಂಗ್ರೆಸ್ ಅಭ್ಯರ್ಥಿ ಇನ್ನೂ ಅಂತಿಮವಾಗಿಲ್ಲ. ಮತ್ತೆ ಮುಸ್ಲಿಂ ಸಮುದಾಯದ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಬೇಕು ಎಂಬ ಬಗ್ಗೆ ಪಕ್ಷದಲ್ಲಿ ಒತ್ತಡ ಹೆಚ್ಚುತ್ತಿದೆ. ಶಾಸಕ ತನ್ವೀರ್ ಸೇಠ್, 'ಸಾಮಾಜಿಕ ನ್ಯಾಯ ಒದಗಿಸಬೇಕಾದರೆ ಧಾರ್ಮಿಕ ಅಲ್ಪಸಂಖ್ಯಾತರಿಗೆ ಟಿಕೆಟ್ ಕೊಡಬೇಕು ಎಂಬ ಬೇಡಿಕೆ ಇಡಲಾಗಿದೆ' ಎಂದಿದ್ದಾರೆ.

ಸಂಡೂರು

'ತುಕಾರಾಂ ಕುಟುಂಬಕ್ಕೆ ಟಿಕೆಟ್ ಬೇಡ'

'ನನ್ನ ಪತ್ನಿ ಅನ್ನಪೂರ್ಣಗೆ ವಿಧಾನಸಭಾ ಟಿಕೆಟ್ ನೀಡಬೇಕು' ಎಂದು ಲೋಕಸಭಾ ಚುನಾವಣೆಗೆ ಸ್ಪರ್ಧಿಸುವ ಸಂದರ್ಭದಲ್ಲೇ ಇ.ತುಕಾರಾಂ ಷರತ್ತು ಹಾಕಿದ್ದರು. ಅನ್ನಪೂರ್ಣ ಅವರಿಗೆ ಟಿಕೆಟ್ ಸಿಗುವುದು ಬಹುತೇಕ ಖಚಿತವಾದರೂ, ತುಮಟಿ ಲಕ್ಷ್ಮಣ ಟಿಕೆಟ್‌ಗಾಗಿ ಪಟ್ಟು ಬಿಗಿಗೊಳಿಸಿದ್ದಾರೆ. ಗುರುವಾರವಷ್ಟೇ ಸಂತೋಷ್ ಲಾಡ್ ಅವರ ಮನೆಗೆ 300–400 ಜನರನ್ನು ಕರೆದುಕೊಂಡು ಹೋಗಿದ್ದ ಲಕ್ಷ್ಮಣ, 'ಕ್ಷೇತ್ರದಲ್ಲಿ ಪಕ್ಷದ ಹೆಸರನ್ನು ತುಕಾರಾಂ ಹಾಳುಮಾಡಿದ್ದಾರೆ. ಅವರಿಗೆ ಟಿಕೆಟ್ ನೀಡಬಾರದು. ಬೇರೆ ಯಾರನ್ನು ನಿಲ್ಲಿಸಿದರೂ ಗೆಲ್ಲಿಸಿಕೊಂಡು ಬರುತ್ತೇವೆ' ಎಂದು ಒತ್ತಾಯಿಸಿದ್ದಾರೆ.

ಜನಾರ್ದನ ರೆಡ್ಡಿ ಆಪ್ತ ಕೆ.ಎಸ್‌.ದಿವಾಕರ್ ಅವರು ಬಿಜೆಪಿಯಿಂದ ಕಣಕ್ಕೆ ಇಳಿಯುತ್ತಾರೆ ಎಂಬ ಮಾತು ಬಲವಾಗುತ್ತಿದೆ. ಆದರೆ ತಮಗೆ ಅಥವಾ ತಮ್ಮ ಮಗನಿಗೆ ಟಿಕೆಟ್ ನೀಡಬೇಕು ಎಂದು ಮಾಜಿ ಸಂಸದ ದೇವೇಂದ್ರಪ್ಪ ಕೇಳಿದ್ದಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

'ಸೆ.6ಎ' ಸಿಂಧುತ್ವ ಎತ್ತಿ ಹಿಡಿದ 'ಸುಪ್ರೀಂ'

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಅಸ್ಸಾಂಗೆ ವಲಸೆ ಬಂದಿರುವವರಿಗೆ ಪೌರತ್ವ ನೀಡುವ, ಭಾರತೀಯ ಪೌರತ್ವ ಕಾಯ್ದೆಯ 'ಸೆಕ್ಷನ್ 6ಎ'ದ ಸಾಂವಿಧಾನಿಕ ಸಿಂಧುತ್ವವನ್ನು ಎತ್ತಿ ಹಿಡಿದು ಸುಪ್ರೀಂ ಕೋರ್ಟ್ ಗುರುವಾರ ಬಹುಮತದ ತೀರ್ಪು ನೀಡಿದೆ.

ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಐವರು ಸದಸ್ಯರು ಇದ್ದ ಸಂವಿಧಾನ ಪೀಠವು 4:1 ರ ತೀರ್ಪು ನೀಡಿದ್ದು, 'ಸೆಕ್ಷನ್ 6ಎ'ದ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಗಳನ್ನು ವಜಾಗೊಳಿಸಿದೆ.

ಸಿಜೆಐ ಚಂದ್ರಚೂಡ್, ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ಎಂ.ಎಂ.ಸುಂದ್ರೇಶ್ ಹಾಗೂ ಮನೋಜ್ ಮಿಶ್ರಾ ಅವರು 'ಸೆಕ್ಷನ್ 6ಎ'ದ ಸಿಂಧುತ್ವ ಎತ್ತಿ ಹಿಡಿದಿದ್ದರೆ, ಭಿನ್ನ ನಿಲುವು ತಳೆದಿರುವ ನ್ಯಾಯಮೂರ್ತಿ ಜೆ.ಬಿ.ಪಾರ್ದೀವಾಲಾ, 'ಈ ಸೆಕ್ಷನ್ ಅಸಾಂವಿಧಾನಿಕ' ಎಂದಿದ್ದಾರೆ.

ಪೌರತ್ವ ಕಾಯ್ದೆ

> ಬಾಂಗ್ಲಾದೇಶ ಯುದ್ಧದ ಬಳಿಕ ಉದ್ಭವಿಸಿದ್ದ ಸನ್ನಿವೇಶ ಹಿನ್ನೆಲೆಯಲ್ಲಿ ಪೌರತ್ವ ಕಾಯ್ದೆಯ ಈ ಸೆಕ್ಷನ್‌ನ ಉದ್ದೇಶ ಅರ್ಥ ಮಾಡಿಕೊಳ್ಳಬೇಕು
> **ಡಿ.ವೈ.ಚಂದ್ರಚೂಡ್,** ಸಿಜೆಐ

10ನೇ ಪುಟ ನೋಡಿ

ಏನಿದು 'ಸೆಕ್ಷನ್‌6ಎ'?

1966ರ ಜನವರಿ 1ರಿಂದ 1971ರ ಮಾರ್ಚ್ 25ರ ನಡುವೆ ಅಸ್ಸಾಂಗೆ ಬಂದಿರುವ ವಲಸಿಗರಿಗೆ ಕಾಯ್ದೆಯ ಈ ಸೆಕ್ಷನ್ ಭಾರತೀಯ ಪೌರತ್ವ ನೀಡಲು ಅವಕಾಶ ಕಲ್ಪಿಸುತ್ತದೆ. ವಿಶೇಷವಾಗಿ, ಈ ಅವಧಿಯಲ್ಲಿ ಬಾಂಗ್ಲಾದೇಶದಿಂದ ಬಂದ ಅಕ್ರಮ ವಲಸಿಗರಿಗೆ ಈ ಸೆಕ್ಷನ್‌ನ ಪ್ರಯೋಜನ ಸಿಗುತ್ತದೆ.

ಆಗಿನ ಪ್ರಧಾನಿ ರಾಜೀವ್ ಗಾಂಧಿ ನೇತೃತ್ವದ ಕೇಂದ್ರ ಸರ್ಕಾರ ಹಾಗೂ ಪ್ರಫುಲ್ಲಕುಮಾರ್ ಮಹಂತ ನೇತೃತ್ವದ ಆಲ್ ಅಸ್ಸಾಂ ಸ್ಟುಡೆಂಟ್ಸ್ ಯೂನಿಯನ್ (ಎಎಎಸ್‌ಯು) ನಡುವೆ ಏರ್ಪಟ್ಟ 'ಅಸ್ಸಾಂ ಒಪ್ಪಂದ'ದಂತೆ, 1985ರಲ್ಲಿ ಈ ಅವಕಾಶವನ್ನು ಕಾಯ್ದೆಯಲ್ಲಿ ಸೇರ್ಪಡೆ ಮಾಡಲಾಗಿದೆ. ಅಸ್ಸಾಂ ಒಪ್ಪಂದದಲ್ಲಿ ವಿವರಿಸಿರುವಂತೆ, ವಲಸಿಗರು ಎಂದು ಪರಿಗಣಿಸಲಾಗುವ ಜನರಿಗೆ ಈ ಸೆಕ್ಷನ್‌ನಡಿ ಪೌರತ್ವ ನೀಡಲಾಗುತ್ತದೆ.

ಶ್ವಾನಗಳಿಗೆ ಹಾರ ಹಾಕಿ, ಕುಂಕುಮವಿರಿಸಿ ಕಾರ್ಯಕ್ರಮ ಆರಂಭಿಸಿದ ಬಿಬಿಎಂಪಿ

ನಾಯಿಗಳಿಗೆ ಆಹಾರ ವಿತರಣೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಎಂಟೂ ವಲಯಗಳಲ್ಲಿ ಬೀದಿ ನಾಯಿಗಳಿಗೆ ಆಹಾರ ನೀಡಲು ಸ್ಥಳವನ್ನು ನಿಗದಿಪಡಿಸಲಾಗಿದೆ. ನಿಗದಿತ ಸ್ಥಳಗಳಲ್ಲಿ ನಾಯಿಗಳಿಗೆ ಆಹಾರ ವಿತರಣೆಗೆ ಗುರುವಾರ ಚಾಲನೆ ನೀಡಲಾಯಿತು.

ಬೀದಿ ನಾಯಿಗಳಿಗೆ ಆಹಾರ ಕಾರ್ಯಕ್ರಮಕ್ಕೆ ಚಾಲನೆ ನೀಡುವ ಅಂಗವಾಗಿ 'ಶ್ವಾನ ಮಹೋತ್ಸವ'ವನ್ನು ಆಯೋಜಿಸಲಾಗಿತ್ತು. ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಉತ್ಸವಕ್ಕೆ ಚಾಲನೆ ನೀಡಿ, ಬೀದಿ ನಾಯಿಗಳು ಹಾಗೂ ಮರಿಗಳಿಗೆ ಹೂವಿನ ಹಾರ ಹಾಕಿ, ಕುಂಕುಮವಿಟ್ಟು ಆಹಾರ ನೀಡಲಾಯಿತು.

ಬಿಬಿಎಂಪಿಯ ಪಶುಸಂಗೋಪನಾ ವಿಭಾಗದಿಂದ ಎಲ್ಲಾ ವಲಯಗಳ ಆಯ್ದ ಸ್ಥಳಗಳಲ್ಲಿ ಶ್ವಾನ ಮಹೋತ್ಸವ ಆಚರಿಸಲಾಗುತ್ತಿದೆ. ಸಹಬಾಳ್ವೆ ಹಾಗೂ 'ಒನ್ ಹೆಲ್ತ್' ಭಾಗವಾಗಿ ಬೀದಿ ನಾಯಿಗಳಿಗೆ ಆಹಾರ ನೀಡುವ ಪ್ರಕ್ರಿಯೆಯನ್ನು ಪ್ರಾಯೋಗಿಕವಾಗಿ ಆರಂಭಿಸಲಾಗುತ್ತಿದೆ.

ಒಂದು ತಿಂಗಳು ಯಶಸ್ವಿಯಾಗಿ ಪ್ರಕ್ರಿಯೆ ಪೂರ್ಣಗೊಂಡರೆ, ನ್ಯೂನತೆಗಳನ್ನು ಗುರುತಿಸಿ ಸರಿಪಡಿಸಿಕೊಂಡು ನಗರದ ಇತರೆಡೆಯೂ ನಾಯಿಗಳಿಗೆ ಆಹಾರ ನೀಡಲಾಗುತ್ತದೆ ಎಂದು ಪಶುಸಂಗೋಪನಾ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ತಿಳಿಸಿದರು.

ಪಾಲಿಕೆಯ ವ್ಯಾಪ್ತಿಯಲ್ಲಿ ಅಂದಾಜು 2.70 ಲಕ್ಷಕ್ಕೂ ಹೆಚ್ಚು ಬೀದಿ ನಾಯಿಗಳಿವೆ. ಅವುಗಳು ಕಚ್ಚುವುದು ಮತ್ತು ಅವು ರೋಷಗೊಳ್ಳುವ ಪ್ರಮಾಣವನ್ನು ತಡೆಯಬೇಕಿದೆ. ಈ ಬಗ್ಗೆ ಪಶು ವೈದ್ಯರು, ತಜ್ಞರು, ಪ್ರಾಣಿ ಪ್ರಿಯ ಸ್ವಯಂಸೇವಕರ ಬಳಿ ಚರ್ಚಿಸಲಾಗಿದೆ ಎಂದು ಹೇಳಿದರು.

'ಬೀದಿ ನಾಯಿಗಳಿಗೆ ಸರಿಯಾಗಿ ಆಹಾರ ಸಿಗದಿರುವ ಕಾರಣ ಕಚ್ಚುವುದು ಹಾಗೂ ರೋಷಗೊಳ್ಳುವ ಘಟನೆಗಳು ನಡೆಯುತ್ತಿವೆ ಎಂಬುದು ತಿಳಿದು ಬಂದಿದೆ. ಬೀದಿ ನಾಯಿಗಳಿಗೆ ಆಹಾರ ಸಿಕ್ಕರೆ ನಾಯಿ ಕಡಿತ ಹಾಗೂ ದಾಳಿಯ ಪ್ರಕರಣಗಳನ್ನು ತಗ್ಗಿಸಬಹುದು ಎಂಬ ಉದ್ದೇಶದಿಂದ ಈ ಕ್ರಮವನ್ನು ಅನುಸರಿಸಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

ಉತ್ತಮ ಸ್ಪಂದನೆ: ಪಾಲಿಕೆ ವ್ಯಾಪ್ತಿಯ ಸ್ಥಳೀಯ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಉಳಿಯುವ ಆಹಾರವನ್ನು ಬೀದಿ ನಾಯಿಗಳಿಗೆ ನೀಡುವ ಕುರಿತು ಚರ್ಚಿಸಲಾಗಿದೆ. ಅದಕ್ಕೆ, ಮಾಲೀಕರು ಉತ್ತಮ ರೀತಿಯಲ್ಲಿ ಸ್ಪಂದಿಸಿದ್ದಾರೆ ಎಂದು ವಿಕಾಸ್ ತಿಳಿಸಿದರು.

ಪಶುಸಂಗೋಪನಾ ವಿಭಾಗದ ಜಂಟಿ ನಿರ್ದೇಶಕ ಡಾ. ಚಂದ್ರಯ್ಯ, ಸಹಾಯಕ ನಿರ್ದೇಶಕರಾದ ಡಾ. ಮಲ್ಲಪ್ಪ ಭಜಂತ್ರಿ ಹಾಗೂ ಸಹವರ್ತೀನ್, ವಾಟರ್ ಫಾರ್ ವಾಯ್ಸ್ ಲೆಸ್ ಎನ್.ಜಿ.ಒ ಸಂಸ್ಥೆಗಳ ಸದಸ್ಯರು ಉಪಸ್ಥಿತರಿದ್ದರು.

ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ 'ಶ್ವಾನ ಮಹೋತ್ಸವ' ಅಂಗವಾಗಿ ಪಶುಸಂಗೋಪನೆ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಹಾಗೂ ಸಿಬ್ಬಂದಿ ನಾಯಿಗಳಿಗೆ ಆಹಾರ ನೀಡಿದರು

ಆಹಾರ ಸ್ಥಳದಲ್ಲಿ ಏನಿರುತ್ತದೆ?

ಎಂಟು ವಲಯಗಳಲ್ಲಿ ನಿಗದಿಪಡಿಸಿರುವ ಸ್ಥಳಗಳಲ್ಲಿಯೇ ಪ್ರತಿನಿತ್ಯ ಬೀದಿ ನಾಯಿಗಳಿಗೆ ಆಹಾರ ನೀಡಲಾಗುವುದು. ಸ್ಥಳದಲ್ಲಿ ಬಟ್ಟಲು, ನೀರು ಹಾಗೂ ಆಹಾರ ನೀಡುವ ಸ್ಥಳ ಎಂಬ ಫಲಕದ ವ್ಯವಸ್ಥೆ ಮಾಡಲಾಗಿರುತ್ತದೆ.

ಸ್ಥಳ: ಪೂರ್ವ ವಲಯ ಪಾಲಿಕೆ ಕೇಂದ್ರ ಕಚೇರಿ, ಎನ್.ಆರ್ ಚೌಕ, ಹಡ್ಸನ್ ವೃತ್ತ. ಮಹದೇವಪುರ ವಲಯದಲ್ಲಿ ಸಾದಮಂಗಲ ರಸ್ತೆ ಮತ್ತು ಗ್ರಾಮದೇವತೆ ದೇವಸ್ಥಾನ, ಹೂಡಿ. ಬೊಮ್ಮನಹಳ್ಳಿ ವಲಯದಲ್ಲಿ ಗುಬ್ಬಲಾಳ ಮುಖ್ಯರಸ್ತೆ, ಕೋಣನಕುಂಟೆ, ಸುಬ್ರಹ್ಮಣ್ಯಪುರ, ವಸಂತಪುರ. ಆರ್.ಆರ್ ನಗರ ವಲಯದಲ್ಲಿ ಬಿಸಿಎಂಸಿ ಲೇಔಟ್, ಆರ್.ಆರ್ ನಗರ. ದಾಸರಹಳ್ಳಿ ವಲಯದಲ್ಲಿ ಬಾಗಲಗುಂಟೆ, ಮಂಜುನಾಥ ನಗರ ಮುಖ್ಯರಸ್ತೆ. ದಕ್ಷಿಣ ವಲಯದಲ್ಲಿ ಸಿದ್ದಾಪುರ ವಾರ್ಡ್, ಗುಟ್ಟೆಪಾಳ್ಯ. ಯಲಹಂಕ ವಲಯದಲ್ಲಿ ಟೆಲಿಕಾಂ ಲೇಔಟ್, ಜಕ್ಕೂರು. ಪಶ್ಚಿಮ ವಲಯದಲ್ಲಿ ಗಾಯತ್ರಿ ನಗರ.

ಸುದ್ದಿ 2 ನಿಮಿಷ

ಸ್ಥಿರಾಸ್ತಿ ಡಿಟಿಡಿ ನೋಂದಣಿ ಪುನರಾರಂಭಕ್ಕೆ ಆಗ್ರಹ

ಬೆಂಗಳೂರು: ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಸ್ಥಿರಾಸ್ತಿ ದಾಖಲೆಗಳ ಡಿಟಿಡಿ (ಡೆಪಾಸಿಟ್ ಆಫ್ ಟೈಟಲ್ ಡೀಡ್) ನೋಂದಣಿಯನ್ನು ಮತ್ತೆ ಆರಂಭಿಸಬೇಕು ಎಂದು ಜಿಲ್ಲಾ ಸಹಕಾರಿ ಯೂನಿಯನ್ ನಿರ್ದೇಶಕ ಎಂ.ಆರ್. ವೆಂಕಟೇಶ್ ಆಗ್ರಹಪಡಿಸಿದರು.

'ಸಹಕಾರ ಬ್ಯಾಂಕ್, ಕ್ರೆಡಿಟ್ ಸೊಸೈಟಿಗಳು ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಾಲಕ್ಕಾಗಿ ಆಧಾರ ನೀಡುವ ಸ್ಥಿರಾಸ್ತಿ ದಾಖಲೆಗಳ ಡಿಟಿಡಿಯನ್ನು ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ನೊಂದಣಿ ಮಾಡಿಕೊಳ್ಳಲಾಗುತ್ತಿತ್ತು. ಆದರೆ ಈಗ ಇ-ಖಾತಾ ಕಡ್ಡಾಯ ಆಗಿದ್ದು, ಇ-ಖಾತಾ ನೀಡದಿದ್ದಲ್ಲಿ ಡಿಟಿಡಿ ನೋಂದಣಿ ಮಾಡುತ್ತಿಲ್ಲ' ಎಂದಿದ್ದಾರೆ.

'ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯಲ್ಲಿ ಎಲ್ಲಾ ಆಸ್ತಿಗಳು ಇನ್ನೂ ಪೂರ್ಣ ಇ-ಖಾತಾ ಆಗಿಲ್ಲದಿರುವುದರಿಂದ ಬ್ಯಾಂಕ್ ಮತ್ತು ಸೊಸೈಟಿಗಳಲ್ಲಿ ಮಂಜೂರಾದ ಸಾಲಗಳನ್ನು ಸಕಾಲದಲ್ಲಿ ಬ್ಯಾಂಕಿನ ಗ್ರಾಹಕರಿಗೆ ಬಿಡುಗಡೆ ಮಾಡಲಾಗುತ್ತಿಲ್ಲ. ಪಟ್ಟಣ ಸಹಕಾರ ಬ್ಯಾಂಕ್‌ಗಳ ನಿತ್ಯದ ಚಟುವಟಿಕೆಗಳು ತುಂಬಾ ಕುಂಠಿತವಾಗಿದ್ದು, ಕೋಟ್ಯಂತರ ರೂಪಾಯಿ ನಷ್ಟವಾಗುತ್ತಿದೆ' ಎಂದು ಅವರು ಹೇಳಿದ್ದಾರೆ.

'ಬ್ಯಾಂಕ್ ಸಾಲ ನೀಡುವಾಗ ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನದಂತೆ ಡಿಟಿಡಿ ನೋಂದಣಿಗೆ ಯಾವುದೇ ಅಡಚಣೆಯಾಗದಂತೆ ಸರ್ಕಾರ ಉಪ ನೋಂದಣಾಧಿಕಾರಿಗಳಿಗೆ ಸೂಚನೆ ನೀಡಬೇಕು' ಎಂದೂ ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.

ಸ್ಪರ್ಶ್ ಆಸ್ಪತ್ರೆ: 3ಡಿ ಪ್ರಿಂಟಿಂಗ್ ಪ್ರಯೋಗಾಲಯಕ್ಕೆ ಚಾಲನೆ

ಬೆಂಗಳೂರು: ಇನ್ಫೆಂಟ್ರಿ ರಸ್ತೆಯಲ್ಲಿರುವ ಸ್ಪರ್ಶ್ ಆಸ್ಪತ್ರೆಯಲ್ಲಿ ನಿರ್ಮಿಸಲಾದ 3ಡಿ ಪ್ರಿಂಟಿಂಗ್ ಪ್ರಯೋಗಾಲಯಕ್ಕೆ ಗುರುವಾರ ಚಾಲನೆ ದೊರೆತಿದ್ದು, ನಿಖರವಾಗಿ ಮೂಳೆ ಶಸ್ತ್ರಚಿಕಿತ್ಸೆ ನಡೆಸಲು ಇದರಿಂದ ಸಹಕಾರಿಯಾಗಿದೆ.

ಇಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಸ್ಪತ್ರೆಯ ಅಧ್ಯಕ್ಷ ಡಾ.ಶರಣ್ ಶಿವರಾಜ್ ಪಾಟೀಲ, 'ಶಸ್ತ್ರಚಿಕಿತ್ಸೆಗೆ ಸಂಬಂಧಿಸಿದಂತೆ ಆಸ್ಪತ್ರೆಯಲ್ಲಿ ರೋಬೋಟಿಕ್ ತಂತ್ರಜ್ಞಾನ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗಿದೆ ಎಂದರು.

'ಈ ತಂತ್ರಜ್ಞಾನ ಹಾಗೂ 3ಡಿ ಪ್ರಿಂಟಿಂಗ್ ಪ್ರಯೋಗಾಲಯದ ಸಮನ್ವಯದಿಂದ ಶಸ್ತ್ರಚಿಕಿತ್ಸೆ ಸುಲಭವಾಗಲಿದೆ. ನಿಖರ ಫಲಿತಾಂಶವನ್ನು ನಿರೀಕ್ಷಿಸಬಹುದಾಗಿದೆ' ಎಂದು ಹೇಳಿದರು.

'ಇಂಪ್ಲಾಂಟ್‌ಗಳ ವಿನ್ಯಾಸಕ್ಕೆ 3ಡಿ ಪ್ರಿಂಟಿಂಗ್ ಪ್ರಯೋಗಾಲಯ ನೆರವಾಗಲಿದೆ. ರೋಗಿಯ ಅಂಗರಚನೆಯ ಸ್ವರೂಪಕ್ಕೆ ಅನುಗುಣವಾಗಿ ಶಸ್ತ್ರಚಿಕಿತ್ಸೆ ಸಾಧ್ಯವಾಗಲಿದೆ. ಈ ತಂತ್ರಜ್ಞಾನ ಮೂಳೆಗಳ ಜೋಡಣೆಯ ನಿಖರತೆಯನ್ನು ಸ್ಪಷ್ಟಗೊಳಿಸಲಿದೆ. ವ್ಯಕ್ತಿಯು ವೇಗವಾಗಿ ಚೇತರಿಸಿಕೊಳ್ಳಲೂ ಈ ತಂತ್ರಜ್ಞಾನ ಸಹಕಾರಿಯಾಗಿದೆ' ಎಂದರು.

ಜಯನಗರದಲ್ಲಿ 'ಭೂಮಿಕಾ ಕ್ಲಬ್' ನಾಳೆ

Freedom Healthy Cooking Oils presents ಭೂಮಿಕಾ ಕ್ಲಬ್

ಬೆಂಗಳೂರು: 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಮಹಿಳೆಯರಿಗಾಗಿ ಸ್ಥಾಪಿಸಿರುವ 'ಭೂಮಿಕಾ ಕ್ಲಬ್' ವೇದಿಕೆಯು ಇದೇ ಶನಿವಾರ (ಅ.19) ಮಧ್ಯಾಹ್ನ 2.30ಕ್ಕೆ ಜಯನಗರದ ಆರ್.ವಿ.ಟೀಚರ್ಸ್ ಕಾಲೇಜು ಸಭಾಂಗಣದಲ್ಲಿ 21ನೇ ಆವೃತ್ತಿಯ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದೆ.

'ಫ್ರೀಡಂ ಆಯಿಲ್' ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ದೀಪಾವಳಿ ಹಬ್ಬದ ಸಂಭ್ರಮ ಹೆಚ್ಚಿಸಲು ಕಾರ್ಯಕ್ರಮ ಸಹಕಾರಿಯಾಗಲಿದೆ. ಅಡುಗೆ ತಯಾರಿ, ಸಂಗೀತ ಕಾರ್ಯಕ್ರಮ ಸೇರಿ ಹಲವು ವಿಶಿಷ್ಟತೆಯನ್ನು ಈ ಕಾರ್ಯಕ್ರಮವು ಒಳಗೊಂಡಿರಲಿದೆ.

ಬಾಣಸಿಗರಾದ ಪೂಜಾ ಪಾಟೀಲ ಅವರು ಅಡುಗೆ ಕಾರ್ಯಕ್ರಮ ನಡೆಸಿಕೊಡುತ್ತಾರೆ. ಅಶ್ವಿನಿ ಶೆಣೈ ಅವರು ಸೀರೆ ಉಡುವ ಕಲೆ ಮತ್ತು ಮೇಕಪ್ ಕಾರ್ಯಾಗಾರ ನಡೆಸಿಕೊಡುವರು. ಬೀಟ್ ಗುರೂಸ್ ಅವರಿಂದ ಡ್ರಮ್ ಸರ್ಕಲ್ ಕಾರ್ಯಕ್ರಮದ ಪ್ರದರ್ಶನ ನಡೆಯಲಿದೆ.

ಹೊಸ ವಿಷಯಗಳನ್ನು ಕಲಿಯಲು, ಸಮಾನ ಮನಸ್ಕರೊಂದಿಗೆ ಬೆರೆಯಲು, ಸೃಜನಶೀಲತೆ ಪ್ರದರ್ಶಿಸಲು, ಆರೋಗ್ಯ ಮತ್ತು ಕ್ಷೇಮ ಜಗತ್ತಿನ ಬಗ್ಗೆ ಮಾಹಿತಿ ಪಡೆಯಲು ಈ ಕಾರ್ಯಕ್ರಮ ಸಹಕಾರಿಯಾಗಲಿದೆ. ಅಚ್ಚರಿಯ ಉಡುಗೊರೆ ಗೆಲ್ಲುವ ಅವಕಾಶವೂ ಇರಲಿದೆ.

ಉಚಿತ ಪ್ರವೇಶಕ್ಕೆ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ, ಹೆಸರು ನೋಂದಾಯಿಸಿಕೊಳ್ಳಬಹುದು.

ಮಾಹಿತಿಗೆ: 7338018541

'ಮುದ್ದಣ ಕೃತಿ ಕರಜನ' ಕೃತಿ ಬಿಡುಗಡೆ ಮಾಡಿದ ಹಂಪನಾ

ಸ್ಥಿತ್ಯಂತರ ಕಾಲದ ಕವಿ ಮುದ್ದಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಳೆಗನ್ನಡ ಹಿಂದಕ್ಕೆ ಸರಿದು ಹೊಸಗನ್ನಡ ಮುನ್ನೆಲೆಗೆ ಬರುವ ಸ್ಥಿತ್ಯಂತರ ಕಾಲದ ಕವಿ ಮುದ್ದಣ' ಎಂದು ಸಂಶೋಧಕ ಹಂಪ ನಾಗರಾಜಯ್ಯ ಹೇಳಿದರು.

ನಗರದಲ್ಲಿ ಬುಧವಾರ ನಡೆದ ಸಮಾರಂಭದಲ್ಲಿ ಎ.ವಿ. ನಾವಡ ಸಂಪಾದಿಸಿದ 'ಮುದ್ದಣ ಕೃತಿ ಕರಜನ' ಕೃತಿಯನ್ನು ಬುಧವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

ತುಳು ಸೇರಿದಂತೆ ಪ್ರಾದೇಶಿಕ ಘಾಟಿನ ಭಾಷೆಯನ್ನು ಬಳಸಿರುವ ಮುದ್ದಣ ಹಳೆಗನ್ನಡ, ಹೊಸಗನ್ನಡವನ್ನು ಹಿತವಾಗಿ ಬೆಸೆದ ಬರಹಗಾರ. ಸರಾಗವಾಗಿ ಆಸಕ್ತಿಯಿಂದ ಓದಿಸಿಕೊಂಡು ಹೋಗುವ ಶೈಲಿ ಅವರದ್ದು ಎಂದು ಬಣ್ಣಿಸಿದರು.

ಹಳೆಗನ್ನಡ ಕಾವ್ಯಗಳು ಈಗ ಕಪಾಟುಗಳಲ್ಲೇ ಉಳಿಯುತ್ತಿವೆ. ಹೊಸ ತಲೆಮಾರಿನ ಓದುಗರೂ ಆಸಕ್ತಿ ವಹಿಸುತ್ತಿಲ್ಲ. ವಿಶ್ವವಿದ್ಯಾಲಯಗಳಲ್ಲೂ ಮನ್ನಣೆ ಸಿಗುತ್ತಿಲ್ಲ ಎಂದು ವಿಷಾದಿಸಿದರು.

ಕೃತಿ ಕುರಿತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಮಾತನಾಡಿ, 'ಮುದ್ದಣ ಬರೆದ ರತ್ನಾವತಿ ಕಲ್ಯಾಣ, ಕುಮಾರವಿಜಯ, ಶ್ರೀರಾಮ ಪಟ್ಟಾಭಿಷೇಕ, ಅದ್ಭುತ ರಾಮಾಯಣ, ಶ್ರೀ ರಾಮಾಶ್ವಮೇಧ ಕೃತಿಗಳು ಜೊತೆಗೆ ಬೇರೆ ಹಾಡುಗಳು ಎಲ್ಲವನ್ನು ಸೇರಿಸಿ ತಂದಿರುವ ಈ ಕೃತಿಯು ಗ್ರಂಥ ಸಂಪಾದನೆ ಶಾಸ್ತ್ರದ ಉತ್ತಮ ಆಕರವಾಗಿದೆ. ಆಕರಸೂಚಿ, ಪಠ್ಯ, ತದ್ಭವ, ತುಳುಪದ, ನಿಘಂಟು ಹೀಗೆ ಎಲ್ಲವನ್ನು ಈ ಗ್ರಂಥ ಒಳಗೊಂಡಿದೆ' ಎಂದು ವಿವರಿಸಿದರು.

ಮುದ್ದಣ ತನ್ನ ಕಾವ್ಯಕ್ಕೆ ಸೃಷ್ಟಿಸಿದ ಅದ್ಭುತ ವಿಮರ್ಶಕಿಯೇ ಮನೋರಮೆ. ಈ ರೀತಿಯ ಸಂಭಾಷಣೆಯನ್ನು ಕಟ್ಟಿಕೊಟ್ಟ ಮೊದಲ ಮತ್ತು ಕೊನೆಯ ಕವಿ ಆತ. ತನ್ನ ಕಥೆಯನ್ನೇ ಹೇಳುವ, ಕೇಳುವ ಹಿಂದಿನ ಪರಂಪರೆಯ ಮುಂದುವರಿದ ಭಾಗ ಅವರು ಎಂದು ಹೇಳಿದರು.

ಕೃತಿಕಾರ ಎ.ವಿ. ನಾವಡ ಅವರು, 'ಮುದ್ದಣ ಬರೆದ ಹಸ್ತಪ್ರತಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿದೆ. ಅದನ್ನು ಪ್ರಕಟಿಸುವ ಬುದ್ಧಿ ವಿಶ್ವವಿದ್ಯಾಲಯಕ್ಕೆ ಬರಲಿ' ಎಂದು ಹಾರೈಸಿದರು.

ವಿಧಾನಸಭೆ ಅಧ್ಯಕ್ಷ ಯು.ಟಿ.ಖಾದರ್, ಶೇಷಾದ್ರಿಪುರ ಶಿಕ್ಷಣ ದತ್ತಿ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ.ಕೃಷ್ಣ, ಕರ್ನಾಟಕ ಸಂಸ್ಕೃತ ವಿ.ವಿ ವಿಶ್ರಾಂತ ಕುಲಪತಿ ಮಲ್ಲೇಪುರಂ ಜಿ. ವೆಂಕಟೇಶ, ಶೇಷಾದ್ರಿಪುರ ಸಂಜೆ ಕಾಲೇಜಿನ ಪ್ರಾಂಶುಪಾಲ ಎನ್.ಎಸ್. ಸತೀಶ್, ಗೋಧೂಳಿ ಕನ್ನಡ ಸಂಘದ ಸಂಚಾಲಕ ಸತ್ಯಮಂಗಲ ಮಹಾದೇವ ಭಾಗವಹಿಸಿದ್ದರು.

ಎ.ವಿ. ನಾವಡ ಅವರು ಸಂಪಾದಿಸಿರುವ 'ಮುದ್ದಣ ಕೃತಿ ಕರಜನ' ಕಾವ್ಯ ಸಂಪುಟದ ಮೊದಲ ಪ್ರತಿಯನ್ನು ಸಾಹಿತಿ ಹಂಪ ನಾಗರಾಜಯ್ಯ ಅವರಿಂದ ವಿಧಾನ ಸಭೆಯ ಅಧ್ಯಕ್ಷ ಯು.ಟಿ.ಖಾದರ್ ಸ್ವೀಕರಿಸಿದರು.. ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕರ್ವಾ ಚೌತ್

ಅಗರ್ವಾಲ್ ಮಹಿಳಾ ಮಂಡಲದ ಸದಸ್ಯರು ಭೋಪಾಲ್‌ನಲ್ಲಿ ಗುರುವಾರ ನಡೆದ ಕರ್ವಾ ಚೌತ್‌ನ ಮುನ್ನಾ ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಿದ್ದರು

'ತಳಸಮುದಾಯದವರಿಂದಲೇ ಮಹಾಕಾವ್ಯ' 9
ನಕಲಿ ಮದ್ಯ ಸೇವನೆ: ಮೃತರ ಸಂಖ್ಯೆ 25ಕ್ಕೆ 10
ಬಿಷ್ಣೋಯಿ ಗ್ಯಾಂಗ್‌ನ ಒಬ್ಬನ ಬಂಧನ 10
ಹಮಾಸ್ ಮುಖ್ಯಸ್ಥ ಸಿನ್ವರ್ ಹತ್ಯೆ 8

ಇಬ್ಬರು ನೀರುಪಾಲು ● ಹೊಲಗಳು ಜಲಾವೃತ, ಬೆಳೆಗಳಿಗೆ ಹಾನಿ ● ಹಲವೆಡೆ ಕೋಡಿ ಬಿದ್ದ ಕೆರೆಗಳು

ಮಳೆ: ಬಾಲಕ ಸೇರಿ ಮೂವರ ಸಾವು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ದಾವಣಗೆರೆ: ಬೆಳಗಾವಿ, ದಾವಣಗೆರೆ, ಹಾವೇರಿ, ಉತ್ತರಕನ್ನಡ ಅಲ್ಲದೆ ರಾಜ್ಯದ ಕೆಲವೆಡೆ ಬುಧವಾರ ರಾತ್ರಿ ಮತ್ತು ಗುರುವಾರ ಧಾರಾಕಾರ ಮಳೆ ಆಗಿದೆ. ಹೊಲಗಳು ಜಲಾವೃತವಾಗಿದ್ದರೆ, ಮಳೆ ಅನಾಹುತಗಳಿಗೆ ಸಂಬಂಧಿಸಿದ ಪ್ರತ್ಯೇಕ ಪ್ರಕರಣಗಳಲ್ಲಿ ಬಾಲಕ ಸೇರಿದಂತೆ ಮೂವರು ಮೃತಪಟ್ಟಿದ್ದಾರೆ. ಇಬ್ಬರು ನೀರುಪಾಲಾಗಿದ್ದಾರೆ.

ದಾವಣಗೆರೆಯಲ್ಲಿ ಮೆಕ್ಕೆಜೋಳ, ಈರುಳ್ಳಿ ಸೇರಿದಂತೆ ಕಟಾವಿಗೆ ಬಂದಿರುವ ಬೆಳೆಗಳಿಗೆ ಹಾನಿಯಾಗಿದೆ. ನಿರಂತರ ವರ್ಷಧಾರೆಯಿಂದಾಗಿ ಚಿತ್ರದುರ್ಗ ತಾಲ್ಲೂಕಿನ ಹಿರೇಗುಂಟನೂರು ಹೋಬಳಿ ವ್ಯಾಪ್ತಿಯ ಈಚಲನಾಗೇನಹಳ್ಳಿ ಗ್ರಾಮದಲ್ಲಿ ಗುರುವಾರ ಮನೆ ಕುಸಿದು ರಂಗಮ್ಮ (75) ಮೃತಪಟ್ಟಿದ್ದಾರೆ.

ಹಾವೇರಿಯ ಹಳೇ ಪಿ.ಬಿ.ರಸ್ತೆ ಬದಿಯ ಕಾಲುವೆಯಲ್ಲಿ ರಭಸವಾಗಿ ಹರಿಯುತ್ತಿದ್ದ ನೀರಿನಲ್ಲಿ ಕೊಚ್ಚಿಹೋಗಿ ನಿವೇದನ್ ಗುಡಗೇರಿ (9) ಮೃತಪಟ್ಟಿದ್ದಾನೆ.

'ಹಳೇ ಪಿ.ಬಿ. ರಸ್ತೆಯಲ್ಲಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಎದುರಿನ ರಸ್ತೆಯಲ್ಲಿ ಎರಡು ಬದಿಯಲ್ಲೂ ಮೂರು ಅಡಿಯಷ್ಟು ಹಳ್ಳದಂತೆ ನೀರು ಹರಿಯುತ್ತಿತ್ತು. ಶಿವಾಜಿನಗರದ 3ನೇ ಕ್ರಾಸ್‌ನಲ್ಲಿ ಪೋಷಕರ ಜೊತೆ ನೆಲೆಸಿದ್ದ ನಿವೇದನ್, ಸ್ನೇಹಿತರ ಜೊತೆ ಗುರುವಾರ ಬೆಳಿಗ್ಗೆ ಸ್ಥಳಕ್ಕೆ ಹೋಗಿದ್ದ. ಆಗ ಆಯತಪ್ಪಿ ಕಾಲುವೆಯೊಳಗೆ ಬಿದ್ದು ಅಸುನೀಗಿದ್ದಾನೆ. ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ, ಕಾರ್ಯಾಚರಣೆ ನಡೆಸಿದಾಗ ಆತನ ಮೃತದೇಹ ಪತ್ತೆಯಾಯಿತು' ಎಂದು ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ ತಿಳಿಸಿದರು.

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ನೊಗನಿಹಾಳ ಗ್ರಾಮದ ಬಳಿ ಘಟಪ್ರಭಾ ನದಿ ಸೇತುವೆ ಮೇಲೆ ಹೊರಟಿದ್ದ ಬೈಕ್ ನದಿಗೆ ಬಿದ್ದು ದಂಪತಿ ಕೊಚ್ಚಿ ಹೋಗಿದ್ದಾರೆ. ಚಿಕ್ಕೋಡಿ ತಾಲ್ಲೂಕಿನ ಪೊಗತ್ಯಾನಟ್ಟಿ ಗ್ರಾಮದ ಜಯಶ್ರೀ ಸುರೇಶ ಬಡಿಗೇರ (45) ಶವ ಪತ್ತೆಯಾಗಿದೆ. ಅವರ ಪತಿ ಸುರೇಶ ಗುಂಡಪ್ಪ ಬಡಿಗೇರ (54) ನೀರುಪಾಲಾಗಿದ್ದಾರೆ.

'ಘೋಡಗೇರಿ ಗ್ರಾಮದಿಂದ ಚಿಕ್ಕೋಡಿ ತಾಲ್ಲೂಕಿನ ಪೊಗತ್ಯಾನಟ್ಟಿ ಗ್ರಾಮಕ್ಕೆ ದಂಪತಿ ಬೈಕ್ ಮೇಲೆ ತೆರಳುತ್ತಿದ್ದರು. ಸೇತುವೆ ಮೇಲೆ ಎದುರಿಗೆ ಬಂದ ವಾಹನಕ್ಕೆ ದಾರಿ ಬಿಡುವಾಗ, ಬೈಕ್ ಜಾರಿ ನದಿಗೆ ಬಿತ್ತು. ಮಳೆ ಕಾರಣ ನದಿ ನೀರು ರಭಸವಾಗಿ ಹರಿಯುತ್ತಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಯುವಕ ನಾಪತ್ತೆ: ಬೈಲಹೊಂಗಲ ತಾಲ್ಲೂಕಿನ ನೇಸರಗಿ ಗ್ರಾಮದ ಬಳಿ ಬುಧವಾರ ಸಂಜೆ ಹಳ್ಳಕ್ಕೆ ಸಿಲುಕಿದ ಕರಡಿಗುದ್ದಿ ಗ್ರಾಮದ ಯಲ್ಲಪ್ಪ ಡಿ. ಬೋರಣ್ಣವರ ಎಂಬುವರು ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ.ಮೋರೆ ಗ್ರಾಮದಿಂದ ಕರಡಿಗುದ್ದಿಗೆ ಮರಳುತ್ತಿದ್ದ ವೇಳೆ ದುರ್ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಗಳೂರು ತಾಲ್ಲೂಕಿನ ಜಿನಗಿ ಹಳ್ಳ ತುಂಬಿ ಹರಿಯುತ್ತಿದೆ. ಕೆರೆ ಕೋಡಿ ಹರಿದು ಹಿರೇಮಲ್ಲನಹೊಳೆ ಗ್ರಾಮ ಜಲಾವೃತಗೊಂಡಿದೆ. ಕಾಳಜಿ ಕೇಂದ್ರದಲ್ಲಿ 40 ಕುಟುಂಬಗಳು ಆಶ್ರಯ ಪಡೆದಿವೆ. ದಾವಣಗೆರೆಯಲ್ಲಿ 6 ಸೆಂ.ಮೀ, ಹರಿಹರ ಹಾಗೂ ಜಗಳೂರು ತಾಲ್ಲೂಕಿನಲ್ಲಿ ತಲಾ 4 ಸೆಂ.ಮೀ ಮಳೆ ಬಿದ್ದಿದೆ.

ವಿವಿಧೆಡೆ ಬೆಳೆ ಹಾನಿ (ಚಿತ್ರದುರ್ಗ ವರದಿ): ಮೂರು ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಜಿಲ್ಲೆಯ ವಿವಿಧೆಡೆ ಕೆರೆ, ಕಟ್ಟೆಗಳ ಕೋಡಿ ಬಿದ್ದಿದ್ದು, ಬೆಳೆ ಹಾನಿಯಾಗಿದೆ. ತಾಲ್ಲೂಕಿನ ಕೊಡಗವಳ್ಳಿ ಗ್ರಾಮದ ಕೆರೆ ತುಂಬಿ, ಏರಿಯ ಒಂದು ಭಾಗ ಕುಸಿದು ಅಪಾರ ಪ್ರಮಾಣದ ನೀರು ಹೊರಗೆ ಹರಿಯುತ್ತಿದೆ. ಏರಿ ಒಡೆಯುವ ಭೀತಿ ಸೃಷ್ಟಿಯಾಗಿದ್ದು, ಸ್ಥಳೀಯರು ಕಲ್ಲುಗಳನ್ನು ತಂದು ಏರಿಗೆ ತುಂಬಿದ್ದಾರೆ. ಆ ಮೂಲಕ ತಾತ್ಕಾಲಿಕವಾಗಿ ನೀರಿನ ಹೊರಹರಿವು ಕಡಿಮೆ ಮಾಡಿದ್ದಾರೆ.

ದಾವಣಗೆರೆಯಲ್ಲಿ ಗುರುವಾರ ಸುರಿದ ಮಳೆಯಿಂದ ಪಿಸಾಳೆ ಕಾಂಪೌಂಡ್‌ನಲ್ಲಿನ ಮನೆಗಳಿಗೆ ನೀರು ನುಗ್ಗಿದ್ದು ನಿವಾಸಿಗಳು ನೀರನ್ನು ಹೊರ ಹಾಕಿದರು

—ಪ್ರಜಾವಾಣಿ ಚಿತ್ರ/ಸತೀಶ್ ಬಡಿಗೇರ

ಆರು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್'

ಬೆಂಗಳೂರು: ರಾಜ್ಯದ ಆರು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಿರುವ ಹವಾಮಾನ ಇಲಾಖೆ, ಈ ಜಿಲ್ಲೆಗಳಲ್ಲಿ ಶುಕ್ರವಾರವೂ ಭಾರಿ ಮಳೆಯಾಗಲಿದೆ ಎಂದು ಮುನ್ಸೂಚನೆ ನೀಡಿದೆ.

ದಕ್ಷಿಣ ಒಳನಾಡಿನ ಬಳ್ಳಾರಿ, ವಿಜಯನಗರ, ದಾವಣಗೆರೆ, ತುಮಕೂರು, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಕರಾವಳಿಯ ಕೆಲವು ಪ್ರದೇಶಗಳು ಸೇರಿದಂತೆ ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳ ಹೆಚ್ಚಿನ ಸ್ಥಳಗಳಲ್ಲಿ ಹಾಗೂ ಉತ್ತರ ಒಳನಾಡಿನ ಜಿಲ್ಲೆಗಳ ಅನೇಕ ಸ್ಥಳಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಸಿಜೆಐ: ನ್ಯಾ. ಖನ್ನಾ ಹೆಸರು ಶಿಫಾರಸು

ನವದೆಹಲಿ: ಸುಪ್ರೀಂ ಕೋರ್ಟ್‌ನ ಮುಂದಿನ ಮುಖ್ಯನ್ಯಾಯಮೂರ್ತಿ (ಸಿಜೆಐ) ಹುದ್ದೆಗೆ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರ ಹೆಸರನ್ನು ಹಾಲಿ ಸಿಜೆಐ ಡಿ.ವೈ.ಚಂದ್ರಚೂಡ್ ಶಿಫಾರಸು ಮಾಡಿದ್ದಾರೆ.

ಸಂಜೀವ್ ಖನ್ನಾ

ನ್ಯಾಯಮೂರ್ತಿ ಖನ್ನಾ ಅವರು 51ನೇ ಸಿಜೆಐ ಆಗಿ ನವೆಂಬರ್ 11ರಂದು ಅಧಿಕಾರ ವಹಿಸಿಕೊಳ್ಳಲಿದ್ದು, ಮುಂದಿನ ವರ್ಷ ಮೇ 13ರಂದು ನಿವೃತ್ತಿ ಹೊಂದುವರು. ಸಿಜೆಐ ಆಗಿ ಅವರ ಅಧಿಕಾರಾವಧಿ 6 ತಿಂಗಳು ಮಾತ್ರ ಇರಲಿದೆ.

2005ರಲ್ಲಿ ಅವರು ದೆಹಲಿ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ಪದೋನ್ನತಿ ಹೊಂದಿದ್ದರು. ನಂತರ, 2006ರಲ್ಲಿ ಹೈಕೋರ್ಟ್‌ನ ಕಾಯಂ ನ್ಯಾಯ-ಮೂರ್ತಿಯಾಗಿ ನೇಮಕಗೊಂಡರು. 2019ರ ಜನವರಿ 18ರಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಬಡ್ತಿ ಪಡೆದರು.

1960ರ ಮೇ 14ರಂದು ಜನಿಸಿರುವ ನ್ಯಾಯಮೂರ್ತಿ ಖನ್ನಾ, ದೆಹಲಿ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಪಡೆದಿದ್ದಾರೆ.

ಈರುಳ್ಳಿ ದರ ನಿಯಂತ್ರಣಕ್ಕೆ ಕ್ರಮ

ನವದೆಹಲಿ (ಪಿಟಿಐ): ಪ್ರಸ್ತುತ ದೇಶದ ವಿವಿಧೆಡೆ ಕೆ.ಜಿ ಈರುಳ್ಳಿ ಧಾರಣೆಯು ₹75ಕ್ಕೆ ತಲುಪಿದೆ. ದೀಪಾವಳಿ ಅಂಗವಾಗಿ ಚಿಲ್ಲರೆ ಮಾರುಕಟ್ಟೆಯಲ್ಲಿ ಬೆಲೆ ನಿಯಂತ್ರಣಕ್ಕೆ ಕ್ರಮವಹಿಸಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. 8

ಹಸೀನಾ ವಿರುದ್ಧ ಬಂಧನ ವಾರಂಟ್

ಢಾಕಾ (ಪಿಟಿಐ): ಬಾಂಗ್ಲಾದೇಶದ ಅಂತರರಾಷ್ಟ್ರೀಯ ಅಪರಾಧಗಳ ನ್ಯಾಯಮಂಡಳಿಯು ಮಾಜಿ ಪ್ರಧಾನಿ ಶೇಖ್ ಹಸೀನಾ ವಿರುದ್ಧ ಬಂಧನ ವಾರಂಟ್ ಹೊರಡಿಸಿದೆ. 8

ನಂದಿನಿ ಇಡ್ಲಿ–ದೋಸೆ ಹಿಟ್ಟು ಶೀಘ್ರ ಮಾರುಕಟ್ಟೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳ (ಕೆಎಂಎಫ್) ನಂದಿನಿ ಬ್ರ್ಯಾಂಡ್ ಹೆಸರಿನಲ್ಲಿಯೇ ಇಡ್ಲಿ, ದೋಸೆಯ ಸಿದ್ಧ ಹಿಟ್ಟನ್ನು ಮಾರುಕಟ್ಟೆಗೆ ಬಿಡುಗಡೆಗೊಳಿಸಲು ಸಜ್ಜಾಗಿದೆ. ಹೊಸ ಉತ್ಪನ್ನ 10 ದಿನಗಳೊಳಗೆ ಮಾರುಕಟ್ಟೆ ಪ್ರವೇಶಿಸಲಿದೆ.

'ಮೊದಲ ಹಂತದಲ್ಲಿ ಪ್ರತಿದಿನ 10 ಸಾವಿರದಿಂದ 20 ಸಾವಿರ ಕೆ.ಜಿ ಹಿಟ್ಟನ್ನು ಬೆಂಗಳೂರು ನಗರದಲ್ಲಿ ಮಾರಾಟ ಮಾಡಲಾಗುವುದು. ಇದಕ್ಕಾಗಿಯೇ ಜಯನಗರದಲ್ಲಿ ಪ್ಯಾಕಿಂಗ್ ಘಟಕ ಒಂದನ್ನು ತೆರೆಯಲಾಗಿದೆ. ಸಿದ್ಧ ಹಿಟ್ಟು ಮಾರಾಟಕ್ಕೆ ಈಗಾಗಲೇ ಪ್ರಾಯೋಗಿಕ ಪರೀಕ್ಷೆಗಳು ಪೂರ್ಣಗೊಂಡಿವೆ' ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಎಂ.ಕೆ. ಜಗದೀಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ಮಾರುಕಟ್ಟೆಯಲ್ಲಿ ಚಾಲ್ತಿಯಲ್ಲಿರುವ ಇಡ್ಲಿ ಮತ್ತು ದೋಸೆಯ ಸಿದ್ಧ ಹಿಟ್ಟಿನ ದರಕ್ಕಿಂತ ಕಡಿಮೆ ಬೆಲೆಗೆ ನಂದಿನಿ ಬ್ರ್ಯಾಂಡ್‌ನ ಇಡ್ಲಿ ಮತ್ತು ದೋಸೆಯ ಹಿಟ್ಟು ಗ್ರಾಹಕರಿಗೆ ಸಿಗಲಿದೆ. ಎರಡನೇ ಹಂತದಲ್ಲಿ ರಾಜ್ಯದಾದ್ಯಂತ ಮಾರಾಟ ವಿಸ್ತರಿಸಲಾಗುವುದು' ಎಂದು ಮಾಹಿತಿ ನೀಡಿದರು.

'ದೋಸೆ–ಇಡ್ಲಿ ಹಿಟ್ಟು 450 ಗ್ರಾಂ ಹಾಗೂ 900 ಗ್ರಾಂ ಪ್ಯಾಕೆಟ್‌ಗಳಲ್ಲಿ ಮಾರುಕಟ್ಟೆಗೆ ಬರಲಿದೆ. ದರ ಎಷ್ಟು ಎಂಬುದು ಇನ್ನೂ ನಿಗದಿಯಾಗಿಲ್ಲ' ಎಂದು ತಿಳಿಸಿದರು. ಉತ್ಪನ್ನವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲು ಸಮಾರಂಭ ಆಯೋಜಿಸಲು ಮುಖ್ಯಮಂತ್ರಿಯವರ ಸಮಯ ಕೋರಲಾಗಿದೆ. ಮುಖ್ಯಮಂತ್ರಿಯವರು ಸಮಯಾವಕಾಶ ನೀಡಿದ ಬಳಿಕ ಉತ್ಪನ್ನಗಳ ಬಿಡುಗಡೆಗೆ ದಿನಾಂಕ ನಿಗದಿ ಮಾಡಲಾಗುವುದು ಎಂದು ಹೇಳಿದರು.



ಬಿಜೆಪಿ ಟಿಕೆಟ್ ಕೊಡಿಸುವ ಆಮಿಷ ● ₹2 ಕೋಟಿ ಸುಲಿಗೆ ಮಾಡಿದ್ದ ಆರೋಪ ● ಬಸವೇಶ್ವರನಗರ ಠಾಣೆಯಲ್ಲಿ ಪ್ರಕರಣ

ಪ್ರಲ್ಹಾದ ಜೋಶಿ ಅಣ್ಣ, ತಂಗಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ದೂರಿನಲ್ಲಿರುವುದು

- ಅಥಣಿಯ ಎಂಜಿನಿಯರ್ ಮೂಲಕ ಪರಿಚಯ
- ಹುಬ್ಬಳ್ಳಿಯ ಮನೆಯಲ್ಲಿ ಗೋಪಾಲ್ ಜೋಶಿ ಭೇಟಿ

ಬೆಂಗಳೂರು: ಲೋಕಸಭೆ ಚುನಾವಣೆಗೆ ಬಿಜೆಪಿ ಟಿಕೆಟ್ ಕೊಡಿಸುವ ಆಮಿಷವೊಡ್ಡಿ ವಿಜಯಪುರ ಜಿಲ್ಲೆ ನಾಗಠಾಣ ಕ್ಷೇತ್ರದ ಮಾಜಿ ಶಾಸಕ ದೇವಾನಂದ್ ಫೂಲ್ ಸಿಂಗ್ ಚವ್ಹಾಣ್ ಅವರಿಂದ ₹2 ಕೋಟಿ ಸುಲಿಗೆ ಮಾಡಿದ್ದ ಆರೋಪದ ಅಡಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಸಹೋದರ, ಸಹೋದರಿ ಸೇರಿ ಮೂವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಪ್ರಲ್ಹಾದ ಜೋಶಿ ಅವರ ಅಣ್ಣ ಗೋಪಾಲ ಜೋಶಿ, ತಂಗಿ ವಿಜಯಲಕ್ಷ್ಮಿ ಜೋಶಿ ಹಾಗೂ ಗೋಪಾಲ ಜೋಶಿ ಅವರ ಪುತ್ರ ಅಜಯ್ ಜೋಶಿ ವಿರುದ್ಧ ಬಸವೇಶ್ವನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸುನಿತಾ ಚವ್ಹಾಣ್ ಅವರು ದೂರು ನೀಡಿದ್ದು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ದೇವಾನಂದ್ ಫೂಲ್ ಸಿಂಗ್ ಚವ್ಹಾಣ್ ಅವರು 2018ರಲ್ಲಿ ಜೆಡಿಎಸ್‌ನಿಂದ ಟಿಕೆಟ್ ಪಡೆದು ಜಯ ಗಳಿಸಿದ್ದರು. 2023ರ ಚುನಾವಣೆಯಲ್ಲಿ ಸೋತಿದ್ದರು. ನಂತರ, ಲೋಕಸಭೆ ಚುನಾವಣೆ ಟಿಕೆಟ್‌ಗೆ ಪ್ರಯತ್ನಿಸುತ್ತಿದ್ದರು. ಇದೇ ವೇಳೆ ಅಥಣಿ ಎಂಜಿನಿಯರ್ ಶೇಖರ್ ನಾಯಕ್ ಎಂಬುವವರು ಪ್ರಲ್ಹಾದ ಜೋಶಿ ಅವರ ಸಹೋದರ ಗೋಪಾಲ್ ಜೋಶಿ ಅವರ ಪರಿಚಯ ಇರುವುದಾಗಿ ಹೇಳಿದ್ದರು. ಜತೆಗೆ, ಚುನಾವಣೆಯಲ್ಲಿ ಬಿಜೆಪಿ, ಜೆಡಿಎಸ್ ಮೈತ್ರಿ ಮಾಡಿಕೊಂಡು ಸ್ಪರ್ಧಿಸುತ್ತಿರುವ ಮಾಹಿತಿ ನೀಡಿದ್ದರು. ಹುಬ್ಬಳ್ಳಿಯ ಮನೆಗೆ ಕರೆದೊಯ್ದು ಗೋಪಾಲ್ ಜೋಶಿ ಅವರನ್ನು ಭೇಟಿ ಮಾಡಿಸಿದ್ದರು' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ಕೇಂದ್ರದಲ್ಲಿ ನನ್ನ ಸಹೋದರ ಪ್ರಲ್ಹಾದ ಜೋಶಿ ಅವರ ವರ್ಚಸ್ಸು ತುಂಬಾ ಚೆನ್ನಾಗಿದೆ. ಅವರು ಹೇಳಿದಂತೆ ನರೇಂದ್ರ ಮೋದಿ ಹಾಗೂ ಅಮಿತ್ ಶಾ ಇಬ್ಬರೂ ಕೇಳುತ್ತಾರೆ. ನನ್ನ ತಮ್ಮನ ಜತೆಗೆ ಮಾತನಾಡಿ, ನಿಮಗೆ ವಿಜಯಪುರ ಕ್ಷೇತ್ರಕ್ಕೆ ಬಿಜೆಪಿಯ ಟಿಕೆಟ್ ಕೊಡಿಸುತ್ತೇನೆ ಎಂದು ಗೋಪಾಲ್ ಜೋಶಿ ಭರವಸೆ ನೀಡಿದ್ದರು. ₹5 ಕೋಟಿ ನೀಡುವಂತೆ ಬೇಡಿಕೆ ಇಟ್ಟಿದ್ದರು. ಅಷ್ಟು ಹಣವಿಲ್ಲ ಎಂದಾಗ ₹25 ಲಕ್ಷ ಕೇಳಿದ್ದರು. ಚೆಕ್ ಸಹ ಪಡೆದಿದ್ದರು. ಆ ಹಣವನ್ನು ಬೆಂಗಳೂರಿನ ಬಸವೇಶ್ವರ ನಗರದಲ್ಲಿರುವ ವಿಜಯಲಕ್ಷ್ಮಿ ಅವರ ಮನೆಗೆ ತಲುಪಿಸಲಾಗಿತ್ತು. ನಂತರ, ಅಮಿತ್ ಶಾ ಅವರ ಆಪ್ತ ಸಹಾಯಕರ ಜತೆಗೆ ಮಾತನಾಡಿದ್ದಾಗಿ ಹೇಳಿದ್ದರು. ಟಿಕೆಟ್ ಕೊಡಿಸದೇ ಮೋಸ ಮಾಡಿದ್ದಾರೆ' ಎಂದು ದೂರು ನೀಡಲಾಗಿದೆ.

'ನಂತರದ ದಿನಗಳಲ್ಲಿ ಮುಂದಿನ ಚುನಾವಣೆಯಲ್ಲಿ ಸಂಪೂರ್ಣ ಖರ್ಚು ನೋಡಿಕೊಳ್ಳುವುದಾಗಿ ಹೇಳಿ ₹1.75 ಕೋಟಿ ಪಡೆದುಕೊಂಡಿದ್ದರು' ಎಂದೂ ದೂರಿನಲ್ಲಿ ಉಲ್ಲೇಖಿಸಲಾಗಿದೆ. ಈ ಮೂವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಪತ್ನಿ, ಪ್ರಿಯಕರನ ಕೊಂದು ಪತಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಪತ್ನಿ ಹಾಗೂ ಆಕೆಯ ಪ್ರಿಯಕರನನ್ನು ದೊಣ್ಣೆಯಿಂದ ಹೊಡೆದು ಕೊಲೆ ಮಾಡಿದ ಬಳಿಕ ಪತಿಯೂ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕೋಣನಕುಂಟೆ ಪೊಲೀಸ್ ಠಾಣಾ ವ್ಯಾಪ್ತಿಯ ಆರ್‌ಬಿಐ ಲೇಔಟ್‌ನಲ್ಲಿ ನಡೆದಿದೆ.

ಆರ್‌ಬಿಐ ಲೇಔಟ್ ನಿವಾಸಿಗಳಾದ ಕೋಲುಸು ಲಕ್ಷ್ಮಿ (33) ಮತ್ತು ಗಣೇಶ್ ಕುಮಾರ್ (20) ಕೊಲೆಯಾದವರು. ಕೃತ್ಯ ಎಸಗಿದ ಬಳಿಕ ಲಕ್ಷ್ಮಿ ಅವರ ಪತಿ ಕೋಲುಸು ಗೊಲ್ಲಾ (41) ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮೂವರೂ ಆಂಧ್ರಪ್ರದೇಶದ ಶ್ರೀಕಾಕುಳಂನವರು. ನಗರದಲ್ಲಿ ಅವರು ಕಟ್ಟಡ ಕಾರ್ಮಿಕರಾಗಿ ಕೆಲಸ ಮಾಡಿದ್ದರು. ಇತ್ತೀಚೆಗೆ ಕೋಣನಕುಂಟೆಯ ಆರ್‌ಬಿಐನ ಸೋಮೇಶ್ವರ ಲೇಔಟ್‌ನ ನಿರ್ಮಾಣ ಹಂತದ ಕಟ್ಟಡದಲ್ಲಿ ಕೆಲಸ ಮಾಡುತ್ತಿದ್ದರು. ಅದೇ ಕಟ್ಟಡದ ನೆಲಮಹಡಿಯ ಒಂದೇ ಕೋಣೆಯಲ್ಲಿ ಮೂವರೂ ವಾಸವಾಗಿದ್ದರು ಎಂದು ಪೊಲೀಸರು ತಿಳಿಸಿದರು.

'ಈ ನಡುವೆ ಲಕ್ಷ್ಮಿ ಹಾಗೂ ಗಣೇಶ್ ಕುಮಾರ್ ನಡುವೆ ಆತ್ಮೀಯತೆ ಬೆಳೆದಿತ್ತು. ಈ ವಿಚಾರಕ್ಕೆ ಪತಿ ಹಾಗೂ ಪತ್ನಿ ನಡುವೆ ಗಲಾಟೆ ನಡೆಯುತ್ತಿತ್ತು. ಗಣೇಶ್ ಅವರ ಜತೆಗೆ ಓಡಾಟ ನಡೆಸದಂತೆ ಪತಿ ಕೋಲುಸುಗೊಲ್ಲಾ ಅವರು ತಾಕೀತು ಮಾಡಿದ್ದರು' ಎಂದು ಪೊಲೀಸರು ಹೇಳಿದರು.

ಲಕ್ಷ್ಮಿ

ಗಣೇಶ್

ಕೋಲುಸುಗೊಲ್ಲಾ

'ಇಸ್ರೊ ಲೇಔಟ್‌ನಲ್ಲಿ ಕಟ್ಟಡ ಕಾರ್ಮಿಕ-ರಾಗಿದ್ದ ನಾದಿನಿಗೆ ಕರೆ ಮಾಡಿದ್ದ ಕೋಲುಸು ಗೊಲ್ಲಾ, 'ನಿನ್ನ ಸಹೋದರಿ ಬೇರೊಬ್ಬನ ಜತೆ ಆತ್ಮೀಯವಾಗಿದ್ದಾಳೆ. ಹೀಗೆ ಮುಂದುವರಿದರೆ, ಆಕೆಯನ್ನು ಕೊಂದು, ನಾನೂ ಸಾಯುತ್ತೇನೆ' ಎಂದು ಬೆದರಿಕೆ ಹಾಕಿದ್ದರು. ಆದರೆ, ಅದನ್ನು ಆಕೆ ಗಂಭೀರವಾಗಿ ಪರಿಗಣಿಸಿರಲಿಲ್ಲ' ಎಂದು ಪೊಲೀಸರು ತಿಳಿಸಿದರು.

'ಗುರುವಾರ ದೊಣ್ಣೆಯಿಂದ ಪತ್ನಿ ಮತ್ತು ಆಕೆಯ ಪ್ರಿಯಕರನ ತಲೆಗೆ ಹೊಡೆದು ಕೊಂದ ಆರೋಪಿ, ನಸುಕಿನ ಜಾವ ನಾದಿನಿಗೆ ಕರೆ ಮಾಡಿ ಕೊಲೆಯ ವಿಷಯ ತಿಳಿಸಿದ್ದ. ಬಳಿಕ ಅದೇ ಕಟ್ಟಡದಲ್ಲಿ ತಾನು ಆತ್ಮಹತ್ಯೆ ಮಾಡಿಕೊಂಡಿದ್ದಾನೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಕಿಲಾರೆ ಕೆಫೆ ಮಾಲೀಕ ತಿಮ್ಮಣ್ಣ ಭಟ್ ಆತ್ಮಹತ್ಯೆ

ಬೆಂಗಳೂರು: ಹೋಟೆಲ್ ಉದ್ಯಮದಲ್ಲಿ ನಷ್ಟ ಅನುಭವಿಸಿ ಸಂಕಷ್ಟಕ್ಕೆ ಸಿಲುಕಿದ್ದ ಉದ್ಯಮಿ ತಿಮ್ಮಣ್ಣ ಭಟ್ ಅವರು ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ತಿಮ್ಮಣ್ಣ ಅವರು ರಾಜಾಜಿನಗರದ ಎರಡನೇ ಹಂತದ ನಿವಾಸಿ. ಶಾಸಕರ ಭವನದ ಕಿಲಾರೆ ಕೆಫೆ ನಡೆಸುತ್ತಿದ್ದರು.

'ಮಂಗಳವಾರ ರಾತ್ರಿ ಮನೆಯಲ್ಲೇ ಊಟ ಮಾಡಿ, ಕೋಣೆಗೆ ತೆರಳಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ಹೊನ್ನಾವರ ತಾಲ್ಲೂಕಿನ ಸಾಲ್ಕೊಂಡು ಗ್ರಾಮದ ತಿಮ್ಮಣ್ಣ, ಪತ್ನಿ ಹಾಗೂ ಇಬ್ಬರು ಮಕ್ಕಳ ಜತೆಗೆ ರಾಜಾಜಿ ನಗರದಲ್ಲಿ ನೆಲಸಿದ್ದರು. ಒಂಬತ್ತು ವರ್ಷಗಳಿಂದ ಶಾಸಕರ ಭವನದಲ್ಲಿ ಕೆಫೆ ನಡೆಸುತ್ತಿದ್ದರು. ಆರ್‌ಸಿ ಕಾಲೇಜು ಹಾಗೂ ಉದ್ಯೋಗ ಸೌಧದಲ್ಲೂ ಕ್ಯಾಂಟೀನ್ ನಡೆಸುತ್ತಿದ್ದರು. ಸ್ನೇಹಿತರ ಪಾಲುದಾರಿಕೆಯಲ್ಲಿ ಈಚೆಗೆ ಕುಮಟಾ, ಮುರುಡೇಶ್ವರದಲ್ಲಿ ಹೋಟೆಲ್ ಆರಂಭಿಸಿದ್ದರು. ಅಲ್ಲಿ ನಿರೀಕ್ಷಿತ ಆದಾಯ ಬಾರದೆ ಸಂಕಷ್ಟಕ್ಕೆ ಸಿಲುಕಿದ್ದರು. ಇದರಿಂದ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಶಂಕಿಸಲಾಗಿದೆ.



ತಿಮ್ಮಣ್ಣ ಭಟ್

'ಉದ್ಯಮದಲ್ಲಿ ನಷ್ಟವಾಗುತ್ತಿದೆ ಎಂದು ತಿಮ್ಮಣ್ಣ ಭಟ್ ಸಂಬಂಧಿಕರು, ಕುಟುಂಬಸ್ಥರ ಬಳಿ ಹೇಳಿಕೊಂಡಿದ್ದರು. ಮಂಗಳವಾರ ರಾತ್ರಿ ಊಟ ಮಾಡುವ ಸಂದರ್ಭದಲ್ಲಿ ಪತ್ನಿ, ಮಕ್ಕಳ ಎದುರು ಕಣ್ಣೀರು ಹಾಕಿದ್ದರು' ಎಂದು ಗೊತ್ತಾಗಿದೆ.

ಸುಬ್ರಹ್ಮಣ್ಯ ನಗರ ಪೊಲೀಸ್ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿದೆ.

ಅಪಘಾತ: ಅಣ್ಣ,ತಮ್ಮ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಹೊರ ವರ್ತುಲ ರಸ್ತೆಯ ದೇವಿನಗರ ಬಸ್ ತಂಗುದಾಣದ ಬಳಿ ರಸ್ತೆ ವಿಭಜಕಕ್ಕೆ ಎಲೆಕ್ಟ್ರಿಕ್ ಸ್ಕೂಟರ್ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಮೃತಪಟ್ಟಿದ್ದಾರೆ.

ಜಿ.ನಾಗರಾಜ್ (30) ಹಾಗೂ ಪಿ.ರಾಜೇಶ್‌ಕುಮಾರ್ (27) ಮೃತರು.

'ಬುಧವಾರ ರಾತ್ರಿ ಇಬ್ಬರೂ ತೆರಳುತ್ತಿದ್ದರು. ನಾಗರಾಜ್ ಅವರು ಸ್ಕೂಟರ್ ಚಲಾಯಿಸುತ್ತಿದ್ದರು. ಅವರ ಚಿಕ್ಕಮ್ಮನ ಮಗ ರಾಜೇಶ್ ಹಿಂದೆ ಕುಳಿತಿದ್ದರು. ಇಬ್ಬರೂ ಲೊಟ್ಟೆಗೊಲ್ಲಹಳ್ಳಿ ಕಡೆಯಿಂದ ಹೆಬ್ಬಾಳದ ಕಡೆ ತೆರ-ಳುತ್ತಿದ್ದರು. ದೇವಿನಗರ ಕ್ರಾಸ್‌ನ ಬಸ್ ತಂಗುದಾಣದ ಬಳಿ ವಿಭಜಕಕ್ಕೆ ಸ್ಕೂಟರ್ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ಇಬ್ಬರೂ ರಸ್ತೆ ಮೇಲೆ ಬಿದ್ದಿದ್ದರು. ಇಬ್ಬರ ತಲೆಗೂ ಗಂಭೀರ ಸ್ವರೂಪದ ಗಾಯಗಳಾಗಿದ್ದವು. ಅದೇ ಮಾರ್ಗದಲ್ಲಿ ಬರುತ್ತಿದ್ದ ವಾಹನ ಚಾಲಕರು ಗಾಯಾಳುಗಳನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಇಬ್ಬರೂ ಮೃತಪಟ್ಟಿದ್ದಾರೆ' ಎಂದು ಸಂಚಾರ ಪೊಲೀಸರು ಹೇಳಿದರು.

'ಅತಿ ವೇಗದಿಂದ ಅಪಘಾತ ಸಂಭವಿಸಿರುವ ಸಾಧ್ಯತೆಯಿದೆ. ಇಬ್ಬರೂ ಮದ್ಯ ಸೇವಿಸಿದ್ದರು ಎನ್ನಲಾಗಿದೆ. ಈ ಬಗ್ಗೆ ಪರಿಶೀಲಿಸಲಾಗುತ್ತಿದೆ' ಎಂದು ಸಂಚಾರ ಪೊಲೀಸರು ಹೇಳಿದರು.

'ಮೃತರ ಪೈಕಿ ಒಬ್ಬರ ಬಳಿ ಚಾಕು ಇತ್ತು. ಅದನ್ನು ಯಾವ ಉದ್ದೇಶಕ್ಕೆ ರಾತ್ರಿ ವೇಳೆ ಇಟ್ಟುಕೊಂಡಿದ್ದರು ಎಂಬುದರ ಕುರಿತೂ ತನಿಖೆ ನಡೆಸುವಂತೆ ಹೆಬ್ಬಾಳ ಠಾಣೆ ಪೊಲೀಸರಿಗೆ ಕೋರಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Accounts & Finance

WANTED ACCOUNTANTS B.Com/ M.Com Freshers for Reputed Printing Industry Located in Majestic, Accommodation Provided, Send Resume: bangaloreoffset@yahoo.co.in 9845151730/ 9900691118.

Hotel

WANTED IMMEDIATELY ADMIN MANAGER, RESTAURANT MANAGER, WAITERS, COOKS, COOLJOINT INCHARGE. Good Salary. UNCLE's KITCHEN: 99000-54468

REAL ESTATE SELLING

Flat

Rajajinagar

PURVA BLUBELLE Adjacent to Magadi road Metro station Rajajinagar Centre of the City 3 Bedroom & Exclusive 5Bedroom Flats +servant room with all luxurious Amenities, Only few units for Sale. Contact: 9844027560

General

Multiple Locations

RENTAL, BUYING, Selling Commercial, Residential, Industrial 2000sft to'2Lakh sft, All over_Karnataka available. Contact Arun_Estates. 9380586105.

House

Tumkur Road

60X40 A Khatha Site With 100 Square Building With 8 Flats Semi`Furnished, 8 Carpark Area,Lift, BBMP Water Connection, Borewell Walkable Distance From Metro &`Tumkur Road,Adjacent to Prestige Jindal City. Rs.7.00.Cr. Call: 7019455938

Residential/ Commercial

J P Nagar

NORTH EAST corner semi commercial building for sale @ J P Nagar 1st phase sarakki Road Near Hanuma Temple 6362905595

Sites

Banashankari

KANAKAPURA ROAD, Banashankari 6th Stage, 50x80 Site, And Concorde Napa Vally Villa For Sale: 9916817739

Kempegowda Layout

AVAILABLE BDA SITES NADAPRABHU KEMPEGOWDA LAYOUT 1st,5th, 6th and 7th BLOCK 30x40,40x60, 50x80. Contact: 9686469799

Multiple Locations

SALE Sadhashivnagar, RMV,Manyatha, Judicial layout. 30x50,45x60,50x80, 60x90, 80x120. (Buyer, seller to pay 2% commission) 9380586105.

SANJAYNAGAR 30X50, Sadashivnagar 60x90 (House), Sahakarnagar 150x200, Judicial Layout 95x89, Vyalikaval 40x70, Dollars Colony 60x80. 9538111239.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology and Painting work. Call-9880916988

CONNECT

REAL ESTATE BUYING

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT. CONTACT: 9845062822, 8660751654

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Agricultural Land Converted

Out-Station

LOOKING FOR agriculture lands in and aounrd Solur, Kunigal, Tumkur. Contact:- Sunil:- 9480721298. Agents Welcome.



SALE
CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 13.50 CRORES.
Call: 96322-37557/ 96069-07557

LOOKING FOR Plots and built houses, also agriculture lands in and around Hassan city. Extent 5 acres. Call: 9483756284. Agents welcome.

PERSONAL

Change of Name

I, RITU_AGARWAL W/o.Nagaraj J.P. R/a#165, Sri Shyam Kunj 6th_Cross, Bannerghatta Road Opp.Sherwood High Royal Hermitage Gottigere, Bangalore South, Bangalore 560083 have`changed my_name to RITU_GUPTA vide`affidavit dated:16.10.2024 before`Notary CN.Sreekanta Sastry Anekal

I, MARIA GAYATHRI, residing at No. 65, Old Cement Lane, West Road, Austin Town, Bangalore-560047, have changed my name to M GAYATHRI vide affidavit dated 29.07.2024 before Notary L. Gopalakrishna, Bangalore. Henceforth I shall be known as M GAYATHRI only.

I, CHITRA_ARVIND W/o.Arvind M.T R/a.D2, Sraddha Golf Links, 4th Cross Rustambagh Layout Bengaluru- 560017 have changed my Name from CHITRA M.K to CHITRA ARVIND vide`affidavit dated:30.8.2024 before`Notary HS.Sakalesh Aradhya Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds More value, more impact | ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
*Conditions apply
www.dhclassifieds.com BOOK NOW
Book your ad with us now! For more details contact:
+91 9845114560| +91 9901641752 | 080-45557163/164

BBಎಂಪಿ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಹೇಳಿಕೆ

'ಪಿ.ಜಿ ಮಾರ್ಗಸೂಚಿ ಸಡಿಲಿಕೆ ಪರಿಶೀಲನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೇಯಿಂಗ್ ಗೆಸ್ಟ್‌ಗಳ (ಪಿ.ಜಿ) ಸುರಕ್ಷತಾ ಮಾರ್ಗಸೂಚಿಗಳ ಅಳವಡಿಕೆಗೆ ಗಡುವು ವಿಸ್ತರಿಸಲು ಸಾಧ್ಯವಿಲ್ಲ. ಆದರೆ ಕೆಲ ಮಾರ್ಗ ಸೂಚಿಗಳನ್ನು ಸಡಿಲಿಸುವ ಬಗ್ಗೆ ಪರಿಶೀಲನೆ ನಡೆಸಲಾಗುವುದು' ಎಂದು ಬಿಬಿಎಂಪಿ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಹೇಳಿದರು.

ಪಿ.ಜಿ ಮಾಲೀಕರ ಕ್ಷೇಮಾಭಿವೃದ್ಧಿ ಸಂಘಗಳ ಒಕ್ಕೂಟ ಬುಧವಾರ ಇಲ್ಲಿ ಆಯೋಜಿಸಿದ್ದ, 'ಪಿ.ಜಿ ಮಾಲೀಕರ ಜಾಗೃತಿ ಸಮಾವೇಶ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಡಿ.ಟಿ.ಅರುಣ್ ಕುಮಾರ್, 'ಬಿಬಿಎಂಪಿ ಜಾರಿ ಮಾಡಿರುವ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ಕಷ್ಟವಾಗುತ್ತಿದೆ. ಹೀಗಾಗಿ ಅವುಗಳನ್ನು ಪಾಲಿಸಲು ಡಿಸೆಂಬರ್ 31ರವರೆಗೆ ಕಾಲಾವಕಾಶ ನೀಡಬೇಕು' ಎಂದು ವಿಶೇಷ ಆಯುಕ್ತರನ್ನು ಕೋರಿದರು.

ಜೊತೆಗೆ, 'ಪಿ.ಜಿಗಳಲ್ಲಿನ ಸಿ.ಸಿ. ಟಿ.ವಿ. ಕ್ಯಾಮೆರಾ ದೃಶ್ಯಾವಳಿಗಳನ್ನು 90 ದಿನಗಳು ಇರಿಸಿಕೊಳ್ಳಬೇಕು ಎಂದು ಮಾರ್ಗಸೂಚಿ ಹೇಳುತ್ತದೆ. ಇದನ್ನು 30 ದಿನಗಳಿಗೆ ಇಳಿಸಬೇಕು. ಅಗ್ನಿ ಅವಘಡ ಸುರಕ್ಷತೆಗೆ ನಿರಾಕ್ಷೇಪಣಾ ಪತ್ರ ಪಡೆಯುವ ನಿಯಮವನ್ನು ಸಡಿಲಿಸಬೇಕು. ಪಿ.ಜಿ. ಆರಂಭಕ್ಕೆ ಪರವಾನಗಿ ನೀಡುವ ನಿಯಮಗಳು ಮತ್ತು ಪ್ರಕ್ರಿಯೆ ಕಠಿಣವಾಗಿವೆ. ಈ ಕಾರಣದಿಂದಲೇ ನೂರಾರು ಪಿ.ಜಿ.ಗಳಿಗೆ ಪರವಾನಗಿ ದೊರೆಯುತ್ತಿಲ್ಲ. ಇದರಿಂದ ಮಾಲೀಕರು ಅಧಿಕಾರಿಗಳಿಂದ ಕಿರುಕುಳ ಎದುರಿಸಬೇಕಾಗಿದೆ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ವಿಕಾಸ್ ಕಿಶೋರ್ ಅವರು, 'ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಾವಳಿಯನ್ನು 30 ದಿನಗಳವರೆಗೆ ಇರಿಸಿಕೊಳ್ಳುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತದೆ. 21 ಮೀಟರ್‌ಗಿಂತ ಕಡಿಮೆ ಎತ್ತರದ ಕಟ್ಟಡಗಳಲ್ಲಿ ಇರುವ ಪಿ.ಜಿ.ಗಳಿಗೆ ಅಗ್ನಿಶಾಮಕ ದಳದಿಂದ ನಿರಾಕ್ಷೇಪಣಾ ಪತ್ರ ಪಡೆಯುವ ಅಗತ್ಯವಿಲ್ಲ. ಆದರೆ ಬೆಂಕಿ ನಂದಕಗಳನ್ನು ಕಡ್ಡಾಯವಾಗಿ ಇರಿಸಿಕೊಳ್ಳಬೇಕು ಮತ್ತು ತುರ್ತು ಪರಿಸ್ಥಿತಿ ನಿರ್ವಹಣೆಗೆ ಅಗತ್ಯವಿರುವ ಸವಲತ್ತುಗ-ಳನ್ನು ಹೊಂದಿರಬೇಕು' ಎಂದರು.

ಪಿ.ಜಿ ಮಾಲೀಕರ ಜಾಗೃತಿ ಸಮಾವೇಶದಲ್ಲಿ ಪಿ.ಜಿ ಮಾಲೀಕರ ಕ್ಷೇಮಾಭಿವೃದ್ಧಿ ಸಂಘಗಳ ಒಕ್ಕೂಟದ ಅಧ್ಯಕ್ಷ ಡಿ.ಟಿ.ಅರುಣ್ ಕುಮಾರ್, ನಿವೃತ್ತ ಪೊಲೀಸ್ ಅಧಿಕಾರಿ ಎಸ್‌.ಕೆ.ಉಮೇಶ್ ಮತ್ತು ಮಾಜಿ ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ್ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

'ಭದ್ರತೆ ಕಡೆಗಣಿಸಲು ಅವಕಾಶವಿಲ್ಲ. ಒಬ್ಬ ಭದ್ರತಾ ಸಿಬ್ಬಂದಿ ನೇಮಿಸಬೇಕು. ಅವರ ಆಧಾರ್ ಮತ್ತು ಗುರುತಿನ ಚೀಟಿ ವಿವರಗಳನ್ನು ಬಿಬಿಎಂಪಿಗೆ ಕಡ್ಡಾಯವಾಗಿ ಸಲ್ಲಿಸಬೇಕು. ಅವರಿಗೆ ಸಮವಸ್ತ್ರ ಒದಗಿಸಬೇಕು. ಕರ್ತವ್ಯದಲ್ಲಿ ಸಮವಸ್ತ್ರದಲ್ಲೇ ಇರಬೇಕು' ಎಂದರು.

2,000ಕ್ಕೂ ಹೆಚ್ಚು ಪಿ.ಜಿ ಮಾಲೀಕರು ಸಮಾವೇಶದಲ್ಲಿ ಭಾಗಿಯಾಗಿದ್ದರು. ನಿವೃತ್ತ ಪೊಲೀಸ್ ಅಧಿಕಾರಿ ಎಸ್‌.ಕೆ.ಉಮೇಶ್ ಅವರು ಮಾರ್ಗಸೂಚಿ ಪಾಲನೆ ಮತ್ತು ಭದ್ರತಾ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

ತೀರ್ಥಹಳ್ಳಿ ತಹಶೀಲ್ದಾರ್ ಸಾವು: ಕುಟುಂಬಸ್ಥರಿಗೆ ಮೃತದೇಹ ಹಸ್ತಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ತಹಶೀಲ್ದಾರ್ ಜಿ.ಬಿ.ಜಕ್ಕನಗೌಡರ್ (54) ಅವರ ಮೃತದೇಹವನ್ನು, ಕುಟುಂಬಸ್ಥರಿಗೆ ಗುರುವಾರ ಬೆಳಿಗ್ಗೆ ಉಪ್ಪಾರಪೇಟೆ ಠಾಣೆ ಪೊಲೀಸರು ಹಸ್ತಾಂತರಿಸಿದರು.

'ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಪರೀಕ್ಷೆ ನಡೆಸಿದ ವೈದ್ಯರು ಪ್ರಾಥಮಿಕ ವರದಿ ಸಲ್ಲಿಸಿದ್ದು, ಜಕ್ಕನಗೌಡರ್ ಅವರು ಹೃದಯಾಘಾತದಿಂದ ಮೃತಪಟ್ಟಿದ್ದಾರೆ ಎಂಬುದಾಗಿ ಉಲ್ಲೇಖಿಸಿದ್ದಾರೆ. ಅಂತಿಮ ವರದಿ ಬರಬೇಕಿದೆ' ಎಂದು ಪೊಲೀಸರು ತಿಳಿಸಿದರು.

'ಸೋಮವಾರ ಬೆಳಿಗ್ಗೆ ಬೆಂಗಳೂರಿಗೆ ಬಂದಿದ್ದ ಜಕ್ಕನಗೌಡರ್, ಪ್ರಕರಣವೊಂದರ ಸಂಬಂಧ ಕೋರ್ಟ್‌ಗೆ ಹಾಜರಾಗಿದ್ದರು. ಮೆಜೆಸ್ಟಿಕ್ ಸಮೀಪದ ವೈಭವ್ ಲಾಡ್ಜ್‌ನಲ್ಲಿ ತಂಗಿದ್ದರು. ಮಂಗಳವಾರ ರಾತ್ರಿ ಹೃದಯಾಘಾತದಿಂದ ಅವರು ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

ಮುಂಬೈನ ಬಾಂದ್ರಾದಲ್ಲಿ ಇತ್ತೀಚೆಗೆ ಹತ್ಯೆಗೀಡಾದ ರಾಜಕೀಯ ಮುಖಂಡ ಬಾಬಾ ಸಿದ್ದೀಕಿ ಅವರ ನಿವಾಸಕ್ಕೆ ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರು ಗುರುವಾರ ಭೇಟಿ ನೀಡಿ, ಮೃತರ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು. ಬಾಬಾ ಸಿದ್ದೀಕಿ ಅವರ ಸಹೋದರರಾದ ರಿಯಾಜ್ ಸಿದ್ದೀಕಿ, ಅಬ್ದುಲ್ ಅಜೀಜ್ ಸಿದ್ದೀಕಿ, ನಟ ಅಕ್ಬರ್ ಬಿನ್ ತಬರ್ ಉಪಸ್ಥಿತರಿದ್ದರು

ಎಎಸ್‌ಐ ಸಾವು

ಬೆಂಗಳೂರು: ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯ ಸಹಾಯಕ ಸಬ್ ಇನ್‌ಸ್ಪೆಕ್ಟರ್ ಶಿವಶಂಕರಾಚಾರಿ (49) ಅವರು ಹೃದಯಾಘಾತದಿಂದ ಗುರುವಾರ ಮೃತಪಟ್ಟಿದ್ದಾರೆ. ಬೆಳಿಗ್ಗೆ ಠಾಣೆಗೆ ಬಂದಿದ್ದ ಅವರು ನಂತರ ಬಂದೋಬಸ್ತ್ ಕರ್ತವ್ಯಕ್ಕೆ ತೆರಳಿದ್ದಾಗ ಅಸ್ವಸ್ಥಗೊಂಡು ಕುಸಿದು ಬಿದ್ದಿದ್ದರು. ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಆಸ್ಪತ್ರೆಯಲ್ಲೇ ಮೃತಪಟ್ಟಿದ್ದಾರೆ.

BEFORE THE HON'BLE CITY CIVIL JUDGE (COMMERCIAL COURT) AT BENGALURU (CCH-84)

COM. A.A. No. 254/2024

BETWEEN : M/s. SHRIRAM PROPERTIES LIMITED ...APPLICANT
AND : GARDENCITY REALTY PRIVATE LIMITED & ORS. ...RESPONDENTS
SRI. NARAYANASWAMY, S/o. Nadipanna, Aged about 46 yrs, Residing at No. 296, BB Road, Byatarayanapura, Bengaluru- 560 092. ...RESPONDENT No. 10

SUMMONS

Whereas the above-named Applicant has instituted an Application under Section 9 of the Arbitration and Conciliation Act, 1996 in the Court of the City Civil and Sessions Judge, Bengaluru (Commercial Court) (CCH-84) seeking for various reliefs. Take Notice that the above case is posted on 27/09/2024 before the City Civil and Sessions Judge, Bengaluru (Commercial Court) (CCH - 84) and you are hereby summoned to appear before this Court **on 13/11/2024 at 11:00 AM** in person or through an advocate/pleader on the day specified. Failing which the said Application filed under Section 9 of the Arbitration and Conciliation Act, 1996 will be heard and determined ex - parte.

Given under my hand seal of this Hon'ble Court on this 16.10.2024.

By Order of the Court, Senior Sheristedar, Commercial Court Unit, City Civil Court, Bengaluru.

AKS LAW ASSOCIATES
301, Sunrise Chambers, # 22, Ulsoor Road, Bengaluru- 560042.
M/s. SHRIRAM PROPERTIES LIMITED
A Company Incorporated under the Companies Act, 1956 Having its Registered Office at: Lakshmi Neela Rite Choice Chamber, New No.9, Bazullah Road T. Nagar, Chennai.
And Corporate Office at: No.31, 2nd Main Road, T. Chowdaiah Road, Sadashivanagar, Bangalore - 560 080.

ಎನ್‌ಇಪಿ: ಅನುತ್ತೀರ್ಣ ಆದವರಿಗೆ 10 ಕೃಪಾಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಪರಿಚಯಿಸಿದ್ದ ಕಡ್ಡಾಯ ವಿಷಯಗಳಲ್ಲಿ ಅನುತ್ತೀರ್ಣ ಆದ ವಿದ್ಯಾರ್ಥಿಗಳಿಗೆ ಕನಿಷ್ಠ 10 ಕೃಪಾಂಕ ನೀಡಿ, ತೇರ್ಗಡೆಗೊಳಿಸಲು ಬೆಂಗಳೂರು ವಿಶ್ವ ವಿದ್ಯಾಲಯ ನಿರ್ಧರಿಸಿದೆ.

2021-22ನೇ ಸಾಲಿನಿಂದ ರಾಷ್ಟ್ರೀಯ ಶಿಕ್ಷಣ ನೀತಿ ಪರಿಚಯಿಸಿದ ನಂತರ ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾಗಿರುವ ಕಾಲೇಜುಗಳಲ್ಲಿ ಪದವಿ ಕೋರ್ಸ್‌ಗಳಿಗೆ ದಾಖಲಾಗಿದ್ದ 855 ವಿದ್ಯಾರ್ಥಿಗಳು ಕಡ್ಡಾಯ ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದರು. ಅಂತಹ ವಿದ್ಯಾರ್ಥಿಗಳಿಗೆ 10 ಕೃಪಾಂಕಗಳನ್ನು ನೀಡಲಾಗುತ್ತಿದೆ.

ಎನ್‌ಇಪಿ ನಿಯಮದಂತೆ ಕ್ರೀಡೆ, ದೈಹಿಕ ಶಿಕ್ಷಣ, ಸಾಂಸ್ಕೃತಿಕ ಚಟುವಟಿಕೆಗಳು, ಎನ್‌ಸಿಸಿ, ಎನ್‌ಎಸ್‌ಎಸ್, ಆರೋಗ್ಯ ಮತ್ತು ಕ್ಷೇಮ, ಯೋಗ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಕಡ್ಡಾಯಗೊಳಿಸಲಾಗಿತ್ತು. ಈ ವಿಷಯಗಳಲ್ಲಿ ವಿದ್ಯಾರ್ಥಿಗಳ ಕಾರ್ಯ ಕ್ಷಮತೆಯ ಆಧಾರದ ಮೇಲೆ ಪ್ರಾಧ್ಯಾಪಕರು ಮೌಲ್ಯಮಾಪನ ಮಾಡಬೇಕಾಗಿತ್ತು. ಆದರೆ, ಸ್ಪಷ್ಟ ಮಾರ್ಗಸೂಚಿಗಳು ಇಲ್ಲದೆ, ಮೌಲ್ಯಮಾಪಕರು 10ಕ್ಕಿಂತ ಕಡಿಮೆ ಅಂಕಗಳನ್ನು ನೀಡಿದ್ದರಿಂದ ಹಲವು ವಿದ್ಯಾರ್ಥಿಗಳು ಅನುತ್ತೀರ್ಣ ಆಗಿದ್ದರು ಎಂದು ವಿಶ್ವ ವಿದ್ಯಾಲಯದ ಅಧಿಕಾರಿಗಳು ಹೇಳಿದ್ದಾರೆ.

ನಿಧನ ವಾರ್ತೆ

ಕೆ.ಎನ್. ಲಕ್ಷ್ಮಣಗೌಡ

ಕೆ.ಎನ್. ಲಕ್ಷ್ಮಣಗೌಡ

ಬೆಂಗಳೂರು: ಉದಯಭಾನು ಕಲಾಸಂಘದ ಸಂಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿದ್ದ ನಗರದ ಕತ್ತರಿಗುಪ್ಪೆ ಕೆಂಪೇಗೌಡ ಬಡಾವಣೆ ನಿವಾಸಿ ಕೆ.ಎನ್. ಲಕ್ಷ್ಮಣಗೌಡ (82) ಗುರುವಾರ ನಿಧನರಾಗಿದ್ದಾರೆ. ಅವರಿಗೆ ಪತ್ನಿ ಮತ್ತು ಇಬ್ಬರು ಗಂಡು ಮಕ್ಕಳು ಇದ್ದಾರೆ.

ಶುಕ್ರವಾರ ಮಧ್ಯಾಹ್ನ 12 ಗಂಟೆಯವರೆಗೆ ಮೃತರ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಚಾಮರಾಜಪೇಟೆಯ ಆಝಾದ್ ನಗರದ ಚಿತಾಗಾರದಲ್ಲಿ ಮಧ್ಯಾಹ್ನ 1.30ಕ್ಕೆ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಅವರ ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಜನಪದೋತ್ಸವ ಮತ್ತು ಅಭಿನಂದನಾ ಸಮಾರಂಭ: ಸಾನ್ನಿಧ್ಯ: ರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಚಲುವರಾಯಸ್ವಾಮಿ, ಎಚ್‌.ಸಿ. ಮಹದೇವಪ್ಪ, ಅಧ್ಯಕ್ಷತೆ: ಬಿ. ಶಿವಣ್ಣ, ಆಶಯ ನುಡಿ: ಎ.ಬಿ. ರಮೇಶ್ ಬಾಬು ಬಂಡಿಸಿದ್ದೇಗೌಡ, ಅತಿಥಿಗಳು: ಗೊಲ್ಲಹಳ್ಳಿ ಶಿವಪ್ರಸಾದ್, ಅಭಿನಂದಿತರು: ಕಿಕ್ಕೇರಿ ಕೃಷ್ಣಮೂರ್ತಿ, ಸಿ.ಎನ್. ಮಂಜೇಶ್, ಕೃಷ್ಣಮೂರ್ತಿ, ಕೃಷ್ಣೇಗೌಡ, ಆಯೋಜನೆ: ವಂದನ ಕಲ್ಚರಲ್ ಅಕಾಡೆಮಿ ಚಂದಾಪುರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4.30ರಿಂದ

ತಿಂಗಳ ಉಪನ್ಯಾಸ ಕಾರ್ಯಕ್ರಮ: 'ಕನ್ನಡದಲ್ಲಿ ಶ್ರೀ ಶ್ರೀ ಅವರ ವಿಪ್ಲವ ಸಾಹಿತ್ಯ' ಉಪನ್ಯಾಸ: ಬಂಜಗೆರೆ ಜಯಪ್ರಕಾಶ್, ಅಧ್ಯಕ್ಷತೆ: ಚನ್ನಪ್ಪ ಕಟ್ಟಿ, ಆಯೋಜನೆ ಮತ್ತು ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5

ವಿವಿಧ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು'ನಲ್ಲಿ ಪ್ರಕಟಿಸಲು ಈ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ: nagaradalli_indu@prajavani.co.in

ಸಿರಿಕಲಾ 14ನೇ ವಾರ್ಷಿಕೋತ್ಸವ 'ಯಕ್ಷ ತ್ರಿವಳಿ': 'ಚಿತ್ರಾಕ್ಷಿ ಕಲ್ಯಾಣ' ಯಕ್ಷಗಾನ ಪ್ರದರ್ಶನ, ಆಯೋಜನೆ: ಸಿರಿಕಲಾಮೇಳ, ಸ್ಥಳ: ಲಕ್ಷ್ಮೀನಾರಾಯಣ ವೇದಿಕೆ, ಹೊಟೇಲ್ ಅನ್ನ ಕುಟೀರ, ಕತ್ರಿಗುಪ್ಪೆ ಸಂಜೆ 5

'ಧರ್ಮನಟಿ' ನಾಟಕ ಪ್ರದರ್ಶನ: ರಚನೆ: ಸಿದ್ಧಲಿಂಗ ಪಟ್ಟಣಶೆಟ್ಟಿ, ನಿರ್ದೇಶನ: ಆಸಿಫ್ ಕ್ಷತ್ರಿಯ, ಶ್ವೇತಾ ಶ್ರೀನಿವಾಸ್, ಸಂಗೀತ: ಭಿನ್ನಷಡ್ಜ, ಆಯೋಜನೆ: ಕಲಾಪ್ರೇಮಿ ಫೌಂಡೇಶನ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 7

ಭಾರತದ ಅಗ್ರ 10 ಅತಿಹೆಚ್ಚು ಮಾರಾಟವಾಗುವ ಮೋಟಾರ್ ಸೈಕಲ್‌ಗಳಲ್ಲಿ ಒಂದು[v]

Passion+

Hero GIFT Grand Indian Festival of Trust

ಈ ಶುಭ ಸಮಯದಲ್ಲಿ ಹೊಸ ಶೈಲಿಯನ್ನು ಅಳವಡಿಸಿಕೊಳ್ಳಿ

HERO PASSION+ ಅನ್ನು ಮನೆಗೆ ತನ್ನಿ

ಆಕರ್ಷಕ ವಿನ್ಯಾಸ | ಡಿಜಿ-ಅನಲಾಗ್ ಮೀಟರ್ | ಮೊಬೈಲ್ ಚಾರ್ಜಿಂಗ್ ಪೋರ್ಟ್ | ಪ್ಲಶ್ ಸೀಟ್

ಸ್ಪೆಷಲ್ ಎಕ್ಸ್-ಶೋರೂಮ್ ಬೆಲೆ ~~₹79,111~~** ₹76,111/-**

(ನಗದು ರಿಯಾಯಿತಿ ₹3000#)

ಸೀಮಿತ ಅವಧಿಯ ಕೊಡುಗೆ

ಬಡ್ಡಿ ದರ 5.99%^

ಕಡಿಮೆ ಡೌನ್ ಪೇಮೆಂಟ್ ₹1999^ ರಿಂದ ಪ್ರಾರಂಭ

ಕ್ಯಾಶ್ ಬ್ಯಾಕ್ ₹5000~

Toll Free Number: 1800 266 0018

INDIA'S FIRST 5 YEAR WARRANTY* *Conditions apply

$ADDITIONAL CASH DISCOUNT AVAILABLE ON Flipkart amazon

~INSTANT CASHBACK AVAILABLE ON HDFC BANK pine labs PAY LATER

Special offers for CSD/CPC/Corporate employees. Reach us at: institutionalsales@heromotocorp.com

Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. | CIN: L35911DL1984PLC017354 | For further information, contact your nearest Hero MotoCorp authorised outlet or CALL TOLL-FREE 1800 266 0018 or visit us on www.heromotocorp.com. Accessories and features shown may not be a part of standard fitment. Always wear a helmet while riding a two-wheeler. [v]As per cumulative dispatch number from June 2023 till March 2024. **Festive ex-showroom price of Passion+ in Bangalore. It is applicable on select model only. #Offer is for a limited period or till stock lasts. Offer amount may vary for model/variant and states. For more details, please visit your nearest authorised Hero outlet. Available at select dealerships. ^Finance offer is at the sole discretion of the Financier, subject to its respective T&Cs. Available at select dealerships. ~The 5% cashback upto ₹5000/- is applicable on minimum transaction of ₹40,000, subject to the credit card company's, T&Cs. $Flipkart and Amazon offers are subject to the sole discretion & T&Cs of respective organisations.

AUTHORISED DEALERS: BENGALURU - HOSUR ROAD: RT KRISHNA HERO - PH: 9289923177. LALBAGH ROAD: PRAKASH HERO - PH: 9289922117. BYATARAYANAPURA: BIMAL HERO - PH: 9289922863. PEENYA: SAI HERO - PH: 9289922830. HOSUR ROAD: RT KRISHNA HERO - PH: 9289923177. BANASHANKARI: SAI HERO - PH: 9289922476. BANASWADI: BHAGATH HERO - PH: 9289922738. MAGADI ROAD: POORNA HERO - PH: 9289923212. MARATHALLI: VAAYURATHA HERO - PH: 9289923811. RAJAJI NAGAR: MAX HERO - PH: 9289923023. KOLAR: SAI BALAJI HERO PH. 9821745024. CHIKKABALLAPUR: MANJUNATH HERO - PH: 9821751332. TUMKUR: SAI HERO - PH: 9289922986. B.H.ROAD – SAI HERO, PH. 7022752841. KAMAKSHIPALYA: POORNA MOTORS – PH: 9606922534. JP NAGAR: SAI HERO, PH: 99002 36280. KANAKPURA ROAD: SAI HERO - 8904677394. HOSKOTE: BHAGATH HERO - PH: 8884600051. K R PURAM: BHAGATH HERO - PH: 7829488706. JIGANI: RT KRISHNA HERO – PH: 8762860999. RT NAGAR: BIMAL HERO 9535327710.. TIPTUR: SAI HERO PH. 9164840456. KUNIGAL: SAI HERO - PH: 7022752858. DODDABALLAPURA: BIMAL HERO 9742202125. Associate Dealer: BELATHUR - 9902649569. MADIWALA - 9731660639. BANASHANKARI 3RD STAGE - 9513353864. BANNERGHATTA ROAD - 41209619. KENGERI - 9739275523. YELAHANKA - 28462524, 9341025589. MYSORE ROAD:9611997733. DEVANAHALLI - 9964560599. KANAKAPURA - 9880212346. BAGEPALLI - 282828. SRINIVASPUR - 9738504002. SIDLAGHATTA - 254827. NELAMANGALA - 27723395. PAVAGADA - 9740324639. MADHUGIRI - 9972278989. VIJAYAPURA: 9449619920. SIRA: 9448417393. CHANDAPURA: 9481329064. VIDYARANYAPURA: 9606934533. MAGADI: 9482090890.

FCB INTERFACE/6878/OCT2024/KAN

Preethi

Mega Festive Offer

LIFELONG# FREE SERVICE

ASIA BOOK OF RECORDS PREETHI ZODIAC WINNER

Preethi ಕಿಚನ್ ಉಪಕರಣಗಳೊಂದಿಗೆ ಆಚರಿಸಿ ಮತ್ತು ಭರವಸೆಯ ಉಡುಗೊರೆಗಳನ್ನು ಪಡೆಯಿರಿ

Milton 3pcs ಕ್ಯಾಸರೋಲ್ ಮೌಲ್ಯ ₹1,525

Milton ಗಿಫ್ಟ್ ಸೆಟ್ ಮೌಲ್ಯ ₹1,950

www.shop.preethi.in/ | @PreethiKitchenAppliances | @preethikitchenappliances | One Call Assitance : +91-99400 00005

*T&C apply on all offer details/ Offer period: 1st Oct'24 - 15th Nov'24/ Offer applicable till stocks lasts and on select models only.

#Lifelong free service-Charges apply for replacement of spares/accessories | *Awarded by Asia Book of Records for Preethi Zodiac on 01Aug2024

‘ಒಳ್ಳೆಯ ಅವಕಾಶಗಳು ಬರುತ್ತಿವೆ’

ಅಭಿಮನ್ಯು ಕಾಶಿನಾಥ್ ಅಭಿನಯದ ‘ಎಲ್ಲಿಗೆ ಪಯಣ ಯಾವುದೋ ದಾರಿ’ ಚಿತ್ರ ಅ.25ರಂದು ತೆರೆ ಕಾಣುತ್ತಿದೆ. ‘ಅಭಿಮನ್ಯು S/O ಕಾಶಿನಾಥ್’ ಇತ್ತೀಚೆಗಷ್ಟೇ ಸೆಟ್ಟೇರಿದೆ. ನಿಧಾನವಾಗಿ ಚಿತ್ರೋದ್ಯಮದಲ್ಲಿ ಒಳ್ಳೆಯ ಅವಕಾಶಗಳನ್ನು ಪಡೆಯುತ್ತಿರುವ ಅವರು ತಮ್ಮ ಸಿನಿಪಯಣದ ಕುರಿತು ಮಾತನಾಡಿದ್ದಾರೆ.

ವಿನಾಯಕ ಕೆ.ಎಸ್.

‘ಎಲ್ಲಿಗೆ ಪಯಣ ಯಾವುದೋ ದಾರಿ’ ಡಾ.ರಾಜ್‌ಕುಮಾರ್ ಅಭಿನಯದ ‘ಸಿಪಾಯಿ ರಾಮು’ ಚಿತ್ರದ ಹಾಡಿನ ಸಾಲಿದು. ನಿರ್ದೇಶಕರು ಶೀರ್ಷಿಕೆ ಹೇಳಿದಾಗಲೇ ಬಹಳ ಅರ್ಥಪೂರ್ಣ ಎನ್ನಿಸಿತು. ಎಲ್ಲರಿಗೂ ಬೇಗ ಕನೆಕ್ಟ್ ಆಗುವ ಶೀರ್ಷಿಕೆ. ನಾವು ಬದುಕಿನಲ್ಲಿ ಒಂದು ದಾರಿಯಲ್ಲಿ ಹೋಗುತ್ತ ಇರುತ್ತೇವೆ. ಅಚಾನಕ್ಕಾಗಿ ತಿರುವು ಸಿಕ್ಕಿ ಎಲ್ಲಿಗೋ ತಲುಪುತ್ತೇವೆ. ಒಂದು ಗಂಭೀರ ವಿಷಯದೊಂದಿಗೆ ಪ್ರೇಮಕಥೆ ಹೊಂದಿರುವ ಚಿತ್ರ. ಸಸ್ಪೆನ್ಸ್, ಥ್ರಿಲ್ಲರ್ ಅಂಶಗಳೊಂದಿಗೆ ನಿರ್ದೇಶಕರು ಸಿನಿಮಾವನ್ನು ನಿರೂಪಣೆ ಮಾಡಿದ್ದಾರೆ’ ಎನ್ನುತ್ತ ಸಿನಿಮಾ ಬಗ್ಗೆ ಮಾಹಿತಿ ನೀಡಿದರು ಅಭಿಮನ್ಯು.

‘ಕೋವಿಡ್ ನಂತರ, ಒಟಿಟಿಗಳು ಪ್ರಾಬಲ್ಯ ಸಾಧಿಸಿರುವಾಗ ಹೊಸ ಕಥೆ ಮಾಡಿದ್ದೇವೆ, ನಮ್ಮದು ಯಾರೂ ಮಾಡಿರದಂತಹ ಕಥೆ ಎಂದು ಪ್ರಚಾರ ಮಾಡಿಕೊಳ್ಳುವುದು ತಪ್ಪಾಗುತ್ತದೆ. ಬಹುತೇಕ ಕಥೆಗಳು ಎಲ್ಲೋ ಒಂದು ಕಡೆ ಬಂದಿರುತ್ತವೆ. ರಾಮಾಯಣ, ಮಹಾಭಾರತ, ಪುರಾಣಗಳಲ್ಲಿನ ಕಥೆಯ ಎಳೆಯಾಗಿರುತ್ತದೆ. ಹೀಗಾಗಿ ನಾವು ಪ್ರೇಕ್ಷಕರಿಗೆ ಹೊಸತು ನೀಡುತ್ತೇವೆ ಎಂಬುದು ಸುಳ್ಳು. ವೈನು ಹಳತು, ಆದರೆ ಬಾಟಲಿ ಹೊಸತು. ಅದರ ವಿನ್ಯಾಸ ಬೇರೆ. ಶೈಲಿ ಭಿನ್ನ ಎಂಬಂತೆ ಸಿನಿಮಾ ನಿರೂಪಣೆ ಬೇರೆಯಾಗಿದೆ. ಕಥೆ ಹೇಳಿದ ರೀತಿ ಭಿನ್ನವಾಗಿದೆ. ಪಾತ್ರಗಳ ನಡುವಿನ ಗ್ರಾಫ್ ನಮ್ಮ ನಿತ್ಯದ ಬದುಕಿನ ಪ್ರತಿಬಿಂಬವಾಗಿದೆ’ ಎಂದರು.

‘ಅಪ್ಪ ಬದುಕಿದ್ದಾಗ ‘ಅನುಭವ-2’, ‘ಅನಂತನ ಅವಾಂತರ-2’ ಇತ್ಯಾದಿ ಸಿನಿಮಾ ಮಾಡಿ ಎಂದು ಸಾಕಷ್ಟು ಜನ ಬಂದರು. ಆ ರೀತಿಯ ಪಾತ್ರಗಳು ನನಗೆ ಒಗ್ಗುವುದಿಲ್ಲ ಎಂದು ಅಪ್ಪನಿಗೆ ಚೆನ್ನಾಗಿ ಗೊತ್ತಿತ್ತು. ಅದಲ್ಲದೇ ‘ಅನುಭವ’ದಂತಹ ಸಿನಿಮಾವನ್ನು ಮತ್ತೆ ಮಾಡಲು ಸಾಧ್ಯವಿಲ್ಲ. ಅದು ಮಾಡಿದ್ದಲ್ಲ, ಆಗಿದ್ದು ಎನ್ನುತ್ತಿದ್ದರು ಅಪ್ಪ. ಆಗ ಅಪ್ಪ ನನ್ನನ್ನು ಇಟ್ಟುಕೊಂಡು ಬೇರೆ ರೀತಿಯ ಸಿನಿಮಾ ಮಾಡಬೇಕೆಂದು ಆಲೋಚಿಸಿದರು. ಆದರೆ ಅವಕಾಶ ಸಿಗಲಿಲ್ಲ. ಈಗ ಅವಕಾಶಗಳು ಬರುತ್ತಿವೆ. ಅಪ್ಪ ಮಾಡಿದ ರೀತಿಯ ಸಿನಿಮಾಗಳು ಈಗ ಬರುತ್ತಿಲ್ಲ ಎಂದು ಹಲವರು ಹೇಳುತ್ತಾರೆ. ‘ಸುರಸುಂದರಾಂಗ’ ರೀತಿಯ ಕಥೆಯನ್ನು ಹೊಂದಿರುವ ಸಿನಿಮಾ ‘ಅಭಿಮನ್ಯು S/O ಕಾಶಿನಾಥ್’. ಇದರಲ್ಲಿ ಕಾಶಿನಾಥ್ ಬದುಕಿನ ಕಥೆಯಿಲ್ಲ. ನನ್ನ-ಅಪ್ಪನ ನಡುವಿನ ಸಂಬಂಧದ ಕಥೆಯಲ್ಲ. ‘ಒಂದು ಮೊಟ್ಟೆಯ ಕಥೆಯಲ್ಲಿ’ ರಾಜ್‌ಕುಮಾರ್ ಬಂದುಹೋಗುವಂತೆ ಈ ಚಿತ್ರದಲ್ಲಿ ಕಾಶಿನಾಥ್ ಬಂದು ಹೋಗುತ್ತಾರೆ’ ಎಂದು ವಿವರ ನೀಡಿದರು.

‘ಯಶಸ್ಸಿಗೆ ಸಿದ್ಧಸೂತ್ರವಿಲ್ಲ. ಇಷ್ಟಪಡುವ ಕೆಲಸವನ್ನು ಕಷ್ಟಪಟ್ಟು ಮಾಡಬೇಕು. ಸಂಪೂರ್ಣವಾಗಿ ಆ ಕೆಲಸಕ್ಕೆ ನಮ್ಮನ್ನು ಒಪ್ಪಿಸಿಕೊಳ್ಳಬೇಕು. ಸಿನಿಮಾರಂಗದಲ್ಲಿ ಚಿತ್ರವನ್ನು ಹಿಟ್ ಮಾಡುತ್ತೇವೆ ಎಂಬುದು ಸುಳ್ಳು, ಅದು ಹಿಟ್ ಆಗುವುದು. ಜನರ ನಡುವಿನ ಕಥೆಗಳು ಬರಬೇಕು. ಜನರ ಬದುಕಿನಿಂದಲೇ ಕಥೆಗಳನ್ನು ಹೆಕ್ಕಿತರಬೇಕು. ತೀರ ಸಹಜವೆನಿಸುವ ಕಥೆಗಳು ಬೇಕು ಎನ್ನುತ್ತಿದ್ದರು ಅಪ್ಪ. ಜನರ ನಡುವೆ ನಿಂತು ‘ಅಭಿಮನ್ಯು S/O ಕಾಶಿನಾಥ್’ ಕಥೆ ಮಾಡಿಕೊಂಡು ಬಂದಿದ್ದಾರೆ ನಿರ್ದೇಶಕ ರಾಜ್‌ಮುರಳಿ. ಇನ್ನಷ್ಟೇ ಚಿತ್ರೀಕರಣ ಪ್ರಾರಂಭವಾಗಬೇಕು’ ಎಂದು ತಮ್ಮ ಮುಂದಿನ ಚಿತ್ರದ ಕುರಿತು ಅವರು ಮಾಹಿತಿ ನೀಡಿದರು.

‘ಸೂರಿ ಲವ್ ಸಂಧ್ಯಾ’ ಎನ್ನುವ ಸಿನಿಮಾ ಬಿಡುಗಡೆಗೆ ಸಿದ್ಧವಿದೆ. ಇದು ನನ್ನ ಮೂರನೇ ಸಿನಿಮಾ. ಇದಾದ ಬಳಿಕ ‘ಎಲ್ಲಿಗೆ ಪಯಣ ಯಾವುದೋ ದಾರಿ’ ಚಿತ್ರ ಮಾಡಿದ್ದು. ಇದೇ ಮೊದಲು ಬಿಡುಗಡೆಯಾಗುತ್ತಿದೆ. ಕ್ರಿಕೆಟರ್ ಆಗಬೇಕು ಎಂದುಕೊಂಡಿದ್ದವನು. ಅದು ಸಾಧ್ಯವಿಲ್ಲವೆಂದು ಸಿನಿಮಾ ಕಡೆಗೆ ತಿರುಗಿದೆ. ‘ಅಭಿನಯ ತರಂಗ’ದಲ್ಲಿ ನನ್ನೊಳಗಿನ ನಟನನ್ನು ಹುಡುಕಿಕೊಂಡೆ. ಬಹಳ ಜನ ನಿರ್ದೇಶನ ನಿನ್ನ ರಕ್ತದಲ್ಲಿಯೇ ಇದೆ ಎನ್ನುತ್ತಾರೆ. ಆದರೆ ನನಗೆ ನಿರ್ದೇಶನದ ಬಗ್ಗೆ ಹೆಚ್ಚು ಒಲವಿಲ್ಲ. ನಟನಾಗಿಯೇ ಇನ್ನಷ್ಟು ಚಿತ್ರಗಳ ಹುಡುಕಾಟದಲ್ಲಿರುವೆ’ ಎಂದು ತಮ್ಮ ಮುಂದಿನ ಯೋಜನೆಗಳನ್ನು ವಿವರಿಸಿದರು. ❖

‘ಎಲ್ಲಿಗೆ ಪಯಣ ಯಾವುದೋ ದಾರಿ’
ಅಭಿಮನ್ಯು ಕಾಶಿನಾಥ್, ಸ್ಫೂರ್ತಿ ಉಡಿಮನೆ



ರೋಶಿನಿ ಪ್ರಕಾಶ್

‘ಕನಸು ನನಸಾಗಿಸಿರುವ ನಟನೆ’

ಕನ್ನಡವಲ್ಲದೇ ಬೇರೆ ಭಾಷೆಗಳಲ್ಲಿಯೂ ಸಕ್ರಿಯವಾಗಿರುವ ರೋಶಿನಿ ಪ್ರಕಾಶ್ ಅಭಿನಯದ ‘ಮರ್ಫಿ’ ಚಿತ್ರ ಇಂದು(ಅ.18) ತೆರೆ ಕಾಣುತ್ತಿದೆ. ಚಿತ್ರದ ಕುರಿತು ಅವರು ಹೇಳಿದ್ದಿಷ್ಟು...

‘ಇದೊಂದು ರೊಮ್ಯಾಂಟಿಕ್ ಲವ್ ಸ್ಟೋರಿ. 1990 ಮತ್ತು ಈಗಿನ ಕಾಲಘಟ್ಟದ ಟೈಂ ಟ್ರಾವೆಲಿಂಗ್ ಪ್ರೇಮಕಥೆ. ಇದರಲ್ಲಿ ರೇಡಿಯೊ ಕೂಡ ಒಂದು ಪ್ರಮುಖ ಪಾತ್ರವಾಗಿರುತ್ತದೆ. ಜನನಿ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಓಲ್ಡ್ ಸಿಲೆಬಸ್ ಆಫ್ ಲವ್ ಎನ್ನುತ್ತಾರಲ್ಲ, ಆ ರೀತಿಯ ಪಾತ್ರ’ ಎಂದು ಸಿನಿಮಾದ ಕುರಿತು ಅವರು ವಿವರಿಸಿದರು.

ಕನ್ನಡವಲ್ಲದೇ ತೆಲುಗು, ತಮಿಳಿನಲ್ಲಿಯೂ ಇವರು ಅಭಿನಯಿಸುತ್ತಿದ್ದಾರೆ. ‘ಕವಲುದಾರಿ’ ಚಿತ್ರದಲ್ಲಿ ಪ್ರಮುಖ ಪಾತ್ರ ಮಾಡಿ ಗಮನ ಸೆಳೆದಿದ್ದರು. ‘ಬೇರೆ ಭಾಷೆಯ ಸಿನಿಮಾಗಳು ಇಲ್ಲಿಗಿಂತ ಭಿನ್ನವಾಗಿಯೇನೂ ಇರುವುದಿಲ್ಲ. ಎಲ್ಲ ಕಡೆ ಮಾಡುವ ಕೆಲಸವೂ ಒಂದೇ. ಆದರೆ ಬೇರೆ ತಂಡಗಳ ಜೊತೆಗಿನ ಒಡನಾಟ, ಕೆಲಸದ ರೀತಿ ವಿಭಿನ್ನ ಅನುಭವ ನೀಡುತ್ತದೆ. ಸಿನಿಮಾದಲ್ಲಿ ಅವಕಾಶಗಳನ್ನು ಪಡೆಯುವುದೇ ಖುಷಿಯ ವಿಷಯ. ಸದ್ಯ ತಮಿಳಿನಲ್ಲಿ ಬಾಲ ಸರ್ ಜೊತೆ ಒಂದು ಸಿನಿಮಾದಲ್ಲಿ ಕೆಲಸ ಮಾಡಿದ್ದೇನೆ. ಅರುಣ್ ವಿಜಯ್ ಚಿತ್ರದ ನಾಯಕ. ಕನ್ನಡದಲ್ಲಿ ‘ನಾಕುತಂತಿ’ ಎಂಬ ಸಿನಿಮಾ ಬಿಡುಗಡೆಗೆ ಸಿದ್ಧವಿದೆ’ ಎಂದು ಮುಂದಿನ ಯೋಜನೆಗಳ ಮಾಹಿತಿ ನೀಡಿದರು.

‘ಜೀವನದಲ್ಲಿ ನಟಿಯಾಗಬೇಕೆಂಬ ಆಸೆ ಇರಲಿಲ್ಲ. ನಟಿಯಾದೆ. ಇದೇ ಒಂದು ರೀತಿ ದೊಡ್ಡ ಕನಸು. ಇನ್ನಷ್ಟು ಒಳ್ಳೆಯ ನಟರ ಜೊತೆ ನಟಿಸುವ ಆಸೆಯಿದೆ. ಒಂದು ತಿಂಗಳಿನಿಂದ ‘ಮರ್ಫಿ’ ಚಿತ್ರದ ಪ್ರಚಾರಕ್ಕಾಗಿ ಓಡಾಡುತ್ತಿದ್ದೇವೆ. ಒಂದು ಸಿನಿಮಾ ಮಾಡುವುದರ ಜೊತೆಗೆ ಅದನ್ನು ಸರಿಯಾಗಿ ತಲುಪಿಸಬೇಕು. ಸರಿಯಾದ ಶ್ರಮ ಹಾಕಿ ಮಾಡಿದಾಗ ಸಿನಿಮಾ ಉತ್ತಮವಾಗುತ್ತದೆ’ ಎಂದರು.

ಉತ್ತಮವಾದ ಪೋಷಕ ಪಾತ್ರಗಳನ್ನು ಮಾಡುತ್ತಿರುವ ಇವರು ಹತ್ತಕ್ಕೂ ಹೆಚ್ಚು ಚಿತ್ರಗಳಲ್ಲಿ ಬಣ್ಣ ಹಚ್ಚಿದ್ದಾರೆ. ಸಾಕಷ್ಟು ಸಿನಿಮಾಗಳನ್ನು ನೋಡುವ ಅಭ್ಯಾಸ ಹೊಂದಿದ್ದು, ಅಲ್ಲಿನ ನಟ,ನಟಿಯರಿಂದ ಏನು ಕಲಿಯಬಹುದು, ತಮ್ಮ ನಟನೆಯಲ್ಲಿ ಅವರ ಯಾವ ಅಂಶಗಳನ್ನು ಅಳವಡಿಸಿಕೊಳ್ಳಬಹುದೆಂದು ಆಲೋಚಿಸುತ್ತಾರಂತೆ. ವಿಭಿನ್ನವಾದ ಪಾತ್ರಗಳನ್ನು ಮಾಡಬೇಕು, ಹೆಚ್ಚೆಚ್ಚು ಸಿನಿಮಾಗಳಲ್ಲಿ ಬ್ಯುಸಿಯಾಗಿರಬೇಕು ಎಂಬ ಹಂಬಲ ಇವರದ್ದು. ❖

ತೆರೆಯಲ್ಲಿ ನಾಲ್ಕು ಚಿತ್ರಗಳು

ಮರ್ಫಿ:

ಪ್ರಭು ಮುಂಡ್ಕೂರ್, ರೋಶಿನಿ ಪ್ರಕಾಶ್ ಜೋಡಿಯಾಗಿ ನಟಿಸಿರುವ ಚಿತ್ರ ಇಂದು (ಅ.18) ಬಿಡುಗಡೆಗೊಳ್ಳುತ್ತಿದೆ. ಸ್ಯಾಂಡಲ್‌ವುಡ್‌ನ ಹಲವು ನಟ,ನಟಿಯರು ಈ ಚಿತ್ರದ ಟ್ರೇಲರ್ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದ್ದರು. ಬಿ.ಎಸ್.ಪ್ರದೀಪ್ ವರ್ಮಾ ಚಿತ್ರವನ್ನು ನಿರ್ದೇಶಿಸಿರುವುದರ ಜೊತೆಗೆ ನಿರ್ಮಾಣವನ್ನೂ ಮಾಡಿದ್ದಾರೆ.

‘ಕೆಲವೊಮ್ಮೆ ನಟರಿಗೆ ಒಂದು ಕಥೆ ಕಾಡುತ್ತಿರುತ್ತದೆ. ಈ ರೀತಿ ಕಥೆ ಮಾಡಬೇಕು ಎನ್ನಿಸುತ್ತದೆ. ‘ಮರ್ಫಿ’ ಕಥೆ ಕೂಡ ನನ್ನನ್ನು ತುಂಬಾ ಕಾಡಿತ್ತು. ಈ ಚಿತ್ರ ಜನರಿಗೆ ಸಿನಿಮ್ಯಾಟಿಕ್ ಫೀಲ್ ಕೊಡುತ್ತದೆ. ಇದಕ್ಕಾಗಿ ಸಾಕಷ್ಟು ಕೆಲಸ ಮಾಡಿದ್ದೇವೆ’ ಎಂದಿದ್ದಾರೆ ನಟ ಪ್ರಭು.

‘ಪ್ರೀತಿ, ಭಾವನೆ, ನೆನಪುಗಳ ಸುತ್ತ ಸಾಗುವ ರೋಮ್ಯಾಂಟಿಕ್ ಪ್ರೇಮಕಥಾಹಂದರವಿದೆ. ಕನ್ನಡದ ಬಹುತೇಕ ನಟ, ನಟಿಯರು ನಮ್ಮ ಸಿನಿಮಾದ ಟ್ರೇಲರ್ ಬಿಡುಗಡೆ ಮಾಡಿ ನಮ್ಮ ಬೆಂಬಲಕ್ಕೆ ನಿಂತಿದ್ದಾರೆ’ ಎಂದು ಬಿ.ಎಸ್.ಪ್ರದೀಪ್ ವರ್ಮಾ ಹೇಳಿದ್ದಾರೆ.

ಇಳಾ ವೀರಮಲ್ಲ, ದತ್ತಣ್ಣ, ಅಶ್ವಿನಿ ರಾವ್ ಪಲ್ಲಕ್ಕಿ, ಮಹಾಂತೇಶ್ ಹಿರೇಮಠ, ರಾಮಪ್ರಸಾದ್ ಬಾಣಾವರ ಸೇರಿದಂತೆ ಹಲವರು ಚಿತ್ರದಲ್ಲಿ ಬಣ್ಣ ಹಚ್ಚಿದ್ದಾರೆ. ಮಹೇಶ ತೊಗಟ ಸಂಕಲನ, ಆದರ್ಶ ಆರ್ ಛಾಯಾಚಿತ್ರಗ್ರಹಣವಿದೆ. ಚಿತ್ರದಲ್ಲಿ ಏಳು ಹಾಡುಗಳಿದ್ದು, ಅರ್ಜುನ್ ಜನ್ಯ, ರಜತ್ ಹೆಗಡೆ, ಕೀರ್ತನ್ ಹೊಳ್ಳ ಮತ್ತು ಸಿಲ್ವೆಸ್ಟರ್ ಪ್ರದೀಪ್ ಸಂಗೀತ ನಿರ್ದೇಶನ ಮಾಡಿದ್ದು, ಸಿಲ್ವೆಸ್ಟರ್ ಪ್ರದೀಪ್ ಹಿನ್ನೆಲೆ ಸಂಗೀತ ಒದಗಿಸಿದ್ದಾರೆ.

ಮಾಂತ್ರಿಕ:

ಆತ್ಮದ ಕಥೆಯನ್ನು ಹೊಂದಿರುವ ಸಾಕಷ್ಟು ಸಸ್ಪೆನ್ಸ್, ಥ್ರಿಲ್ಲರ್ ಸಿನಿಮಾಗಳು ಕನ್ನಡದಲ್ಲಿ ಬಂದಿವೆ. ಅಂಥದ್ದೇ ಕಥೆ ಹೊಂದಿರುವ ಚಿತ್ರ ‘ಮಾಂತ್ರಿಕ’. ವ್ಯಾನವರ್ಣ ಜಮ್ಮುಲ ಈ ಚಿತ್ರಕ್ಕೆ ಆ್ಯಕ್ಷನ್-ಕಟ್ ಹೇಳುವುದರ ಜೊತೆಗೆ ಬಂಡವಾಳವನ್ನೂ ಹೂಡಿದ್ದಾರೆ. ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ.

‘ಇದೊಂದು ಆತ್ಮ, ದೆವ್ವದ ಹುಡುಕಾಟದ ಸುತ್ತ ನಡೆಯುವ ಸಸ್ಪೆನ್ಸ್, ಥ್ರಿಲ್ಲರ್ ಕಥೆ. ದೆವ್ವ ಎಂಬುದು ಇದೆಯೋ, ಇಲ್ಲವೋ ಅಥವಾ ಅದೆಲ್ಲ ನಮ್ಮ ಭ್ರಮೆಯೋ ಎಂಬ ವಿಷಯದ ಮೇಲೆ ಈ ಚಿತ್ರ ಸಾಗುತ್ತದೆ’ ಎಂದಿದ್ದಾರೆ ನಿರ್ದೇಶಕರು.

ರಾಧಿಕಾ ಮಾಲಿ ಪಾಟೀಲ ಹಾಗೂ ಮೈಥಿಲಿ ನಾಯಕ್ ಚಿತ್ರದ ನಾಯಕಿಯರು. ಬೆಂಗಳೂರು, ಮಂಗಳೂರಿನಲ್ಲಿ ಚಿತ್ರೀಕರಣಗೊಂಡಿದೆ. ಸ್ಟಾಲಿನ್ ಸಂಗೀತ, ಅನಿಲ್ ಆಂಟೋನಿ ಹಾಗೂ ರಮೇಶ್ ಮರ್ರಿಪಲ್ಲಿ ಛಾಯಾಚಿತ್ರಗ್ರಹಣ ಈ ಚಿತ್ರಕ್ಕಿದೆ.

ಪ್ರಕರಣ ತನಿಖಾ ಹಂತದಲ್ಲಿದೆ:

ಬಹುತೇಕ ರಂಗಭೂಮಿ ಕಲಾವಿದರೇ ಸೇರಿ ನಿರ್ಮಿಸಿರುವ ಚಿತ್ರವಿದು. ಸುಂದರ್.ಎಸ್ ನಿರ್ದೇಶನವಿರುವ ಚಿತ್ರವನ್ನು ಚಿಂತನ್ ಕಂಬಣ್ಣ ನಿರ್ಮಾಣ ಮಾಡಿದ್ದಾರೆ.

‘ಕ್ರೈಂ ಕಥಾಹಂದರ ಹೊಂದಿರುವ ಚಿತ್ರವಿದು. ಒಂದು ಪ್ರಕರಣದ ತನಿಖೆಯ ಸುತ್ತಾ ಸಾಗುವ ಕಥೆ. ಸಿದ್ಧಸೂತ್ರದಾಚೆಗೆ ಏನೋ ಮಾಡಬೇಕೆಂಬ ಕನಸಿನೊಂದಿಗೆ ಚಿತ್ರ ತಯಾರಾಗಿದೆ’ ಎಂದಿದ್ದಾರೆ ಚಿತ್ರದ ನಿರ್ದೇಶಕರು. ಮಹೀನ್ ಕುಬೇರ್ ಮುಖ್ಯಪಾತ್ರವನ್ನು ನಿರ್ವಹಿಸಿದ್ದಾರೆ. ಇನ್ನುಳಿದಂತೆ, ಮುತ್ತುರಾಜ್.ಟಿ, ರಾಜ್ ಗಗನ್, ಚಿಂತನ್ ಕಂಬಣ್ಣ ಮುಂತಾದವರ ತಾರಾಗಣವಿದೆ.

ಮೋಹನ್ ಎಂ.ಎಸ್ ಮತ್ತು ಜಗದೀಶ್ ಆರ್. ಜೆ ಛಾಯಾಚಿತ್ರಗ್ರಹಣ, ಶಿವೋಂ ಸಂಗೀತ ನಿರ್ದೇಶನ ಮತ್ತು ನಾನಿಕೃಷ್ಣ ಸಂಕಲನ ಈ ಚಿತ್ರಕ್ಕಿದೆ. ಬೆಂಗಳೂರು, ಕನಕಪುರ ಮುಂತಾದೆಡೆಗಳಲ್ಲಿ ಚಿತ್ರೀಕರಣಗೊಂಡಿದೆ.

ಸಿಂಹರೂಪಿಣಿ:

ಮಾರಮ್ಮ ದೇವಿ ಕುರಿತಾದ ಕಥೆ ಹೊಂದಿರುವ ಭಕ್ತಿ ಪ್ರಧಾನ ಚಿತ್ರವಿದು. ಕೆ.ಎಂ.ನಂಜುಂಡೇಶ್ವರ ಕಥೆ ಬರೆದು, ಶ್ರೀಚಕ್ರ ಫಿಲ್ಮ್ ಲಾಂಛನದಲ್ಲಿ ನಿರ್ಮಿಸಿರುವ ಚಿತ್ರಕ್ಕೆ ಕಿನ್ನಾಳ್ ರಾಜ್ ಆ್ಯಕ್ಷನ್ ಕಟ್ ಹೇಳಿದ್ದಾರೆ.

‘ಏನೇ ಕಷ್ಟ ಎದುರಾದರೂ ಗ್ರಾಮೀಣ ಭಾಗದಲ್ಲಿ ಅವರು ನಂಬಿರುವಂತಹ ದೇವರ ಮೊರೆ ಹೋಗುತ್ತಾರೆ. ಜಾತ್ರೆ, ಉತ್ಸವಗಳಲ್ಲಿ ಇನ್ನೂ ನಂಬಿಕೆ ಇದೆ ಎನ್ನುವಂಥ ಸಣ್ಣ ಸಣ್ಣ ವಿಷಯಗಳನ್ನು ಹೆಕ್ಕಿ ಪಾತ್ರಗಳ ಮೂಲಕ ತೋರಿಸಲಾಗಿದೆ. ಪ್ರತಿಯೊಂದು ದೇವರಿಗೂ ಹಿನ್ನೆಲೆ ಇರುತ್ತದೆ. ಹಾಗೆಯೇ ದೇವಿಯು ಮಹಾಲಕ್ಷ್ಮಿ ರೂಪದಲ್ಲಿ ಭೂಮಿಗೆ ಬರುತ್ತಾಳೆ. ಮುಂದೆ ಏಕೆ ಮಾರಮ್ಮ ಆಗುತ್ತಾಳೆ ಎಂಬುದಕ್ಕೆ ಚಿತ್ರದಲ್ಲಿ ಉತ್ತರ ನೀಡಲಾಗಿದೆ’ ಎಂದಿದ್ದಾರೆ ನಿರ್ದೇಶಕರು.

ಯಶ್ ಶೆಟ್ಟಿ, ಯಶಸ್ವಿನಿ, ಅಂಕಿತಾ ಗೌಡ, ದಿವ್ಯ ಆಲೂರು, ನೀನಾಸಂ ಅಶ್ವಥ್, ಹರೀಶ್ ರಾಯ್, ವಿಜಯ್ ಚೆಂಡೂರು ಮುಂತಾದವರು ಚಿತ್ರದಲ್ಲಿದ್ದಾರೆ. ಆಕಾಶ್‌ಪರ್ವ ಸಂಗೀತ, ಕಿರಣ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ರಾಧಿಕಾ ಮಾಲಿ ಪಾಟೀಲ

ನಿಶಾ ರವಿಕೃಷ್ಣನ್

‘ಅಂಶು’ವಾದ ನಿಶಾ

‘ಗಟ್ಟಿಮೇಳ’ ಧಾರಾವಾಹಿಯ ಅಮೂಲ್ಯಾಳಾಗಿ ಖ್ಯಾತಿ ಪಡೆದಿರುವ ನಟಿ ನಿಶಾ ರವಿಕೃಷ್ಣನ್ ಮುಖ್ಯಭೂಮಿಕೆಯಲ್ಲಿರುವ ‘ಅಂಶು’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಎಂ.ಸಿ ಚನ್ನಕೇಶವ ನಿರ್ದೇಶನದ ಚೊಚ್ಚಲ ಚಿತ್ರವಿದು. ಗ್ರಹಣ ಎಲ್‌ಎಲ್‌ಪಿ ಬ್ಯಾನರಿನಡಿಯಲ್ಲಿ ಈ ಸಿನಿಮಾ ನಿರ್ಮಾಣಗೊಂಡಿದೆ.

ಸಾಮಾಜಿಕ ಪಲ್ಲಟಗಳಿಗೆ ಕಣ್ಣಾದ ಮಹಿಳಾ ಪ್ರಧಾನ ಕಥಾನಕವನ್ನು ಹೊಂದಿದೆ. ಇದೊಂದು ಸೈಕ್ಯಾಡೆಲಿಕ್ ಥ್ರಿಲ್ಲರ್ ಜಾನರಿನ ಚಿತ್ರ. ಈ ಸಮಾಜದಲ್ಲಿ ಇಂದಿನ ದಿನಮಾನದಲ್ಲಿ ಘಟಿಸುತ್ತಿರುವ ವಿಚಾರಗಳನ್ನಿಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹೇಳಿದ್ದೇವೆ. ಶೀಘ್ರದಲ್ಲಿಯೇ ಚಿತ್ರ ತೆರೆಗೆ ಬರಲಿದೆ’ ಎಂದರು ನಿರ್ದೇಶಕರು. ಚಿತ್ರಕ್ಕೆ ಸುನೀಲ್ ನರಸಿಂಹಮೂರ್ತಿ ಛಾಯಾಚಿತ್ರಗ್ರಹಣ, ಕೆ.ಸಿ ಬಾಲಸಾರಂಗನ್ ಸಂಗೀತ ನಿರ್ದೇಶನ, ವಿಘ್ನೇಶ್ ಅವರ ಹಿನ್ನೆಲೆ ಸಂಗೀತವಿದೆ. ❖

ಅ.25ರಂದು ‘ಯಲಾಕುನ್ನಿ’ ತೆರೆಗೆ

ವಜ್ರಮುನಿ ಅವರ ಗೆಟಪ್‌ನಲ್ಲಿ ನಟ ಕೋಮಲ್ ಕಾಣಿಸಿಕೊಂಡಿರುವ ‘ಯಲಾಕುನ್ನಿ’ ಚಿತ್ರ ಅ.25ರಂದು ತೆರೆಗೆ ಬರಲಿದೆ. ಸೌಂದರ್ಯ ಸಿನಿ ಕಂಬೈನ್ಸ್ ಹಾಗೂ ನರಸಿಂಹ ಸಿನಿಮಾಸ್ ಲಾಂಛನದಲ್ಲಿ ಅನುಸೂಯ ಕೋಮಲ್ ಕುಮಾರ್, ಸಹನ ಮೂರ್ತಿ ನಿರ್ಮಿಸಿರುವ ಚಿತ್ರವನ್ನು ಎನ್.ಆರ್.ಪ್ರದೀಪ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ.

‘ನಿರ್ದೇಶಕರು ನನಗೆ ಈ ಚಿತ್ರದ ಕಥೆ ಹೇಳಿದಾಗ ಈ ಪಾತ್ರ ಮಾಡಲು ಕಷ್ಟ ಅಂತ ಹೇಳಿದ್ದೆ. ಆದರೆ ಅವರು ಬಿಡದೆ ನೀವು ಮಾಡುತ್ತೀರಾ ಎಂದು ಒಪ್ಪಿಸಿ ಈ ಪಾತ್ರ ಮಾಡಿಸಿದ್ದಾರೆ. ಮೊದಲ ಬಾರಿ ವಜ್ರಮುನಿ ಅವರ ಗೆಟಪ್ ಹಾಕಿಕೊಂಡು ಕನ್ನಡಿ ಮುಂದೆ ಬಂದು ನಿಂತಾಗ ನನಗೆ ನಾನು ಕಾಣಿಸಲಿಲ್ಲ. ವಜ್ರಮುನಿ ಅವರೇ ಕಂಡರು. ಅವರ ಆಶೀರ್ವಾದದಿಂದ ಈ ಪಾತ್ರ ಮಾಡಲು ಸಾಧ್ಯವಾಯಿತು. ಎರಡು ಶೇಡ್‌ಗಳಲ್ಲಿ ನನ್ನ ಪಾತ್ರವಿರುತ್ತದೆ. ವಜ್ರಮುನಿ ಅವರ ಮೊಮ್ಮಗ ಆಕರ್ಷ್ ಕೂಡ ಈ ಚಿತ್ರದ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಅಣ್ಣ ಜಗ್ಗೇಶ್ ಅವರ ಸ್ಟುಡಿಯೋದಲ್ಲಿ ರೀರೆಕಾರ್ಡಿಂಗ್, ಡಿಐ ಮುಂತಾದ ಕಾರ್ಯಗಳು ನಡೆದಿದೆ. ಎಲ್ಲರ ಸಹಕಾರದಿಂದ ಚಿತ್ರ ಚೆನ್ನಾಗಿ ಬಂದಿದೆ’ ಎಂದರು ನಟ ಕೋಮಲ್.

ನಿಸರ್ಗ ಅಪ್ಪಣ್ಣ ಈ ಚಿತ್ರದ ನಾಯಕಿ. ಯತಿರಾಜ್, ಜಯಸಿಂಹ ಮುಸುರಿ, ಮಯೂರ್ ಪಟೇಲ್, ಸಾಧುಕೋಕಿಲ, ದತ್ತಣ್ಣ, ಮಿತ್ರ, ತಬಲ ನಾಣಿ, ಶಿವರಾಜ್ ಕೆ.ಆರ್ ಪೇಟೆ, ಮಾನಸಿ ಸುಧೀರ್, ಸುಮನ್ ನಗರಕರ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

‘ಕೆಲವು ಸಿನಿಮಾಗಳಿಗೆ ಸಹ,ಸಹಾಯಕ ನಿರ್ದೇಶಕನಾಗಿ ಕಾರ್ಯ ನಿರ್ವಹಿಸಿರುವ ನನಗೆ ಇದು ನಿರ್ದೇಶಕನಾಗಿ ಮೊದಲ ಚಿತ್ರ. ಕೋಮಲ್ ಕುಮಾರ್ ಅವರ ವಜ್ರಮುನಿ ಲುಕ್‌ಗೆ ಈಗಾಗಲೇ ಅಭಿಮಾನಿಗಳು ಮನಸೋತಿದ್ದಾರೆ. ಈ ಕಥೆಯನ್ನು ಸಿನಿಮಾವಾಗಿಸಲು ಸಹಕಾರ ನೀಡಿದ ವಜ್ರಮುನಿ ಕುಟುಂಬ ಹಾಗೂ ಜಗ್ಗೇಶ್ ಅವರಿಗೆ ಧನ್ಯವಾದ ಹೇಳಲೇಬೇಕು’ ಎಂದರು ನಿರ್ದೇಶಕರು.

ಧರ್ಮವಿಶ್ ಅವರ ಸಂಗೀತ ಸಂಯೋಜನೆ, ಹಾಲೇಶ್ ಛಾಯಾಚಿತ್ರಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ ಹಾಗೂ ಮುರಳಿ ಮಾಸ್ಟರ್ ಅವರ ನೃತ್ಯ ನಿರ್ದೇಶನ ಚಿತ್ರಕ್ಕಿದೆ.

‘ನಮ್ಮ ತಂದೆ ಅವರಿಗೆ ಹೆಸರು ತಂದುಕೊಟ್ಟ ಪಾತ್ರ ‘ಪಡವಾರಹಳ್ಳಿ ಪಾಂಡವರು’ ಚಿತ್ರದ ಕನೆಕ್ಷನ್ ಕಾಳಪ್ಪ. ನಾನು ಕೂಡ ಈ ಚಿತ್ರದಲ್ಲಿ ಅದೇ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ’ ಎಂದರು ಜಯಸಿಂಹ ಮುಸುರಿ. ❖

ನಿಸರ್ಗ ಅಪ್ಪಣ್ಣ, ಕೋಮಲ್

ಸ್ನೇಹ ಭಟ್

‘ಆಪರೇಷನ್ ಡಿ’ಗೆ ಧ್ರುವ ಸರ್ಜಾ ಸಾಥ್

ಬಹುತೇಕ ಹೊಸಬರಿಂದಲೇ ಕೂಡಿರುವ ‘ಆಪರೇಶನ್ ಡಿ’ ಚಿತ್ರದ ಟೀಸರ್ ಅನ್ನು ಇತ್ತೀಚೆಗಷ್ಟೇ ನಟ ಧ್ರುವ ಸರ್ಜಾ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು. ಭಾರ್ಗವಿ ಮುರಳಿ ಹಾಗೂ ರಂಗನಾಥ್ ಬಿ. ನಿರ್ಮಿಸಿರುವ ಚಿತ್ರಕ್ಕೆ ತಿರುಮಲೇಶ್ ವಿ. ನಿರ್ದೇಶನವಿದೆ.

‘ಸಸ್ಪೆನ್ಸ್ ಥ್ರಿಲ್ಲರ್ ಹಾಗೂ ಮರ್ಡರ್ ಮಿಸ್ಟರಿ ಕಥೆ ಆಧರಿಸಿದ ಚಿತ್ರ. ಮರ್ಡರ್ ಮಿಸ್ಟರಿ ಆದರೂ, ಚಿತ್ರದಲ್ಲಿ ರಕ್ತ ಕಾಣುವುದಿಲ್ಲ ಹಾಗೂ ಆ್ಯಕ್ಷನ್ ಸನ್ನಿವೇಶಗಳಿಲ್ಲ. 2018 - 19ರಲ್ಲಿ ಹುಟ್ಟಿದ ಈ ಕಾಲ್ಪನಿಕ ಕಥೆ, 2022ರಲ್ಲಿ ಸಿನಿಮಾ ರೂಪ ಪಡೆದುಕೊಂಡಿತ್ತು. ನನ್ನ ಕಥೆಯನ್ನು ಸಿನಿಮಾವಾಗಿಸಲು ಕುಟುಂಬದವರು ಹಾಗೂ ಮಿತ್ರರು ಸಹಾಯ ಮಾಡಿದರು. ಸದ್ಯದಲ್ಲೇ ಚಿತ್ರ ಸೆನ್ಸಾರ್‌ಗೆ ಹೋಗಲಿದ್ದು, ವರ್ಷದ ಕೊನೆಗೆ ತೆರೆಗೆ ಬರಲಿದೆ’ ಎಂದರು ನಿರ್ದೇಶಕರು.

ರುದ್ರೇಶ್ ಬೂದನೂರು, ಸುಹಾಸ್ ಆತ್ರೇಯ, ವಿನೋದ್ ದೇವ್, ಸ್ನೇಹ ಭಟ್, ಇಂಚರ ಭರತ್ ರಾಜ್ ಮುಂತಾದವರು ತಾರಾಗಣದಲ್ಲಿದ್ದಾರೆ. ವೇದಿಕಾ ಸಂಗೀತ ನಿರ್ದೇಶನವಿದೆ. ಕಾರ್ತಿಕ್ ಪ್ರಸಾದ್ ಛಾಯಾಚಿತ್ರಗ್ರಹಣ, ವಿಕ್ರಮ್ ಶ್ರೀಧರ್ ಸಂಕಲನವಿದೆ.

ಹೊಸಬರ ‘ಸಂತೋಷ...’

ಬಹುತೇಕ ಹೊಸಬರಿಂದಲೇ ಕೂಡಿರುವ ‘ಸಂತೋಷ ಸಂಗೀತ’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ‘ಯು’ ಪ್ರಮಾಣ ಪತ್ರ ಪಡೆದಿರುವ ಚಿತ್ರ ಶೀಘ್ರದಲ್ಲಿ ತೆರೆಗೆ ಬರಲಿದೆ.

ಸಿದ್ದು ಎಸ್ ನಿರ್ಮಿಸಿ, ನಿರ್ದೇಶಿಸಿರುವ ಚಿತ್ರದಲ್ಲಿ ಅರ್ನವ್ ವಿನ್ಯಾಸ್‌ಗೆ ರಾಣಿ ವರದ್ ನಾಯಕಿಯಾಗಿದ್ದಾರೆ. ‘ನಾನು ಎಂ.ಸಿ.ಎ ಪದವೀಧರ. ಸಿನಿಮಾ ಪ್ರೇಮಿ. ಒಳ್ಳೆಯ ಸಿನಿಮಾ ನೋಡಿ, ನಾನು ಈ ರೀತಿ ಸಿನಿಮಾ ಮಾಡಬೇಕೆಂದು ಕನಸು ಕಂಡವನು. ಆ ಕನಸು ಈಗ ನನಸಾಗಿದೆ. ಲಾಕ್‌ಡೌನ್ ಸಮಯದಲ್ಲಿ ಬರೆದ ಕಥೆ ಇದು. ಲವ್, ಕಾಮಿಡಿ, ಸಸ್ಪೆನ್ಸ್ ಹೀಗೆ ನೋಡುಗನಿಗೆ ಬೇಕಾದ ಎಲ್ಲಾ ಅಂಶಗಳು ಈ ಚಿತ್ರದಲ್ಲಿದೆ’ ಎಂದರು ನಿರ್ದೇಶಕರು.

ದೊಡ್ಡಣ್ಣ, ಅವಿನಾಶ್, ಲಯ ಕೋಕಿಲ, ಕವನ, ಅಮಿತ್, ‘ಕಾಮಿಡಿ ಕಿಲಾಡಿಗಳು’ ಖ್ಯಾತಿಯ ಲೋಕೇಶ್ ಸೂರ್ಯ, ಮಡೆನೂರು ಮನು ಮುಂತಾದವರು ಈ ಚಿತ್ರದಲ್ಲಿ ನಟಿಸಿದ್ದಾರೆ.

ಅರ್ನವ್ ವಿನ್ಯಾಸ್, ರಾಣಿ ವರದ್

ಯಲಹಂಕ, ಹೊರಮಾವು ವಿಭಾಗದ ಬಿಬಿಎಂಪಿ ಸಿಬ್ಬಂದಿಯಿಂದ ಹಗಲು–ರಾತ್ರಿ ತೆರವು ಕಾರ್ಯ

ಮಳೆ ಬಿಡುವು; ಬಡಾವಣೆಗಳಿಂದ ನೀರು ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮೂರು ದಿನ ಸುರಿದ ಮಳೆ, ಗುರುವಾರ ಬಿಡುವು ನೀಡಿತ್ತು. ಜಲಾವೃತ ಪ್ರದೇಶಗಳಿಂದ ನೀರು ಹೊರಹಾಕುವಲ್ಲಿ ಬಿಬಿಎಂಪಿ ಸಿಬ್ಬಂದಿ ಯಶಸ್ವಿಯಾದರು.

ಸೋಮವಾರ ತಡರಾತ್ರಿಯಿಂದ ಮಂಗಳವಾರ ರಾತ್ರಿಯವರೆಗೆ ನಿರಂತರ ಸುರಿದ ಮಳೆ, ಬುಧವಾರ ತುಂತುರು ಹನಿಯಾಗಿತ್ತು. ಗುರುವಾರ ಬೆಳಿಗ್ಗೆಯಿಂದ ಮಳೆ ಇರಲಿಲ್ಲ. ಯಲಹಂಕ, ಮಹದೇವಪುರ ವಲಯಗಳಲ್ಲಿ ಅಪಾರ್ಟ್‌ಮೆಂಟ್ ಮತ್ತು ಬಡಾವಣೆಗಳಲ್ಲಿ ತುಂಬಿದ್ದ ನೀರನ್ನು ಮಧ್ಯಾಹ್ನದ ವೇಳೆಗೆ ಬಿಬಿಎಂಪಿ ಸಿಬ್ಬಂದಿ ಪಂಪ್‌ಗಳ ಮೂಲಕ ಹೊರಹಾಕಿದರು.

ಮಹದೇವಪುರ ವಲಯದ ಹೊರಮಾವು ಉಪ ವಿಭಾಗದಲ್ಲಿರುವ ಸಾಯಿಬಾಬಾ ಲೇಔಟ್ ಹಾಗೂ ವಡ್ಡರಪಾಳ್ಯದಲ್ಲಿ 180ಕ್ಕೂ ಹೆಚ್ಚು ಮನೆಗಳಿವೆ. ರಾಜಕಾಲುವೆಯಲ್ಲಿ ಮಳೆ ನೀರಿನ ಹರಿವಿನ ಮಟ್ಟ ಹೆಚ್ಚಾಗಿ, ನೀರು ಹಿಮ್ಮುಖವಾಗಿ ಚಲಿಸಿತ್ತು. ಇದರಿಂದ ರಾಜಕಾಲುವೆಯ ಎರಡೂ ಬದಿಯ ಬಡಾವಣೆಗಳಲ್ಲಿ ನೀರು ತುಂಬಿತ್ತು. ಎರಡು ದಿನದಿಂದ ನೀರು ಹೊರ ಹಾಕಿದ್ದ ಬಿಬಿಎಂಪಿ ಸಿಬ್ಬಂದಿ, ಗುರುವಾರ ಸಂಜೆ ಪೂರ್ಣವಾಗಿ ತೆರವುಗೊಳಿಸಿದರು.

‘ಒಂಬತ್ತು ರಸ್ತೆಗಳಲ್ಲಿ ನೀರು ತುಂಬಿತ್ತು. ಅದರಲ್ಲಿ ಐದು ರಸ್ತೆಗಳಲ್ಲಿನ ನೀರನ್ನು ಸಂಪೂರ್ಣ ತೆರವುಗೊಳಿಸಲಾಗಿದೆ. ಇನ್ನುಳಿದ ನಾಲ್ಕು ರಸ್ತೆಗಳಲ್ಲಿ ಅಗ್ನಿಶಾಮಕ ದಳದೊಂದಿಗೆ ಪಾಲಿಕೆ ಸಿಬ್ಬಂದಿ ಪಂಪ್‌ಗಳ ಮೂಲಕ ನೀರನ್ನು ಹೊರ ಹಾಕುತ್ತಿದೆ. ಶುಕ್ರವಾರದ ವೇಳೆಗೆ ಪೂರ್ಣವಾಗಿ ನೀರು ಹೊರಹರಿಸಲಾಗುತ್ತದೆ’ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಳೀಯ ನಿವಾಸಿಗಳಿಗೆ ಪಾಲಿಕೆ ವತಿಯಿಂದ ಕುಡಿಯುವ ನೀರು, ತಿಂಡಿ ಹಾಗೂ ಊಟದ ವ್ಯವಸ್ಥೆ ಮಾಡಲಾಗಿದೆ. ನೀರು ನುಗ್ಗಿರುವ ಮನೆಗಳ ನಿವಾಸಿಗಳಿಗೆ ತಂಗಲು ಹೋಟೆಲ್‌ನಲ್ಲಿ ವ್ಯವಸ್ಥೆ ಮಾಡಲಾಗಿದೆ. ಸಾಯಿಬಾಬಾ ಲೇಔಟ್ ಸಮಸ್ಯೆಯನ್ನು ಪೂರ್ಣವಾಗಿ ಪರಿಹರಿಸಲು ಅಧಿಕಾರಿಗಳು, ಸಿಬ್ಬಂದಿ ಸ್ಥಳದಲ್ಲಿಯೇ ಇದ್ದಾರೆ. ನೀರು ನುಗ್ಗಿರುವ ಮನೆಗಳ ಸಮೀಕ್ಷೆ ನಡೆಸಿ ಅರ್ಹ ಫಲಾನುಭವಿಗಳಿಗೆ ಪರಿಹಾರ ನೀಡಲಾಗುವುದು ಎಂದಿದ್ದಾರೆ.

ಕೇಂದ್ರೀಯ ವಿಹಾರ್: ಯಲಹಂಕ ವಲಯದ ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್‌ನಲ್ಲಿ ನಿಂತಿದ್ದ ನೀರನ್ನು ಹೊರ ಹಾಕಲಾಗಿದೆ.

ಬುಧವಾರ ಈ ಅಪಾರ್ಟ್‌ಮೆಂಟ್‌ನವರು ಟ್ರ್ಯಾಕ್ಟರ್‌ನಲ್ಲಿ ಸಂಚರಿಸಬೇಕಾಗಿತ್ತು. ಗುರುವಾರ ಮಧ್ಯಾಹ್ನದ ವೇಳೆಗೆ ನೀರು ಹೊರಹಾಕಲಾಗಿದ್ದು, ರಸ್ತೆಯ ಕೆಲವು ಭಾಗಗಳಲ್ಲಿ ಒಂದಷ್ಟು ನೀರು ನಿಂತಿದೆ. ಫಾತಿಮಾ ಲೇಔಟ್ ಹಾಗೂ ಇನ್ನಿತರ ಕಡೆ ನೀರು ನುಗ್ಗಿರುವ ಮನೆಗಳ ಸಮೀಕ್ಷೆ ನಡೆಸುತ್ತಿದ್ದು, ಅರ್ಹ ಫಲಾನುಭವಿಗಳಿಗೆ ಪರಿಹಾರ ನೀಡಲಾಗುವುದು ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಯಲಹಂಕದ ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್‌ನಲ್ಲಿ ತುಂಬಿದ್ದ ಮಳೆನೀರನ್ನು ಹೊರ ಹಾಕಲಾಗಿದ್ದು, ರಸ್ತೆ ಬದಿ ಒಂದಷ್ಟು ನೀರು ನಿಂತಿದೆ

ಹೊರಮಾವು ಸಮೀಪದ ಸಾಯಿಬಾಬಾ ಬಡಾವಣೆಯಲ್ಲಿ ತುಂಬಿದ್ದ ನೀರನ್ನು ಅಗ್ನಿಶಾಮಕ ದಳದೊಂದಿಗೆ ಬಿಬಿಎಂಪಿ ಸಿಬ್ಬಂದಿ ಹೊರ ಹಾಕಿದ್ದಾರೆ

ರಾಜಕಾಲುವೆ ತೆರವಾಗಿಲ್ಲ, ಸ್ವಚ್ಛವೂ ಆಗಿಲ್ಲ!

‘ರಾಜಕಾಲುವೆಯನ್ನು ಸ್ವಚ್ಛಗೊಳಿಸಿಲ್ಲ, ಒತ್ತುವರಿಯೂ ತೆರವಾಗಿಲ್ಲ. ಆದ್ದರಿಂದ ಪ್ರತಿ ವರ್ಷವೂ ಮಳೆಗಾಲದಲ್ಲಿ ಬಡಾವಣೆ, ಮನೆಗಳಿಗೆ ನೀರು ನುಗ್ಗುತ್ತಿದೆ’ ಎಂದು ಯಲಹಂಕ ಹಾಗೂ ಮಹದೇವಪುರ ವಲಯದ ನಿವಾಸಿಗಳು ದೂರುತ್ತಿದ್ದಾರೆ.

‘ಮನೆಗಳಿಗೆ ನೀರು ನುಗ್ಗಿರುವುದು ಇದೇ ಹೊಸತಲ್ಲ. ನಾಲ್ಕಾರು ವರ್ಷಗಳಿಂದ ನೀರು ನುಗ್ಗುತ್ತಿದೆ. ರಸ್ತೆಗಳಲ್ಲಿ ನೀರು ನಿಲ್ಲುತ್ತಿದೆ. ರಾಜಕಾಲುವೆ ಒತ್ತುವರಿ ತೆರವು ಮಾಡದಿರುವುದು ಹಾಗೂ ಸ್ವಚ್ಛಗೊಳಿಸದಿರುವುದೇ ಇದಕ್ಕೆ ಕಾರಣ’ ಎಂದು ಯಲಹಂಕದ ಸುರೇಶ್ ಆರೋಪಿಸಿದರು.

‘ನಗರದಲ್ಲಿ 184 ಕಿ.ಮೀ ಉದ್ದದ ರಾಜಕಾಲುವೆಯಲ್ಲಿರುವ ಹೂಳನ್ನು ತೆಗೆಯಲಾಗಿದೆ ಎಂದು ಹೇಳಿ ಬಿಲ್ ಪಾವತಿ ಮಾಡಿಸಿಕೊಂಡಿದ್ದಾರೆ. ಇಷ್ಟೆಲ್ಲ ಕೋಟ್ಯಂತರ ರೂಪಾಯಿಗಳ ಕೆಲಸವಾಗಿದ್ದರೂ ಏಕೆ ನೀರು ಬಡಾವಣೆಗಳಿಗೆ ಹರಿಯುತ್ತಿದೆ’ ಎಂದು ಮಾಹಿತಿ ಹಕ್ಕು ಕಾರ್ಯಕರ್ತ ಅಮರೇಶ್ ಪ್ರಶ್ನಿಸಿದರು.

‘2016–17ರಲ್ಲಿ ₹800 ಕೋಟಿ, 2017–18ರಲ್ಲಿ ₹300 ಕೋಟಿ, 2019–20ರಲ್ಲಿ ₹1,100 ಕೋಟಿ ರಾಜಕಾಲುವೆಯಲ್ಲಿನ ಹೂಳು ತೆಗೆಯಲು ವೆಚ್ಚ ಮಾಡಲಾಗಿದೆ. 212 ಕಿ.ಮೀ ರಾಜಕಾಲುವೆ ಅಭಿವೃದ್ಧಿಗೆ ₹1,217 ಕೋಟಿ ಹಾಗೂ ಕೋರಮಂಗಲ ಕಣಿವೆಗೆ (ಕೆ–100) ₹170 ಕೋಟಿ ಸೇರಿದಂತೆ ರಾಜಕಾಲುವೆಗಾಗಿ ₹3,615 ಕೋಟಿ ವೆಚ್ಚ ಮಾಡಲಾಗಿದ್ದರೂ ಮಳೆ ನೀರು ಹರಿಯುತ್ತಿಲ್ಲ’ ಎಂದು ದೂರಿದರು.

ಈ ಬಗ್ಗೆ ಪ್ರತಿಕ್ರಿಯೆಗಾಗಿ, ಬೃಹತ್ ನೀರುಗಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆ ಹೊಂದಿರುವ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಅವರನ್ನು ಸಂಪರ್ಕಿಸಲು ಯತ್ನಿಸಿದಾಗ, ಅವರು ಕರೆ ಸ್ವೀಕರಿಸಲಿಲ್ಲ.

‘ಡಿಸಿಎಂ ಸೂಚನೆಗೂ ಬೆಲೆ ಇಲ್ಲ’

‘ಕಳೆದ ವರ್ಷ ಮಳೆ ಬಂದು ಬಡಾವಣೆ, ಮನೆಗಳಿಗೆ ನೀರು ನುಗ್ಗಿದಾಗ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭೇಟಿ ನೀಡಿ, ಶೀಘ್ರ ಶಾಶ್ವತ ಪರಿಹಾರ ಒದಗಿಸುವುದಾಗಿ ಹೇಳಿದ್ದರು. ರಾಜಕಾಲುವೆಗಳ ಒತ್ತುವರಿ ತೆರವು ಮಾಡಿ, ಅಭಿವೃದ್ಧಿ ಮಾಡುವುದಾಗಿಯೂ ತಿಳಿಸಿದ್ದರು. ಆದರೆ, ಈವರೆಗೆ ಅಂತಹ ಯಾವುದೇ ಕೆಲಸವಾಗಿಲ್ಲ. ಹೀಗಾಗಿ ನಾವು ಮಳೆ ಬಂದಾಗ ಸಂಕಷ್ಟ ಎದುರಿಸುತ್ತಲೇ ಇದ್ದೇವೆ’ ಎಂದು ಯಲಹಂಕದ ರಮಣಶ್ರೀ ಕ್ಯಾಲಿಫೋರ್ನಿಯಾ ಲೇಔಟ್‌ನ ರಾಜೇಶ್ ಹೇಳಿದರು.

‘ಉಪ ಮುಖ್ಯಮಂತ್ರಿಯವರು ನಮ್ಮ ಮುಂದೆಯೇ ಮುಖ್ಯ ಆಯುಕ್ತರು, ರಾಜಕಾಲುವೆ ವಿಭಾಗದ ಎಂಜಿನಿಯರ್‌ ಗಳಿಗೆ ಒತ್ತುವರಿ ತೆರವು ಮಾಡಲು ಸೂಚಿಸಿದ್ದರು. ಆದರೆ, ಒಂದು ವರ್ಷವಾದರೂ ಎಂಜಿನಿಯರ್‌ಗಳು ಸಬೂಬು ನೀಡಿ ಯಾವುದೇ ಕೆಲಸ ಮಾಡಿಲ್ಲ. ಡಿಸಿಎಂ ಸೂಚನೆಗೂ ಬೆಲೆ ಇಲ್ಲದಂತಾಗಿದೆ’ ಎಂದು ಯಲಹಂಕದ ರಾಜಶೇಖರ್ ದೂರಿದರು.

‘ಬೆಂಗಳೂರು ನಗರ ತಲುಪಿದ ಕಾವೇರಿ 5ನೇ ಹಂತದ ನೀರು’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಶುಕ್ರವಾರದಿಂದಲೇ ನೀರು ಪೂರೈಕೆಗೆ ಕ್ರಮ
- ಕಾವೇರಿ ನೀರಿನ ಸಂಪರ್ಕ ಪಡೆಯಲು ಮನವೊಲಿಸಲು ಸೂಚನೆ

ರಾಮ್ ಪ್ರಸಾತ್ ಮನೋಹರ್

ಬೆಂಗಳೂರು: ಕಾವೇರಿ ಐದನೇ ಹಂತದ ಯೋಜನೆಯಡಿ ಅಳವಡಿಸಿರುವ ಕೊಳವೆ ಮಾರ್ಗಗಳಲ್ಲಿ ಸರಬರಾಜು ಮಾಡಲಾದ ಕುಡಿಯುವ ನೀರು ಗುರುವಾರ ಸಂಜೆ ನಗರಕ್ಕೆ ತಲುಪಿದೆ.

ಬನಶಂಕರಿ 6ನೇ ಹಂತ, ಎಸ್‌ಎಂವಿ 6ನೇ ಹಂತ ಹಾಗೂ ಗೊಟ್ಟಿಗೆರೆ ಜಿಎಲ್‌ಆರ್ ಮೂಲಕ ಸರಬರಾಜು ಮಾಡಬೇಕಾದ ಪ್ರದೇಶಗಳಲ್ಲಿ ಗ್ರಾಹಕರಿಗೆ ಶುಕ್ರವಾರದಿಂದ ನೀರು ಪೂರೈಕೆ ಮಾಡುವಂತೆ ಬೆಂಗಳೂರು ನೀರು ಸರಬರಾಜು ಮತ್ತು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ಸೂಚನೆ ನೀಡಿದ್ದಾರೆ.

ಕಾವೇರಿ ಐದನೇ ಹಂತದ ಯೋಜನೆ ಟಿ.ಕೆ. ಹಳ್ಳಿಯಲ್ಲಿ ಬುಧವಾರ ಲೋಕಾರ್ಪಣೆ ಆಗಿತ್ತು. 120 ಕಿ.ಮೀ. ದೂರದ ಬೆಂಗಳೂರಿಗೆ ಕೊಳವೆ ಮಾರ್ಗದ ಮೂಲಕ ನೀರು ಹರಿದು ಬಂದಿದೆ.

ಜಲಮಂಡಳಿಯ ಕೇಂದ್ರ ಕಚೇರಿಯಲ್ಲಿ ರಾಮ್ ಪ್ರಸಾತ್ ಮಹೋಹರ್ ಗುರುವಾರ ಈ ಕುರಿತು ಮುಖ್ಯ ಎಂಜಿನಿಯರ್, ವಲಯಗಳ ಮುಖ್ಯ ಎಂಜಿನಿಯರ್‌ಗಳು, ಕಾರ್ಯಪಾಲಕ ಎಂಜಿನಿಯರ್‌ಗಳು, ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳ ಸಭೆ ನಡೆಸಿದರು.

110 ಹಳ್ಳಿಗಳ ವ್ಯಾಪ್ತಿಯಲ್ಲಿ ಸುಮಾರು 55 ಸಾವಿರ ಸಂಪರ್ಕ ನೀಡಲಾಗಿದೆ. ಕಾವೇರಿ 4ನೇ ಹಂತದಲ್ಲಿ ಲಭ್ಯವಿದ್ದ ನೀರಿನಲ್ಲೇ ಈ ಸಂಪರ್ಕಗಳಿಗೆ ಆಗಾಗ ನೀರು ಸರಬರಾಜು ಮಾಡಲಾಗುತ್ತಿತ್ತು. ಹಲವಾರು ಹಳ್ಳಿಗಳಿಗೆ 10 ದಿನಕ್ಕೊಮ್ಮೆ ನೀರು ಸರಬರಾಜು ಆಗುತ್ತಿತ್ತು. ಕಾವೇರಿ ಐದನೇ ಹಂತದಲ್ಲಿ ನೀರು ಪೂರೈಕೆ ಆರಂಭಗೊಂಡಿದೆ.

ನಗರಕ್ಕೆ ಪ್ರತಿದಿನ 775 ದಶಲಕ್ಷ ಲೀಟರ್‌ನಷ್ಟು ನೀರು ಹೆಚ್ಚುವರಿಯಾಗಿ ದೊರಕುತ್ತಿದೆ. ಇದು ಸುಮಾರು 4 ಲಕ್ಷ ಸಂಪರ್ಕಗಳಿಗೆ ಹಾಗೂ 50 ಲಕ್ಷ ಜನರಿಗೆ ಸಾಕಾಗುತ್ತದೆ. ಆದರೆ, ಈಗ ಕೇವಲ 55 ಸಾವಿರ ಸಂಪರ್ಕಗಳಿವೆ. 150 ದಶಲಕ್ಷ ಲೀಟರ್ ನೀರು ಮಾತ್ರ ಸಾಕಾಗುತ್ತಿದ್ದು, ಅಷ್ಟನ್ನೇ ಪಂಪ್ ಮಾಡಲಾಗುತ್ತಿದೆ ಎಂದರು.

ಕಾವೇರಿ ನೀರಿನ ಸಂಪರ್ಕ ಪಡೆಯಲು ಅಧಿಕಾರಿಗಳು ಜನರ ಮನವೊಲಿಸಬೇಕು. 110 ಹಳ್ಳಿಗಳಿಗೆ ನೀರು ಹರಿಸುವ ನಿಟ್ಟಿನಲ್ಲಿ ಸಿಎಂಸಿ ಕೋರ್ ವಲಯಗಳಂತೆ ರೊಟೇಷನ್ ಷೆಡ್ಯೂಲ್ ರಚಿಸಬೇಕು. ಅದರಂತೆ ನೀರು ಸರಬರಾಜು ಮಾಡಬೇಕು ಎಂದು ಸೂಚಿಸಿದರು.

ಹಣವಿಲ್ಲದೆ, ‘ಬ್ರ್ಯಾಂಡ್ ಬೆಂಗಳೂರು’ ಪ್ರಯೋಜನವಿಲ್ಲ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜಕಾಲುವೆ ಸ್ವಚ್ಛ ಮಾಡಲು ಬಿಬಿಎಂಪಿಗೆ ಹಣ ನೀಡದೆ ‘ಬ್ರ್ಯಾಂಡ್ ಬೆಂಗಳೂರು’ ಎಂದರೆ ಪ್ರಯೋಜನವಿಲ್ಲ’ ಎಂದು ಸಂಸದ ಬಸವರಾಜ ಬೊಮ್ಮಾಯಿ ಬುಧವಾರ ಇಲ್ಲಿ ಅಭಿಪ್ರಾಯಪಟ್ಟರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ನಗರದಲ್ಲಿ ಮಳೆಯಿಂದ ಹಾನಿಯಾದ ವರದಿ ನೀಡಿ. ನಾನು ಸಿ.ಎಂ ಆಗಿದ್ದಾಗ ₹800 ಕೋಟಿ ವೆಚ್ಚದಲ್ಲಿ ರಾಜಕಾಲುವೆ ಸುಧಾರಣೆ ಕಾಮಗಾರಿ ಆರಂಭಿಸಿದ್ದೆ. ಈಗಿನ ಸರ್ಕಾರ ಆ ಕೆಲಸ ಮಾಡುತ್ತಿಲ್ಲ’ ಎಂದು ಅವರು ಟೀಕಿಸಿದರು.

‘ಮಳೆ ಪ್ರಾರಂಭವಾಗುವ ಮುನ್ನವೇ ಸ್ವಚ್ಛತಾ ಕೆಲಸ ಆಗಬೇಕು. ತಗ್ಗು ಪ್ರದೇಶಗಳಲ್ಲಿ ಅನಧಿಕೃತವಾಗಿ ನಿರ್ಮಾಣ ಚಟುವಟಿಕೆ ನಡೆಸುವವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಕಾಲುವೆ ನಿರ್ಮಿಸಬೇಕು. ಕೆರೆ ಪ್ರದೇಶದಲ್ಲಿನ ಮನೆಗಳನ್ನು ತೆರವುಗೊಳಿಸಬೇಕು’ ಎಂದರು.

‘ಬಿಬಿಎಂಪಿ ತೆರಿಗೆ ವರಮಾನದಿಂದ ಸಣ್ಣಪುಟ್ಟ ದುರಸ್ತಿ ಮಾಡಿಸುತ್ತಿದೆ. ರಾಜಕಾಲುವೆ ದುರಸ್ತಿ, ರೈಲ್ವೆ ಕೆಳಸೇತುವೆ, ಮೇಲ್ಸೇತುವೆ ಯೋಜನೆಗಳಿಗೆ ಸರ್ಕಾರ ಹಣವನ್ನೂ ಕೊಡುತ್ತಿಲ್ಲ, ಕೆಲಸವನ್ನೂ ಮಾಡುತ್ತಿಲ್ಲ’ ಎಂದು ಅವರು ಟೀಕಿಸಿದರು.

ಇದು ‘ಬ್ರ್ಯಾಂಡ್’ ಬೆಂಗಳೂರು –ಅಶೋಕ

ಬೆಂಗಳೂರು: ‘ಬೆಳ್ಳಂದೂರು, ಮಹದೇವಪುರ ಇತ್ಯಾದಿ ಕಡೆ ಮಳೆಯಿಂದ ಹಾನಿಯಾಗಿದೆ. ಈಗಲೂ ‘ಬ್ರ್ಯಾಂಡ್ ಬೆಂಗಳೂರು’ ಎನ್ನುತ್ತಿದ್ದಾರೆ. ಆದರೆ ಕೇವಲ ಸದ್ದು ಮಾಡುವ ‘ಬ್ಯಾಂಡ್ ಬೆಂಗಳೂರು’ ಆಗಿದೆ’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಟೀಕಿಸಿದರು.

‘ನಿಯಂತ್ರಣ ಕೊಠಡಿ ಇದ್ದರೂ ಕೆಲಸ ಆಗುತ್ತಿಲ್ಲ. ಗುತ್ತಿಗೆದಾರರಿಗೆ ಬಿಲ್ ಬಾಕಿ ಇದೆ. ‘ಬ್ರ್ಯಾಂಡ್ ಬೆಂಗಳೂರು’ ಘೋಷಣೆ ವಾಪಸ್ ಪಡೆಯಲಿ, ಇಲ್ಲವೆ ಏನು ಮಾಡುತ್ತೇವೆಂದು ಮಾಹಿತಿ ನೀಡಲಿ’ ಎಂದು ಆಗ್ರಹಪಡಿಸಿದರು.

‘ಬಿಜೆಪಿ ಸರ್ಕಾರ ಬೆಂಗಳೂರಿನಲ್ಲಿ ರಸ್ತೆ ಅಭಿವೃದ್ಧಿಗೆ ₹8 ಸಾವಿರ ಕೋಟಿ, ರಾಜಕಾಲುವೆ ಸುಧಾರಣೆಗೆ ₹1,600 ಕೋಟಿ ಬಿಡುಗಡೆ ಮಾಡಲಾಗಿತ್ತು, ‘ಬ್ರ್ಯಾಂಡ್ ಬೆಂಗಳೂರು’ ಮಾಡುತ್ತೇನೆಂದು ಹೇಳಿ ಡಿ.ಕೆ.ಶಿವಕುಮಾರ್ ಈ ಅನುದಾನ ವಾಪಸ್ ಪಡೆದರು, ಬಳಿಕ ಹೊಸದಾಗಿ ನಯಾ ಪೈಸೆ ಬಿಡುಗಡೆ ಮಾಡಿಲ್ಲ’ ಎಂದು ಟೀಕಿಸಿದರು.

‘ಬೆಂಗಳೂರು ಮಳೆ ನೀರಿನಲ್ಲಿ ಮುಳುಗಿದೆ. ಬ್ರ್ಯಾಂಡ್ ಬೆಂಗಳೂರು ಮಾಡುತ್ತೇವೆ ಎಂದು ಹೇಳಿದ್ದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಲ್ಲಿದ್ದಾರೆ?’

– ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಬಿಎಂಆರ್‌ಸಿಎಲ್‌ಗೆ ಜಮೀನು: ಸಭೆ ಇಂದು

ಬಹುಮಾದರಿ ಸಾರಿಗೆ ‘ಹಬ್’ ನಿರ್ಮಾಣಕ್ಕೆ ಜಮೀನು ಹಸ್ತಾಂತರ ಕುರಿತು ನಿರ್ಧಾರ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ಎಂ.ಬಿ. ಪಾಟೀಲ್

ಬೆಂಗಳೂರು: ಹೆಬ್ಬಾಳದಲ್ಲಿ ಬಹುಮಾದರಿ ಸಾರಿಗೆ ‘ಹಬ್’ ನಿರ್ಮಿಸುವ ಬಿಎಂಆರ್‌ಸಿಎಲ್ ಯೋಜನೆಗೆ ಜಮೀನು ಒದಗಿಸುವ ಕಾರ್ಯ ಇನ್ನೂ ಕಾರ್ಯಗತಗೊಂಡಿಲ್ಲ. ಇದರ ನಡುವೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಬೃಹತ್ ಕೈಗಾರಿಕೆ ಮತ್ತು ಮೂಲಸೌಕರ್ಯ ಸಚಿವ ಎಂ.ಬಿ. ಪಾಟೀಲ ಈ ಕುರಿತು ಚರ್ಚಿಸಲು ಅ.18ರಂದು ಅನೌಪಚಾರಿಕವಾಗಿ ಸಭೆ ನಡೆಸಲಿದ್ದಾರೆ.

ರೈಲು, ಮೆಟ್ರೊ ರೈಲು, ಉಪನಗರ ರೈಲು, ಬಿಎಂಟಿಸಿ ಬಸ್‌ಗಳು ಹಾದು ಹೋಗುವ ಹೆಬ್ಬಾಳದಲ್ಲಿ ಬಹುಮಾದರಿ ಸಾರಿಗೆ ನಿರ್ಮಿಸಲು 45 ಎಕರೆ 5.5 ಗುಂಟೆ ಜಮೀನು ಅಗತ್ಯ ಎಂದು ಬಿಎಂಆರ್‌ಸಿಎಲ್ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯನ್ನು ಕೋರಿತ್ತು.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ (ಕೆಐಎಡಿಬಿ) 55 ಎಕರೆ ಜಮೀನು ಇಲ್ಲಿದ್ದು, ಹಿಂದೆ ವೇರ್‌ಹೌಸ್ ಯೋಜನೆ ರೂಪಿಸಿದ್ದರೂ ಕಾರ್ಯಗತಗೊಂಡಿಲ್ಲ. ಬಹುಮಾದರಿ ಸಾರಿಗೆ ಹಬ್ ನಿರ್ಮಾಣಕ್ಕೆ ಈ ಜಮೀನು ಒದಗಿಸಬೇಕು ಎಂದು ಪ್ರಸ್ತಾವ ಸಲ್ಲಿಸಿತ್ತು.

ಮೆಟ್ರೊ ನೀಲಿ ಮಾರ್ಗ ನಿರ್ಮಾಣಕ್ಕಾಗಿ ಕೆಐಎಡಿಬಿ ಜಮೀನು ಅಗತ್ಯವಿದ್ದಾಗ ಎಕರೆಗೆ ₹ 12.10 ಕೋಟಿ ಪಾವತಿಸಿ ಪಡೆಯಲಾಗಿತ್ತು. ಈಗ ಅಗತ್ಯ ಇರುವ ಜಮೀನಿಗೆ ಅದೇ ದರವನ್ನು ನೀಡಲು ಬಿಎಂಆರ್‌ಸಿಎಲ್ ತಯಾರಿದೆ. ಜಮೀನು ಒದಗಿಸಿದರೆ ಅಲ್ಲಿ ಬಸ್ ಡಿಪೊ, ಪಾರ್ಕಿಂಗ್ ವ್ಯವಸ್ಥೆ, ಡಿಪೊ, ಎಲ್ಲ ಸಾರಿಗೆಗಳನ್ನು ಒಂದು ಸಂಯೋಜಿಸುವ ತಂಗು ಸಂಪರ್ಕ ಕೊಂಡಿ ನಿರ್ಮಾಣ ಮಾಡಲಾಗುವುದು ಎಂದು ಹೇಳಿತ್ತು.

ಬಿಎಂಆರ್‌ಸಿಎಲ್‌ನ ಈ ಪತ್ರದ ಬಗ್ಗೆ ಜುಲೈಯಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಉನ್ನತಾಧಿಕಾರ ಸಮಿತಿಯಲ್ಲಿ ಚರ್ಚಿಸಿದ್ದು, ಬಹುಮಾದರಿ ಸಾರಿಗೆ ಹಬ್ ನಿರ್ಮಾಣಕ್ಕೆ ಜಮೀನು ಒದಗಿಸುವ ಪ್ರಸ್ತಾವಕ್ಕೆ ಒಪ್ಪಿಗೆ ಸೂಚಿಸುವಂತೆ ಕೋರಿತ್ತು. ಬಿಎಂಆರ್‌ಸಿಎಲ್‌ಗೆ ₹ 515.15 ಕೋಟಿ ಮೊತ್ತಕ್ಕೆ 45 ಎಕರೆ 5.5 ಗುಂಟೆ ಜಮೀನನ್ನು ನೀಡಲು ಕೆಐಎಡಿಬಿ ಒಪ್ಪಿತ್ತು. ಇದಕ್ಕಾಗಿ ರಾಜ್ಯ ಸರ್ಕಾರವು ಭೂಸ್ವಾಧೀನ ಪ್ರಕ್ರಿಯೆಗಾಗಿ ಬಿಎಂಆರ್‌ಸಿಎಲ್‌ಗೆ ಒದಗಿಸುವ ಹಣವನ್ನು ಸಾಲದ ಮೊತ್ತವನ್ನಾಗಿ ಬಳಸಿಕೊಳ್ಳುವ ಬಗ್ಗೆಯೂ ಚರ್ಚೆಯಾಗಿತ್ತು.

ಆನಂತರ ಈ ಪ್ರಕ್ರಿಯೆ ಅಲ್ಲಿಗೆ ನಿಂತು ಹೋಗಿತ್ತು. ಇದೀಗ ಡಿ.ಕೆ. ಶಿವಕುಮಾರ್ ಮತ್ತು ಎಂ.ಬಿ. ಪಾಟೀಲ ಈ ಬಗ್ಗೆ ಅನೌಪಚಾರಿಕ ಚರ್ಚೆ ನಡೆಸಲು ಮುಂದಾಗಿದ್ದಾರೆ. ಹೆಬ್ಬಾಳದಲ್ಲಿ ಲಭ್ಯವಿರುವ ಜಮೀನಿನ ಬಳಕೆ ಕುರಿತು ಈ ಸಭೆಯಲ್ಲಿ ಖಚಿತ ತೀರ್ಮಾನಕ್ಕೆ ಬರುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಮೂರು ಮೆಟ್ರೊ ಸಂಪರ್ಕಿಸುವ ಪ್ರದೇಶ



ಸೆಂಟ್ರಲ್ ಸಿಲ್ಕ್ ಬೋರ್ಡ್–ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ನಮ್ಮ ಮೆಟ್ರೊ ನೀಲಿ ಮಾರ್ಗವು ನಿರ್ಮಾಣ ಹಂತದಲ್ಲಿದ್ದು, ಈ ಮಾರ್ಗವು ಹೆಬ್ಬಾಳ ಮೂಲಕ ಹಾದುಹೋಗುತ್ತದೆ. ಜೆ.ಪಿ.ನಗರದಿಂದ ಕೆಂಪಾಪುರದವರೆಗಿನ ಮೆಟ್ರೊ ಮಾರ್ಗಕ್ಕೆ (ಕಿತ್ತಳೆ ಮಾರ್ಗ) ಕೇಂದ್ರ ಸರ್ಕಾರ ಇಂಗಿತ ಹಿಂದೆ ಅನುಮೋದನೆ ನೀಡಿದೆ. ಹೆಬ್ಬಾಳ–ಸರ್ಜಾಪುರ (ಕೆಂಪು) ಮೆಟ್ರೊ ಮಾರ್ಗ ಕೂಡ ಮುಂದೆ ಸಂಪರ್ಕಿಸಲಿದೆ. ಮೂರು ಮೆಟ್ರೊ ಮಾರ್ಗಗಳನ್ನು ಸಂಪರ್ಕಿಸುವ ಹೆಬ್ಬಾಳದಲ್ಲಿ ಉಪನಗರ ರೈಲು ಹಾದು ಹೋಗುತ್ತದೆ. ದೇವನಹಳ್ಳಿಯಲ್ಲಿ ಇರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ರಸ್ತೆಯೂ ಇದೇ ಮಾರ್ಗದಲ್ಲಿ ಇರುವುದರಿಂದ ಹೆಚ್ಚು ವಾಹನದಟ್ಟಣೆ ಇರುವ ಪ್ರದೇಶ ಇದಾಗಿದೆ. ಈ ಎಲ್ಲ ಕಾರಣದಿಂದ ಬಹುಮಾದರಿ ಸಾರಿಗೆ ಹಬ್ ನಿರ್ಮಾಣ ಯೋಜನೆಯನ್ನು ಬಿಎಂಆರ್‌ಸಿಎಲ್ ರೂಪಿಸಿತ್ತು.

ವಿಷ್ಣು ಭಟ್, ಹರೀಶ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ವಿಷ್ಣು ಭಟ್

ಜೆ.ಪಿ.ಹರೀಶ್

ಬೆಂಗಳೂರು: ಅಖಿಲ ಭಾರತೀಯ ಸಾಹಿತ್ಯ ಪರಿಷದ್ ನೀಡುವ ‘ಅಭಿಜಿ’ ಪುರಸ್ಕಾರಕ್ಕೆ ವಿದ್ವಾಂಸ ವಿಷ್ಣು ಭಟ್ ಮೂಲ್ಗೆರೆ, ವಾಗ್ದೇವಿ ಪುರಸ್ಕಾರಕ್ಕೆ ಇತಿಹಾಸಕಾರ ಜೆ.ಪಿ. ಹರೀಶ್ ಆಯ್ಕೆಯಾಗಿದ್ದಾರೆ.

ಪ್ರಶಸ್ತಿ ತಲಾ ₹ 1 ಲಕ್ಷ ನಗದು ಒಳಗೊಂಡಿದೆ. ವಿಷ್ಣು ಭಟ್ ಮೂಲ್ಗೆರೆ ಅವರು ದಕ್ಷಿಣ ಕನ್ನಡದ ಬೆಳ್ತಂಗಡಿಯ ಮುಂಡಾಜೆಯವರಾಗಿದ್ದಾರೆ. ಜೆ.ಪಿ.ಹರೀಶ್ ಅವರು ಹಾಸನದವರಾಗಿದ್ದಾರೆ. ಇಬ್ಬರೂ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಹಲವು ಕೃತಿ ರಚಿಸಿದ್ದಾರೆ.

ಪುರಸ್ಕಾರ ಪ್ರದಾನ ಸಮಾರಂಭವು ನವೆಂಬರ್ 24 ರಂದು ಚಿಂತಾಮಣಿ ತಾಲ್ಲೂಕಿನ ಕೈವಾರದಲ್ಲಿ ನಡೆಯಲಿದೆ ಎಂದು ಪರಿಷದ್ ಅಧ್ಯಕ್ಷ ನಾ. ಮೊಗಸಾಲೆ ತಿಳಿಸಿದ್ದಾರೆ.

‘ಗ್ಯಾರಂಟಿ’ ಫಲ: ಕಾಂಗ್ರೆಸ್‌ನತ್ತ ಮಹಿಳೆಯರು-ಅಲ್ಕಾ ಲಂಬಾ

ಪ್ರಜಾವಾಣಿ ವಾರ್ತೆ

ಅಲ್ಕಾ ಲಂಬಾ

ಬೆಂಗಳೂರು: ಹಿಂದಿನ ತಿಂಗಳಲ್ಲಿ 2.50 ಲಕ್ಷ ಮಹಿಳೆಯರು ಆನ್‌ಲೈನ್ ಮೂಲಕ ಕಾಂಗ್ರೆಸ್ ಸದಸ್ಯತ್ವ ಪಡೆದಿದ್ದಾರೆ. ಡಿಸೆಂಬರ್ ಒಳಗೆ 10 ಲಕ್ಷ ಸದಸ್ಯತ್ವದ ಗುರಿ ತಲುಪುತ್ತೇವೆ’ ಎಂದು ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅಲ್ಕಾ ಲಂಬಾ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಕರ್ನಾಟಕದಲ್ಲಿ 30 ಸಾವಿರ, ತೆಲಂಗಾಣದಲ್ಲಿ 50 ಸಾವಿರ ಮಹಿಳೆಯರು ಕಾಂಗ್ರೆಸ್ ಸದಸ್ಯತ್ವ ಪಡೆದಿದ್ದಾರೆ. ಗ್ಯಾರಂಟಿ ಯೋಜನೆ ಸೇರಿದಂತೆ ಕಾಂಗ್ರೆಸ್ ಸರ್ಕಾರಗಳು ಕೊಟ್ಟ ಮಾತಿನಂತೆ ನಡೆದುಕೊಂಡಿವೆ. ಹಾಗಾಗಿ, ಅಧಿಕ ಸಂಖ್ಯೆಯ ಮಹಿಳೆಯರು ಪಕ್ಷದತ್ತ ಒಲವು ತೋರುತ್ತಿದ್ದಾರೆ ಎಂದು ಮಾಹಿತಿ ನೀಡಿದರು.

ಎಲ್ಲ ರಾಜ್ಯಗಳಲ್ಲೂ ಮಹಿಳಾ ನಾಯಕತ್ವ ತರಬೇತಿ ಶಿಬಿರ ಆಯೋಜಿಸಲಾಗುತ್ತಿದೆ. ಮಹಿಳಾ ಮೀಸಲಾತಿ ಕಾನೂನು ಜಾರಿಗೆ ಹೋರಾಟ ಮುಂದುವರಿಯಲಿದೆ. ಕಾನೂನು ಜಾರಿಯಾದರೆ ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆಗಳಲ್ಲಿ ಮಹಿಳೆಯರಿಗೆ ಸೂಕ್ತ ಸ್ಥಾನಗಳು ದೊರಕಲಿವೆ ಎಂದರು.

ಮಹಿಳೆಯರಿಗೆ ಸ್ಯಾನಿಟರಿ ಪ್ಯಾಡ್ ಯಂತ್ರ

ಋತುಚಕ್ರದ ವೇಳೆ ಅಗತ್ಯವಿರುವ 10 ಸ್ಯಾನಿಟರಿ ಪ್ಯಾಡ್ ಖರೀದಿಸಲೂ ಗ್ರಾಮೀಣ ಮಹಿಳೆಯರು ಕಷ್ಟಪಡುತ್ತಿದ್ದಾರೆ. ಸ್ವಚ್ಛತೆ ಕೊರತೆಯಿಂದಾಗಿ ಕೆಲ ಮಹಿಳೆಯರು ಕ್ಯಾನ್ಸರ್‌ಗೆ ತುತ್ತಾಗುತ್ತಿದ್ದಾರೆ ಎಂದು ಅಲ್ಕಾ ಲಂಬಾ ಬೇಸರ ವ್ಯಕ್ತಪಡಿಸಿದರು.

ಗ್ರಾಮೀಣ ಮಹಿಳೆಯರ ಸ್ಥಿತಿಗತಿ ಕುರಿತು ಕಾಂಗ್ರೆಸ್ ಮಹಿಳಾ ಘಟಕ ಸಮೀಕ್ಷೆ ನಡೆಸಿದೆ. ಮಹಿಳಾ ಸ್ವಾವಲಂಬಿ ಜೀವನಕ್ಕೆ ಪ್ರೋತ್ಸಾಹ ನೀಡಲು, ಸ್ಯಾನಿಟರಿ ಪ್ಯಾಡ್ ಎಲ್ಲರಿಗೂ ದೊರಕುವಂತೆ ಮಾಡಲು ಅಭಿಯಾನವನ್ನೇ ರೂಪಿಸಿದ್ದೇವೆ. ಮಹಿಳಾ ಕಾಂಗ್ರೆಸ್ ಸದಸ್ಯರಿಗೆ ಸ್ಯಾನಿಟರಿ ಪ್ಯಾಡ್ ತಯಾರಿಸುವ ಯಂತ್ರ ನೀಡಲಾಗುತ್ತಿದೆ. ಅವರು ಉತ್ಪಾದಿಸುವ ಪ್ಯಾಡ್‌ಗಳನ್ನು ಉಚಿತವಾಗಿ ಪ್ರತಿ ಹಳ್ಳಿಯಲ್ಲೂ ವಿತರಿಸಲಾಗುವುದು ಎಂದರು.

ಎಂ.ಜಿ. ಹೆಗಡೆ ಅವರ ‘ಚಿಮಣಿ ಬೆಳಕಿನಿಂದ’ ಪುಸ್ತಕ ಬಿಡುಗಡೆ

‘ವದಂತಿ ಸೃಷ್ಟಿಸಿ ಹರಡುವ ಆರ್‌ಎಸ್‌ಎಸ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವದಂತಿಗಳನ್ನು ಸೃಷ್ಟಿಸಿ ಹಂಚುವ ಸಂಸ್ಥೆಯೇ ಆರ್‌ಎಸ್‌ಎಸ್. ಅದೊಂದು ಸುಳ್ಳಿನ ಕಾರ್ಖಾನೆ ಎಂದು ವಿಧಾನಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿದರು.

ಎಂ.ಜಿ. ಹೆಗಡೆ ಅವರ ಆತ್ಮಕತೆ ‘ಚಿಮಣಿ ಬೆಳಕಿನಿಂದ’ ಕೃತಿಯನ್ನು ಗುರುವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

‘ಸುಭಾಶ್ಚಂದ್ರ ಬೋಸ್ ಅವರ ಸಾವಿಗೆ ಕಾರಣ ಯಾರು? ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಸಾವಿಗೆ ಕಾರಣ ಯಾರು? ದೀನ ದಯಾಳ್ ಉಪಾಧ್ಯಾಯರನ್ನು ಕೊಂದವರು ಯಾರು? ಹೀಗೆ ಪ್ರಶ್ನೆಗಳನ್ನು ತರಿಸಿ, ಜನರ ತಲೆಯಲ್ಲಿ ಹುಳ ಬಿಟ್ಟು ಆಮೇಲೆ ಕಾಂಗ್ರೆಸ್ ಕಡೆ ಕೈ ತೋರಿಸುವುದನ್ನು ಹಿಂದಿನಿಂದ ಮಾಡಿಕೊಂಡು ಬಂದಿದ್ದಾರೆ. 10 ವರ್ಷದಿಂದ ಅಧಿಕಾರದಲ್ಲಿ ಅವರೇ ಇರುವುದರಿಂದ ಈ ಪ್ರಶ್ನೆಗಳನ್ನು ಕೇಳುವುದಿಲ್ಲ. ತನಿಖೆ ಮುಂದುವರಿಸುವುದಾಗಲಿ ಮಾಡುತ್ತಿಲ್ಲ. ಸುಳ್ಳುಗಳನ್ನು ಪದೇ ಪದೇ ಹೇಳಿ ಸತ್ಯ ಎಂದು ನಂಬಿಸುವುದನ್ನೇ ಅವರು ಕೆಲಸ’ ಎಂದು ಆರೋಪಿಸಿದರು.

ದೇಶ ಕಟ್ಟುವ ಬಗ್ಗೆ ಅಧ್ಯಯನ ಮಾತನಾಡಿ ಯುವಜನರನ್ನು ಸೆಳೆಯುತ್ತಾರೆ. ಆ ನಂತರ ನಿಧಾನಕ್ಕೆ ಹಿಂದೂ ಎಂದರು.

‘ಅವರನ್ನು ನಾಥೂರಾಂ ಗೋಡ್ಸೆ ಬರೆದಿಲ್ಲ. ಆ ಸತ್ಯ ಕೆಲವು ವರ್ಷಗಳ ಬಳಿಕ ಗೋಪಾಲ ಗೋಡ್ಸೆ ಬರೆದಿದ್ದಾರೆ. ನಾಥೂರಾಂ ಗೋಡ್ಸೆ ನ್ಯಾಯಾಲಯದಲ್ಲಿ ನೀಡಿದ ಹೇಳಿಕೆ ಎಂದು 200 ಪುಟಗಳ ಆ ಕೃತಿಯಲ್ಲಿದೆ. ನಾನು ಮಾಹಿತಿ ಹಕ್ಕಿನಲ್ಲಿ ಅರ್ಜಿ ಸಲ್ಲಿಸಿ ಪಡೆದ ಮಾಹಿತಿ ಪ್ರಕಾರ, ಹೇಳಿಕೆ ಕೇವಲ 8 ಪುಟಗಳಿವೆ. ಹಾಗಾದರೆ 200 ಪುಟ ಹೇಗಾಯಿತು? ಇದನ್ನೆಲ್ಲ ಹುಡುಕಿಕೊಂಡು ಗಾಂಧೀಜಿಯನ್ನು ಸಮರ್ಥಿಸಿದ್ದಾರೆ, ಗಾಂಧಿ ಕುರಿತು ನಂಬಿಕೆ ಇಲ್ಲದವರು ಯಾವುದು ಎಂಬುದು ಸ್ಪಷ್ಟವಾಯಿತು’ ಎಂದು ಅವರು ಹೇಳಿದರು.

ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ನ್ಯಾಯಾಂಗ ಇಲಾಖೆ, ಚಿಮಣಿ ಬೆಳಕಿನಿಂದ ಕೃತಿಯ ದೊಡ್ಡ ಕೃತಿ ಬರೆದ ಹಿರಿಯ ಸಿದ್ದರಾಮಯ್ಯ ಬೇಕಿತ್ತು. ಅದರಿಂದ ಅವರನ್ನು ಹರಿಪ್ರಸಾದ್ ಹೇಳಿದರು. ಮುಖ್ಯ ದೇಶವನ್ನು ಅವರ ತಳಿ ತುಂಬುತ್ತಾರೆ. ಹಿಂದು ತ್ರದ ಹೆಸರಿನಲ್ಲಿ ಅಮಾಯಕರ ಬಲಿ ಕೊಡುತ್ತಾರೆ. ಇದ ನೈಲ ತಿಳಿಯಲು ‘ಚಿಮಣಿ ಬೆಳಕಿನಿಂದ’ ಓದಬೇಕು ಎಂದು ಸಲಹೆ ನೀಡಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಮಾತನಾಡಿದರು.

ಕೃತಿಕಾರ ಎಂ.ಜಿ.ಹೆಗಡೆ ಮಾತನಾಡಿ, ‘ಗಾಂಧೀಜಿಯ ಬಗೆಗಿನ ನಿಂದನಾತ್ಮಕ ವಿಚಾರಗಳು, ನಿಂದನಾತ್ಮಕ ಪ್ರಶ್ನೆಗಳಿಗೆ ಮೂಲ ಯಾವುದು ಎಂದು ಹುಡುಕಿಕೊಂಡು ಹೋದಾಗ ಅದು ‘ನಾನೇಕೆ ಗಾಂಧಿಯನ್ನು ಕೊಂದೆ’ ಎಂಬ ಗೋಡ್ಸೆಯ ಕೃತಿಗೆ ಬಂದು ನಿಲ್ಲುತ್ತದೆ’ ಎಂದರು.

ಆಹರ್ನಿಶಿ ಪ್ರಕಾಶನ ನಗರದಲ್ಲಿ ಗುರುವಾರ ಆಯೋಜಿಸಿದ್ದ ಎಂ.ಜಿ. ಹೆಗಡೆ ಅವರ ಆತ್ಮಕತೆ ‘ಚಿಮಣಿ ಬೆಳಕಿನಿಂದ’ ಪುಸ್ತಕವನ್ನು ಬಿ.ಕೆ. ಹರಿಪ್ರಸಾದ್ ಬಿಡುಗಡೆ ಮಾಡಿದರು. ಅಕ್ಷತಾ ಹುಂಚದ ಕಟ್ಟೆ, ಪ್ರೊಫೆ ಪಿ. ಕೃಷ್ಣ, ಪುರುಷೋತ್ತಮ ಬಿಳಿಮಲೆ ಹಾಜರಿದ್ದರು – ಪ್ರಜಾವಾಣಿ ಚಿತ್ರ

ವಾಲ್ಮೀಕಿ ಪ್ರತಿಭೆ ಅಗಾಧ: ಜಯದೇವ್

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ‘ಯಾವುದೇ ಸಿದ್ಧ ಮಾದರಿಗಳ ನೆರವಿಲ್ಲದೆ ರಾಮಾಯಣವನ್ನು ರಚಿಸಿದ ವಾಲ್ಮೀಕಿಯವರ ಪ್ರತಿಭೆ ಅಗಾಧ’ ಎಂದು ಕನ್ನಡ ಜಾನಪದ ಪರಿಷತ್ತಿನ ದಾಸರಹಳ್ಳಿ ಕ್ಷೇತ್ರ ಘಟಕದ ಅಧ್ಯಕ್ಷ ವೈ.ಬಿ.ಎಚ್. ಜಯದೇವ್ ಹೇಳಿದರು.

ಹಾವನೂರು ಬಡಾವಣೆಯ ಭೂಮಿಕ ಸೇವಾ ಫೌಂಡೇಶನ್ ಹಮ್ಮಿಕೊಂಡಿದ್ದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಮಾತನಾಡಿದರು.

‘ಸಮಾಜದ ಕೆಳಸ್ತರದ ಜನರಿಗೆ ನಿಷ್ಠೆಯನ್ನು ಸಂಸ್ಕೃತವನ್ನು ಕರಗತ ಮಾಡಿಕೊಂಡ ವಾಲ್ಮೀಕಿ, ಪ್ರಥಮ ಮಹಾಕಾವ್ಯ ರಾಮಾಯಣ ರಚಿಸಿದರು’ ಎಂದರು.

ಫೌಂಡೇಶನ್ ಅಧ್ಯಕ್ಷೆ ಲತಾ ಕುಂದರಗಿ, ಕನ್ನಡ ಸೇನೆ ಖಜಾಂಚಿ ರಾಜೇಂದ್ರ ಕೊಣ್ಣೂರ, ಪದಾಧಿಕಾರಿಗಳಾದ ರಾಜ್ಯ ಸಲಹಾ ಸಮಿತಿ ಸದಸ್ಯ ರಮೇಶ ಜಮಖಂಡಿ, ಭಾಮಾ ಸದಾಶಿವಯ್ಯ, ಕವಯಿತ್ರಿ ಗೀತಾ ವಿ.ಆರ್. ವೆಂಕಟೇಶ, ಭೂಮಿಕಾ ಉಪಸ್ಥಿತರಿದ್ದರು.

ವಾಲ್ಮೀಕಿ ಅವರ ಭಾವಚಿತ್ರಕ್ಕೆ (ಎಡದಿಂದ ಬಲಕ್ಕೆ) ವೆಂಕಟೇಶ್, ರಮೇಶ ಜಮಖಂಡಿ, ರಾಜೇಂದ್ರ ಕೊಣ್ಣೂರ, ವೈ.ಬಿ.ಎಚ್ ಜಯದೇವ್, ಲತಾ ಕುಂದರಗಿ, ಭಾಮಾ ಸದಾಶಿವಯ್ಯ, ಗೀತಾ ಅವರು ಪುಷ್ಪ ನಮನ ಸಲ್ಲಿಸಿದರು

ರಾಜ್ಯ ಸರ್ಕಾರದ ಹಠದಿಂದ ಕೆಐಒಸಿಎಲ್ ಕಾರ್ಮಿಕರು ಬೀದಿಗೆ: ಎಚ್‌ಡಿಕೆ

‘ಕೇಂದ್ರದ ಕೈಗಾರಿಕೆಗಳಿಗೆ ರಾಜ್ಯದ ಅಸಹಕಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂಗ್ರೆಸ್ ಸರ್ಕಾರದ ಹಠಮಾರಿತನದ ಕಾರಣದಿಂದ ಕುದುರೆಮುಖ ಕಬ್ಬಿಣ ಅದಿರು ಸಂಸ್ಥೆಯ (ಕೆಐಒಸಿಎಲ್) 300-400 ಕಾರ್ಮಿಕರು ಕೆಲಸ ಕಳೆದುಕೊಂಡು ಬೀದಿಗೆ ಬಿದ್ದಿದ್ದಾರೆ. ಕೇಂದ್ರದ ಕೈಗಾರಿಕೆಗಳಿಗೆ ರಾಜ್ಯದಲ್ಲಿ ಸಹಕಾರ ಸಿಗುತ್ತಿಲ್ಲ’ ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್. ಡಿ. ಕುಮಾರಸ್ವಾಮಿ ಆರೋಪಿಸಿದರು.

ಪಕ್ಷದ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು, ‘ಕೆಐಒಸಿಎಲ್ ಮತ್ತು ಎಚ್ಎಂಟಿ ವಿಚಾರದಲ್ಲಿ ರಾಜ್ಯ ಸರ್ಕಾರ ಸುಳ್ಳು ಹೇಳುತ್ತಿದೆ’ ಎಂದು ಆರೋಪಿಸಿದರು.

‘ಕೆಐಒಸಿಎಲ್‌ಗೆ ರಾಜ್ಯ ಸರ್ಕಾರವು ಗಣಿ ಮಂಜೂರು ಮಾಡದೇ ಇರುವ ಕಾರಣಕ್ಕೆ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ. ವಿಶಾಖಪಟ್ಟಣದ ರಾಷ್ಟ್ರೀಯ ಉಕ್ಕು ಕಾರ್ಖಾನೆಯಲ್ಲಿ ಹೀಗೆಯೇ 4,500 ಜನ ಕೆಲಸ ಕಳೆದುಕೊಂಡಿದ್ದರು. ಅಲ್ಲಿನ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಜತೆ ಚರ್ಚಿಸಿದರು. 48 ಗಂಟೆಯಲ್ಲೇ ಎಲ್ಲರನ್ನೂ ಕೆಲಸಕ್ಕೆ ತೆಗೆದುಕೊಳ್ಳಲಾಯಿತು’ ಎಂದು ತಿಳಿಸಿದರು.

‘ನಮ್ಮ ನೆರೆಯ ಆಂಧ್ರಪ್ರದೇಶದಲ್ಲಿ ಅಷ್ಟು ಸಹಕಾರ ಸಿಗುತ್ತಿದೆ. ರಾಜ್ಯದಲ್ಲಿನ ಬೃಹತ್ ಕೈಗಾರಿಕೆಗಳನ್ನು ಉಳಿಸಬೇಕು ಎಂದು ನಾನು ಹೋರಾಡುತ್ತಿದ್ದೇನೆ. ಆದರೆ ಈ ಬಗ್ಗೆ ರಾಜ್ಯದ ಒಬ್ಬ ಪ್ರತಿನಿಧಿಯೂ ನನ್ನನ್ನು ಸಂಪರ್ಕಿಸಿ, ಚರ್ಚಿಸಿಲ್ಲ. ಇಲ್ಲಿ ಸಹಕಾರವೇ ಇಲ್ಲ’ ಎಂದರು.

‘ಸಮಸ್ಯೆಗಳನ್ನು ಬಗೆಹರಿಸಲು ಮುಖ್ಯಮಂತ್ರಿ ಮತ್ತು ಅರಣ್ಯ ಸಚಿವರಿಗೆ ಪತ್ರ ಬರೆಯುತ್ತೇನೆ. ಸಭೆ ನಡೆಸಲಿ, ದಾಖಲೆ ಮುಂದಿಡುತ್ತೇನೆ. ನನ್ನ ತಪ್ಪಿದ್ದರೆ, ಹೊಣೆ ಹೊರುತ್ತೇನೆ’ ಎಂದರು.

‘ಈ ಸರ್ಕಾರದ ಬಳಿ ಹಣವೇ ಇಲ್ಲ. ಒಂದು ಪೈಸೆ ಇದ್ದಿದ್ದರೂ ಬೆಂಗಳೂರಿನ ಸ್ಥಿತಿ ಹದ್ದಾಗಿ ಮಾಡುತ್ತಿತ್ತು. ಟೆಂಡರ್ ಮಾಡುತ್ತೇವೆ ಎನ್ನುತ್ತಾರೆ. ಆ ಭಾಗದ ಜನರ ಬಗ್ಗೆ ಕಾಳಜಿ ಇದ್ದಿದ್ದರೆ ಅವರ ಸ್ವಂತ ಯೋಜನೆಯನ್ನಲ್ಲಿ ಆಗಿರುವ ಅಕ್ರಮಗಳ ಬಗ್ಗೆ ಟಿ.ಬಿ.ಜಯಚಂದ್ರ ನೇತೃತ್ವದ ಸದನ ಸಮಿತಿ ನೀಡಿದ ವರದಿಯ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರಲಿ’ ಎಂದು ಡಿ.ಕೆ.ಶಿವಕುಮಾರ್ ಅವರ ಹೆಸರು ಹೇಳದೆಯೇ ಸವಾಲು ಹಾಕಿದರು.

ಡಿಎಂಕೆ ಜತೆ ಮಾತನಾಡಲಿ: ‘ಮೇಕೆದಾಟು ಯೋಜನೆಯಿಂದ ತಮಿಳುನಾಡಿಗೆ ಅನುಕೂಲವಾಗುತ್ತದೆ. ಈ ಯೋಜನೆಗೆ ಅನುಮತಿ ಹೇಗೆ ಪಡೆದುಕೊಳ್ಳಬೇಕು ಎಂಬುದು ಕಾಂಗ್ರೆಸ್ ಸರ್ಕಾರಕ್ಕೆ ಗೊತ್ತಿಲ್ಲ. ಕೇಂದ್ರ ಸರ್ಕಾರದ ಜತೆ ಹೇಗೆ ವರ್ತಿಸಬೇಕು ಎಂಬುದೇ ಇವರಿಗೆ ಗೊತ್ತಿಲ್ಲ. ಕಾಂಗ್ರೆಸ್‌ನ ಮಿತ್ರಪಕ್ಷ ಡಿಎಂಕೆ ಅಲ್ಲಿ ಅಧಿಕಾರದಲ್ಲಿದೆ. ಅವರೊಂದಿಗೆ ಮಾತನಾಡಲಿ’ ಎಂದರು.

ಸಂಸದರ ಕೊಠಡಿಯಲ್ಲಿ 26 ಸಂಸದರಿಗೆ ರಾಜ್ಯ ಸರ್ಕಾರ ಹೊಸ ಕಾರು ನೀಡಿದೆ. ಆದರೆ ನನಗೆ ಮಾತ್ರ ಕೊಠಡಿ, ಸಂಸದ ಮಲ್ಲೇಶ್ ಬಾಬುಗೆ ಹೊಸ ಕಾರು ಕೊಟ್ಟಿಲ್ಲ

– ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

‘ವಾಲ್ಮೀಕಿ ಸಂದೇಶಗಳು ಉತ್ತಮ ಸಮಾಜಕ್ಕೆ ಪ್ರೇರಣೆ’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ‘ಜಗತ್ತಿನ ಗಮನ ಸೆಳೆದ ಮಹರ್ಷಿ ವಾಲ್ಮೀಕಿ ಸಂದೇಶಗಳು ಉತ್ತಮ ಸಮಾಜ ನಿರ್ಮಾಣಕ್ಕೆ ಪ್ರೇರಣೆಯಾಗಿವೆ’ ಎಂದು ಪೂರ್ವ ತಾಲ್ಲೂಕು ಶ್ರೀ ಮಹರ್ಷಿ ವಾಲ್ಮೀಕಿ ನಾಯಕ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಂ.ವೆಂಕಟೇಶ್ ಹೇಳಿದರು.

ತಾಲ್ಲೂಕು ಕಚೇರಿ ಆವರಣದಲ್ಲಿ ಬೆಂಗಳೂರು ಪೂರ್ವ ತಾಲ್ಲೂಕು ಆಡಳಿತ ಮಂಡಳಿ ಮತ್ತು ಪೂರ್ವ ತಾಲ್ಲೂಕು ಶ್ರೀ ಮಹರ್ಷಿ ವಾಲ್ಮೀಕಿ ನಾಯಕ ಕ್ಷೇಮಾಭಿವೃದ್ಧಿ ಸಂಘ ಜಂಟಿಯಾಗಿ ಹಮ್ಮಿಕೊಂಡಿದ್ದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

‘ವಾಲ್ಮೀಕಿ ರಚಿಸಿರುವ ರಾಮಾಯಣವು ಸದಾ ಕಾಲಕ್ಕೂ ಆದರ್ಶವಾಗಿದೆ. ಭಾರತೀಯ ಸಂಸ್ಕೃತಿ ಹಾಗೂ ಜೀವನ ಪದ್ಧತಿಯನ್ನು ಪ್ರತಿಬಿಂಬಿಸುವ ರಾಮಾಯಣ ಸರ್ವಕಾಲಕ್ಕೂ ಪ್ರಸ್ತುತ’ ಎಂದರು.

ವಾಲ್ಮೀಕಿ ಸಮಾಜದ ಮುಖಂಡ ಬಾಕ್ಸರ್ ನಾಗರಾಜ್, ‘ನಮ್ಮ ಜನಾಂಗಕ್ಕೆ ಸಮುದಾಯ ಭವನ ನಿರ್ಮಿಸುವ ಬಗ್ಗೆ 14 ವರ್ಷಗಳಿಂದ ಮನವಿ ಮಾಡುತ್ತಿದ್ದೇವೆ. ಆದರೆ, ಈವರೆಗೂ ನಮ್ಮ ಬೇಡಿಕೆ ಸಾಕಾರವಾಗಿಲ್ಲ. ಜನಾಂಗಕ್ಕೆ ಸಮುದಾಯ ಭವನ, ವಸತಿ ನಿಲಯ, ಶಿಕ್ಷಣ ಸೇರಿದಂತೆ ಹಲವು ಸೌಲಭ್ಯಕ್ಕಾಗಿ 5 ಎಕರೆ ಜಾಗವನ್ನು ಮೀಸಲಿರಿಸಬೇಕು’ ಎಂದು ತಿಳಿಸಿದರು.

ತಹಶೀಲ್ದಾರ್ ಶೇಖರ್, ಮುಖಂಡರಾದ ಬೆಳ್ಳಾರು ಅಂಜಿನಪ್ಪ, ಕಟ್ಟುಗೊಲ್ಲಹಳ್ಳಿ ಶಿವಕುಮಾರ್, ಮಂಜುನಾಥ್, ಕೆ.ಜಿ.ನಾಗೇಶ್, ಕೃಷ್ಣಮೂರ್ತಿ ಉಪಸ್ಥಿತರಿದ್ದರು.

ವಾಲ್ಮೀಕಿ ಭಾವಚಿತ್ರಕ್ಕೆ ಎಂ.ವೆಂಕಟೇಶ್, ಬಾಕ್ಸರ್ ನಾಗರಾಜ್ ಹಾಗೂ ಸಮುದಾಯದ ಮುಖಂಡರು ಪುಷ್ಪ ನಮನ ಸಲ್ಲಿಸಿದರು

ಚಾಲನಾ ತರಬೇತಿ ಉಚಿತವಾಗಿ ಪಡೆದು ಆಟೊ ಚಾಲಕಿಯರಾಗುತ್ತಿರುವ ಮಹಿಳೆಯರು

ಆಟೊದಲ್ಲಿ 'ಸ್ತ್ರೀ ಶಕ್ತಿ' ಹೆಚ್ಚಿಸಿದ 'ನಮ್ಮ ಯಾತ್ರಿ'

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಉಚಿತವಾಗಿ ಆಟೊ ಚಾಲನೆ ಕಲಿಸಿಕೊಡುವ ಮೂಲಕ 'ನಮ್ಮ ಯಾತ್ರಿ' ಸಂಸ್ಥೆಯು ಮಹಿಳೆಯರು ಸ್ವಾವಲಂಬಿಗಳಾಗಲು ನೆರವು ನೀಡುತ್ತಿದೆ. ಈ ಯೋಜನೆಯಡಿ ಒಂದು ಸಾವಿರ ಮಹಿಳೆಯರಿಗೆ ಚಾಲನಾ ತರಬೇತಿ ನೀಡುವ ಗುರಿ ಸಂಸ್ಥೆಯ ಮುಂದಿದೆ.

2023ರ ಅಕ್ಟೋಬರ್‌ನಲ್ಲಿ ಈ ಯೋಜನೆಯನ್ನು 'ಮಹಿಳಾ ಶಕ್ತಿ' ಹೆಸರಿನಲ್ಲಿ 'ನಮ್ಮ ಯಾತ್ರಿ' ಆರಂಭಿಸಿತು. ಒಂದು ವರ್ಷದಲ್ಲಿ 108 ಮಹಿಳಾ ಚಾಲಕರು ತರಬೇತಿ ಪಡೆದಿದ್ದು, ಆಟೊ ಓಡಿಸಿ ಜೀವನ ಕಟ್ಟಿಕೊಂಡಿದ್ದಾರೆ.

'ನಮ್ಮ ಯಾತ್ರಿ' ಸಂಸ್ಥೆಯು ಸಾರ್ವಜನಿಕರಿಗೆ ಆಟೊ ಸೇವೆಯನ್ನು ಒದಗಿಸುತ್ತಾ ಬಂದಿದೆ. ಚಾಲಕರೂ ಮಹಿಳೆಯರೇ ಇದ್ದರೆ ಒಳ್ಳೆಯದು ಎಂದು ಕೆಲವು ಮಹಿಳಾ ಪ್ರಯಾಣಿಕರು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಅದಕ್ಕೆ ಮನ್ನಣೆ ನೀಡಿ ಆಸಕ್ತ ಮಹಿಳೆಯರಿಗೆ ಉಚಿತವಾಗಿ ಆಟೊ ಚಾಲನೆಯ ತರಬೇತಿ ನೀಡುವ 'ಮಹಿಳಾ ಶಕ್ತಿ' ಯೋಜನೆಯನ್ನು ಕಳೆದ ವರ್ಷ ರೂಪಿಸಲಾಯಿತು' ಎಂದು 'ನಮ್ಮ ಯಾತ್ರಿ' ಚಾಲನಾ ವಿಭಾಗದ ಮುಖ್ಯ ತರಬೇತುದಾರರಾದ ನಾಗಲಕ್ಷ್ಮೀ 'ಪ್ರಜಾವಾಣಿ'ಗೆ ತಿಳಿಸಿದರು.

'ನೂರಾರು ಮಂದಿ ಕಲಿಯಲು ಮುಂದೆ ಬಂದಿದ್ದರು. ಕೆಲವರು ಅರ್ಧದಲ್ಲಿಯೇ ಬಿಟ್ಟು ಹೋದರು.

'ಮಹಿಳಾ ಶಕ್ತಿ' ಯೋಜನೆಯಡಿ ಆಟೊ ಚಾಲನಾ ತರಬೇತಿ ಪಡೆದು ಚಾಲಕರಾದ ಸ್ತ್ರೀಯರು

108 ಮಂದಿ ಪೂರ್ಣ ಪ್ರಮಾಣದಲ್ಲಿ ಆಟೊ ಓಡಿಸುವುದನ್ನೇ ವೃತ್ತಿ ಮಾಡಿಕೊಂಡಿದ್ದಾರೆ. ಅದರಲ್ಲಿ 38 ಮಹಿಳೆಯರು ಸ್ವಂತ ಆಟೊವನ್ನು ಈಗ ಹೊಂದಿದ್ದಾರೆ. 30 ಮಹಿಳೆಯರು ಈಗ ತರಬೇತಿ ಪಡೆಯುತ್ತಿದ್ದಾರೆ' ಎಂದು ಮಾಹಿತಿ ನೀಡಿದರು.

ತರಬೇತಿ ವಿವರ: ತರಬೇತಿಗೆ ಆಸಕ್ತಿ ತೋರುವ ಮಹಿಳೆಯರ ಸಂದರ್ಶನ ನಡೆಸಿದ ಬಳಿಕ ಮೂರು ದಿನ ಪರೀಕ್ಷಾ ತರಬೇತಿ ನೀಡಲಾಗುತ್ತದೆ. ಈ ಸಮಯದಲ್ಲಿ ಕೆಲವರು ಬಿಟ್ಟು ಹೋಗುತ್ತಾರೆ. ಮುಂದೆ ಕಲಿಯುವ ಆಸಕ್ತಿ ತೋರಿಸುವವರಿಗೆ 40 ದಿನಗಳ ತರಬೇತಿ ಆರಂಭವಾಗುತ್ತದೆ. ಸೋಮವಾರದಿಂದ ಶುಕ್ರವಾರದವರೆಗೆ ಪ್ರಾಯೋಗಿಕ ತರಬೇತಿ. ಶನಿವಾರ ಚಾಲನಾ ಮಾಹಿತಿ (ಥಿಯರಿ) ತರಗತಿ ನೀಡಲಾಗುತ್ತದೆ.

ಸಂಸ್ಥೆಯ 12 ತರಬೇತುದಾರರು ಕೋರಮಂಗಲ, ಡಿಮಾರ್ಟ್, ಫ್ರೇಜರ್ ಟೌನ್, ಬಿಸ್ಮಿಲ್ಲಾ ನಗರಗಳಲ್ಲಿ ಚಾಲನಾ ತರಬೇತಿ ನೀಡುತ್ತಾರೆ. ಬೆಳಿಗ್ಗೆ 10.30ರಿಂದ, ಮಧ್ಯಾಹ್ನ 3ರಿಂದ ಹೀಗೆ ದಿನಕ್ಕೆ ಎರಡು ತಂಡಗಳಲ್ಲಿ ತರಬೇತಿ ನೀಡಲಾಗುತ್ತದೆ. ಥಿಯರಿ ತರಗತಿಯಲ್ಲಿ ರಸ್ತೆ ಸುರಕ್ಷತೆ, ಸಂಚಾರ ನಿಯಮಾವಳಿ, ಮೊಬೈಲ್ ಬಳಸುವ ರೀತಿ, ನಕ್ಷೆ ನೋಡಿ ಚಾಲನೆ ಮಾಡುವುದು, ಗ್ರಾಹಕರೊಂದಿಗೆ ವರ್ತಿಸಬೇಕಿರುವ ರೀತಿ, ಅವಘಡಗಳು ಉಂಟಾದಾಗ ಕೈಗೊಳ್ಳಬೇಕಾದ ಕ್ರಮಗಳನ್ನು ತಿಳಿಸಿಕೊಡಲಾಗುತ್ತದೆ.

ಬಾಡಿಗೆ ಆಟೊ: 'ಆಟೊ ಚಾಲನಾ ತರಬೇತಿ ಪಡೆದವರಿಗೆ ಆಟೊ ಖರೀದಿಸುವ ಶಕ್ತಿ ಇರುವುದಿಲ್ಲ. ಅದಕ್ಕಾಗಿ ನಮ್ಮ ಯಾತ್ರಿಯೇ ಅವರಿಗೆ ದಿನಕ್ಕೆ ₹395 ಬಾಡಿಗೆ ನಿಗದಿ ಮಾಡಿ ಆಟೊವನ್ನು ನಾಲ್ಕು ತಿಂಗಳು ನೀಡುತ್ತದೆ. ದಿನಕ್ಕೆ ಕನಿಷ್ಠ ₹1200 ದುಡಿಯಬೇಕು ಎಂದು ಸಲಹೆ ನೀಡಲಾಗುತ್ತದೆ. ಆಗ ಬಾಡಿಗೆ ಮತ್ತು ದಿನದ ಖರ್ಚು ₹800 ಹೋದರೂ ₹400 ಉಳಿಸಲು ಸಾಧ್ಯವಾಗುತ್ತದೆ. ಈ ಉಳಿಕೆಯನ್ನು ಉಳಿತಾಯ ಖಾತೆಯಲ್ಲಿ ಅವರು ಹಾಕಬೇಕು. ನಾಲ್ಕು ತಿಂಗಳಿಗೆ ಸುಮಾರು ₹50 ಸಾವಿರ ಉಳಿತಾಯವಾಗುತ್ತದೆ. ಅದನ್ನು ಮೂಲ ಧನವಾಗಿ ಬಳಸಿಕೊಂಡು ಬ್ಯಾಂಕ್ ಸಾಲ ಪಡೆದು ಅವರು ಆಟೊ ಖರೀದಿಸುವಂತೆ ಮಾಡಲಾಗುತ್ತದೆ' ಎಂದು ನಾಗಲಕ್ಷ್ಮೀ ತಿಳಿಸಿದರು.

ಈ ರೀತಿಯ ಯೋಜನೆಯಿಂದಾಗಿ ಅವರಿಗೆ ಉಳಿತಾಯ ಮಾಡುವ ಅಭ್ಯಾಸವೂ ಆಗುತ್ತಿದೆ. ಅಲ್ಲದೇ 'ಸಿಬಿಲ್ ಸ್ಕೋರ್' ಇಲ್ಲದವರಿಗೂ ಸಾಲ ಸಿಗುವಂತೆ ಮಾಡಲು ನಾಲ್ಕು ತಿಂಗಳ ವ್ಯವಹಾರ ಉಪಯೋಗವಾಗುತ್ತಿದೆ. 'ಸಿಬಿಲ್ ಸ್ಕೋರ್' ಇಲ್ಲದ ಇಬ್ಬರು ಈ ದಾಖಲೆಗಳನ್ನು ನೀಡಿ ಸಾಲ ಪಡೆದಿರುವುದು ಇದಕ್ಕೆ ಸಾಕ್ಷಿ ಎಂದು ಹೇಳಿದರು.

'ಬದುಕು ನೀಡಿದ 'ನಮ್ಮ ಯಾತ್ರಿ'

'ನನ್ನ ಪತಿ ಒಂಬತ್ತು ವರ್ಷಗಳ ಹಿಂದೆಯೇ ಮೃತಪಟ್ಟಿದ್ದಾರೆ. ಮೂವರು ಮಕ್ಕಳನ್ನು ಸಾಕಬೇಕು. ಮನೆ ಕೆಲಸ, ಹೋಟೆಲ್‌ನಲ್ಲಿ ಕೆಲಸ, ತರಕಾರಿ ವ್ಯಾಪಾರ ಹೀಗೆ ಬೇರೆ ಬೇರೆ ಕೆಲಸ ಮಾಡಿದೆ. ಆದರೂ ಬದುಕು ಸಾಗಿಸುವುದೇ ಕಷ್ಟವಾಗಿತ್ತು. ಇಂಥ ಸಂದರ್ಭದಲ್ಲಿ ನಮ್ಮ ಯಾತ್ರಿ ಸಂಸ್ಥೆಯು ನನ್ನ ಪಾಲಿಗೆ ದೇವರಂತೆ ಬಂದು ಬದುಕು ಕಟ್ಟಿಕೊಳ್ಳಲು ಸಹಾಯ ಮಾಡಿತು' ಎಂದು ಆಟೊ ಚಾಲಕಿ ಕೋರಮಂಗಲದ ತಮಿಳ್ ಸೆಲ್ವಿ ತಿಳಿಸಿದರು.

'ಒಂದೂವರೆ ತಿಂಗಳು ಸಂಸ್ಥೆಯವರು ತರಬೇತಿ ನೀಡಿದರು. ಆ ನಂತರ ದಿನಕ್ಕೆ ₹ 400ರಂತೆ ನಾಲ್ಕು ತಿಂಗಳು ಬಾಡಿಗೆಗೆ ಓಡಿಸಲು ಆಟೊ ನೀಡಿದರು. ಬ್ಯಾಂಕ್‌ನಲ್ಲಿ ಸಾಲ ಮಾಡಿ 15 ದಿನದ ಹಿಂದೆ ಹೊಸ ಆಟೊ ಖರೀದಿಸಿದ್ದೇನೆ. ದಿನಕ್ಕೆ ₹ 1000ದಿಂದ ₹ 1500 ದುಡಿಯುತ್ತಿದ್ದೇನೆ. ಈಗ ಉಳಿತಾಯ ಏನಿಲ್ಲ. ಮನೆ ಖರ್ಚು ಮತ್ತು ಸಾಲಕ್ಕೆ ಸರಿಯಾಗಬಹುದು. ಆದರೆ, ನನಗೆ ನಾನೇ ಮಾಲೀಕಳಾಗಿದ್ದೇನೆ' ಎಂದು ಹೆಮ್ಮೆಯಿಂದ ಹೇಳಿಕೊಂಡರು.

ಸುದ್ದಿ 2 ನಿಮಿಷ

'ಬಿಜೆಪಿಯವರು ಕಾಡುಗಳ್ಳ ವೀರಪ್ಪನ್ ವಂಶಸ್ಥರು'

ಕೋಲಾರ: 'ಬಿಜೆಪಿಯವರು ಕಾಡುಗಳ್ಳ ವೀರಪ್ಪನ್ ವಂಶಸ್ಥರು. ವೀರಪ್ಪನ್ ಮಗಳು ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿರಲಿಲ್ಲವೇ? ಅಂಥವರನ್ನು ಪಕ್ಷದಲ್ಲಿಟ್ಟುಕೊಂಡು ನಮಗೆ ಉಪದೇಶ ನೀಡುತ್ತಿದ್ದಾರೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್ ಟೀಕಿಸಿದ್ದಾರೆ.

'ವೀರಪ್ಪನ್ ಹೆಂಡತಿ, ಮಗಳು ಸದ್ಯ ಯಾವ ಪಕ್ಷದಲ್ಲಿದ್ದಾರೆ? ಬಿಜೆಪಿಯಲ್ಲಿ ಅಲ್ಲವೇ? ಅಂಥವರನ್ನು ಪಕ್ಷದ ಅಭ್ಯರ್ಥಿಗಳನ್ನಾಗಿ ಮಾಡಿಕೊಂಡ ಬಿಜೆಪಿಯವರ ಆರೋಪಗಳಿಗೆ ನಾವು ಏಕೆ ಉತ್ತರ ನೀಡಬೇಕು' ಎಂದು ಪ್ರಶ್ನಿಸಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನೂರಾರು ದಿನ ಜೈಲಿನಲ್ಲಿ ಇದ್ದವರು, ಬೇಲ್ (ಜಾಮೀನು) ಮೇಲೆ ಇರುವವರು ಬಿಜೆಪಿಯವರು' ಎಂದರು.

'ಮೊಸಳೆ ಕಣ್ಣೀರು ಸುರಿಸುವ ಕ್ಷುಲ್ಲಕ ಬಿಜೆಪಿ ವ್ಯಕ್ತಿಗಳಿಗೆ ಉತ್ತರ ನೀಡಬೇಕಾದ ಅವಶ್ಯ ನಮಗೆ ಇಲ್ಲ. ರಾಮಾಯಣ ಬರೆದದ್ದು ಮಹರ್ಷಿ ವಾಲ್ಮೀಕಿ ಅಲ್ಲ ಎಂದು ಬಿಜೆಪಿಯ ಮಹಾನ್ ನಾಯಕರೊಬ್ಬರು ಹೇಳಿದ್ದಾರೆ ಎಂದರೆ ಅವರ ಮನಃಸ್ಥಿತಿ ಹೇಗೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಿ' ಎಂದು ಹೇಳಿದರು.

'ರಾಜ್ಯದಲ್ಲಿ ನಡೆಯಲಿರುವ ಮೂರು ಉಪ ಚುನಾವಣೆಗಳಲ್ಲಿಯೂ ನಾವೇ ಗೆಲ್ಲುತ್ತೇವೆ. ಒಂದೆರಡು ದಿನಗಳಲ್ಲಿ ಅಭ್ಯರ್ಥಿಗಳ ಘೋಷಣೆಯಾಗಲಿದೆ ಎಂದು ಬೈರತಿ ಸುರೇಶ್ ಹೇಳಿದರು.

'ಎಚ್.ಡಿ.ಕುಮಾರಸ್ವಾಮಿ ಮಾತನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ'

ಚಿಕ್ಕಬಳ್ಳಾಪುರ: ಲೂಟಿ ಎನ್ನುವ ಪದ ಮತ್ತು ಆ ಸಂಸ್ಕೃತಿಗೆ ಅಧ್ಯಕ್ಷರಾಗುವ ಅರ್ಹತೆ ಇರುವುದು ಎಚ್.ಡಿ.ಕುಮಾರಸ್ವಾಮಿ ಅವರೊಬ್ಬರಿಗೆ ಮಾತ್ರ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಟೀಕಿಸಿದ್ದಾರೆ.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುಮಾರಸ್ವಾಮಿ ಯಾವ ಸಂದರ್ಭದಲ್ಲಿ ಯಾರನ್ನು ಹೊಗಳುತ್ತಾರೆ, ಯಾರನ್ನು ತೆಗಳುತ್ತಾರೆ ಎನ್ನುವುದು ಅವರಿಗೇ ಗೊತ್ತಿಲ್ಲ ಎಂದರು.

ಕುಮಾರಸ್ವಾಮಿ ಅವರ ಮಾತುಗಳನ್ನು ಜನರು ಸಹ ಗಂಭೀರವಾಗಿ ಪರಿಗಣಿಸುತ್ತಿಲ್ಲ. ಹಾಗಾಗಿ ಯಾರೂ ಅವರ ಹೇಳಿಕೆಗಳನ್ನು ಗಂಭೀರವಾಗಿ ಪರಿಗಣಿಸಬೇಕಾದ ಅಗತ್ಯವಿಲ್ಲ ಎಂದು ಹೇಳಿದರು.

ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿ ಗುರುವಾರ ಬೆಳಿಗ್ಗೆ ತೀರ್ಥವನ್ನು ತುಂಬಿಸಿಕೊಳ್ಳಲು ಕೊಡಗಳನ್ನು ಹಿಡಿದ ಭಕ್ತವೃಂದ ಕಲ್ಯಾಣಿಗೆ ಧುಮುಕಿ ಬ್ರಹ್ಮಕುಂಡಿಕೆಯತ್ತ ತೆರಳಿತು ಪ್ರಜಾವಾಣಿ ಚಿತ್ರ/ರಂಗಸ್ವಾಮಿ

ತಲಕಾವೇರಿ: ತೀರ್ಥೋದ್ಭವ

ತಿಂಗಳ ಪರ್ಯಂತ ನಡೆಯಲಿದೆ ಕಾವೇರಿ ಸಂಕ್ರಮಣ ಜಾತ್ರೆ

• ಕೆ.ಎಸ್.ಗಿರೀಶ

ಮುಖ್ಯಾಂಶಗಳು

- ಬೆಳಿಗ್ಗೆ 7.40ಕ್ಕೆ ನಡೆದ ತೀರ್ಥೋದ್ಭವ: ಮುಗಿಲು ಮುಟ್ಟಿದ ಜಯಘೋಷ
- ಪವಿತ್ರ ಕ್ಷಣಕ್ಕೆ ಸಾವಿರಾರು ಮಂದಿ ಸಾಕ್ಷಿ
- ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಭಕ್ತರು

ಮಡಿಕೇರಿ: ಕೊಡಗು ಜಿಲ್ಲೆಯ ಬ್ರಹ್ಮಗಿರಿ ಶ್ರೇಣಿಯಲ್ಲಿರುವ ತಲಕಾವೇರಿಯಲ್ಲಿ ದಟ್ಟವಾಗಿ ಆವರಿಸಿದ್ದ ಮಂಜಿನರಾಶಿಯ ನಡುವೆ ಗುರುವಾರ ಬೆಳಿಗ್ಗೆ 7.40ಕ್ಕೆ ನಡೆದ ಕಾವೇರಿ ಪವಿತ್ರ ತೀರ್ಥೋದ್ಭವ ಕ್ಷಣಕ್ಕೆ ಸಾವಿರಾರು ಭಕ್ತರು ಸಾಕ್ಷಿಯಾದರು.

ತೀರ್ಥೋದ್ಭವವಾಯಿತೆಂದು ಘೋಷಿಸಿದ ಅರ್ಚಕ ವೃಂದ ತೀರ್ಥವನ್ನು ಸಿಂಪಡಿಸುತ್ತಿದ್ದಂತೆ ಭಕ್ತರ ಜಯಘೋಷಗಳು ಮುಗಿಲು ಮುಟ್ಟಿದವು. ಲಕ್ಷಾಂತರ ಮಂದಿಯ ಜೀವನಾಡಿ ಎನಿಸಿರುವ ಕಾವೇರಿ ನದಿಯ ಈ ಅಪರೂಪದ ಗಳಿಗೆಗಾಗಿ ಬುಧವಾರ ರಾತ್ರಿಯಿಂದಲೇ ಥರಗುಟ್ಟುವ ಚಳಿಯ ಮಧ್ಯೆ ಕಾಯುತ್ತ ಕುಳಿತಿದ್ದ ಅಪಾರ ಭಕ್ತವೃಂದ ಪುಳಕಗೊಂಡಿತು. ಒಂದು ತಿಂಗಳ ಕಾಲ ನಡೆಯುವ ಕಾವೇರಿ ಸಂಕ್ರಮಣದ ಜಾತ್ರೆಗೂ ಈ ಮೂಲಕ ಚಾಲನೆ ದೊರಕಿತು.

ಇದಕ್ಕೂ ಮುನ್ನ, ಕೊಡಗಳು, ಕ್ಯಾನ್‌ಗಳನ್ನು ಹಿಡಿದು ತೀರ್ಥ ತುಂಬಿಸಿಕೊಳ್ಳಲು ಕಲ್ಯಾಣಿಗೆ ಧುಮುಕಿದ ಭಕ್ತವೃಂದ, 'ಉಕ್ಕಿ ಬಾ ತಾಯಿ ಉಕ್ಕಿ ಬಾ' ಎಂದು ಘೋಷಣೆ ಕೂಗಿದರು.

ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಭಕ್ತರು, ಸಾಂಪ್ರದಾಯಿಕ ದಿರಿಸು ತೊಟ್ಟು, ಬುಧವಾರ ತಡರಾತ್ರಿಯಿಂದಲೇ ಜಿನುಗು ಮಳೆಯ ನಡುವೆ, ಭಾಗಮಂಡಲದಿಂದ ತಲಕಾವೇರಿಯವರೆಗೆ, ಕಾವೇರಿ ಮಾತೆಯ ಹಾಡುಗಳನ್ನು ಹಾಡುತ್ತಾ ಬರಿಗಾಲಿನಲ್ಲಿ ಪಾದಯಾತ್ರೆ ನಡೆಸಿದರು. ಕೊರೆಯುವ ಚಳಿಯ ನಡುವೆ ಬೆಟ್ಟ ಹತ್ತಿ ಖುಷಿಪಟ್ಟರು.

'ಪೂರ್ವ ನಿಗದಿಯಂತೆ 7.40ರ ಬದಲಿಗೆ 7.41ಕ್ಕೆ ತೀರ್ಥೋದ್ಭವವಾಯಿತು' ಎಂದು ಕೆಲವು ಭಕ್ತರು ಪ್ರತಿಪಾದಿಸಿದರು. ಈ ಕುರಿತು ಮಾತನಾಡಿದ ತಲಕಾವೇರಿ ದೇವಾಲಯದ ತಕ್ಕ ಮುಖ್ಯಸ್ಥ ಕೋಡಿ ಮೋಟಯ್ಯ, 'ಶಾಸ್ತ್ರೋಕ್ತವಾಗಿ ಈ ಹಿಂದೆ ನಿಗದಿ ಮಾಡಿದ ಸಮಯಕ್ಕೆ ಸರಿಯಾಗಿಯೇ ತೀರ್ಥೋದ್ಭವವಾಗಿದೆ. ಎಲ್ಲವೂ ಒಳ್ಳೆಯದಾಗಲಿದೆ ಎಂಬ ನಿರೀಕ್ಷೆ ಇಟ್ಟುಕೊಂಡಿದ್ದೇವೆ' ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು, ಮುಖ್ಯಮಂತ್ರಿ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, ಶಾಸಕರಾದ ಡಾ.ಮಂತರ್ ಗೌಡ, ಸುಜಾ ಕುಶಾಲಪ್ಪ ಭಾಗವಹಿಸಿದ್ದರು.

ಭಾಗಮಂಡಲದಿಂದ ತಲಕಾವೇರಿಯವರೆಗೆ ನಸುಕಿನಲ್ಲಿ ಉಂಟಾದ ಸಂಚಾರದಟ್ಟಣೆಯಿಂದ ಭಕ್ತರು ಪರದಾಡಿದರು. ಪೊಲೀಸರೂ ವಾಹನ ಇಳಿದು ಭಕ್ತರ ನಡುವೆ ಕಾಲ್ನಡಿಗೆಯಲ್ಲೇ ಬೆಟ್ಟ ಹತ್ತಿ ದೇಗುಲ ತಲುಪಿದರು.

'ಶಿಕ್ಷಣ ಕ್ಷೇತ್ರಕ್ಕೆ ಮಾನಸಿಕ ಆರೋಗ್ಯ ನೀತಿ'

ವಿದ್ಯಾರ್ಥಿಗಳ ಸಮಸ್ಯೆ ಪರಿಹರಿಸಲು ಇದು ಅಗತ್ಯ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶ್ವವಿದ್ಯಾಲಯಗಳು, ಸರ್ಕಾರಿ ಮತ್ತು ಖಾಸಗಿ ಕಾಲೇಜುಗಳಲ್ಲಿ ಮಾನಸಿಕ ಆರೋಗ್ಯ ಮತ್ತು ತಾರತಮ್ಯ ವಿರೋಧಿ ನೀತಿ ರೂಪಿಸುವ ಅಗತ್ಯವಿದೆ' ಎಂದು ಹೈಕೋರ್ಟ್ ಸಲಹೆ ನೀಡಿದೆ.

'ಇಂತಹ ನೀತಿಯಿಂದ ವಿದ್ಯಾರ್ಥಿಗಳ ಜೀವನದಲ್ಲಿ ಎದುರಾಗಬಹುದಾದ ಗಂಭೀರ ಮತ್ತು ಹಾನಿಕಾರಕ ಪರಿಣಾಮಗಳನ್ನು ತಡೆಗಟ್ಟುವುದರ ಜತೆಗೆ, ಅವರ ಸಮಸ್ಯೆಗಳನ್ನು ಸೂಕ್ತ ರೀತಿಯಲ್ಲಿ ಬಗೆಹರಿಸಲು ಸಹಾಯಕವಾಗುತ್ತದೆ' ಎಂದು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಅಂತೆಯೇ, ಈ ನೀತಿ ರೂಪಿಸುವ ಮತ್ತು ಅನುಷ್ಠಾನಗೊಳಿಸುವಲ್ಲಿ ಮುಂದಡಿ ಇರಿಸಿರುವ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಕೈಗೊಂಡ ಕ್ರಮಗಳನ್ನು ನ್ಯಾಯಪೀಠ ಶ್ಲಾಘಿಸಿದೆ.

'ನೀತಿ ನಿರೂಪಣೆಯ ನಿಟ್ಟಿನಲ್ಲಿ ಕೇಂದ್ರ, ರಾಜ್ಯ ಸರ್ಕಾರಗಳಾಗಲೀ ಅಥವಾ ಸಂಬಂಧಿಸಿದ ವಿಶ್ವವಿದ್ಯಾಲಯ, ಇಲ್ಲವೇ ವಿಶ್ವವಿದ್ಯಾಲಯ ಅನುದಾನ ಆಯೋಗವಾಗಲೀ (ಯುಜಿಸಿ) ಯಾವುದೇ ನೀತಿ ರೂಪಿಸಿಲ್ಲ' ಎಂಬ ಅಂಶವನ್ನು ಉಲ್ಲೇಖಿಸಿರುವ ನ್ಯಾಯಪೀಠ; 'ಮಾನಸಿಕ ಆರೋಗ್ಯ ಮತ್ತು ತಾರತಮ್ಯ ವಿರೋಧಿ ನೀತಿ ರೂಪಿಸುವ ಜರೂರು ಇದೆ' ಎಂದು ಹೇಳಿದೆ.

'ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳು ಮತ್ತು ಸಾಮಾಜಿಕವಾದ ಅಸಹಜ ನಡವಳಿಕೆಗಳು ವಿದ್ಯಾರ್ಥಿಯ ಕುಟುಂಬ, ಶಿಕ್ಷಕ ವೃಂದ ಮತ್ತು ವಿದ್ಯಾರ್ಥಿ ಸಮುದಾಯವನ್ನೂ ಒಳಗೊಂಡಂತೆ ಎಲ್ಲರ ಮೇಲೂ ಕೆಟ್ಟ ಪರಿಣಾಮ ಬೀರುತ್ತವೆ. ಹಾಗಾಗಿ, ಅಂತಹವರ ನಡವಳಿಕೆ ಕುರಿತು ಕಾಳಜಿ ಹೊಂದುವುದರ ಜತೆಗೆ, ಅವರೊಂದಿಗೆ ಸೂಕ್ಷ್ಮವಾಗಿ ವ್ಯವಹರಿಸಬೇಕಾದ ಅನಿವಾರ್ಯತೆ ಇರುತ್ತದೆ' ಎಂದು ನ್ಯಾಯಪೀಠ ಹೇಳಿದೆ.

ಏನಿದು ಪ್ರಕರಣ?: 'ನನ್ನನ್ನು ಕಾಲೇಜಿನಿಂದ ಅಮಾನತುಗೊಳಿಸಿ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ರವಾನಿಸಿರುವ ಇ-ಮೇಲ್ ರದ್ದುಗೊಳಿಸಬೇಕು. ತರಗತಿಯಲ್ಲಿ ಕೂತು ಪಾಠ ಕೇಳಲು ಅವಕಾಶ ಕಲ್ಪಿಸಲು ನಿರ್ದೇಶಿಸಬೇಕು' ಎಂದು ಕೋರಿ ಸ್ನಾತಕೋತ್ತರ ಪದವಿಯ ಪ್ರಥಮ ವರ್ಷದ ಲಿಂಗತ್ವ ಅಲ್ಪಸಂಖ್ಯಾತ ವಿದ್ಯಾರ್ಥಿಯೊಬ್ಬರು ಸಲ್ಲಿಸಿದ್ದ ಅರ್ಜಿಗೆ ಸಂಬಂಧಿತ ಪ್ರಕರಣದಲ್ಲಿ ನ್ಯಾಯಪೀಠ ಈ ನೀತಿ ಜಾರಿಗೆ ಬಂದಿರುವ ಬಗ್ಗೆ ನ್ಯಾಯಪೀಠ ಪ್ರಸ್ತಾಪಿಸಿದೆ.

ಟಿಡಿಯು, ಅಕ್ಷಯ ಪಾತ್ರ ಫೌಂಡೇಷನ್ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ ಮಕ್ಕಳಿಗೆ ಪೌಷ್ಟಿಕಾಂಶಯುಕ್ತ ಮಧ್ಯಾಹ್ನದ ಊಟ ಒದಗಿಸಲು ಟ್ರಾನ್ಸ್ ಡಿಸಿಪ್ಲಿನರಿ ಯುನಿವರ್ಸಿಟಿ ಆಫ್ ಹೆಲ್ತ್ ಸೈನ್ಸ್‌ಸ್ ಆ್ಯಂಡ್ ಟೆಕ್ನಾಲಜಿ (ಟಿಡಿಯು) ಮತ್ತು ಅಕ್ಷಯ ಪಾತ್ರ ಫೌಂಡೇಶನ್ (ಟಿಎಪಿಎಫ್) ಒಪ್ಪಂದ ಮಾಡಿಕೊಂಡಿವೆ.

ಶಾಲಾ ಮಕ್ಕಳ ಆರೋಗ್ಯ ಮತ್ತು ಕ್ಷೇಮ ನೋಡಿಕೊಳ್ಳುವುದರ ಜೊತೆಗೆ ಅವರಿಗೆ ಹೊಸ ಉತ್ಪನ್ನ ಅಭಿವೃದ್ಧಿ, ಸಂಶೋಧನೆ ಕುರಿತು ತರಬೇತಿಯನ್ನು ಒದಗಿಸಲಾಗುತ್ತದೆ.

ಭಾರತದಾದ್ಯಂತ ಲಕ್ಷಾಂತರ ಮಕ್ಕಳಿಗೆ ಮಧ್ಯಾಹ್ನದ ಊಟ ಒದಗಿಸುವ ಅಕ್ಷಯ ಪಾತ್ರ ಸಂಸ್ಥೆಯ ವ್ಯಾಪ್ತಿ ಮತ್ತು ಪೌಷ್ಟಿಕತೆ ಹಾಗೂ ಆರೋಗ್ಯ ವಿಜ್ಞಾನ ಕ್ಷೇತ್ರದಲ್ಲಿ ಟಿಡಿಯು ಹೊಂದಿರುವ ಪರಿಣತಿಯನ್ನು ಬಳಸಿಕೊಂಡು ಶಾಲಾ ಮಕ್ಕಳನ್ನು ಅಭಿವೃದ್ಧಿ ಪಥದಲ್ಲಿ ಕರೆದೊಯ್ಯುವ ಉದ್ದೇಶವಿದೆ ಎಂದು ಅಕ್ಷಯ ಪಾತ್ರ ಫೌಂಡೇಶನ್ ತಿಳಿಸಿದೆ.

ಈ ಒಪ್ಪಂದಕ್ಕೆ ಟಿಡಿಯುನ ರಿಜಿಸ್ಟ್ರಾರ್ ಮತ್ತು ಸಿಎಫ್‌ಒ ಅತುಲ್ ಕೆ. ಗುಪ್ತಾ ಮತ್ತು ಅಕ್ಷಯ ಪಾತ್ರ ಫೌಂಡೇಶನ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸನಿಲ್ ಭಾಸ್ಕರನ್ ಅವರು ಸಹಿ ಹಾಕಿದ್ದಾರೆ.

ಸೋಯಾ ಮತ್ತು ಅಕ್ಕಿಯಂತಹ ಸಸ್ಯಾಧಾರಿತ ಪ್ರೋಟಿನ್‌ಗಳನ್ನು ಬಳಸಿಕೊಂಡು ಕಡಿಮೆ ವೆಚ್ಚದಲ್ಲಿ ಪ್ರೋಟಿನ್‌ಯುಕ್ತ ಸಮೃದ್ಧ ಊಟವನ್ನು ಒದಗಿಸುವುದರ ಮೇಲೆ ಈ ಸಂಸ್ಥೆಗಳು ಗಮನ ಹರಿಸಲಿವೆ. ಸಿರಿ ಧಾನ್ಯಗಳನ್ನು ಬಳಸಿಕೊಂಡು ಪೌಷ್ಟಿಕ ಆಹಾರ ತಯಾರಿಸುವ ನಿಟ್ಟಿನಲ್ಲಿಯೂ ವಿಶ್ಲೇಷಣೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕಾಲುವೆಗೆ ಬಿದ್ದು ಬಾಲಕ ಸಾವು ಹಾವೇರಿ ಪೌರಾಯುಕ್ತ ಅಮಾನತು

ಪ್ರಜಾವಾಣಿ ವಾರ್ತೆ

ಹಾವೇರಿ: ಕಾಲುವೆ ನೀರಿನಲ್ಲಿ ಕೊಚ್ಚಿಕೊಂಡು ಹೋಗಿ ಬಾಲಕ ನಿವೇದನ್ ಗುಡಗೇರಿ (9) ಮೃತಪಟ್ಟಿರುವ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕರ್ತವ್ಯಲೋಪ ಆರೋಪದಡಿ ಹಾವೇರಿ ನಗರಸಭೆ ಪೌರಾಯುಕ್ತ ಪರಶುರಾಮ್ ಚಲವಾದಿ ಹಾಗೂ ಕಿರಿಯ ಆರೋಗ್ಯ ನಿರೀಕ್ಷಕ ರಮೇಶ ಮುಂಜೋಜಿ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ ಗುರುವಾರ ಆದೇಶ ಹೊರಡಿಸಿದ್ದಾರೆ.

ಬಾಲಕನ ತಂದೆ ದೂರು ನೀಡಿದ್ದು, ಹಾವೇರಿ ಶಹರ ಠಾಣೆ ಪೊಲೀಸರು ಅಸಹಜ ಸಾವು ದಾಖಲಿಸಿಕೊಂಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಳ್ಳುವ ಅಂಶಗಳು ದೂರಿನಲ್ಲಿಲ್ಲವೆಂದು ಹೇಳಿ ಮೌನವಾಗಿದ್ದಾರೆ. 'ಬಾಲಕನೇ ಸ್ವಯಂ ಪ್ರೇರಿತವಾಗಿ ಹೋಗಿ ಕಾಲುವೆಯಲ್ಲಿ ಕಾಲು ಜಾರಿ ಬಿದ್ದಿದ್ದಾನೆ' ಎಂಬುದಾಗಿ ಪೊಲೀಸರು ಹೇಳುತ್ತಿದ್ದಾರೆ.

ಪರಶುರಾಮ್ ಚಲವಾದಿ

ಅಮಾನತು ಆದೇಶ ಹೊರಡಿಸಿರುವ ಜಿಲ್ಲಾಧಿಕಾರಿ, '9ನೇ ವಾರ್ಡ್ ವ್ಯಾಪ್ತಿಯಲ್ಲಿ ಪೌರಾಯುಕ್ತರ ವಿನಂತಿ ಮೇರೆಗೆ ಆಲದ ಮರ ತೆರವು ಮಾಡಲಾಗಿತ್ತು. ನಂತರ, ಕಾಲುವೆ ಮೇಲೆ ಕಲ್ಲು ಮುಚ್ಚಿರಲಿಲ್ಲ. ಇದೇ ಕಾರಣಕ್ಕೆ ಕಾಲುವೆಯ ತೆರೆದ ಜಾಗದಲ್ಲಿ ಬಿದ್ದು ಬಾಲಕ ನಿವೇದನ್ ಮೃತಪಟ್ಟಿದ್ದಾನೆ. ಕಲ್ಲುಗಳನ್ನು ಮುಚ್ಚಿಸದೇ ಪೌರಾಯುಕ್ತ ಹಾಗೂ ಕಿರಿಯ ಆರೋಗ್ಯ ನಿರೀಕ್ಷಕ ಕರ್ತವ್ಯಲೋಪ ಎಸಗಿರುವುದು ಗೊತ್ತಾಗಿದೆ' ಎಂದು ತಿಳಿಸಿದ್ದಾರೆ.

ಶೂಟಿಂಗ್ ವಿಶ್ವಕಪ್: ಅನಂತ್ ಜೀತ್ ಸಿಂಗ್‌ಗೆ ಕಂಚು

ವಿವಿಯನ್ ಕಪೂರ್‌ಗೆ ಬೆಳ್ಳಿ ಪದಕ

ನವದೆಹಲಿ (ಪಿಟಿಐ): ವಿವಿಯನ್ ಕಪೂರ್ ಅವರು ಐಎಸ್‌ಎಸ್‌ಎಫ್ ವಿಶ್ವ ಕಪ್ ಶೂಟಿಂಗ್ ಫೈನಲ್‌ನ ಪುರುಷರ ಟ್ರ್ಯಾಪ್ ವಿಭಾಗದಲ್ಲಿ ಗುರುವಾರ ಬೆಳ್ಳಿಯ ಪದಕ ಗೆದ್ದುಕೊಂಡರೆ, ಸ್ಕೀಟ್ ಸ್ಪರ್ಧೆಯಲ್ಲಿ ಭಾರತದ ಇನ್ನೊಬ್ಬ ಸ್ಪರ್ಧಿ ಅನಂತ್ ಜೀತ್ ಸಿಂಗ್ ನರೂಕಾ ಅವರು ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಫೈನಲ್‌ನಲ್ಲಿ 44ರ ಸ್ಕೋರ್‌ನೊಡನೆ ಅವರು ಎರಡನೇ ಸ್ಥಾನ ಪಡೆದರು. ಚೀನಾದ ಯಿಂಗ್ ಖಿ ಚಿನ್ನ ಗೆದ್ದರೆ, ಟರ್ಕಿಯ ತೊಲ್ಗಾ ಎನ್.ಟುನ್ಸರ್ (35) ಅವರು ಕಂಚಿನ ಪದಕ ಜಯಿಸಿದರು.

ವಿವಿಯನ್ ಕಪೂರ್

ಕ್ವಾಲಿಫಿಕೇಷನ್ ಸುತ್ತಿನಲ್ಲಿ ಭಾರತದ ಶೂಟರ್ 125ರಲ್ಲಿ 120 ಸ್ಕೋರ್‌ನೊಡನೆ ಆರು ಮಂದಿಯಿದ್ದ ಫೈನಲ್‌ಗೆ ಪ್ರವೇಶ ಪಡೆದಿದ್ದರು.

ಇದಕ್ಕೆ ಮೊದಲು, ರಾಜಸ್ಥಾನದ 26 ವರ್ಷ ವಯಸ್ಸಿನ ನರೂಕಾ ಅವರು ಆರು ಮಂದಿಯ ಫೈನಲ್‌ನಲ್ಲಿ 43ರ ಸ್ಕೋರ್‌ನೊಡನೆ ಕಂಚಿನ ಪದಕ ಗೆದ್ದುಕೊಂಡರು. ಇಟಲಿಯ ಟಾಮಾರೊ ಕಾಸಂಡ್ರೊ ಮತ್ತು ಗೇಬ್ರಿಯಲ್ ರೊಸೆಟ್ಟಿ ಅವರು ಕ್ರಮವಾಗಿ 57 ಮತ್ತು 56 ರ ಸ್ಕೋರ್‌ನೊಡನೆ ಚಿನ್ನ ಮತ್ತು ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

ನರೂಕಾ ಅವರು ಕ್ವಾಲಿಫಿಕೇಷನ್ ಸುತ್ತಿನಲ್ಲಿ 125ರಲ್ಲಿ 121 ಅಂಕ ಕಲೆಹಾಕಿದ್ದರು.

ಸೋನಮ್ ಮಸ್ಕರ್ ಅವರು ಮಂಗಳವಾರ ಮಹಿಳೆಯರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದುಕೊಂಡರೆ, ಅಖಿಲ್ ಶಿಯೊರಾಣ್ ಅವರು ಬುಧವಾರ ನಡೆದ ಪುರುಷರ 50 ಮೀ. ರೈಫಲ್ 3 ಪೊಸಿಷನ್ಸ್‌ನಲ್ಲಿ ಕಂಚಿನ ಪದಕ ಗಳಿಸಿದ್ದರು.

ಮೈಸೂರು ರೇಸ್

ಚಾಂಪಿಯನ್ಸ್ ವೇ ಗೆಲ್ಲುವ ನಿರೀಕ್ಷೆ

ಗವರ್ನರ್ಸ್ ಕಪ್ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಚಾಂಪಿಯನ್ಸ್ ವೇ ಈ ರೇಸ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಡಾಲ್‌ಹೌಸಿ 1, ಶ್ಯಾಡೊಸಾಯ್ಮ್ 7, ದಿ ಗೋಲ್ಡನ್ ಕಪ್ 4
2ನೇ ರೇಸ್: ನ್ಯಾಚುರಲ್ ಫ್ಲೈ 3, ಫಿಫ್ಟಿ ಗ್ರ್ಯಾಂಡ್ 9, ಗೇಮ್ ಬಾಯ್ 10
3ನೇ ರೇಸ್: ಮಿಸ್ಟಿಕಲ್ ಮರ್ಲಿನ್ 9, ಗಿಲ್ಡೆಡ್ ಬಟರ್‌ಫ್ಲೈ 8, ಮ್ಯಾಜಿಕ್ ಸರ್ಕಲ್ 6
4ನೇ ರೇಸ್: ಮಿಸ್ಟಿಕ್ ಬಾಂಡ್ 2, ಕೋರ್ಟ್ ಜೆಸ್ಟರ್ 5, ಸಿಯೊಲ್‌ಫಾರ್ ಬುಲ್ಲೆಟ್ 4
5ನೇ ರೇಸ್: ಚಾಂಪಿಯನ್ಸ್ ವೇ 1, ಕಲಮಿಟ್ಸ 3, ಶುಬಾಂಕರ್ 5
6ನೇ ರೇಸ್: ಆರ್ಮರಿ 1, ಐರಿಶ್ ರಾಕ್‌ಸ್ಟಾರ್ 5, ಸ್ಕ್ವೇರ್ ದಿ ಸರ್ಕಲ್ 4
7ನೇ ರೇಸ್: ಓ ಮಂಚಲಿ 10, ನ್ಯಾಚುರಲ್ ಒನ್ 6, ನ್ಯಾಚುರಲ್ ಟಚ್ 9

ಉತ್ತಮ ಬೆಟ್: ಡಾಲ್‌ಹೌಸಿ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಏಷ್ಯನ್ ನೆಟ್‌ಬಾಲ್

ಬೆಂಗಳೂರಿನ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಗುರುವಾರ ಆರಂಭಗೊಂಡ 13ನೇ ಏಷ್ಯನ್ ನೆಟ್‌ಬಾಲ್ ಮಹಿಳಾ ಚಾಂಪಿಯನ್‌ಷಿಪ್‌ನ ಉದ್ಘಾಟನಾ ಸಮಾರಂಭದಲ್ಲಿ 14 ದೇಶಗಳ ಆಟಗಾರ್ತಿಯರು ತಮ್ಮ ರಾಷ್ಟ್ರಧ್ವಜದೊಂದಿಗೆ ಪಾಲ್ಗೊಂಡರು

ಬಿಎಫ್‌ಸಿಗೆ ಪಂಜಾಬ್ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಯಿಂಟ್ ಪಟ್ಟಿಯಲ್ಲಿ ಮೊದಲೆರಡು ಸ್ಥಾನದಲ್ಲಿರುವ ಬೆಂಗಳೂರು ಎಫ್‌ಸಿ ಮತ್ತು ಪಂಜಾಬ್ ಎಫ್‌ಸಿ ತಂಡಗಳು ಇಂಡಿಯನ್ ಸೂಪರ್ ಲೀಗ್‌ನ ಪಂದ್ಯದಲ್ಲಿ ಶುಕ್ರವಾರ ಮುಖಾಮುಖಿಯಾಗಲಿವೆ.

ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆಯುವ ಹಣಾಹಣಿಯಲ್ಲಿ ಸುನಿಲ್ ಚೆಟ್ರಿ ನಾಯಕತ್ವದ ಆತಿಥೇಯ ತಂಡ ಗೆಲುವಿನ ಓಟವನ್ನು ಮುಂದುವರಿಸುವ ಛಲದಲ್ಲಿದೆ.

ಬಿಎಫ್‌ಸಿ ತಂಡವು ತವರಿನಲ್ಲಿ ಆಡಿರುವ ಮೂರೂ ಪಂದ್ಯಗಳಲ್ಲಿ ಗೆಲುವು ಸಾಧಿಸಿದೆ. ಆದರೆ, ಮುಂಬೈನಲ್ಲಿ ನಡೆದ ಕೊನೆಯ ಪಂದ್ಯದಲ್ಲಿ ಆತಿಥೇಯ ತಂಡದ ವಿರುದ್ಧ ಗೋಲುರಹಿತವಾಗಿ ಡ್ರಾ ಮಾಡಿಕೊಂಡಿದೆ. ಒಟ್ಟಾರೆ 10 ಅಂಕ ಪಡೆದಿರುವ ಬಿಎಫ್‌ಸಿ ತಂಡವು ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಹ್ಯಾಟ್ರಿಕ್ ಗೆಲುವಿನ ಉತ್ಸಾಹದಲ್ಲಿರುವ ಪಂಜಾಬ್ ತಂಡವು ಆತಿಥೇಯರಿಗೆ ಪ್ರಬಲ ಸವಾಲೊಡ್ಡುವ ತವಕದಲ್ಲಿದೆ. ಆಡಿರುವ ಮೂರೂ ಪಂದ್ಯಗಳನ್ನು ಗೆದ್ದಿರುವ ಪಂಜಾಬ್ 9 ಅಂಕಗಳೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ.

ಮಹಿಳೆಯರ ಸುರಕ್ಷತೆಯ ಜಾಗೃತಿಗಾಗಿ ಶುಕ್ರವಾರದ ಪಂದ್ಯದಲ್ಲಿ ಬಿಎಫ್‌ಸಿ ತಂಡವು ಗುಲಾಬಿ ಬಣ್ಣದ ಜರ್ಸಿಯಲ್ಲಿ ಕಣಕ್ಕೆ ಇಳಿಯಲಿದೆ. 'ಲೌಡರ್ ದೆನ್ ಎವರ್' ಅಭಿಯಾನದ ಭಾಗವಾಗಿ ಕ್ರೀಡಾಂಗಣದ 'ಫ್ಯಾನ್‌ಝೋನ್'ನಲ್ಲಿ ಮಹಿಳೆಯರ ಭದ್ರತಾ ಸಹಾಯ ಕೇಂದ್ರವನ್ನು ಅಳವಡಿಸುವುದು ಸೇರಿದಂತೆ ಹಲವಾರು ಉಪಕ್ರಮಗಳನ್ನು ಕೈಗೊಳ್ಳಲಾಗಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ

ಕ್ರಿಕೆಟ್ ಅಭಿಮಾನಿಗಳಿಂದ ದೂರು, ಸಾಮಾಜಿಕ ಜಾಲತಾಣಗಳಲ್ಲಿ ಅಸಮಾಧಾನ

ಟಿಕೆಟ್ ಇದ್ದರೂ ಸಿಗದ ಪ್ರವೇಶ: ಪ್ರೇಕ್ಷಕರ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಯಾವುದೇ ಕ್ರಿಕೆಟ್ ಪಂದ್ಯ ನಡೆದರೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರೇಕ್ಷಕರು ಸೇರುತ್ತಾರೆ. ಇದೀಗ ಇಲ್ಲಿ ನಡೆಯುತ್ತಿರುವ ಭಾರತ ಮತ್ತು ನ್ಯೂಜಿಲೆಂಡ್ ನಡುವಣ ಟೆಸ್ಟ್ ಪಂದ್ಯ ವೀಕ್ಷಿಸಲು ಕೂಡ ಹಲವರು ಕ್ರೀಡಾಂಗಣಕ್ಕೆ ಲಗ್ಗೆ ಹಾಕುತ್ತಿದ್ದಾರೆ. ಆದರೆ ಅವರಿಗೆ ಕ್ರೀಡಾಂಗಣದಲ್ಲಿ ಸೂಕ್ತ ಸೌಲಭ್ಯಗಳು ಸಿಗುತ್ತಿಲ್ಲವೆಂಬ ಆರೋಪಗಳು ಕೇಳಿಬಂದಿವೆ.

ಪಂದ್ಯದ ಮೊದಲ ದಿನವಾದ ಬುಧವಾರ 500–600 ಜನರು ಸೇರಿದ್ದರು. ಆದರೆ ಮಳೆಯಿಂದಾಗಿ ದಿನದಾಟ ರದ್ದಾಗಿತ್ತು. ಗುರುವಾರ ಬೆಳಿಗ್ಗೆ ಪಂದ್ಯ ಆರಂಭವಾಗುವುದು ಖಚಿತವಾದಾಗ ಅಭಿಮಾನಿಗಳು ಕ್ರೀಡಾಂಗಣದತ್ತ ಧಾವಿಸಿದರು. ಬೆಳಿಗ್ಗೆ 7.45ರಿಂದಲೇ ಗೇಟ್‌ಗಳ ಮುಂದೆ ಸಾಲುಗಟ್ಟಿದ್ದರು. ಆದರೆ ಅವರಿಗೆ ಪ್ರವೇಶ ನೀಡಲು ಭದ್ರತಾ ಸಿಬ್ಬಂದಿ ನಿರಾಕರಿಸಿದರು.

ಭಾರತ ತಂಡದ ಅಭಿಮಾನಿಗಳು ಪ್ರಜಾವಾಣಿ ಚಿತ್ರ

9.15ಕ್ಕೆ ಆರಂಭವಾಗುವ ಪಂದ್ಯಕ್ಕೆ 8.50ರ ನಂತರ ಪ್ರವೇಶಕ್ಕೆ ಅವಕಾಶ ಮಾಡಿದರು.

'ಟಾಸ್ ಆಗಲು 10 ನಿಮಿಷ ಮತ್ತು ಪಂದ್ಯ ಆರಂಭಕ್ಕೆ 30 ನಿಮಿಷ ಇದ್ದಾಗಲೂ ಒಳಗೆ ಪ್ರವೇಶ ನೀಡಲಿಲ್ಲ. ಗೇಟ್ ಮುಂದೆ ನಿಲ್ಲಬೇಕಾಯಿತು' ಎಂದು ಪ್ರೇಕ್ಷಕರೊಬ್ಬರು ದೂರಿದರು.

'ಟೆಸ್ಟ್ ಪಂದ್ಯಗಳನ್ನು ನೋಡಲು ಜನರು ಬರುವುದೇ ಕಮ್ಮಿ. ಅಂತಹುದರಲ್ಲಿ ಆಯೋಜಕರು ಈ ರೀತಿ ಅನಾದರ ತೋರುವುದು ಸರಿಯಲ್ಲ. ಟಿಕೆಟ್ ಖರೀದಿಸಿದವರನ್ನೂ ಒಳಬಿಡುವುದಿಲ್ಲ ಎನ್ನುವುದು ಸರಿಯಲ್ಲ. ಭಾರತದಲ್ಲಿ ಟಿ20 ಕ್ರಿಕೆಟ್ ಪಂದ್ಯಗಳನ್ನು ನಾನು ನೋಡಿದ್ದೇನೆ. ಅವ್ಯವಸ್ಥೆಗಳಿಂದಾಗಿ ಬಹಳ ಕೆಟ್ಟ ಅನುಭವವಾಗಿದೆ' ಎಂದು ಇಎಸ್‌ಪಿಎನ್ ಫ್ಯಾನ್ ಎಂಗೇಜ್‌ಮೆಂಟ್ ಪೇಜ್‌ನಲ್ಲಿ ರಾಮಕೃಷ್ಣನ್ ಎಂಬ ಪ್ರೇಕ್ಷಕರು ಬರೆದಿದ್ದಾರೆ.

ಪ್ರೇಕ್ಷಕರಿಗೆ ಪ್ರವೇಶದ ತೊಂದರೆಯಾಗಿರುವುದರ ಕುರಿತು ಪ್ರತಿಕ್ರಿಯಿಸಿದ ಕೆಎಸ್‌ಸಿಎ ಅಧಿಕಾರಿಗಳು ಅದು ಪೊಲೀಸರಿಗೆ ಬಿಟ್ಟ ವಿಷಯ ಎಂದು ಹೇಳಿ ಜಾರಿಕೊಂಡರು.

ಎನ್ ಸ್ಟ್ಯಾಂಡ್‌ನಲ್ಲಿ ಕುರ್ಚಿಗಳ ಮೇಲೆ ದೂಳು, ಪಕ್ಷಿಗಳ ಹಿಕ್ಕೆಗಳು ಇರುವ ಚಿತ್ರವನ್ನು ಬುಧವಾರ ಪ್ರೇಕ್ಷಕರೊಬ್ಬರು ಎಕ್ಸ್ ಖಾತೆಯಲ್ಲಿ ಹಾಕಿದ್ದರು.

'ನಮ್ಮ ಸಿಬ್ಬಂದಿಯು ವಿಳಂಬ ಮಾಡಿಲ್ಲ. ಕ್ರೀಡಾಂಗಣದ ಆಡಳಿತಾಧಿಕಾರಿಗಳೂ ಪ್ರೇಕ್ಷಕರಿಗೆ ಪ್ರವೇಶ ನೀಡಲು ಹಸಿರು ನಿಶಾನೆ ನೀಡಿದ ಕೂಡಲೇ ನಾವು ಬಿಟ್ಟಿದ್ದೇವೆ. ಎಲ್ಲರನ್ನೂ ತಪಾಸಣೆ ಮಾಡಿ ಒಳಬಿಡಲಾಗಿದೆ' ಎಂದು ಡಿಸಿಪಿ ಶೇಖರ್ ಎಚ್ ಟೇಕ್ಕಣ್ಣವರ್ ಮಾಹಿತಿ ನೀಡಿದ್ದಾರೆ.

ಕ್ರೀಡಾಂಗಣದೊಳಗೆ ಶೌಚಾಲಯಗಳಲ್ಲಿ ಸ್ವಚ್ಛತೆ ಇಲ್ಲ, ತಿಂಡಿ ತಿನಿಸುಗಳು ಕೂಡ ದುಬಾರಿಯಾಗಿವೆ ಎಂದು ಹಲವರು ದೂರಿದ್ದಾರೆ.

ರಾಜ್ಯದ ಏಕೈಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಕೀರ್ಣ ಲೋಕಾರ್ಪಣೆಗೆ ಸಿದ್ಧ

12 ವರ್ಷದ ಬಳಿಕ ವಿ.ವಿಗೆ ಸ್ವಂತ ಕಟ್ಟಡ

• ಸುಧೀಂದ್ರ ಸಿ.ಕೆ.

ಮಾಗಡಿ: ತಾಲ್ಲೂಕಿನ ತಿಪ್ಪಸಂದ್ರ ಮರಡಿಗುಟ್ಟೆಯಲ್ಲಿ ನಿರ್ಮಾಣವಾಗುತ್ತಿರುವ ರಾಜ್ಯದ ಏಕೈಕ ಸಂಸ್ಕೃತ ವಿಶ್ವವಿದ್ಯಾಲಯದ ಕಟ್ಟಡ ಕಾಮಗಾರಿ 12 ವರ್ಷದ ಬಳಿಕ ಪೂರ್ಣಗೊಂಡಿದ್ದು, ಲೋಕಾರ್ಪಣೆಗೆ ಸಿದ್ಧವಾಗಿದೆ.

ನೂರು ಎಕರೆ ವಿಶಾಲ ಅರಣ್ಯ ಪ್ರದೇಶದಲ್ಲಿ ಸಂಸ್ಕೃತ ವಿ.ವಿ ತಲೆಯೆತ್ತಿ ನಿಂತಿದೆ. ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿ 75ರ ಮರಡಿಗುಟ್ಟೆ ಬಳಿ 100 ಎಕರೆ ಭೂಮಿಯನ್ನು 2012ರಲ್ಲಿ ಸಂಸ್ಕೃತ ವಿ.ವಿಗಾಗಿ ಮೀಸಲಿಡಲಾಗಿತ್ತು.

ಸಾಕಷ್ಟು ಅಡೆತಡೆಯು ಕಟ್ಟಡ ಪೂರ್ಣಗೊಳ್ಳಲು 12 ವರ್ಷ ಹಿಡಿದಿವೆ. 2022ರಲ್ಲಿ ಅಂದಿನ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ, ಸಚಿವರಾಗಿದ್ದ ಡಾ. ಅಶ್ವತ್ ನಾರಾಯಣ ಶಂಕುಸ್ಥಾಪನೆ ನೆರವೇರಿಸಿದ್ದರು.

ಎರಡು ವರ್ಷದ ಬಳಿಕ ಸರ್ಕಾರದ ₹30 ಕೋಟಿ ಅನುದಾನದಲ್ಲಿ 5 ಎಕರೆ

ಚಾಮರಾಜಪೇಟೆಯಲ್ಲಿರುವ ಸಂಸ್ಕೃತ ವಿ.ವಿ ಕಚೇರಿಯನ್ನು ತಿಪ್ಪಸಂದ್ರಕ್ಕೆ ಸ್ಥಳಾಂತರಿಸುವ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳಲಾಗುವುದು. ರಸ್ತೆ, ವಿದ್ಯುತ್, ಭದ್ರತೆ ಸೇರಿ ಅಗತ್ಯ ಸೌಕರ್ಯ ಕಲ್ಪಿಸಲಾಗುವುದು.

ಎಚ್.ಸಿ.ಬಾಲಕೃಷ್ಣ, ಮಾಗಡಿ ಶಾಸಕ

ಜಾಗದಲ್ಲಿ ವಿ.ವಿ ಆಡಳಿತ ಕಚೇರಿ, ವಿದ್ಯಾರ್ಥಿ ನಿಲಯ ಹಾಗೂ ನಾನಾ ವಿಭಾಗಗಳ ಕಚೇರಿಗಳ ಕಾಮಗಾರಿ ಪೂರ್ಣಗೊಳಿಸಲಾಗಿದೆ. ಸುಣ್ಣ, ಬಣ್ಣಗಳಿಂದ ಹೊಸ ಕಟ್ಟಡಗಳು ಕಂಗೊಳಿಸುತ್ತಿವೆ.

ವಿಳಂಬಕ್ಕೆ ಕಾರಣ: ವಿ.ವಿಗೆ ನೀಡಿದ್ದ ಭೂಮಿ ಅರಣ್ಯ ಇಲಾಖೆಗೆ ಸೇರಿತ್ತು. ಅದನ್ನು ಪಡೆಯಲು ಅರಣ್ಯ, ಉನ್ನತ ಶಿಕ್ಷಣ ಮತ್ತು ಕಂದಾಯ ಇಲಾಖೆಗಳ ಮಧ್ಯಸ್ಥಿಕೆಯಲ್ಲಿ ಸರ್ವೆ ಮಾಡಿ ಸಂಪುಟದ ಅನುಮೋದನೆ ಪಡೆದು ನೋಂದಣಿಗೆ ಸಮಯ ತೆಗೆದುಕೊಂಡಿತ್ತು.

ಮರಡಿಗುಟ್ಟೆ ಅರಣ್ಯ ಪ್ರದೇಶದ ಜಾಗದಲ್ಲಿ ಬೆಂಗಳೂರು-ಮಂಗಳೂರು ರೈಲ್ವೆ ಮಾರ್ಗ ಇದ್ದ ಕಾರಣ ರೈಲ್ವೆ ಇಲಾಖೆ ಜತೆ ಚರ್ಚಿಸಿ ಒಪ್ಪಂದಕ್ಕೆ ಬರಲು ಮತ್ತಷ್ಟು ವಿಳಂಬವಾಯಿತು.

ನೂತನ ಸಂಸ್ಕೃತ ವಿ.ವಿಯಲ್ಲಿ ಬೋಧನಾ ವಿಷಯಗಳಾದ ವೇದಾಂತ, ಭಾಷಾ ಶಾಸ್ತ್ರ, ಜೋತಿಷ, ಆಗಮ ಶಾಸ್ತ್ರ, ಆತ ಶಾಸ್ತ್ರ ಮತ್ತು ಆಯುರ್ವೇದ, ಯೋಗ ಶಾಖೆ ಇರಲಿವೆ. ಜತೆಗೆ ಬೋಧನಾ ವಿಭಾಗ, ಸಂಶೋಧನಾ ವಿಭಾಗ, ಪ್ರಚಾರ ಮತ್ತು ಮುದ್ರಣಾ ವಿಭಾಗ ಇರಲಿದೆ.

ಬಾಲಗಂಗಾಧರನಾಥ, ಪೇಜಾವರ ಮತ್ತು ಶಿವಕುಮಾರ ಶ್ರೀಗಳ ಹೆಸರಿನಲ್ಲಿ ಅಧ್ಯಯನ ಪೀಠಗಳು ಇರಲಿವೆ. ಮಠಗಳು ಇದಕ್ಕೆ ಆರ್ಥಿಕ ನೆರವು ನೀಡಲಿವೆ.

ವಿ.ವಿ ಹೊಸ ಕಟ್ಟಡವು ಕರ್ನಾಟಕ ಸೇರಿ ದೇಶದ ಸಂಸ್ಕೃತ ವಿವಿಗಳ ಪೈಕಿ 16ನೆಯದು. ಈ ಕಟ್ಟಡದಲ್ಲಿ ರಾಜ್ಯದ 31 ಸಂಸ್ಕೃತ ಕಾಲೇಜು, ಸಂಸ್ಕೃತ ವಿ.ವಿಗೆ ಸೇರಿದ 490 ಪಾಠಶಾಲೆ, 35 ಸಂಸ್ಕೃತ ವಿವಿ ಬೋಧನಾ ಶಾಖೆ, 11 ಸಂಸ್ಕೃತ ಅಧ್ಯಯನ ಕೇಂದ್ರ, 126 ವಿದೇಶಿಯ ಸಂಸ್ಕೃತ ಅಧ್ಯಯನ ಕೇಂದ್ರಗಳು ಈ ಕಟ್ಟಡದಲ್ಲಿ ಪ್ರತ್ಯೇಕವಾಗಿ ಆಡಳಿತ ನಿಯಂತ್ರಿಸಲಿವೆ.

ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರತ್ಯೇಕ 15 ಕೊಠಡಿ ಇರಲಿವೆ. 60 ವಿದ್ಯಾರ್ಥಿನಿಯರು ಸೇರಿ ಒಟ್ಟು 120 ವಿದ್ಯಾರ್ಥಿಗಳು ವ್ಯಾಸಂಗ ಮಾಡಬಹುದು.

ಮಾಗಡಿ ತಾಲ್ಲೂಕಿನ ತಿಪ್ಪಸಂದ್ರ ಮರಡಿಗುಟ್ಟೆಯಲ್ಲಿ ನಿರ್ಮಾಣಗೊಂಡಿರುವ ಸಂಸ್ಕೃತ ವಿ.ವಿ ಕಟ್ಟಡ

ಹದೆಗೆಟ್ಟ ರಸ್ತೆ; ಸಂಚಾರ ದುಸ್ತರ

ಪೀಣ್ಯದ ನಾಡಕೇರಪ್ಪ, ಭೈರವೇಶ್ವರ ಬಡಾವಣೆಗಳ ಕಥೆ

• ಪ್ರಸನ್ನ ಕುಮಾರ್ ಯಾದವ್

ಪೀಣ್ಯ ದಾಸರಹಳ್ಳಿ: ಮಂಡಿಯುದ್ದದ ಗುಂಡಿಗಳು, ರಸ್ತೆಯ ಮೇಲೆ ಹರಿಯುವ ಚರಂಡಿ ನೀರು, ಕಲ್ಲು ಪೊಟರೆಗಳಿಂದ ಕೂಡಿದ ರಸ್ತೆಯಲ್ಲಿ, ಎಲ್ಲಿ ಪಲ್ಟಿ ಹೊಡೆಯುತ್ತದೆಯೋ ಎಂದು ಆತಂಕದಿಂದ ವಾಹನ ಚಲಾಯಿಸುವ ಸವಾರರು...

ಇದು ಏಷ್ಯಾದ ಅತಿ ದೊಡ್ಡ ಕೈಗಾರಿಕಾ ಪ್ರದೇಶವಾಗಿರುವ 'ಪೀಣ್ಯ ಕೈಗಾರಿಕಾ ಪ್ರದೇಶ'ದ ನಡಿಕೇರಪ್ಪ ಬಡಾವಣೆ, ಭೈರವೇಶ್ವರ ನಗರದ ರಸ್ತೆಗಳ ಸದ್ಯದ ಸ್ಥಿತಿ ಇದು.

ಎರಡೂ ಪ್ರದೇಶಗಳಲ್ಲೂ ರಸ್ತೆಗಳು ಪೂರ್ಣವಾಗಿ ಹಾಳಾಗಿವೆ. ವಾಹನಗಳಷ್ಟೇ ಅಲ್ಲ, ಮನುಷ್ಯರೂ ಓಡಾಡದಂತಹ ಪರಿಸ್ಥಿತಿ ಇಲ್ಲಿ ಇದೆ. ದ್ವಿಚಕ್ರ ವಾಹನ ಸವಾರರು ಸಾಕಷ್ಟು ಬಾರಿ ಈ ರಸ್ತೆಯಲ್ಲಿ ಅಪಘಾತಕ್ಕೀಡಾಗಿದ್ದಾರೆ. ಇದು ಇಂದು ನಿನ್ನೆಯ ಕಥೆಯಲ್ಲ. 30 ವರ್ಷಗಳಿಂದ ಹೀಗೇ ಇದೆ' ಎಂದು ಉದ್ಯಮಿಗಳು ದೂರುತ್ತಾರೆ.

'ಈ ಕೈಗಾರಿಕಾ ಪ್ರದೇಶದಲ್ಲಿ 500ಕ್ಕೂ ಹೆಚ್ಚು ಸಣ್ಣ ಕೈಗಾರಿಕೆಗಳಿವೆ. ಮೂಲಸೌಕರ್ಯಗಳ ಕೊರತೆಯಿಂದಾಗಿ ನಿತ್ಯ ಕಾರ್ಖಾನೆಗಳಿಗೆ ಬರಲು ಕಾರ್ಮಿಕರು ಕಷ್ಟಪಡುತ್ತಾರೆ' ಎಂದು ಕೈಗಾರಿಕೆಗಳ ಮಾಲೀಕರು ಬೇಸರ ವ್ಯಕ್ತಪಡಿಸುತ್ತಾರೆ.

ಕುಮಾರ್

'ವಸ್ತುಗಳ ಸಾಗಣೆ ಕಷ್ಟ'

'ರಸ್ತೆಗಳು ಹದೆಗೆಟ್ಟಿರುವುದರಿಂದ ವಸ್ತುಗಳನ್ನು ಸುರಕ್ಷಿತವಾಗಿ ಸಾಗಿಸುವುದೇ ಕಷ್ಟವಾಗಿದೆ. ಎಷ್ಟೋ ಸಾರಿ ನಾವು ಕಳುಹಿಸಿದ ವಸ್ತುಗಳು ಹಾಳಾಗಿ ತಿರಸ್ಕೃತಗೊಳ್ಳುತ್ತವೆ. ಇದರಿಂದ ಮಾಲೀಕರಿಗೆ ತೀವ್ರ ನಷ್ಟವಾಗುತ್ತಿದೆ' ಎಂದು ಉದ್ಯಮಿ ಆರ್.ಕೆ.ಕುಮಾರ್ ಆತಂಕ ವ್ಯಕ್ತಪಡಿಸುತ್ತಾರೆ.

ವಿನೋದ್

'ಸೌಕರ್ಯ ಕಲ್ಪಿಸಿ'

'ಲಕ್ಷಾಂತರ ಕಾರ್ಮಿಕರ ಕುಟುಂಬಗಳಿಗೆ ಆಸರೆಯಾಗಿರುವ ಕೈಗಾರಿಕಾ ಪ್ರದೇಶದ ರಸ್ತೆಗಳ ಅಭಿವೃದ್ಧಿ ಬಗ್ಗೆ ಸರ್ಕಾರ ನಿರ್ಲಕ್ಷ್ಯವಹಿಸಿದೆ. ಮೂಲಸೌಕರ್ಯ ಒದಗಿಸಿದರೆ ನಾವು ಕೈಗಾರಿಕೆಗಳನ್ನು ಮುಂದುವರಿಸಬಹುದು' ಎಂದು ಉದ್ಯಮಿ ವಿನೋದ್ ತಿಳಿಸಿದರು.

ನಡಿಕೇರಪ್ಪ ಮತ್ತು ಭೈರವೇಶ್ವರ ನಗರದಲ್ಲಿ ಗುಂಡಿಬಿದ್ದ ರಸ್ತೆಯಲ್ಲಿ ಸಂಚರಿಸುತ್ತಿರುವ ಆಟೊ

ಹೃದಯ ಮರು ಚಾಲನೆ ದಿನ: ನಿಮ್ಹಾನ್ಸ್‌ನಲ್ಲಿ ಪಿಆರ್ ತರಬೇತಿ

ಬೆಂಗಳೂರು: ವಿಶ್ವ ಹೃದಯ ಮರು ಚಾಲನೆ ದಿನದ ಪ್ರಯುಕ್ತ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯಲ್ಲಿ (ನಿಮ್ಹಾನ್ಸ್) 200ಕ್ಕೂ ಅಧಿಕ ಮಂದಿಗೆ ಹೃದಯ, ಶ್ವಾಸಕೋಶ ಕಾಯಿಲೆಯ ಪ್ರಾಥಮಿಕ ಚಿಕಿತ್ಸೆಯ (ಸಿಪಿಆರ್) ಕುರಿತು ತರಬೇತಿ ನೀಡಲಾಯಿತು.

ಸಂಸ್ಥೆಯ ನರ್ಸಿಂಗ್ ವಿಭಾಗವು ನ್ಯೂರೊ ಅನಸ್ತೇಷಿಯಾ, ನ್ಯೂರೊ ಕ್ರಿಟಿಕಲ್ ಕೇರ್ ವಿಭಾಗದ ಸಹಯೋಗದಲ್ಲಿ ತರಬೇತಿ ಹಮ್ಮಿಕೊಂಡಿತ್ತು. ರೋಗಿಗಳ ಕಡೆಯವರಿಗೆ ಸಿಪಿಆರ್ ಮಹತ್ವ, ಕಾರ್ಯವಿಧಾನಗಳನ್ನು ತಿಳಿಸಿಕೊಡಲಾಯಿತು. ಮಾನವಾಕೃತಿಯ ಮಾದರಿಯ ಮೇಲೆ ಸಿಪಿಆರ್ ಪ್ರಾತ್ಯಕ್ಷಿಕೆ ನೀಡಲಾಯಿತು.

'ಹಠಾತ್ ಹೃದಯಾಘಾತದ ಸಂದರ್ಭ ದಲ್ಲಿ ವ್ಯಕ್ತಿಯನ್ನು ಪ್ರಾಣಾಪಾಯದಿಂದ ಪಾರು ಮಾಡಲು ಸಿಪಿಆರ್ ಸಹಾಯಕ. ಸಿಪಿಆರ್ ಪ್ರಕ್ರಿಯೆ ಯಾವ ರೀತಿ ಎಂಬುದು ಬಹುತೇಕರಿಗೆ ತಿಳಿದಿಲ್ಲ. ನಿಂತಿರುವ ಹೃದಯದ ಬಡಿತವನ್ನು ಪುನಃ ಪ್ರಾರಂಭವಾಗುವಂತೆ ಮಾಡುವ ಪ್ರಕ್ರಿಯೆಯೇ ಸಿಪಿಆರ್' ಎಂದು ವೈದ್ಯರು ತಿಳಿಸಿದರು.

ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಡಾ.ಕೆ.ಮುರಳೀಧರನ್, ಸ್ಥಾನಿಕ ವೈದ್ಯಾಧಿಕಾರಿ ಡಾ. ಶಶಿಧರ್ ಎಚ್.ಎನ್., ನ್ಯೂರೊ ಅನಸ್ತೇಷಿಯಾ ವಿಭಾಗದ ಮುಖ್ಯಸ್ಥ ಡಾ.ಶ್ರೀಗಣೇಶ್, ಪ್ರಾಧ್ಯಾಪಕರಾದ ಡಾ.ವಿ.ಜೆ.ರಮೇಶ್, ಡಾ.ಸಾಯಿ ಲಕ್ಷ್ಮೀ ಗಾಂಧಿ, ಡಾ.ಗೋಪಿಚಂದ್ರನ್ ಎಲ್. ಸಿಪಿಆರ್ ಬಗ್ಗೆ ಪ್ರಾದೇಶಿಕ ಭಾಷೆಯಲ್ಲಿ ಜಾಗೃತಿ ಪರಿಕರ ಬಿಡುಗಡೆ ಮಾಡಿದರು.

ನಿಮ್ಹಾನ್ಸ್ ಸಿಬ್ಬಂದಿ ಸಿಪಿಆರ್ ಬಗ್ಗೆ ತರಬೇತಿ ನೀಡಿದರು

ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್ ಅಭಿಮತ

'ಸ್ತ್ರೀಯರು ಮುಕ್ತವಾಗಿ ಓಡಾಡುವ ಸ್ಥಿತಿ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೆಣ್ಣು ಮಕ್ಕಳ ಮೇಲೆ ನಿರಂತರ ದಾಳಿ ನಡೆಯುತ್ತಿದ್ದು, ಈಗಲೂ ಮಧ್ಯ ರಾತ್ರಿಯಲ್ಲಿ ಅವರು ನಿರ್ಭಯದಿಂದ ಓಡಾಡುವ ಸ್ಥಿತಿಯಿಲ್ಲ' ಎಂದು ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್ ಅವರು ಗುರುವಾರ ಬೇಸರ ವ್ಯಕ್ತಪಡಿಸಿದರು.

ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಬಸವ ಸಮಿತಿ, ಕದಳಿ ಮಹಿಳಾ ವೇದಿಕೆ ಜಂಟಿಯಾಗಿ ನಗರದಲ್ಲಿ ಏರ್ಪಡಿಸಿದ್ದ ಶರಣೆ ಡಾ. ಲೀಲಾದೇವಿ ಆರ್. ಪ್ರಸಾದ್–92 'ಸಾರ್ಥಕ ಬದುಕಿನ ಸುಂದರ ಪಯಣ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಹೆಣ್ಣು ಮಕ್ಕಳು ಓಡಿಹೋಗಿರುವ, ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಮಾಧ್ಯಮಗಳಲ್ಲಿ ನಿತ್ಯ ವರದಿಗಳು ಪ್ರಕಟವಾಗುತ್ತಿವೆ. ಹೆಣ್ಣುಮಕ್ಕಳ ಭಾವನೆಗಳಿಗೆ ಮನ್ನಣೆ ಸಿಗುತ್ತಿಲ್ಲ. ಅವಳ ವಿರುದ್ಧ ಯಾವುದೇ ಅಸ್ತ್ರ ಸಿಗದಿದ್ದಲ್ಲಿ ಚಾರಿತ್ರ್ಯದ ಬಗ್ಗೆ ಮಾತನಾಡಲಾಗುತ್ತಿದೆ. ಇದು ಸಂಕಟವನ್ನು ಉಂಟುಮಾಡುತ್ತಿದೆ. ಸಮಾಜದಲ್ಲಿ ಹೆಣ್ಣು ಮಕ್ಕಳನ್ನು ನೋಡುವ ದೃಷ್ಟಿಕೋನ ಬದಲಾಯಿಸಿ, ಅವರಿಗೆ ಸೂಕ್ತ ರಕ್ಷಣೆ ಒದಗಿಸಬೇಕು' ಎಂದು ತಿಳಿಸಿದರು.

ಲೀಲಾದೇವಿ ಆರ್. ಪ್ರಸಾದ್ ಅವರ ಆತ್ಮಕಥೆ 'ಕಾಡಿ ಬೇಡದ ಬುತ್ತಿ' ಕೃತಿಯನ್ನು ಬಿಡುಗಡೆ ಮಾಡಿದ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್ ಅವರು, 'ಲೀಲಾದೇವಿ ಅವರು ರಾಜಕಾರಣದಲ್ಲಿ ಸ್ಥಿತಪ್ರಜ್ಞೆ ಪ್ರದರ್ಶಿಸಿದ್ದಾರೆ. ಅವರ ಹೋರಾಟ, ಸಾಮರ್ಥ್ಯ, ವಿದ್ವತ್ತು ಹಾಗೂ ಸಂಪರ್ಕಕ್ಕೆ ರಾಜಕೀಯದಲ್ಲಿ ಸೂಕ್ತ ಅವಕಾಶಗಳು ಸಿಕ್ಕಿಲ್ಲ' ಎಂದರು.

'ಈಚಿನ ದಿನಗಳಲ್ಲಿ ಸಾರ್ವಜನಿಕ ಬದುಕಿನಲ್ಲಿ ಇರುವುದು ಕಷ್ಟಸಾಧ್ಯ. ಚುನಾವಣೆಗಳಲ್ಲಿ ಜಾತಿ, ಹಣ ಕೆಲಸ ಮಾಡುತ್ತಿವೆ. ವಾಯು ಮಾಲಿನ್ಯ, ಶಬ್ದ ಮಾಲಿನ್ಯದ ಜತೆಗೆ ಮಾತಿನ ಮಾಲಿನ್ಯ ಸಮಾಜವನ್ನು ಆವರಿಸಿದೆ. ಲೀಲಾದೇವಿ ಅವರು ಪಕ್ಷ ರಾಜಕಾರಣಕ್ಕೆ ವಿದಾಯ ಹೇಳುವ ಸಮಯ ಬಂದಿದ್ದು, ಸಮಾಜಕ್ಕೆ ಅವರ ಮಾರ್ಗದರ್ಶನ ಅಗತ್ಯ' ಎಂದರು.

ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, 'ಈಗಿನ ರಾಜಕಾರಣದಲ್ಲಿ 4–5 ವರ್ಷಗಳಲ್ಲಿಯೇ ಹಗರಣಗಳು ರಾಜಕಾರಣಿಗಳನ್ನು ಅಂಟಿಕೊಳ್ಳುತ್ತವೆ. ಲೀಲಾದೇವಿ ಅವರು 68 ವರ್ಷಗಳಿಂದ ರಾಜಕಾರಣದಲ್ಲಿದ್ದಾರೆ. ಅವರ ರಾಜಕೀಯ ಜೀವನದಲ್ಲಿ ಒಂದೂ ಕಪ್ಪು ಚುಕ್ಕಿಯಿಲ್ಲ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸುತ್ತೂರಿನ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಥಣಿಯ ಮೋಟಗಿ ಮಠದ ಪ್ರಭು ಚನ್ನಬಸವ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಲೀಲಾದೇವಿ ಆರ್. ಪ್ರಸಾದ್ ಅವರನ್ನು ಸನ್ಮಾನಿಸಲಾಯಿತು. ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷೆ ಪ್ರಮೀಳಾ ಗರಡಿ, ಕೆ.ವಿ. ನಾಗರಾಜಮೂರ್ತಿ, ಸಿ. ಸೋಮಶೇಖರ್, ಪ್ರಭು ಚನ್ನಬಸವ ಸ್ವಾಮೀಜಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸುಮಂಗಲಿ ಸೇವಾಶ್ರಮದ ಸಂಸ್ಥಾಪಕಿ ಸುಶೀಲಮ್ಮ, ಬಿ.ಎಲ್. ಶಂಕರ್, ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ, ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನದ ಟ್ರಸ್ಟಿ ಪ್ರಮೀಳಾ ಪಾಲನೇತ್ರ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ಸಂಸ್ಕೃತಿ ಸಂಗಮ' ಪ್ರಶಸ್ತಿಗೆ ಸಾಧಕರ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ.ಸಿ.ಸೋಮಶೇಖರ-ಎನ್. ಸರ್ವಮಂಗಳಾ ಸಾಹಿತ್ಯ ಸೇವಾ ಪ್ರತಿಷ್ಠಾನ ನೀಡುವ 'ಸಂಸ್ಕೃತಿ ಸಂಗಮ–2024' ಪ್ರಶಸ್ತಿಗೆ ಬಸವರಾಜ ಸಬರದ (ವಚನ ಸಾಹಿತ್ಯ), ಕೃಷ್ಣ ಕೊಲ್ಹಾರ ಕುಲಕರ್ಣಿ (ದಾಸ ಸಾಹಿತ್ಯ), ಬಸವರಾಜ ನೆಲ್ಲಿಸರ (ಜಾನಪದ ಸಾಹಿತ್ಯ), ಜಯದೇವಿ ಜಂಗಮಶೆಟ್ಟಿ (ಸಂಗೀತ ಕ್ಷೇತ್ರ) ಅವರು ಆಯ್ಕೆಯಾಗಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದ ಪ್ರತಿಷ್ಠಾನದ ಅಧ್ಯಕ್ಷ ಸಿ.ಸೋಮಶೇಖರ, 'ಅ.20 ರಂದು (ಭಾನುವಾರ) ನಗರದ ಗಾಂಧಿ ಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ವಿ.ಸೋಮಣ್ಣ ಪ್ರಶಸ್ತಿ ಪ್ರದಾನ ಮಾಡುವರು. ಪ್ರಶಸ್ತಿ ತಲಾ ₹10 ಸಾವಿರ ನಗದು, ಪ್ರಶಸ್ತಿ ಫಲಕ, ಸರಸ್ವತಿ ವಿಗ್ರಹ ಒಳಗೊಂಡಿದೆ' ಎಂದರು.

'ಚಲನಚಿತ್ರ ನಿರ್ದೇಶಕ ಟಿ.ಎನ್. ಸೀತಾರಾಂ 'ಸಂಸ್ಕೃತಿ ಸಂಗಮ' ವಿಶೇಷ ಸಂಚಿಕೆ ಬಿಡುಗಡೆ ಮಾಡುವರು. ಬೆಳಗಾವಿಯ ನಾಗನೂರು ರುದ್ರಾಕ್ಷಿಮಠದ ಅಲ್ಲಮಪ್ರಭು ಸ್ವಾಮೀಜಿ ಸಾನಿಧ್ಯ ವಹಿಸಲಿದ್ದು, ಸಾಹಿತಿ ಹಂ.ಪ. ನಾಗರಾಜಯ್ಯ ಅಧ್ಯಕ್ಷತೆ ವಹಿಸುವರು' ಎಂದರು.



ಬಸವರಾಜ ಸಬರದ



ಕೃಷ್ಣ ಕೊಲ್ಹಾರ ಕುಲಕರ್ಣಿ

ಬಸವರಾಜ ನೆಲ್ಲಿಸರ

ಜಯದೇವಿ ಜಂಗಮಶೆಟ್ಟಿ

'ಸುಸ್ಥಿರ ಸಾರಿಗೆ– ವಾಸಯೋಗ್ಯ ಪ್ರದೇಶ' ವಿಶ್ವ ವಿಚಾರ ಸಂಕಿರಣ ಮುಂದಿನ ವರ್ಷ

ಬೆಂಗಳೂರು: 'ಸುಸ್ಥಿರ ಸಾರಿಗೆ ಮತ್ತು ವಾಸ ಯೋಗ್ಯ ಪ್ರದೇಶ' ಕುರಿತು ಪ್ರಥಮ ವಿಶ್ವ ವಿಚಾರ ಸಂಕಿರಣವನ್ನು ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಸಿವಿಲ್ ಎಂಜಿನಿಯರಿಂಗ್ ವಿಭಾಗ ಮತ್ತು ವಿಶೇಷ ಆಸಕ್ತಿ ಗುಂಪು (ಎಸ್‌ಐಜಿ) 2025ರ ಜೂನ್ 25ರಿಂದ ಮೂರು ದಿನ ಐಐಎಸ್‌ಸಿ ಜೆ.ಎನ್.ಟಾಟಾ ಸಭಾಂಗಣದಲ್ಲಿ ಏರ್ಪಡಿಸಿದೆ.

ತಜ್ಞರು, ನಗರ ಯೋಜಕರು, ಸಂಶೋಧಕರು ಮತ್ತು ಸಮುದಾಯದ ಮುಖಂಡರು ವಿಚಾರ ಸಂಕಿರಣದಲ್ಲಿ ಚರ್ಚಿಸುವರು. ಸುಸ್ಥಿರ ಸಾರಿಗೆ, ವಾಸಯೋಗ್ಯ ಪ್ರದೇಶಗಳ ಸವಾಲುಗಳು, ಹೊಸ ಪರಿಹಾರಗಳು, ಕಾರ್ಯತಂತ್ರ ಬಗ್ಗೆ ನಡೆಯಲಿದೆ. ಆಸಕ್ತರು ಈ ಕುರಿತ ಹೆಚ್ಚಿನ ಮಾಹಿತಿಗೆ ಮಾಹಿತಿಗೆ ಸಿಂಪೋಸಿಯಂ ವೆಬ್‌ಸೈಟ್: https://wsstl2025.iisc.ac.in ಅಥವಾ 91-80-2293-2939 ಸಂಪರ್ಕಿಸಬಹುದು.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ. ತಾ:ಬ.ಬಾಗೇವಾಡಿ, ಜಿ:ವಿಜಯಪುರ.

ದೂರವಾಣಿ:08426–281027.ಇಮೇಲ್:dam_division@rediffmail.com

ಸಂ:ಕೃಭಾಜನಿನಿ/ಆಆವಿ/ಡಿ.ಬಿ/ಟೆಂಡರ್/2024–25/2201 ದಿನಾಂಕ:15.10.2024

ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ವಿಭಾಗ ಆಲಮಟ್ಟಿ, ತಾ: ಬ.ಬಾಗೇವಾಡಿ ಇವರು "Providing Upstream underwater treatment to Masonry portion & Concrete portion below MDDL on upstream surface of Almatti Dam (Rehabilitation and Improvement Works to Almatti Dam Under World Bank aided DRIP Phase-II)" **Indent No. (KBJNL/2024-25/DA/WORK_INDENT1052) , Rs.2723.01 Lakhs,** Item rate basis, ದ್ವಿ–ಲಕೋಟೆಗಳಲ್ಲಿ NATIONAL OPEN COMPETITIVE PROCUREMENT ನಲ್ಲಿ ಅರ್ಹ ಬಿಡ್ಡುದಾರರುಗಳಿಂದ ಟೆಂಡರ್ ಆಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ–cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಸಲ್ಲಿಸಬಹುದಾಗಿದೆ. ಮೊದಲ ಲಕೋಟೆಯು ತಾಂತ್ರಿಕ ಬಿಡ್ಡದಾಗಿದ್ದು ಅಗತ್ಯವಿರುವ ದಾಖಲೆಗಳನ್ನು ಒಳಗೊಂಡಿದ್ದು ಎರಡನೇ ಲಕೋಟೆಯು ಆರ್ಥಿಕ ಬಿಡ್ಡಗಿದ್ದು ತಾಂತ್ರಿಕ ಬಿಡ್ಡನಲ್ಲಿ ಅರ್ಹರಾದವರ ಆರ್ಥಿಕ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು.

1) ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವೀಕರಿಸುವ ಕೊನೆಯ **ದಿನಾಂಕ:18.10.2024 ರಿಂದ 20.11.2024 ಸಾಯಂಕಾಲ 4.00 ಘಂಟೆಯವರೆಗೆ.**

2) **ಸ್ಥಳ ಭೇಟಿ** (Site visit) ಆಯೋಜಿಸಲಾಗುವ **ದಿನಾಂಕ: 28.10.2024** ರಂದು (ಆಲಮಟ್ಟಿ ಡ್ಯಾಮ್ ಸೈಟ್ ನಲ್ಲಿ)

3) ಪೂರ್ವಭಾವಿ ಸಭೆ (ಪ್ರೀಬಿಡ್ ಮೀಟಿಂಗ್) **ದಿನಾಂಕ: 04.11.2024 ಮುಂಜಾನೆ 11.00 ಘಂಟೆ.** ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು ಕಚೇರಿಯಲ್ಲಿ.

4) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:22.11.2024 ಮುಂಜಾನೆ 11.00 ಘಂಟೆಗೆ.**

5) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 25.11.2024 ಸಂಜೆ 4.00 ಘಂಟೆಗೆ.**

ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. https://kppp.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426–281027, e-mail: dam_division@rediffmail.com Contact no: Vithal, AE (8971361932)

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ.

ವಾಸಾಸಂಇ/ವಿಜಯಪುರ/334/ಕೆಎಸ್‌ಎಂಸಿಎ/2024–25

Infosys® Navigate your next

Infosys Limited

Regd. office : Electronics City, Hosur Road, Bengaluru 560 100, India.

CIN: L85110KA1981PLC013115
Website : www.infosys.com
Email : investors@infosys.com
Telephone : 91 80 2852 0261
Fax : 91 80 2852 0362

Q2 FY 25 Financial Results

Extract of the consolidated audited financial results of Infosys Limited and its subsidiaries for the quarter and half-year ended September 30, 2024 prepared in compliance with the Indian Accounting Standards (Ind AS)

(in ₹ crore, except per equity share data)

Particulars	Quarter ended September 30, 2024	Half-year ended September 30, 2024	Quarter ended September 30, 2023
Revenue from operations	**40,986**	**80,300**	**38,994**
Profit before tax	9,253	18,274	8,768
Profit for the period	6,516	12,890	6,215
Total comprehensive income for the period (comprising profit for the period after tax and other comprehensive income after tax)	7,210	13,551	6,199
Profit attributable to:			
Owners of the Company	6,506	12,874	6,212
Non-controlling interests	10	16	3
	6,516	**12,890**	**6,215**
Total comprehensive income attributable to:			
Owners of the Company	7,190	13,527	6,196
Non-controlling interest	20	24	3
	7,210	**13,551**	**6,199**
Paid-up share capital (par value ₹5/- each fully paid)	2,072	2,072	2,070
Other equity *#	86,045	86,045	73,338
Earnings per share (par value ₹5/- each)**			
Basic (in ₹ per share)	15.71	31.09	15.01
Diluted (in ₹ per share)	15.68	31.02	14.99

* Balances for the quarter and half-year ended September 30, 2024 represent balances as per the audited Balance Sheet as at March 31, 2024 and balances for the quarter ended September 30, 2023 represent balances as per the audited Balance Sheet as at March 31, 2023 as required by the SEBI (Listing and Other Disclosure Requirements) Regulations, 2015.

** EPS is not annualized for the quarter and half-year ended September 30, 2024 and quarter ended September 30, 2023.

\# Excludes non-controlling interest

1. **Notes pertaining to the current quarter**

a) The audited interim condensed consolidated financial statements for the quarter and half-year ended September 30, 2024 have been taken on record by the Board of Directors at its meeting held on October 17, 2024. **The statutory auditors, Deloitte Haskins & Sells LLP, have expressed an unmodified audit opinion**. The information presented above is extracted from the audited interim condensed consolidated financial statements. Those interim condensed consolidated financial statements are prepared in accordance with the Indian Accounting Standards (Ind AS) as prescribed under Section 133 of the Companies Act, 2013 read with Rule 3 of the Companies (Indian Accounting Standards) Rules, 2015 and relevant amendment rules thereafter.

b) **Update on employee stock grants**

The Board, on October 17, 2024, based on the recommendations of the Nomination and Remuneration Committee, approved the grant of 22,880 RSUs to six eligible employees under the 2015 Stock Incentive Compensation Plan effective November 1, 2024. The RSUs would vest equally over a period of two to four years and the exercise price will be equal to the par value of the share.

c) **Update on acquisition**

On July 17, 2024, Infosys Germany GmBH acquired 100% voting interests in in-tech Holding GmbH, leading provider of Engineering R&D services headquartered in Germany, for a consideration of EUR 465 million (₹4,213 crore).

2. **Information on dividends for the quarter and half-year ended September 30, 2024**

The Board of Directors declared an interim dividend of ₹21/- per equity share. The record date for the payment is October 29, 2024. The interim dividend will be paid on November 8, 2024. The interim dividend declared in the previous year was ₹18/- per equity share.

(in ₹)

Particulars	Quarter ended September 30, 2024	Half-year ended September 30, 2024	Quarter ended September 30, 2023
Dividend per share (par value ₹5 each)			
Interim dividend	21.00	21.00	18.00

3. **Audited financial results of Infosys Limited (Standalone information)**

(in ₹ crore)

Particulars	Quarter ended September 30, 2024	Half-year ended September 30, 2024	Quarter ended September 30, 2023
Revenue from operations	34,257	67,540	32,629
Profit before tax	9,407	17,535	8,517
Profit for the period	6,813	12,581	6,245

The above is an extract of the detailed format of the quarterly audited financial results filed with the stock exchanges under Regulation 33 of the SEBI (Listing and Other Disclosure Requirements) Regulations, 2015. The full format of the quarterly audited financial results are available on the stock exchange websites, www.nseindia.com and www.bseindia.com, and on the Company's website, www.infosys.com.

By order of the Board
for Infosys Limited
Sd/-
Salil Parekh
Chief Executive Officer and Managing Director

Bengaluru, India
October 17, 2024

Certain statements in this release concerning our future growth prospects, our future financial or operating performance, the McCamish cybersecurity incident and the related review and notification process are forward-looking statements intended to qualify for the 'safe harbor' under the Private Securities Litigation Reform Act of 1995, which involve a number of risks and uncertainties that could cause actual results or outcomes to differ materially from those in such forward-looking statements. The risks and uncertainties relating to these statements include, but are not limited to, risks and uncertainties regarding the execution of our business strategy, increased competition for talent, our ability to attract and retain personnel, increase in wages, investments to reskill our employees, our ability to effectively implement a hybrid working model, economic uncertainties and geo-political situations, technological disruptions and innovations such as Generative AI, the complex and evolving regulatory landscape including immigration regulation changes, our ESG vision, our capital allocation policy and expectations concerning our market position, future operations, margins, profitability, liquidity, capital resources, our corporate actions including acquisitions, the amount of any additional costs, including indemnities or damages or claims, resulting directly or indirectly from the McCamish cybersecurity incident and the outcome and effect of pending litigation. Important factors that may cause actual results or outcomes to differ from those implied by the forward-looking statements are discussed in more detail in our US Securities and Exchange Commission filings including our Annual Report on Form 20-F for the fiscal year ended March 31, 2024. These filings are available at www.sec.gov. Infosys may, from time to time, make additional written and oral forward-looking statements, including statements contained in the Company's filings with the Securities and Exchange Commission and our reports to shareholders. The Company does not undertake to update any forward looking statements that may be made from time to time by or on behalf of the Company unless it is required by law.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦
ಹಿರಿಮೆಯ ಗುಣವೆಂದರೆ ಅಹಂಕಾರವಿಲ್ಲದೆ ಬಾಳುವುದು.
-ತಿರುವಳ್ಳುವರ್

ಬೆಂಗಳೂರಿನಲ್ಲಿ 'ನಗರ ಮಹಾಪೂರ' ಬಿಬಿಎಂಪಿ ಆಡಳಿತ ವೈಫಲ್ಯವೇ ಕಾರಣ

ಬೆಂಗಳೂರು ಮಹಾನಗರವು ಆರು ತಿಂಗಳಲ್ಲಿ ಮೂರನೇ ಬಾರಿ ಪ್ರವಾಹ ಪರಿಸ್ಥಿತಿ ಎದುರಿಸಿದೆ. ಮೇ ತಿಂಗಳಲ್ಲಿ ಮುಂಗಾರುಪೂರ್ವ ಮಳೆ ಸುರಿದಾಗ ಒಮ್ಮೆ ಪ್ರವಾಹ ಉಂಟಾಗಿತ್ತು. ಆಗಸ್ಟ್‌ನಲ್ಲಿ ಮುಂಗಾರು ಮಳೆ ಹೆಚ್ಚು ಪ್ರಮಾಣದಲ್ಲಿ ಸುರಿದಾಗಲೂ ನಗರದ ಪೂರ್ವ ಭಾಗದಲ್ಲಿ ದೊಡ್ಡ ಪ್ರಮಾಣದಲ್ಲಿ ಪ್ರವಾಹ ಸೃಷ್ಟಿಯಾಗಿತ್ತು. ಈಗ ಮೂರನೇ ಬಾರಿ ಪ್ರವಾಹದಿಂದ ನಗರದ ಜನರು ಸಂಕಷ್ಟ ಎದುರಿಸುತ್ತಿದ್ದಾರೆ. ಸೋಮವಾರ ರಾತ್ರಿಯಿಂದ ಬುಧವಾರ ಬೆಳಿಗ್ಗೆಯವರೆಗೂ ಸುರಿದ ಮಳೆಗೆ ನಗರದ ಹಲವು ಭಾಗಗಳಲ್ಲಿ ರಾಜಕಾಲುವೆಗಳು ಉಕ್ಕಿ ಹರಿದು ರಸ್ತೆಗಳು ನದಿಗಳಂತಾದವು. ಅಂಡರ್‌ಪಾಸ್‌ಗಳಲ್ಲಿ ನೀರು ತುಂಬಿಕೊಂಡು ವಾಹನ ಸಂಚಾರಕ್ಕೆ ಅಡಚಣೆಯಾಯಿತು. ಹಲವೆಡೆ ತಗ್ಗು ಪ್ರದೇಶಗಳಲ್ಲಿನ ಮನೆಗಳು, ಅಪಾರ್ಟ್‌ಮೆಂಟ್‌ಗಳು, ವಾಣಿಜ್ಯ ಕಟ್ಟಡಗಳಿಗೆ ನೀರು ನುಗ್ಗಿತು. ಯಲಹಂಕದ ಕೇಂದ್ರೀಯ ವಿಹಾರ ಅಪಾರ್ಟ್‌ಮೆಂಟ್ ಮತ್ತು ಹೊರಮಾವು ಬಳಿಯ ಸಾಯಿ ಬಡಾವಣೆಯ ಸಂಪೂರ್ಣ ಜಲಾವೃತವಾಗಿದ್ದವು. ಈ ಎರಡೂ ಕಡೆ ಜನರ ಸಂಚಾರ, ಕುಡಿಯುವ ನೀರು ಪೂರೈಕೆಯಂತಹ ಕೆಲಸಕ್ಕೆ ಟ್ರ್ಯಾಕ್ಟರ್‌ಗಳ ಮೊರೆ ಹೋಗಬೇಕಾಯಿತು. ಅಲ್ಲಿ ಪರಿಸ್ಥಿತಿ ಇನ್ನೂ ಸುಧಾರಿಸಿಲ್ಲ. ಈ ಬಾರಿಯೂ ದಿನವೊಂದರಲ್ಲಿ ಸುರಿದ ಮಳೆಯ ಗರಿಷ್ಠ ಪ್ರಮಾಣ 10 ಸೆಂಟಿಮೀಟರ್ ದಾಟಿಲ್ಲ. ಆದರೂ, 'ನಗರ ಮಹಾಪೂರ' ಸೃಷ್ಟಿಯಾಗಿ ನಿವಾಸಿಗಳು ಯಾತನೆ ಅನುಭವಿಸುವಂತಾಯಿತು. ಬಿಬಿಎಂಪಿ ವ್ಯಾಪ್ತಿಯ ಹಲವು ಪ್ರದೇಶಗಳಲ್ಲಿ ಇಂತಹ ಸ್ಥಿತಿ ಉಂಟಾಗುತ್ತಿದ್ದಕ್ಕೆ ಮಳೆಗಾಲವನ್ನು ಎದುರಿಸಲು ಸಮರ್ಪಕವಾಗಿ ಸಿದ್ಧತೆ ಮಾಡಿಕೊಳ್ಳುವಲ್ಲಿ ಪಾಲಿಕೆ ಆಡಳಿತವು ವಿಫಲವಾಗಿರುವುದೇ ಕಾರಣ. 'ಮಳೆಗಾಲವನ್ನು ಎದುರಿಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ' ಎಂದು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹಲವು ಬಾರಿ ಹೇಳಿದ್ದರು. ಆದರೆ, ಆರು ತಿಂಗಳ ಅವಧಿಯಲ್ಲಿ ಮೂರು ಬಾರಿ ಉಂಟಾದ ಪ್ರವಾಹವು ಬಿಬಿಎಂಪಿಯ ಮಳೆಗಾಲದ ಸಿದ್ಧತೆಯು ಬಾಯಿ ಮಾತಿಗೆ ಸೀಮಿತವಾಗಿತ್ತು ಎಂಬುದನ್ನು ಜಾಹೀರುಗೊಳಿಸಿದೆ.

ಮಳೆ ಸುರಿದಾಗಲೆಲ್ಲ ಜನಜೀವನ ಅಸ್ತವ್ಯಸ್ತಗೊಳ್ಳುವಂತಹ ಪರಿಸ್ಥಿತಿಯಿಂದ ನಗರವನ್ನು ಪಾರು ಮಾಡುವುದಕ್ಕೆ ಆದ್ಯತೆ ನೀಡಬೇಕಿದೆ

ಹೆಚ್ಚು ಮಳೆ ಬಿದ್ದಾಗ ಜಗತ್ತಿನ ಎಲ್ಲ ದೊಡ್ಡ ನಗರಗಳಲ್ಲೂ ಪ್ರವಾಹ ಸ್ಥಿತಿ ಉಂಟಾಗುತ್ತಿದೆ ಎಂಬ ಸಬೂಬು ಮುಂದಿಟ್ಟು ವೈಫಲ್ಯ ಮುಚ್ಚಿಕೊಳ್ಳಲು ಅಧಿಕಾರಸ್ಥರು ಪ್ರತಿ ಬಾರಿಯೂ ಪ್ರಯತ್ನಿಸುತ್ತಾರೆ. ಆದರೆ, ಬೆಂಗಳೂರಿನಲ್ಲಿ ಸಾಧಾರಣ ಮಳೆಯಿಂದಲೂ ಕೆಲವೆಡೆ ಜನಜೀವನ ಅಸ್ತವ್ಯಸ್ತ-ಗೊಳ್ಳುವಂತಹ ಸ್ಥಿತಿ ಇದೆ. ಪ್ರವಾಹ ಪರಿಸ್ಥಿತಿ ಎದುರಿಸುವ ಮತ್ತು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವ ವಿಷಯದಲ್ಲಿ ಯಾವುದೇ ಸಬೂಬು ಸಮರ್ಥನೀಯವಲ್ಲ. ಬೆಂಗಳೂರು ನಗರವು ಎತ್ತರದ ದಿಣ್ಣೆಗಳು ಹಾಗೂ ತಗ್ಗು ಪ್ರದೇಶಗಳ ಮಿಶ್ರಣದಿಂದ ಕೂಡಿದೆ. ಎತ್ತರದ ಪ್ರದೇಶಗಳಲ್ಲಿ ಬಿದ್ದ ಮಳೆಯ ನೀರು ತಗ್ಗುಪ್ರದೇಶಕ್ಕೆ ಹರಿದು, ಅಲ್ಲಿಂದ ರಾಜಕಾಲುವೆಗಳ ಮೂಲಕ ಕೆರೆಗಳನ್ನು ತಲುಪುತ್ತಿತ್ತು. ಆದರೆ, ಬಹುತೇಕ ರಾಜಕಾಲುವೆಗಳು ಒತ್ತುವರಿಯಾಗಿದ್ದು, ಹೂಳು ತುಂಬಿಕೊಂಡು ಕಿರಿದಾಗಿವೆ. ಸುಮಾರು 2,000 ಸ್ಥಳಗಳಲ್ಲಿ ರಾಜಕಾಲುವೆಗಳ ಒತ್ತುವರಿ ತೆರವು ಕಾರ್ಯ ವರ್ಷದಿಂದಲೂ ಬಾಕಿ ಉಳಿದಿದೆ. ಈ ವರ್ಷ ಮಳೆಗಾಲಕ್ಕೂ ಮುನ್ನ ಚರಂಡಿಗಳು, ದ್ವಿತೀಯ ಹಂತದ ಕಾಲುವೆಗಳು ಮತ್ತು ರಾಜಕಾಲುವೆಗಳಲ್ಲಿ ಹೂಳು ತೆಗೆಯುವ ಕೆಲಸವೂ ಸಮರ್ಪಕವಾಗಿ ನಡೆದಿಲ್ಲ. ಕೆಲವೆಡೆ ತೆಗೆದ ಹೂಳನ್ನು ಅಲ್ಲಿಯೇ ರಾಶಿ ಹಾಕಿದ್ದರಿಂದ ಮಳೆ ಸುರಿದಾಗ ಅದು ಮತ್ತೆ ಕಾಲುವೆಗಳನ್ನು ಸೇರಿದೆ. ಕೆರೆಗಳ ಒತ್ತುವರಿ ಮುಂದುವರಿದಿರುವುದು ಹಾಗೂ ಕೆರೆಗಳ ಅಂಗಳಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ಅಂಕುಶ ಹಾಕದಿರುವುದು ಕೂಡ ಸಮಸ್ಯೆ ಬಿಗಡಾಯಿಸಲು ಕಾರಣ ಎಂಬುದು ನಿರ್ವಿವಾದ. ವೈಟ್‌ಫೀಲ್ಡ್ ಸುತ್ತಮುತ್ತಲಿನ ಪ್ರದೇಶ, ಯಲಹಂಕ ಸೇರಿದಂತೆ ಕೆಲವು ಭಾಗಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಪದೇ ಪದೇ ಪ್ರವಾಹ ಸ್ಥಿತಿ ಉಂಟಾಗುತ್ತಿದೆ. ಪ್ರವಾಹ ಉಂಟಾದಾಗ ಮಾತ್ರ ಅಧಿಕಾರಿಗಳು ಎಚ್ಚರಗೊಂಡು ಸ್ಥಳದಲ್ಲಿ ಕಾಣಿಸಿಕೊಳ್ಳುತ್ತಾರೆ. ಪ್ರವಾಹ ತಡೆಗೆ ದೀರ್ಘಕಾಲೀನ ಪರಿಹಾರ ಹುಡುಕುವಲ್ಲಿ ಬಿಬಿಎಂಪಿ ಸರಿಯಾದ ಪ್ರಯತ್ನವನ್ನೇ ಮಾಡಿಲ್ಲ ಎಂಬುದಕ್ಕೆ ಈಗಿನ ಪರಿಸ್ಥಿತಿಯೇ ಪುರಾವೆ ಒದಗಿಸುತ್ತಿದೆ.

ಸುಮಾರು 830 ಚದರ ಕಿ.ಮೀ. ವಿಸ್ತೀರ್ಣದಲ್ಲಿರುವ ಬಿಬಿಎಂಪಿಯ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಿ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ' ರಚಿಸಲು ಡಿ.ಕೆ. ಶಿವಕುಮಾರ್ ಮುಂದಾಗಿದ್ದಾರೆ. 'ಬ್ರ್ಯಾಂಡ್ ಬೆಂಗಳೂರು' ಹೆಸರಿನಲ್ಲಿ ಬೃಹತ್ ಯೋಜನೆಗಳನ್ನೂ ಘೋಷಿಸುತ್ತಿದ್ದಾರೆ. ಪದೇ ಪದೇ ಜನರನ್ನು ಕಾಡುವ ಪ್ರವಾಹ ಸ್ಥಿತಿ ನಿಯಂತ್ರಣದ ವಿಷಯ ಬಿಬಿಎಂಪಿಯ ಆದ್ಯತಾ ಪಟ್ಟಿಯಿಂದಲೇ ಬದಿಗೆ ಸರಿದಂತೆ ಭಾಸವಾಗುತ್ತಿದೆ. ಸಾವಿರಾರು ಕೋಟಿ ರೂಪಾಯಿ ಮೊತ್ತದ ಯೋಜನೆಗಳನ್ನು ಘೋಷಿಸಿ, ಕಾರ್ಯಗತಗೊಳಿಸುವುದಕ್ಕೂ ಮುನ್ನ ಬಿಬಿಎಂಪಿಯು ಒಂದು ಬಾರಿ ಯೋಚಿಸಬೇಕಿದೆ. ಮಳೆ ಸುರಿದಾಗಲೆಲ್ಲ ಜನಜೀವನ ಅಸ್ತವ್ಯಸ್ತಗೊಳ್ಳುವಂತಹ ಪರಿಸ್ಥಿತಿಯಿಂದ ನಗರವನ್ನು ಪಾರು ಮಾಡುವುದು ಆದ್ಯತೆ ಆಗಬೇಕಿದೆ. ಬೆಂಗಳೂರು ನಗರವನ್ನು ಪದೇ ಪದೇ ಕಾಡುತ್ತಿರುವ 'ನಗರ ಮಹಾಪೂರ'ದಂತಹ ಸಮಸ್ಯೆಗಳ ನಿವಾರಣೆಗೆ ದೃಢವಾದ ಪ್ರಯತ್ನ ಮಾಡಬೇಕಿದೆ. ಬಿಬಿಎಂಪಿಯಲ್ಲಿ ಚುನಾಯಿತ ಪ್ರತಿನಿಧಿಗಳ ಆಡಳಿತ ಇಲ್ಲದಿರುವುದೂ ಈಗಿನ ದುರವಸ್ಥೆಗೆ ಒಂದು ಕಾರಣವಾಗಿರಬಹುದು. ರಾಜಕಾಲುವೆಗಳ ಒತ್ತುವರಿ ತೆರವು, ಹೂಳು ತೆಗೆಯುವುದು ಸೇರಿದಂತೆ ಪ್ರವಾಹ ನಿಯಂತ್ರಣಕ್ಕೆ ಪೂರಕವಾದ ಎಲ್ಲ ಕೆಲಸಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕು. ಈ ವಿಷಯದಲ್ಲಿ ಬಿಬಿಎಂಪಿಯನ್ನಷ್ಟೇ ಹೊಣೆ ಮಾಡಿದರೆ ಸಾಲದು, ರಾಜ್ಯ ಸರ್ಕಾರವೂ ಜವಾಬ್ದಾರಿ ತೆಗೆದುಕೊಳ್ಳಬೇಕು.

ದಿನದ ಟ್ವೀಟ್

ಸಮಾಜ ಎತ್ತ ಸಾಗುತ್ತಿದೆ?

ಆಘಾತಕಾರಿ! ಛತ್ತೀಸ್‌ಗಢದ 17 ವರ್ಷದ ಹುಡುಗನೊಬ್ಬ ಸಾಮಾಜಿಕ ಜಾಲತಾಣದಲ್ಲಿ ತನ್ನ ಸ್ನೇಹಿತನ ಹೆಸರಿನಲ್ಲಿ ಖಾತೆ ತೆರೆದು, 19 ವಿಮಾನಗಳಿಗೆ ಹುಸಿ ಬಾಂಬ್ ಬೆದರಿಕೆ ಕರೆ ಮಾಡಿದ್ದ. ಸ್ನೇಹಿತನೊಂದಿಗೆ ಜಗಳವಾಡಿಕೊಂಡಿದ್ದ ಒಂದೇ ಕಾರಣಕ್ಕೆ ಅವನನ್ನು ಸಿಕ್ಕಿಹಾಕಿಸಲು ಇಂತಹ ಕೃತ್ಯ ಎಸಗಿದ್ದ. ಇದು ಬಹಳಷ್ಟು ಗೊಂದಲಕ್ಕೆ ಕಾರಣವಾಯಿತಲ್ಲದೆ, ಕೆಲವರು ಇದಕ್ಕೆ ಕೋಮು ಬಣ್ಣವನ್ನೂ ಬಳಿಯಲು ಯತ್ನಿಸಿದರು.

ವೀಣಾ ಜೈನ್

ಕಿಡಿನುಡಿ

ಒಂದು ಮತಕ್ಷೇತ್ರದಲ್ಲಿ ಸಕಾಲಕ್ಕೆ ವೈದ್ಯಕೀಯ ಸೌಲಭ್ಯ ಸಿಗದೆ ಒಂದು ಜೀವ ಹೋದರೆ ಅದು ಸಹಜ ಸಾವಲ್ಲ, ಅದೊಂದು ಕೊಲೆ. ಆ ಕೊಲೆಯಲ್ಲಿ ಆ ಕ್ಷೇತ್ರದ ಎಲ್ಲ ಮತದಾರರು ಮತ್ತು ಜನಪ್ರತಿನಿಧಿಗಳು ಭಾಗಿಗಳು. ಯಾಕೆಂದರೆ, ನಮ್ಮ ಮತ ಚಲಾವಣೆಯಿಂದ ನಾವೇ ಅಂತಹ ಒಂದು ಕೆಟ್ಟ ವ್ಯವಸ್ಥೆ ಮಾಡಿಕೊಂಡಿರುತ್ತೇವೆ.

ಹೇಮಂತಕುಮಾರ ಗುತ್ತಲ

25 ವರ್ಷಗಳ ಹಿಂದೆ
ಸೋಮವಾರ, 18-10-1999

• 42 ಸಚಿವರಿಂದ ಪ್ರಮಾಣವಚನ ಸ್ವೀಕಾರ

ಬೆಂಗಳೂರು, ಅ. 17– ಎಸ್.ಎಂ. ಕೃಷ್ಣ ನೇತೃತ್ವದ ಕಾಂಗ್ರೆಸ್ ಸಂಪುಟದ ಸದಸ್ಯರಾಗಿ ಒಟ್ಟು 42 ಮಂದಿ ಸಚಿವರು ಇಂದು ಪ್ರಮಾಣ ವಚನ ಸ್ವೀಕರಿಸಿದರು.

ವಿಧಾನಸೌಧದ ಮುಖ್ಯ ದ್ವಾರದ ಎದುರು ನಿರ್ಮಿಸಲಾಗಿದ್ದ ವೇದಿಕೆಯಲ್ಲಿ ಸಂಪುಟ ದರ್ಜೆಯ 24 ಸಚಿವರು, ಸ್ವತಂತ್ರ ನಿರ್ವಹಣೆಯ 9 ಮಂದಿ ರಾಜ್ಯ ಸಚಿವರು ಮತ್ತು 9 ಜನ ರಾಜ್ಯ ಸಚಿವರು ಪ್ರಮಾಣ ವಚನ ಸ್ವೀಕರಿಸಿದರು. ಇದರಿಂದಾಗಿ ಗಜಗಾತ್ರದ ಸಂಪುಟ ಮತ್ತೊಮ್ಮೆ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಂತಾಯಿತು.

• ಭಾರತದ ಗಡಿಯಿಂದ ಪಾಕ್ ಸೇನೆ ವಾಪಸ್: ಮುಷರಫ್

ಇಸ್ಲಾಮಾಬಾದ್, ಅ. 17 (ಪಿಟಿಐ)– ಭಾರತ–ಪಾಕಿಸ್ತಾನ ಗಡಿಯುದ್ದಕ್ಕೂ ತಮ್ಮ ಸೇನೆಯನ್ನು ಹಿಂದಕ್ಕೆ ಕರೆಸಿಕೊಂಡು ಉದ್ರಿಕ್ತತೆಯನ್ನು ಶಮನಗೊಳಿಸುವುದಾಗಿ ಪಾಕಿಸ್ತಾನದ ಸೇನಾ ಆಡಳಿತದ ಮುಖ್ಯಸ್ಥ ಜನರಲ್ ಪರ್ವೇಜ್ ಮುಷರಫ್ ಇಂದು ಪ್ರಕಟಿಸಿದರು.

ಅವರು ದೇಶವನ್ನುದ್ದೇಶಿಸಿ ಪ್ರಸಾರ ಭಾಷಣ ಮಾಡುತ್ತ, ಭಾರತದೊಡನೆ ಎಲ್ಲ ವಿಷಯಗಳ ಬಗೆಗೂ 'ಫಲಿತಾಂಶ ಸಾಧ್ಯ'ವಾಗುವ ಮಾತುಕತೆಗಳನ್ನು ನಡೆಸಲು ತಮ್ಮ ಸರ್ಕಾರ ಸಿದ್ಧ ಎಂದು ಪ್ರಕಟಿಸಿದರು

50 ವರ್ಷಗಳ ಹಿಂದೆ
ಶುಕ್ರವಾರ, 18-10-1974

• ಸಂಗೀತಗಾರ ಚೆಂಬೈ ವೈದ್ಯನಾಥ ಭಾಗವತ್ ನಿಧನ

ಮದ್ರಾಸ್: ಖ್ಯಾತ ಕರ್ನಾಟಕ ಸಂಗೀತಗಾರ ಚೆಂಬೈ ವೈದ್ಯನಾಥ ಭಾಗವತ್ ಅವರು ಕೇರಳದ ಒಟ್ಟಪ್ಪಾಲಂನಲ್ಲಿ ಹೃದಯಾಘಾತದಿಂದ ಬುಧವಾರ ರಾತ್ರಿ 10-30 ಗಂಟೆಗೆ ನಿಧನರಾದರು.

ಇಲ್ಲಿರುವ ಅವರ ಸಂಬಂಧಿಕರಿಗೆ ಟೆಲಿಗ್ರಾಂ ಮೂಲಕ ಸಾವಿನ ಸುದ್ದಿ ಬಂದಿದೆ. ಅವರಿಗೆ 78 ವರ್ಷ ವಯಸ್ಸಾಗಿತ್ತು. ಅವರು ಪತ್ನಿ ಮತ್ತು ಪುತ್ರಿಯನ್ನು ಅಗಲಿದ್ದಾರೆ. ಭಾಗವತ್ ಅವರು ಒಟ್ಟಪ್ಪಾಲಂನಲ್ಲಿರುವ ಶ್ರೀಕೃಷ್ಣ ದೇವಸ್ಥಾನದಲ್ಲಿ ಎರಡು ಗಂಟೆ ಸಂಗೀತ ಕಾರ್ಯಕ್ರಮ ನೀಡಿದ್ದರು. ಅದಾದ ಬಳಿಕ ಅವರು ಅಸ್ವಸ್ಥರಾದರು ಎಂದು ಪತ್ನಿ ಮತ್ತು ಪುತ್ರಿಗೆ ಬಂದಿರುವ ಟೆಲಿಗ್ರಾಂ ಸಂದೇಶ ತಿಳಿಸಿದೆ. ಪಾರ್ಥಿವ ಶರೀರವನ್ನು ಪಾಲ್ಘಾಟ್‌ನಲ್ಲಿರುವ ಅವರ ಸ್ವಗ್ರಾಮ ಚೆಂಬೈಗೆ ಗುರುವಾರ ಬೆಳಿಗ್ಗೆ ಕೊಂಡೊಯ್ದು, ಮಧ್ಯಾಹ್ನ ಅಂತ್ಯಕ್ರಿಯೆ ನಡೆಸಲಾಯಿತು.

ಹಿಮಾಲಯವೆಂದರೆ ಸ್ಥಳಗಳಷ್ಟೇ ಅಲ್ಲ; ಅದು ಅಲ್ಲಿನ ಜನರನ್ನೂ ಒಳಗೊಳ್ಳುತ್ತದೆ

ಹಿಮಾಲಯದ ಮಾತು ಆಲಿಸಬೇಕಿದೆ

ವಿಶ್ಲೇಷಣೆ

ಯೋಗೇಂದ್ರ ಯಾದವ್

ಸೋನಮ್ ವಾಂಗ್ಚುಕ್ ಅವರು ಲೇಹ್‌ನಿಂದ ದೆಹಲಿಯವರೆಗೆ ನಡೆಸಿದ ಐತಿಹಾಸಿಕ ಪಾದಯಾತ್ರೆಯು ರಾಮಮನೋಹರ ಲೋಹಿಯಾ ಅವರು ಹೇಳಿದ್ದ 'ಹಿಮಾಲಯ ನೀತಿ'ಯೊಂದು ಭಾರತಕ್ಕೆ ಅಗತ್ಯವಿದೆ ಎಂಬುದನ್ನು ನೆನಪಿಸಿಕೊಡಬೇಕಿದೆ. ಭಾರತ–ಚೀನಾ ಗಡಿಗೆ ಸನಿಹದ ಪ್ರಜೆಗಳ ಒಂದು ಗುಂಪು ಒಂದು ತಿಂಗಳಲ್ಲಿ ಸರಿಸುಮಾರು 1,000 ಕಿ.ಮೀ. ನಡೆದು ತಮ್ಮ ರಾಷ್ಟ್ರದ ರಾಜಧಾನಿಗೆ ಬಂದಾಗ, ಅವರ ಮಾತು ಆಲಿಸುವ ಕೆಲಸವನ್ನಾದರೂ ಮಾಡಬೇಕಿತ್ತು. ಆದರೆ, ಸೆಕ್ಷನ್ 144ರ ಅಡಿ ನಿಷೇಧಾಜ್ಞೆಯನ್ನು (ಈಗ ಬಿಎನ್‌ಎಸ್‌ಎಸ್ ಸೆಕ್ಷನ್ 163) ಹೇರಿ, ಕಾರಣವಿಲ್ಲದೆ ವಶಕ್ಕೆ ಪಡೆದು, ಲಡಾಖ್ ಭವನದಲ್ಲಿ ಅನಧಿಕೃತವಾಗಿ ಬಂಧಿಸಿ, ಉಪವಾಸ ಸತ್ಯಾಗ್ರಹಕ್ಕೆ ಸ್ಥಳ ನೀಡಲು ನಿರಾಕರಿಸುವ ಮೂಲಕ ಅವರನ್ನು ಸ್ವಾಗತಿಸಲಾಯಿತು.

ಲಡಾಖ್‌ನ ಜನರ ಪ್ರತಿಭಟನೆಯು ಲೇಹ್ ಸರ್ವೋಚ್ಚ ಸಂಘಟನೆ ಹಾಗೂ ಕಾರ್ಗಿಲ್ ಡೆಮಾಕ್ರಟಿಕ್ ಒಕ್ಕೂಟದ ನಾಯಕತ್ವದಲ್ಲಿ ತಿಂಗಳುಗಳಿಂದ ನಡೆಯುತ್ತಿದೆ. ಆದರೆ ಅದು ರಾಷ್ಟ್ರಮಟ್ಟದಲ್ಲಿ ಅಗತ್ಯ ಗಮನವನ್ನು ಸೆಳೆದಿಲ್ಲ. ಲಡಾಖ್‌ನಲ್ಲಿನ ಪ್ರತಿಭಟನೆಯು ಹಿಮಾಲಯ ಪ್ರದೇಶದಲ್ಲಿ ಪ್ರತ್ಯೇಕವಾಗಿ ನಡೆಯುತ್ತಿರುವಂತೆ ಕಾಣುವ ಹಲವು ಪ್ರತಿಭಟನೆಗಳ ಪೈಕಿ ಒಂದು. ಆದರೆ ಈ ಪ್ರತಿಭಟನೆಗಳನ್ನು ತರ್ಕಬದ್ಧವಾಗಿ ಅರ್ಥಮಾಡಿಕೊಳ್ಳಬೇಕಿದೆ: ಸಂವಿಧಾನದ 370ನೇ ವಿಧಿಯ ಅಡಿ ನೀಡಿದ್ದ ವಿಶೇಷ ಸ್ಥಾನಮಾನ ಇಲ್ಲವಾದ ನಂತರದ ಕಾಶ್ಮೀರ, ಉತ್ತರಾಖಂಡದಲ್ಲಿನ ಭಾರಿ ಭೂಕುಸಿತ, ನೇಪಾಳದ ಆಡಳಿತದಲ್ಲಿನ ಬದಲಾವಣೆ, ಸಿಕ್ಕಿಂನಲ್ಲಿ ಹಠಾತ್ ಪ್ರವಾಹ, ಭೂತಾನ್ ದೇಶ ಚೀನಾಕ್ಕೆ ಹತ್ತಿರ-ವಾಗುತ್ತಿರುವುದು, ಅಸ್ಸಾಂನಲ್ಲಿ ಎನ್‌ಪಿಆರ್ ಸಮಸ್ಯೆ, ಮಣಿಪುರದ ನಾಗರಿಕ ಸಂಘರ್ಷ... ಇವುಗಳನ್ನು ಅರ್ಥ ಮಾಡಿಕೊಳ್ಳಬೇಕಿದೆ. ಹಿಮಾಲಯ ಪ್ರದೇಶಕ್ಕೆ ಸೇರಿದ ರಾಜ್ಯಗಳ ಸಮಸ್ಯೆಗಳ ನಡುವಿನ ಅಂತರ್ ಸಂಬಂಧವನ್ನು ಗುರುತಿಸಿ ಸಮಗ್ರವಾದ ದೃಷ್ಟಿ-ಕೋನವನ್ನು ಹೊಂದಬೇಕು ಎಂದು ಲೋಹಿಯಾ ಅವರು 70 ವರ್ಷಗಳ ಹಿಂದೆ ಹೇಳಿದ್ದರು. ಪಶ್ಚಿಮದಲ್ಲಿ ಪಖ್ತೂನಿಸ್ತಾನದಿಂದ ಪೂರ್ವದಲ್ಲಿ ಬರ್ಮಾವರೆಗೆ ಚಾಚಿಕೊಂಡಿರುವ ಹಿಮಾಲಯ ಪರ್ವತ ಪ್ರದೇಶದ ಜನರ ವಿಚಾರದಲ್ಲಿ ತಾರ್ಕಿಕವಾದ, ಪ್ರಜಾತಾಂತ್ರಿಕವಾದ ದೃಷ್ಟಿಕೋನವನ್ನು ಭಾರತ ರೂಪಿಸಿಕೊಳ್ಳಬೇಕು ಎಂದು ಅವರು ಬಯಸಿದ್ದರು.

ಸ್ವಾತಂತ್ರ್ಯ ದೊರೆತ ಆರಂಭದ ವರ್ಷಗಳಲ್ಲಿ, ಚೀನಾದ ಆಕ್ರಮಣದ ಭೀತಿ ಇದ್ದಾಗ, ಹಿಮಾಲಯದ ನೀತಿಗಳ ರಾಜಕೀಯ ಆಯಾಮಗಳ ವಿಚಾರದಲ್ಲಿ ಲೋಹಿಯಾ ಪ್ರಮುಖವಾಗಿ ಕಳವಳ ಹೊಂದಿದ್ದರು. ಅವರು ಭಾರತದಲ್ಲಿನ ಹಾಗೂ ಭಾರತದ ಹೊರಗಿನ ಹಿಮಾಲಯ ಪ್ರದೇಶದ ಜನರ ಪ್ರಜಾತಾಂತ್ರಿಕ ಹಕ್ಕುಗಳ ಪರವಾಗಿ ಇದ್ದರು. ಟಿಬೆಟ್ ಮತ್ತು ನೇಪಾಳದ ಜನರು ಅಲ್ಲಿನ ಆಡಳಿತಗಾರರ ವಿರುದ್ಧ ನಡೆಸುತ್ತಿದ್ದ ಹೋರಾಟಗಳಿಗೆ ಭಾರತ ಬೆಂಬಲ ನೀಡುವುದರ ಪರ ಇದ್ದರು, ಕಾಶ್ಮೀರದ ಬಂಡುಕೋರರ ಜೊತೆ ಪ್ರಜಾತಾಂತ್ರಿಕವಾಗಿ ಮಾತುಕತೆ ನಡೆಸಬೇಕು ಎನ್ನುತ್ತಿದ್ದರು, ಈಶಾನ್ಯ ರಾಜ್ಯಗಳಲ್ಲಿ ಆದಿವಾಸಿಗಳನ್ನು ಇತರರಿಂದ ಭೌತಿಕವಾಗಿ ಹಾಗೂ ಸಾಮಾಜಿಕವಾಗಿ ಪ್ರತ್ಯೇಕಿಸಬೇಕು ಎನ್ನುವ ವೆರಿಯರ್ ಎಲ್ವಿನ್ ನೀತಿಯನ್ನು ವಿರೋಧಿಸಿದ್ದರು.

ಆದರೆ, ಚೀನಾದ ವಿಸ್ತರಣಾವಾದ ಹಾಗೂ ಭಾರತದ ವಿಚಾರದಲ್ಲಿ ಅದು ಹೊಂದಿದ್ದ ಆಕ್ರಮಣಕಾರಿ ಧೋರಣೆಯ ವಿಚಾರದಲ್ಲಿ ಕುರುಡಾಗಿದ್ದ ನೆಹರೂ ಅವರ ನೀತಿಗಳಿಗೆ ಸಂಬಂಧಿಸಿದಂತೆ ಲೋಹಿಯಾ ತೀಕ್ಷ್ಣವಾದ ಭಿನ್ನಾಭಿಪ್ರಾಯ ಹೊಂದಿದ್ದರು. ಹಿಮಾಲಯ ನೀತಿಗಳಿಗೆ ಸಂಬಂಧಿಸಿದ ಲೋಹಿಯಾ ಚಿಂತನೆಗಳು ಹಲವು ಹಂತಗಳಲ್ಲಿ ಜನರನ್ನು ಒಂದುಗೂಡಿಸುವ ಮಾತು-ಗಳನ್ನಾಡುತ್ತವೆ. ಹಿಮಾಲಯ ಪ್ರದೇಶದ ಬೇರೆ ಬೇರೆ ರಾಜ್ಯಗಳ ಜನರ ನಡುವೆ ಒಗ್ಗಟ್ಟು, ಗಡಿ ಪ್ರದೇಶಗಳಲ್ಲಿ ಭಾರತದ ಜನರು ಹಾಗೂ ನೆರೆಯ ದೇಶಗಳ ಜನರ ನಡುವೆ ಒಗ್ಗಟ್ಟು, ಹಿಮಾಲಯ ಪ್ರದೇಶದ ಸಂಸ್ಕೃತಿ ಹಾಗೂ ಸಮಾಜವು ಭಾರತದ ಇತರ ಕಡೆಗಳ ಜೊತೆ ಒಗ್ಗಟ್ಟು ಸಾಧಿಸಬೇಕು ಎಂಬುದು ಅವರ ಆಲೋಚನೆ-ಯಾಗಿತ್ತು. ಹಿಮಾಲಯ ಪ್ರದೇಶದ ಆಚೆಗಿನ ಪ್ರಮುಖರ ಪೈಕಿ ಬಹಳ ಕಡಿಮೆ ಮಂದಿಯಲ್ಲಿ (ಬಹುಶಃ ರಾಹುಲ ಸಾಂಕೃತ್ಯಾಯನ ಹಾಗೂ ಕೃಷ್ಣನಾಥ್ ಅವರನ್ನು ಹೊರತುಪಡಿಸಿ) ಲೋಹಿಯಾ ಅವರಲ್ಲಿ ಇದ್ದಂತಹ ನಿಲುವು ಇತ್ತು.

ಹಿಮಾಲಯ ಪ್ರದೇಶದ ಬಗ್ಗೆ ಗಮನ ನೀಡಬೇಕಾದ ಅಗತ್ಯವಿದೆ ಎಂಬುದನ್ನಷ್ಟೇ ವಾಂಗ್ಚುಕ್ ಮತ್ತು ಅವರ ಸಂಗಡಿಗರು ಹೇಳುತ್ತಿಲ್ಲ. ನಮ್ಮ ಕಾಲಘಟ್ಟಕ್ಕೆ ಹಿಮಾಲಯ ನೀತಿ ಯಾವ ಅರ್ಥ ನೀಡಬೇಕು ಎಂಬ ಬಗ್ಗೆ ನಮ್ಮ ಅರಿವನ್ನು ಕೂಡ ಅವರು ಹೆಚ್ಚುಮಾಡುತ್ತಿ-ದ್ದಾರೆ. ಲಡಾಖ್‌ಗೆ ಪ್ರಜಾತಾಂತ್ರಿಕ ಆಡಳಿತವನ್ನು ಅವರು ಕೇಳುತ್ತಿದ್ದಾರೆ. ತಮ್ಮಿಂದ ಆಯ್ಕೆಯಾದ ಹಾಗೂ ತಮಗೆ ಉತ್ತರದಾಯಿ ಆದ ಸರ್ಕಾರ ಬೇಕು ಎಂದು ಅಲ್ಲಿನ ಜನ ಬಯಸುತ್ತಿದ್ದಾರೆ. ಲಡಾಖ್‌ನ ಜನಸಂಖ್ಯೆ ಸರಿಸುಮಾರು 3 ಲಕ್ಷ ಮಾತ್ರ. ಅಯೋಧ್ಯೆ ಅಥವಾ ಹಿಸಾರ್‌ನಂತಹ ಸಣ್ಣ ನಗರದಲ್ಲಿರುವಷ್ಟು ಜನಸಂಖ್ಯೆ ಇದು. ಆದರೆ ಲಡಾಖ್‌ನ ವಿಸ್ತೀರ್ಣ 59 ಸಾವಿರ ಚದರ ಕಿ.ಮೀ. ಇದು ಜಮ್ಮು ಮತ್ತು ಕಾಶ್ಮೀರಕ್ಕಿಂತ, ಮಣಿಪುರ, ಮಿಜೋರಾಂ ಮತ್ತು ನಾಗಾಲ್ಯಾಂಡ್‌ನ ಒಟ್ಟು ವಿಸ್ತೀರ್ಣಕ್ಕಿಂತ ದೊಡ್ಡದು. ಈ ಪ್ರದೇಶಕ್ಕೆ ಇಬ್ಬರು ಸಂಸದರು ಏಕಿರಬಾರದು, ರಾಜ್ಯಸಭೆಯಲ್ಲಿ ಒಂದು ಪ್ರಾತಿನಿಧ್ಯ ಏಕಿರಬಾರದು?

ಲಡಾಖ್‌ಗೆ ಸಂವಿಧಾನದ ಆರನೆಯ ಪರಿಚ್ಛೇದದ ಅಡಿ ಹೆಚ್ಚಿನ ಸ್ಥಾನಮಾನ ನೀಡಬೇಕು ಎಂಬ ಪ್ರಧಾನ ಬೇಡಿಕೆಯನ್ನು ಅವರು ಸರ್ಕಾರದ ಮುಂದಿಟ್ಟಿದ್ದಾರೆ. ಇದು ದೊರೆತರೆ, ಭಿನ್ನ ಆದಿವಾಸಿ ಸಮುದಾಯಗಳು ಇರುವ ಅಲ್ಲಿನ ಎಂಟೂ ಜಿಲ್ಲೆಗಳಿಗೆ ತಮ್ಮದೇ ಆದ ಸ್ವಾಯತ್ತ ಜಿಲ್ಲಾ ಮಂಡಳಿಗಳನ್ನು ರಚಿಸಿಕೊಳ್ಳಲು, ಆಂತರಿಕ ಆಡಳಿತಕ್ಕೆ ಉತ್ತರದಾಯಿತ್ವ ಹೊಂದಲು ಸಾಧ್ಯವಾಗುತ್ತದೆ. ಇದರಿಂದಾಗಿ ಸಣ್ಣದಾದ ಆದಿವಾಸಿ ಸಮುದಾಯಗಳಿಗೆ ಕೂಡ ತಮ್ಮ ಸಂಸ್ಕೃತಿ ಮತ್ತು ಅಸ್ಮಿತೆ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ. ಬಿಜೆಪಿಯು ಇದನ್ನು ತನ್ನ ಪ್ರಣಾಳಿಕೆಯಲ್ಲಿ ಭರವಸೆ ರೂಪದಲ್ಲಿ ನೀಡಿತ್ತು.

ಅವರ ಚಳವಳಿಯು ರಾಜಕೀಯ ಬೇಡಿಕೆಗಳಿಗೆ ಸೀಮಿತವಾಗಿಲ್ಲ. ಅವರು ಸ್ಥಳೀಯರಿಗೆ ಜಮೀನು, ಉದ್ಯೋಗ ಮತ್ತು ಸಾಂಸ್ಕೃತಿಕ ಹಕ್ಕುಗಳನ್ನು ಕೇಳುತ್ತಿದ್ದಾರೆ. ಅನಿಯಂತ್ರಿತವಾದ ಜಲವಿದ್ಯುತ್ ಯೋಜನೆಗಳನ್ನು ಅವರು ವಿರೋಧಿಸುತ್ತಿದ್ದಾರಾದರೂ 'ಅಭಿವೃದ್ಧಿ'ಗೆ ಅವರ ವಿರೋಧವಿಲ್ಲ. ವಾಂಗ್ಚುಕ್ ಅವರು ಎಂಜಿನಿಯರಿಂಗ್ ಪದವೀಧರ. ಅವರು ಅಭಿವೃದ್ಧಿಯಲ್ಲಿ ಪಾಲು ಕೊಡಿ ಎಂದಷ್ಟೇ ಕೇಳುತ್ತಿಲ್ಲ, ಅಭಿವೃದ್ಧಿಯ ಹೊಸ ಮಾದರಿಯನ್ನು ಅವರು ಬಯಸುತ್ತಿದ್ದಾರೆ.

ವಾಂಗ್ಚುಕ್ ಅವರ ಉಪವಾಸವನ್ನು ಇತರ ಪ್ರತಿಭಟನೆಗಳಿಗಿಂತ ಭಿನ್ನವಾಗಿಸುವುದೇ ಇದು. ತಮ್ಮ ಜನರ ಪರವಾಗಿ ವಾಂಗ್ಚುಕ್ ಅವರು ಸಕಾರಣಗಳಿಂದ ಕೂಡಿದ ರಾಜಕೀಯ ಬೇಡಿಕೆಗಳನ್ನು ಇರಿಸಿದ್ದಾರೆ. ಆಕ್ರಮಣಕಾರಿ ಧೋರಣೆ ತಳೆಯದೆಯೇ ಅವರು ದೃಢವಾದ ನಿಲುವು ತಾಳಿದ್ದಾರೆ. ಹೀಗಾಗಿಯೇ ಅವರನ್ನು ನಿಭಾಯಿಸುವುದು ಹೇಗೆ ಎಂಬುದು ದೆಹಲಿ ಪೊಲೀಸರಿಗೆ ಅರ್ಥವಾಗುತ್ತಿಲ್ಲ. ಬಹಳ ಎತ್ತರದ ವ್ಯಕ್ತಿತ್ವದವರಾಗಿ ಕಾಣುತ್ತಿರುವ ವಾಂಗ್ಚುಕ್, ಅಧಿಕಾರದ ಕೇಂದ್ರಗಳಿಗೆ ಅಭಿವೃದ್ಧಿಯ ಪರ್ಯಾಯ ನೋಟವನ್ನು, ಶಿಕ್ಷಣಕ್ಕೆ ಹೊಸ ಆಯಾಮವನ್ನು, ಇಂಧನದ ಬಗ್ಗೆ ಹೊಸ ದೃಷ್ಟಿಕೋನವನ್ನು ನೀಡುತ್ತಿದ್ದಾರೆ.

ಹಿಮಾಲಯ ನೀತಿ ಎಂಬುದು ಲೋಹಿಯಾ ಕಾಲ-ಘಟ್ಟದಲ್ಲಿ ಹೊಸ ಪರಿಕಲ್ಪನೆ ಆಗಿತ್ತು. ಆದರೆ ಇದು ಈಗ ಅಕಡೆಮಿಕ್ ಹಾಗೂ ಸಾಮಾಜಿಕ ಕಾರ್ಯಕರ್ತರ ವಲಯದಲ್ಲಿ ಪರಿಚಿತವಾಗಿದೆ. ಅನಿಯಂತ್ರಿತ ನಿರ್ಮಾಣ ಕಾರ್ಯಗಳನ್ನು ತಾಳಿಕೊಳ್ಳಲು ಆಗದ ಪ್ರದೇಶ ಇದು ಎಂಬ ಚಿತ್ರಣ ಕಾವ್ಯಗಳಲ್ಲಿದೆ. ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ದೃಷ್ಟಿಕೋನವು ರಕ್ಷಣೆಯನ್ನು ಕೇಂದ್ರೀಕರಿಸಿಕೊಂಡಿದೆ. ಹಿಮಾಲಯ ಅಂದರೆ ಒಂದಿಷ್ಟು ಸ್ಥಳಗಳು ಮಾತ್ರವೇ ಅಲ್ಲ, ಅದು ಅಲ್ಲಿನ ಜನರನ್ನೂ ಒಳಗೊಳ್ಳುತ್ತದೆ ಎಂಬುದನ್ನು ಪ್ರಭುತ್ವವು ಅರ್ಥ ಮಾಡಿಕೊಳ್ಳಬೇಕಿದೆ.

ನವದೆಹಲಿಯಲ್ಲಿ ವಾಂಗ್ಚುಕ್ ಅವರು ನಡೆಸುತ್ತಿರುವ ಉಪವಾಸ ಸತ್ಯಾಗ್ರಹವು ಅಕ್ಟೋಬರ್ 15ಕ್ಕೆ ಹತ್ತನೆಯ ದಿನ ಪ್ರವೇಶಿಸಿತು. ಅವರು ಬಹಳ ಸರಳವಾಗಿ ಕೇಳುತ್ತಿರುವುದು ಪ್ರಧಾನಿ, ಗೃಹ ಸಚಿವ ಅಥವಾ ರಾಷ್ಟ್ರಪತಿ ಜತೆ ಒಂದು ಮಾತುಕತೆಗೆ ಅವಕಾಶವನ್ನು. ಲಡಾಖ್‌ನ ಜನರ ಪರವಾಗಿ ಬೇಡಿಕೆಗಳನ್ನು ದೇಶದ ಪ್ರಮುಖರ ಮುಂದೆ ಅವರು ಇರಿಸಬೇಕಿದೆ. ವಾಂಗ್ಚುಕ್ ಅವರು ಹಿಮಾಲಯವನ್ನು, ಅಲ್ಲಿನ ಋಷಿಸದೃಶ ವಿವೇಕವನ್ನು ದೆಹಲಿಗೆ ಹೊತ್ತುತಂದಿದ್ದಾರೆ. ನಮ್ಮ ರಾಜಕೀಯ ನಾಯಕತ್ವವು ಹಿಮಾಲಯದ ಜನರ ಮಾತನ್ನು ಆಲಿಸುತ್ತದೆ ಎಂಬ ನಿರೀಕ್ಷೆ ಹೊಂದಬೇಕೇ? ಹಿಮಾಲಯದ ರೋಷ ದೆಹಲಿಯನ್ನು ಪ್ರವೇಶಿಸುವುದನ್ನು ನಾವು ಕಾಯುತ್ತಿದ್ದೇವೆಯೇ?

ಚುರುಮುರಿ



ಪ್ರಶಸ್ತಿ ಭಾಗ್ಯ!

• ಬಿ.ಎನ್.ಮಲ್ಲೇಶ್

'ತೇಲಿಸೋ ಇಲ್ಲ ಮುಳುಗಿಸೋ...' ಎಂದು ಹಾಡುತ್ತ ಹರಟೆಕಟ್ಟೆಗೆ ಬಂದ ದುಬ್ಬೀರ, 'ಏನ್ ಮಳೀಲೆ ಇದೂ... ಹಿಂಗೆ ಜಡೀತಾ ಕುಂತತಿ? ರಸ್ತೆ ಎಲ್ಲ ಹೊಳೆಯಾದ್ವಪ' ಎಂದ.

'ಮತ್ತೆ? ನಮ್ ಸರ್ಕಾರ ಬಂದ್ರೆ ಬರ ಅಂತಿದ್ರಿ? ಈಗೇನೇಳ್ತೀರಿ?' ಗುಡ್ಡೆ ಕೆಣಕಿದ.

'ಏನ್ ಹೇಳೋದು? ರಸ್ತೆ ನೀರಿಗೇ ಬಾಗಿನ ಅರ್ಪಿಸೋದು ಅಷ್ಟೆ' ತೆಪರೇಸಿ ನಕ್ಕ.

'ನಿಮ್ ಸರ್ಕಾರದೋರಿಗೆ ಹೇಳಿ ಎಲ್ರಿಗೂ 'ಬೋಟ್ ಭಾಗ್ಯ' ಕೊಡ್ಸೋ ಗುಡ್ಡೆ, ಮಾರ್ಕೆಟ್‌ಗೋಗಿ ತರಕಾರಿ ತರೋಕೆ ಅನುಕೂಲ ಆಗ್ತತಿ' ಎಂದಳು ಮಂಜಮ್ಮ.

'ಅದ್ಯಾಕೆ ಹೆಲಿಕಾಪ್ಟರ್ ಭಾಗ್ಯನೇ ಕೊಡ್ಸಾಣ ಬಿಡು, ನಮ್ ಪಾರ್ಟಿಗೆ ವೋಟ್ ಹಾಕು' ಎಂದ ಗುಡ್ಡೆ.

'ಅಲ್ಲ, ತೇಲಿಸೋ ಮುಳುಗಿಸೋ ಅಂದ್ರಲ್ಲ, ಬೈ ಎಲೆಕ್ಷನ್‌ನಾಗೆ ಯಾರು ತೇಲಬೋದು, ಯಾರು ಮುಳುಗಬೋದು?' ಕೊಟ್ರೇಶಿ ಕೇಳಿದ.

'ಮೂರೂ ಕ್ಷೇತ್ರದಾಗೆ ಕಾಂಗ್ರೆಸ್ ಗೆದ್ರೆ ಬಂಡೆ ತೇಲಬೋದು' ಗುಡ್ಡೆ ನಕ್ಕ.

'ಮೊನ್ನೆ ಬಂಡೆ ಸಾಹೇಬ್ರು ಯಾವುದೋ ಪೂಜೆ ಸಮಾರಂಭದಲ್ಲಿ ಹಾಕಿದ ಈಡುಗಾಯಿ ಮೂರನೇ ಸಲಕ್ಕೆ ಒಡೀತಂತಪ, ಏನದರ ಅರ್ಥ?'

'ಬಂಡೆ ತೇಲೋದು ಸ್ವಲ್ಪ ತಡ ಆಗ್ತತಿ ಅಂತ ಅರ್ಥ. ಅದಿರ್ಲಿ, ರಾಜ್ಯೋತ್ಸವ ಬಂತಲ್ಲ, ಈ ಸಲನೂ ಪ್ರಶಸ್ತಿಗೆ ಅರ್ಜಿ ಹಾಕಿದೀಯೇನೋ ತೆಪರಾ?' ದುಬ್ಬೀರ ಕೇಳಿದ.

'ಹಾಕಿದೀನಿ, ಅರ್ಜೀನ ಡೈರೆಕ್ಟ್ ಸಿ.ಎಂ ಕಡಿಗೇ ಕೊಟ್ಟು ಬಂದಿದೀನಿ. ಈ ಸಲ ನಂಗೆ ಪ್ರಶಸ್ತಿ ಗ್ಯಾರಂಟಿ' ಎಂದ ತೆಪರೇಸಿ.

'ಅದೆಂಗೆ ಗ್ಯಾರಂಟಿ ಅಂತೀಯ?'

'ಸೀಕ್ರೆಟ್, ಯಾರಿಗೂ ಹೇಳಲ್ಲ ಅಂದ್ರೆ ಹೇಳ್ತೀನಿ'.

'ಇಲ್ಲ, ನಾವ್ಯಾರೂ ಹೇಳಲ್ಲ, ಹೇಳು'.

'ಅರ್ಜಿ ಜತಿಗೆ ನಾನು ಗೌರ್ನರ್ ಜೊತೆ ತೆಗಿಸ್ಕಂಡಿರೋ ಫೋಟೊ ಅಂಟಿಸಿದೀನಿ!'

'ಎಲಾ ಪಾಕಡಾ...' ಎಂದಳು ಮಂಜಮ್ಮ, ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಆಂಗಿಕ ಭಾಷೆ: ಸಂವಹನಕ್ಕೆ ರಹದಾರಿ

ಮನದ ಭಾವನೆಗಳನ್ನು ದೇಹದ ಅಂಗಾಂಗಗಳ ಮೂಲಕ ಹೊರಹೊಮ್ಮಿಸುವ ದೈಹಿಕ ಭಾಷೆಯು ಔಪಚಾರಿಕ ಮಾತಿಗಿಂತಲೂ ಹೆಚ್ಚು ಪರಿಣಾಮಕಾರಿ

• ಡಾ. ಮುರಳೀಧರ ಕಿರಣಕೆರೆ

ಅದು, ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಸಂದರ್ಶನ ಕೌಶಲ ಕಾರ್ಯಾಗಾರ. ಶಿಬಿರಾರ್ಥಿ ಯುವತಿಯೊಬ್ಬಳು ಕೇಳಿದಳು. 'ಸರ್, ನನಗೆ ಇನ್ನೊಬ್ಬರ ಜೊತೆಗೆ ಸಂಭಾಷಿಸುವಾಗ ಅವರ ಮುಖವನ್ನು ನೋಡುತ್ತಾ ಮಾತನಾಡಲು ಆಗುವುದಿಲ್ಲ. ಏನೋ ಒಂಥರ ಮುಜುಗರ. ಆಗೆಲ್ಲ ನನ್ನ ದೃಷ್ಟಿ ಇನ್ನೆಲ್ಲೋ ಇರುತ್ತೆ. ಹಾಗಂತ ಇದೊಂದು ಸಮಸ್ಯೆ ಎಂದು ಇಲ್ಲಿಯವರೆಗೂ ಅನಿಸಿರಲಿಲ್ಲ. ಪರಿಣಾಮಕಾರಿ ಸಂವಹನದಲ್ಲಿ ಆಂಗಿಕ ಭಾಷೆಯ ಮಹತ್ವವನ್ನು ನೀವು ಒತ್ತಿ ಹೇಳಿದಾಗಲೇ ಕಣ್ಣೋಟದ ಪ್ರಾಮುಖ್ಯ ಗೊತ್ತಾಗಿದ್ದು. ಈ ಸಮಸ್ಯೆಯನ್ನು ಸರಿ ಮಾಡಿಕೊಳ್ಳುವುದು ಹೇಗೆ?' ಮುಚ್ಚುಮರೆಯಿಲ್ಲದ ಆ ನೇರ ಪ್ರಶ್ನೆ ನನ್ನನ್ನು ತುಸು ಚಕಿತಗೊಳಿಸಿತ್ತು. ಹಾಗೆ ಕೇಳುವಾಗಲೂ ಅವಳ ದೃಷ್ಟಿ ಬೇರೆಡೆಗೆ ಇದ್ದುದನ್ನು ಗಮನಿಸಿದ್ದೆ!

ಹೌದು, ಹೀಗೆ ದೃಷ್ಟಿ ತಪ್ಪಿಸುವ ಸಮಸ್ಯೆ ಹಲವರಿಗಿದೆ. ಇವರು ತಾವು ಮಾತನಾಡುತ್ತಿರುವ ವ್ಯಕ್ತಿಯ ಕಣ್ಣಲ್ಲಿ ಕಣ್ಣಿಟ್ಟು ನೋಡುವುದು ಹೋಗಲಿ, ಸರಿಯಾಗಿ ಮುಖ ನೋಡಲೂ ಹಿಂದೇಟು ಹಾಕುತ್ತಾರೆ. ಆತ್ಮವಿಶ್ವಾಸದ ಕೊರತೆ, ಕೀಳರಿಮೆ, ಮುಜುಗರ, ನಾಚಿಕೆ, ಭಯ, ಹಿಂಜರಿಕೆ, ತಿರಸ್ಕಾರ, ದ್ವೇಷ, ಅಪರಾಧಿ ಭಾವ, ಆತಂಕ, ಮಾನಸಿಕ ತೊಂದರೆ... ಹೀಗೆ ನೇತ್ರ ಸಂಪರ್ಕ ತಪ್ಪಿಸಲು ಕಾರಣಗಳು ಹಲವು. ಇವರಲ್ಲಿ ಬಹುತೇಕರಿಗೆ ತಮಗೆ ಇಂತಹದ್ದೊಂದು ಸಮಸ್ಯೆಯಿದೆಯೆಂಬ ಅರಿವೂ ಇರುವುದಿಲ್ಲ!

ಪರಿಣಾಮಕಾರಿ ಸಂವಹನದಲ್ಲಿ ಮಾತಿಗಿಂತ ಮಿಗಿಲಾಗಿರುವುದು ವ್ಯಕ್ತಿಯ ಶಾರೀರಿಕ ಭಾಷೆ. ಕಣ್ಣಲ್ಲಿ ಕಣ್ಣಿಟ್ಟು ಮಾತನಾಡುವುದು, ಮೊಗದಲ್ಲಿ ಭಾವನೆಗಳ ಅಭಿವ್ಯಕ್ತಿ, ಮಂದಹಾಸ, ಆಲಿಸುವಿಕೆ, ಕೈಗಳ ಚಲನೆ, ನಿಲ್ಲುವ, ಕೂರುವ ಭಂಗಿಗಳು, ಸನ್ನೆಗಳು ಆಂಗಿಕ ಭಾಷೆಯ ಮುಖ್ಯ ಅಂಗಗಳು. ಮಕ್ಕಳು ಮೌಖಿಕ ಪರೀಕ್ಷೆ, ಸಂದರ್ಶನಗಳಲ್ಲಿ ವಿಫಲರಾಗುವ ಪ್ರಮುಖ ಕಾರಣಗಳಲ್ಲಿ ಅಸಮರ್ಪಕ ಆಂಗಿಕ ಭಾಷೆಯೂ ಒಂದು. ಕಳಾಹೀನ, ಭೀತಿ ತುಂಬಿದ, ಆತ್ಮವಿಶ್ವಾಸವಿಲ್ಲದ ಮುಖಚರ್ಯೆ, ಸಂದರ್ಶಕರ ನೇರ ದೃಷ್ಟಿ ತಪ್ಪಿಸುವುದು, ಮುದುಡಿ ಕೂರುವುದು, ಸಭ್ಯವಲ್ಲದ ಉಡುಪು, ಹಿಂಜರಿಕೆಯಂತಹ ನಕಾರಾತ್ಮಕ ವರ್ತನೆಗಳು ನಪಾಸಿಗೆ ಕಾರಣವಾಗಬಹುದು.

ನಮ್ಮ ಭಾವನೆಗಳನ್ನು, ವಿಚಾರಗಳನ್ನು ಬೇರೆಯವರೊಂದಿಗೆ ಹಂಚಿಕೊಳ್ಳಲು ಭಾಷೆ ಮುಖ್ಯ. ಭಾಷೆಯೆಂದರೆ ಮಾತಷ್ಟೇ ಅಲ್ಲ, ಜೊತೆಗೆ ಶಾರೀರಿಕ ಭಾಷೆಯೂ ಸೇರಿರುತ್ತದೆ. ದೈಹಿಕ ಭಾಷೆಯು ಔಪಚಾರಿಕ ಮಾತಿಗಿಂತಲೂ ಹೆಚ್ಚು ಪರಿಣಾಮಕಾರಿ. ಜಗತ್ತಿನ ಎಲ್ಲರಿಗೂ ಸುಲಭವಾಗಿ ಅರ್ಥವಾಗುವ ವಿಶ್ವಭಾಷೆಯಿದು. ಸರಿಯಾದ ಹಾವಭಾವಗಳು ನಾವಾಡುವ ಮಾತಿಗೆ ಮತ್ತಷ್ಟು ಪರಿಣಾಮ ತುಂಬಿ ಕೇಳುಗರಲ್ಲಿ ಉತ್ತಮ ಸ್ಪಂದನೆಗೆ ಕಾರಣವಾಗುತ್ತವೆ.

ಅದು ಸಂದರ್ಶನವಿರಲಿ, ಮೌಖಿಕ ಪರೀಕ್ಷೆಯಾಗಿ-ರಲಿ, ಸಾಧಾರಣ ಸಂಭಾಷಣೆಯಾಗಿರಲಿ, ಭಾಷಣವೇ ಆಗಿರಲಿ ಕಣ್ಣೋಟವೆಂಬುದು ಒಂದು ಪ್ರಮುಖ ಆಂಗಿಕ ಭಾಷೆ. ಕಣ್ಣಿನ ಸಂವಹನದ ಮೂಲಕವೇ ವ್ಯಕ್ತಿಗೆ ಯಾವ ಭಾವನೆಯಿದೆ, ನಂಬಿಕೆಗೆ ಅರ್ಹನೆ, ಆತ್ಮವಿಶ್ವಾಸ ಇದೆಯೆ, ಉತ್ಸಾಹವಿದೆಯೆ ಎಂದೆಲ್ಲಾ ತಿಳಿದುಕೊಳ್ಳಬಹುದು. ಇನ್ನು ಮುಗುಳ್ನಗೆಗಂತೂ ಸರ್ವರನ್ನೂ ಸೆಳೆಯುವ ಮಾಂತ್ರಿಕ ಶಕ್ತಿ ಇದೆ! ಇದರಿಂದ ಕಾರ್ಯಸಿದ್ಧಿಯೂ ಸುಲಭ. ಕೈಕುಲುಕುವಾಗ ದೃಢವಾಗಿ ಕೈಕುಲುಕುವುದು ವಿಶ್ವಾಸದ ಲಕ್ಷಣ. ನೇರವಾಗಿ ನಿಲ್ಲುವ, ನಡೆಯುವ, ಕೂರುವ ಭಂಗಿಯು ಆತ್ಮವಿಶ್ವಾಸ, ದೃಢ ನಿಲುವು, ಸಕಾರಾತ್ಮಕ ಚಿಂತನೆಯ ಪ್ರತಿಬಿಂಬ.

ಗ್ಯಾಜೆಟ್‌ಗಳ ಜೊತೆಗೆ ಹೆಚ್ಚು ಹೊತ್ತು ಕಳೆಯುವ ಈಗಿನ ಮಕ್ಕಳು, ಯುವಕ–ಯುವತಿಯರು ಪರಿಣಾಮಕಾರಿ ಸಂವಹನದಲ್ಲಿ ಸೋಲುತ್ತಿದ್ದಾರೆ. ಇತ್ತ ಓದುವ ಹವ್ಯಾಸವೂ ಕಾಣೆಯಾಗಿರುವುದರಿಂದ ಸಾಮಾನ್ಯ ಜ್ಞಾನಕ್ಕೂ ಕೊರತೆಯಿದೆ. ಪಠ್ಯದ ತಿಳಿವಳಿಕೆಯಿದ್ದರೂ ಅದನ್ನು ಸರಿಯಾಗಿ ಅಭಿವ್ಯಕ್ತಿಸುವ ಮೃದು ಕೌಶಲಗಳ ಅರಿವಿಲ್ಲ. ಪರಿಣಾಮ, ಸ್ಪರ್ಧಾತ್ಮಕ ಜಗತ್ತಿನ ಪೈಪೋಟಿಯಲ್ಲಿ ಹಿಂದೆ ಬೀಳುತ್ತಿದ್ದಾರೆ. ಯಶಸ್ಸೆಂಬುದು ಮರೀಚಿಕೆಯಾಗಿ ಮತ್ತಷ್ಟು ಹತಾಶರಾಗುತ್ತಿದ್ದಾರೆ. ಓದಿದ ಮಾಧ್ಯಮ, ಪಡೆದ ಶಿಕ್ಷಣ, ಆಂಗಿಕ ಭಾಷೆಯ ಅರಿವಿಲ್ಲದಿರುವಂತಹ ಕಾರಣಗಳಿಂದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಲ್ಲೇ ಕೀಳರಿಮೆ ಹೆಚ್ಚು.



ಸಂವಹನ ಕಲೆಯನ್ನು ಸಮರ್ಥವಾಗಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುವುದು ತರಗತಿಗಳಲ್ಲಿ ಪ್ರಶ್ನೆಗಳನ್ನು ಕೇಳುವುದು. ಮಕ್ಕಳು ಶಾಲೆಯಲ್ಲಿ ತಮ್ಮ ಸಂದೇಹ, ಅನುಮಾನ, ಅರ್ಥವಾಗದ್ದನ್ನು ಕೇಳುವ, ಅಭಿಪ್ರಾಯ ವ್ಯಕ್ತಪಡಿಸುವ ಅಭ್ಯಾಸ ರೂಢಿಸಿಕೊಂಡಾಗ ಅವರ ಆತ್ಮವಿಶ್ವಾಸ ವೃದ್ಧಿಸುವ ಜೊತೆಗೆ ಮಾತನಾಡುವ ಕೌಶಲವೂ ಕರಗತವಾಗುತ್ತದೆ. ಇದರಿಂದ ತಿಳಿವಳಿಕೆ ಹೆಚ್ಚುವುದಷ್ಟೇ ಅಲ್ಲ ಶಾರೀರಿಕ ಭಾಷೆಯೂ ಬೆಳೆಯುತ್ತದೆ. ಆದ್ದರಿಂದ ಪ್ರಾಥಮಿಕ ಶಾಲಾ ಹಂತದಿಂದಲೇ ಪ್ರಶ್ನೆಗಳನ್ನು ಕೇಳುವಂತೆ ಮಕ್ಕಳನ್ನು ಉತ್ತೇಜಿಸುವುದು ಅವರ ವ್ಯಕ್ತಿತ್ವ ನಿರ್ಮಾಣದ ದೃಷ್ಟಿಯಲ್ಲಿ ಮಹತ್ವದ ಅಂಶ.

ಉತ್ತಮ ಹಾವಭಾವಗಳು ವ್ಯಕ್ತಿಯೊಬ್ಬನ ಕೌಟುಂಬಿಕ ಬದುಕು, ವೃತ್ತಿ ಬದುಕು, ಸಾಮಾಜಿಕ ಬದುಕಿನಲ್ಲಿ ಯಶಸ್ಸು ತರುತ್ತವೆ. ಸ್ನೇಹ, ಪ್ರೀತಿ, ವಿಶ್ವಾಸಗಳಿಸಲು ಇವು ರಹದಾರಿ. ಅಸಭ್ಯ ಆಂಗಿಕ ಸನ್ನೆಗಳು ಜಗಳ, ಕಲಹ, ವೈರತ್ವಕ್ಕೆ ಕಾರಣವಾಗಿ ವ್ಯಕ್ತಿತ್ವಕ್ಕೆ ಮಸಿ ಬಳಿಯಬಹುದು. ಹಾಗಾಗಿ, ವಿದ್ಯಾಭ್ಯಾಸದ ಸಮಯದಲ್ಲೇ ಮಕ್ಕಳಿಗೆ ಸರಿಯಾದ ದೈಹಿಕ ಭಾಷೆಯ ಮಹತ್ವವನ್ನು ಮನದಟ್ಟು ಮಾಡಿಸಿ ಅದನ್ನು ಪ್ರಜ್ಞಾಪೂರ್ವಕ-ವಾಗಿ ರೂಢಿಸಿಕೊಳ್ಳಲು ಪ್ರೇರಣೆ ನೀಡಬೇಕಿದೆ.

ಆಂಗಿಕ ಭಾಷೆ ಸೇರಿದಂತೆ ಮೃದು ಕೌಶಲಗಳನ್ನು ಕಲಿತು, ಸಮರ್ಪಕವಾಗಿ ಬಳಸಿಕೊಳ್ಳುವುದು ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿ.

ವಾಚಕರ ವಾಣಿ

ಮಳೆನೀರು ಹಿಡಿದಿಟ್ಟರೆ ಆಗದೇ?

ಬೆಂಗಳೂರು ಮತ್ತು ಸುತ್ತಮುತ್ತಲಿನ ಹಲವು ಪ್ರದೇಶಗಳು ಮಳೆಯಿಂದ ಜಲಾವೃತವಾದ ದಿನವೇ ಕಾವೇರಿಯ 5ನೇ ಹಂತದ ಯೋಜನೆ ಜಾರಿಗೆ ಬಂದಿದೆ. 100 ಕಿ.ಮೀ. ಆಚೆಗಿನ ನದಿಯನ್ನು ತಿರುಗಿಸಿ, 1,000 ಮೀಟರ್ ಎತ್ತರಕ್ಕೆ ಅದನ್ನು ಪಂಪ್ ಮಾಡಿ ತಂದಿದ್ದೇವೆ. ಹಾಗೆ ತಂದ 775 ಲಕ್ಷ ಲೀಟರ್ ನೀರು ಪ್ರತಿದಿನ ಇಲ್ಲಿನ 110 ಹಳ್ಳಿಗಳ 50 ಲಕ್ಷ ಜನರ ಬಳಕೆಗೆ ಬಂದು ಚರಂಡಿಗೆ ಸೇರಿಯೊ, ಸೋರಿಯೊ, ಆವಿಯಾಗಿಯೋ ಹೋಗುತ್ತದೆ. ತಮ್ಮದಲ್ಲದ್ದನ್ನು ದೋಚಿ ತಂದು ಚೆಲ್ಲಾಡಿ ದುರ್ಗಂಧ ಪಸರಿಸುವುದು ಈ 'ವಿಜ್ಞಾನ- ತಂತ್ರಜ್ಞಾನ ನಗರಿ'ಗೆ ಸಂಭ್ರಮದ, ಹೆಮ್ಮೆಯ ಸಂಗತಿಯೆ?

ಕಾವೇರಿಯ ದಡದಿಂದ 10-20-30 ಕಿ.ಮೀ. ದೂರದಲ್ಲಿರುವ ಹಳ್ಳಿಗಳಿಗೆ ಇಲ್ಲದ ಸೌಲಭ್ಯವನ್ನು ಈ ನಗರದ ಆಸುಪಾಸಿನ ಹಳ್ಳಿಗಳಲ್ಲಿ ಗುಡ್ಡೆ ಹಾಕಿಕೊಳ್ಳುತ್ತಿದ್ದೇವೆ. ಅದು ನ್ಯಾಯವೆ? ಇಲ್ಲೇನು ಬರ ಇದೆಯೆ? ಇಸ್ರೇಲಿಗಿಂತ ನಾಲ್ಕು ಪಟ್ಟು ಹೆಚ್ಚು ಮಳೆ ಬೀಳುವ ಪ್ರದೇಶ ಬೆಂಗಳೂರು! ಜಲಸಂಪನ್ಮೂಲ ತಜ್ಞರ ಲೆಕ್ಕದ ಪ್ರಕಾರ, ಇಲ್ಲಿ ಬೀಳುವ ಮಳೆನೀರನ್ನು ಹಿಡಿದಿಟ್ಟುಕೊಂಡು ಸಂಸ್ಕರಣೆ, ಮರುಬಳಕೆ ಮಾಡಿದರೆ ಕಾವೇರಿಯ ನೀರಿನ ಅಗತ್ಯವೇ ಇಲ್ಲ. ಹಾಗೆ ಯೋಜನೆ ರೂಪಿಸಿ, ಜಾರಿಗೆ ತಂದರೆ ಅದು ಇತರ ಜಿಲ್ಲೆಗಳಿಗೂ ಮುಂದಿನ ತಲೆಮಾರಿಗೂ ಮಾದರಿಯಾಗಬಹುದಿತ್ತು. ಅದರ ಬದಲು, ಆಹಾರ ಬೆಳೆಯಬೇಕಾದ ಪ್ರದೇಶಗಳ ಸಂಪನ್ಮೂಲಗಳನ್ನೆಲ್ಲ ಹೀಗೇ ದೋಚಿ ತರುತ್ತಿದ್ದರೆ ನಾಳಿನ ನಗರವಾಸಿಗಳು ಬರೀ ಪ್ಲಾಸ್ಟಿಕ್ ಕಚಡಾ ತಿಂದು ಬದುಕಬೇಕಾದೀತಲ್ಲವೆ? ಅದು ಓಕೆ ಎಂದರೆ ಅದನ್ನಾದರೂ ಈಗಲೇ ಕಲಿಸಲು ಆರಂಭಿಸೋಣವೆ?

ನಾಗೇಶ ಹೆಗಡೆ, ಕೆಂಗೇರಿ

ಪ್ರಕೃತಿಪ್ರೇಮಿ ಸಂತನಿಗೆ ಸಂದ ಗೌರವ

ವಿಜಯಪುರ ಜ್ಞಾನಯೋಗಾಶ್ರಮದ ಸಿದ್ಧೇಶ್ವರ ಸ್ವಾಮಿಗಳ ಹೆಸರನ್ನು ವಿಜಯಪುರ ಜಿಲ್ಲೆಯ ಮಮದಾಪುರ ಅರಣ್ಯಪ್ರದೇಶಕ್ಕೆ ಇಡಲು ಸರ್ಕಾರ ನಿರ್ಧರಿಸಿರುವುದು ಅಭಿನಂದನಾರ್ಹ. ಇದು ಪ್ರಕೃತಿಪ್ರೇಮಿ ಸಂತನಿಗೆ ಸಲ್ಲಿಸಿದ ಗೌರವವಾಗಿದೆ. ಅವರು ಜೀವಂತವಾಗಿದ್ದಾಗ ಎಲ್ಲ ಪದವಿ, ಪುರಸ್ಕಾರಗಳನ್ನು ತಿರಸ್ಕರಿಸಿದ್ದರು. ಒಂದುವೇಳೆ ಆಗೇನಾದರೂ ಸರ್ಕಾರ ಹೀಗೆ ಹೆಸರಿಡಲು ಮುಂದಾಗಿದ್ದರೆ ಖಂಡಿತ ಈ ನಿರ್ಣಯವನ್ನು ತಿರಸ್ಕರಿಸುತ್ತಿದ್ದರು. ಸ್ವಾಮಿಗಳ ಮೇಲೆ ಗೌರವವುಳ್ಳ ಎಲ್ಲರಿಗೂ ಸರ್ಕಾರದ ತೀರ್ಮಾನದಿಂದ ಸಂತಸವಾಗಿದೆ. ಶ್ರೀಗಳ ಪ್ರವಚನ ಆರಂಭವಾಗುತ್ತಿದ್ದುದೇ ನಿಸರ್ಗಕ್ಕೆ ಸಂಬಂಧಿಸಿದ ವಿಷಯಗಳಿಂದ ಎಂಬುದು ಅವರ ಪ್ರವಚನವನ್ನು ಕೇಳಿರುವ ಎಲ್ಲರಿಗೂ ತಿಳಿದಿರುವ ವಿಷಯ.

ಶಿವಕುಮಾರ ಬಂಡೋಳಿ, ಕಾಂತೇಶ ಹಲಗಿಮನಿ, ಶ್ರೀಧರ ಮಾಳಜಿ, ಹುಣಸಗಿ, ಯಾದಗಿರಿ

ಆಹಾರ ಪೋಲು ಮಾಡುವ ಹಕ್ಕು ನಮಗಿಲ್ಲ

ವಿಶ್ವ ಆಹಾರ ದಿನವಾದ ಬುಧವಾರ (ಅ. 16) ಸಂಜೆ ಬೆಂಗಳೂರಿನ ಪುರಭವನದ ಮುಂದೆ ನಾವು 15– 20 ಮಂದಿ ಸ್ನೇಹಿತರು, 'ಆಹಾರ ಪೋಲು– ರಾಷ್ಟ್ರೀಯ ನಷ್ಟ', 'ತಿನ್ನುವ ಹಕ್ಕು ನಮಗಿದೆ– ಬಿಸಾಡುವ ಹಕ್ಕು ನಮಗಿಲ್ಲ' ಎಂಬಂಥ ಭಿತ್ತಿಪತ್ರಗಳನ್ನು ಹಿಡಿದುಕೊಂಡು ನಿಂತಿದ್ದೆವು. ನಮ್ಮ ಸಂಖ್ಯೆ ಕಡಿಮೆ ಇದ್ದರೂ ಉದ್ದೇಶ ದೊಡ್ಡದಿತ್ತು. ನಿಜ, ಆಹಾರ ಪೋಲು ಮಾಡುವ ಹಕ್ಕು ನಮಗೆಲ್ಲಿದೆ? ಆದರೆ, ಮದುವೆಮನೆ, ಬೀಗರೂಟ, ದೇವಸ್ಥಾನ, ಜಾತ್ರೆ, ಹಾಸ್ಟೆಲ್, ಹೋಟೆಲ್, ಮನೆ- ಹೀಗೆ ಎಲ್ಲ ಕಡೆಗಳಲ್ಲೂ ತಿನ್ನಲು ತಯಾರಿಸಿದ ಆಹಾರದಲ್ಲಿ ಸುಮಾರು ಶೇ 30ರಷ್ಟು ಪ್ರತಿದಿನ ತಿಳಿವಳಿಕೆಯ ಕೊರತೆಯಿಂದ ಪೋಲಾಗುತ್ತಿರುವ ಅಂಕಿ ಅಂಶಗಳಿವೆ. ಇನ್ನೊಂದು ಕಡೆ, ಹೊಟ್ಟೆ ಹಸಿದಿರುವ ನಮ್ಮ ದೇಶವಾಸಿಗಳಿದ್ದಾರೆ. ಐದು ವರ್ಷಗಳ ಕೆಳಗಿನ ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. ಎರಡನ್ನೂ ಸರಿದೂಗಿಸಿದರೆ ಹಸಿವಿನ ರಾಷ್ಟ್ರವೆಂಬ ಅಪಕೀರ್ತಿ ದೇಶಕ್ಕೆ ಇರುವುದಿಲ್ಲ.

ಆಹಾರಧಾನ್ಯ ಉತ್ಪಾದನೆಯ ಹಿಂದೆ ರೈತರ ಶ್ರಮ, ಗಾಳಿ, ಬೆಳಕು, ನೀರಿನಂತಹ ಪ್ರಕೃತಿಯ ಕೊಡುಗೆ, ಒಕ್ಕಣೆ, ಸಾಗಣೆಯಲ್ಲಿ ಕೂಲಿ ಕಾರ್ಮಿಕರ ಶ್ರಮವಿರುತ್ತದೆ. ಸಮುದ್ರದಿಂದ ತಯಾರಿಸಿ ಸಾಗಣೆ ಮಾಡಿದ ಉಪ್ಪು, ಜಲದಾಳದಿಂದ ಮೇಲಕ್ಕೆತ್ತಿದ ನೀರು, ಎಲ್ಲಿಂದಲೋ ಸಾಗಿಸಿ ತಂದ ಇಂಧನ, ಇಷ್ಟೆಲ್ಲಾ ಶ್ರಮ ಇರುತ್ತದೆ. ಅದನ್ನು ಬಿಸಾಡುವುದೆಂದರೆ, ಬೆಳೆದ ರೈತರಿಗೆ, ಸಾಗಣೆ ಮಾಡಿದ ಶ್ರಮಿಕರಿಗೆ ಅವಮಾನ ಮಾಡಿದಂತೆ ಎಂಬ ಅರಿವು ತಿನ್ನುವವರು ಮತ್ತು ಬಡಿಸುವವರಿಗೆ ಇರಬೇಕು. ದೇವರ ಮೂರ್ತಿಯ ಮೇಲೆ ಯಾವುದೋ ನಂಬಿಕೆಯಿಂದ ಹಾಲನ್ನು ಸುರಿದು ಮಣ್ಣಿನಲ್ಲಿ ಸೇರಿಸುತ್ತೇವೆ. ಎಡೆ ರೂಪದಲ್ಲಿ ಆಹಾರವನ್ನಿಟ್ಟು, ಅರಿಸಿನ ಬೆರೆಸಿದ ಅಕ್ಕಿಯನ್ನು 'ಅಕ್ಷತೆ' ಮಾಡಿ ಪೋಲು ಮಾಡುತ್ತೇವೆ. ಮಡಿ ಮೈಲಿಗೆ ಎನ್ನುವ ಕಾರಣಕ್ಕೂ ಆಹಾರ ಪೋಲಾಗುತ್ತಿದೆ. ಬಳಸುವ ನಿಂಬೆ, ಕುಂಬಳ, ಈಡುಗಾಯಿ ರೂಪದಲ್ಲೂ ಆಹಾರಧಾನ್ಯ ಪೋಲಾಗುತ್ತಿದೆ. ಸೇಬಿನ ಹಾರ ಮಾಡಿ ರಾಜಕಾರಣಿಗಳ ಕೊರಳಿಗೆ ಹಾಕುತ್ತೇವೆ. ಮಾರಾಟ ಮಾಡುವವರೂ ಹಣ್ಣು, ತರಕಾರಿಗಳನ್ನು ಕೊಳೆಸಿ ಪೋಲು ಮಾಡುತ್ತಿದ್ದಾರೆ. ಪೋಲಾಗುತ್ತಿರುವ ಕಡೆಗಳಲ್ಲಿ ಆಹಾರದ ಮಹತ್ವವನ್ನು ವಿವರಿಸಿ ಹೇಳುವ ಮತ್ತು ಪೋಲಾಗುವ ಆಹಾರವನ್ನು ಉಳಿಸಿ ಹಸಿದವರಿಗೆ ಕೊಡುವ ಕೆಲಸಕ್ಕೆ ಸರ್ಕಾರ ಮತ್ತು ಪ್ರಜ್ಞಾವಂತ ಸಂಘ– ಸಂಸ್ಥೆಗಳು ಮುಂದೆ ಬರಬೇಕು.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಮಳೆಯ ನೀರಿನಿಂದ ದಾರಿದ್ರ್ಯ ದೂರ!

ದಾರಿದ್ರ್ಯ ನಿವಾರಣೆಗೆ ಉದ್ಯೋಗಾವಕಾಶ ಹೆಚ್ಚಿಸಬೇಕೆಂದು ಬಿ.ಎಸ್.ಭಗವಾನ್ ಅಭಿಪ್ರಾಯಪಟ್ಟಿದ್ದಾರೆ (ಸಂಗತ, ಅ. 17). ಉದ್ಯೋಗ ಅವಕಾಶಗಳನ್ನು ಹೆಚ್ಚಿಸಲು ಪರಿಸರಸ್ನೇಹಿ ಸೌರಶಕ್ತಿ, ಮಳೆನೀರಿನ ಸಂಗ್ರಹದಿಂದ ಸಾಧ್ಯ. ವಿಶ್ವಸಂಸ್ಥೆ ವರದಿಯಂತೆ, ಪ್ರಪಂಚದಲ್ಲಿ ನೀರಿಗಾಗಿ ಪ್ರತಿವರ್ಷ ಒಂದು ಟ್ರಿಲಿಯನ್ ಡಾಲರ್ ವೆಚ್ಚ ಮಾಡಲಾಗುತ್ತಿದೆ. ಭಾರತವು ಲಕ್ಷಾಂತರ ಕೋಟಿ ರೂಪಾಯಿಯನ್ನು ಪೆಟ್ರೋಲ್ ಆಮದಿಗಾಗಿ ವ್ಯಯಿಸುತ್ತಿದೆ. ಉಚಿತವಾಗಿ ದೊರೆಯುವ ಸೌರಶಕ್ತಿಯಂತಹ ಪರ್ಯಾಯ ಶಕ್ತಿ ಮೂಲದ ಬಳಕೆ, ಮಳೆನೀರು ಸಂಗ್ರಹಿಸಿ, ಸಂರಕ್ಷಿಸಿ ಜಾಣ್ಮೆಯಿಂದ ಬಳಸುವ ಮೂಲಕ ಕೃಷಿಯಲ್ಲಿ ಹೆಚ್ಚಿನ ಉದ್ಯೋಗ ಸೃಷ್ಟಿಯಾದರೆ ದಾರಿದ್ರ್ಯ ನಿವಾರಣೆ ಸಾಧ್ಯವಾಗುತ್ತದೆ.

ಎಚ್.ಆರ್.ಪ್ರಕಾಶ್, ಕೆ.ಬಿ. ದೊಡ್ಡಿ, ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಾಧುಸ್ವಾಮಿ ಸಮಿತಿ ವರದಿಯೇ ಆಧಾರವಾಗಲಿ...

• ಪಿ.ರಾಜೀವ್

ಸುಪ್ರೀಂ ಕೋರ್ಟ್ ಆಗಸ್ಟ್ 1ರಂದು ನೀಡಿರುವ ತೀರ್ಪಿನೊಂದಿಗೆ ಒಳಮೀಸಲಾತಿ ಬೇಡಿಕೆಗೆ ತಾರ್ಕಿಕ ಅಂತ್ಯ ಸಿಕ್ಕಿದೆ. ರಾಜ್ಯದಲ್ಲಿ ನ್ಯಾ. ಸದಾಶಿವ ಆಯೋಗದ ವರದಿಯ ಆಧಾರದಲ್ಲಿ ಒಳಮೀಸಲಾತಿ ಜಾರಿಗೆ ತರಬೇಕು ಎಂಬ ಚರ್ಚೆ ನಡೆಯುತ್ತಿದೆ. ಸದಾಶಿವ ಆಯೋಗವು ಪರಿಶಿಷ್ಟ ಜಾತಿಗಳಿಗೆ ಈ ಹಿಂದೆ ಇದ್ದ ಶೇ 15ರ ಮೀಸಲಾತಿ ಆಧಾರದಲ್ಲಿ ಒಳಮೀಸಲಾತಿಯನ್ನು ವರ್ಗೀಕರಣ ಮಾಡಿತ್ತು. ಆ ವರದಿ ಈಗ ಅಪ್ರಸ್ತುತ.

ರಾಜ್ಯದಲ್ಲಿ ಈಗ ಶಿಕ್ಷಣ ಮತ್ತು ಉದ್ಯೋಗದಲ್ಲಿ ಪರಿಶಿಷ್ಟ ಜಾತಿಯವರಿಗೆ ಶೇ 17ರಷ್ಟು ಮೀಸಲಾತಿ ಇದೆ. ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರವು ಮೀಸಲಾತಿ ಪ್ರಮಾಣವನ್ನು ಶೇ 15ರಿಂದ ಶೇ 17ಕ್ಕೆ ಏರಿಸಿದೆ. ಆದರೆ, ಈ ಮೀಸಲಾತಿ ಇನ್ನೂ ಜಾರಿಗೆ ಬಂದಿಲ್ಲ ಎಂಬ ತಪ್ಪು ಮಾಹಿತಿ ಹರಡಿ ಗೊಂದಲ ಸೃಷ್ಟಿಸಲಾಗುತ್ತಿದೆ. ರಾಜ್ಯದಲ್ಲಿ ಹೊಸ ಮೀಸಲಾತಿ ಪ್ರಮಾಣ ಅನುಷ್ಠಾನಗೊಂಡಿದೆ. ಸರ್ಕಾರ ಈ ಬಗ್ಗೆ ಕಾನೂನು ರೂಪಿಸಿದೆ. ಅಧಿಸೂಚನೆಯನ್ನೂ ಹೊರಡಿಸಿದೆ.

ನಮ್ಮ ಪಕ್ಷದ ಸರ್ಕಾರ ಅಸ್ತಿತ್ವದಲ್ಲಿದ್ದಾಗ ಸದಾಶಿವ ವರದಿಯನ್ನು ತಿರಸ್ಕರಿಸಿತ್ತು. ಶೇ 17ರ ಮೀಸಲಾತಿಗೆ ಅನ್ವಯವಾಗುವಂತೆ ಒಳಮೀಸಲಾತಿ ಹಂಚಿಕೆ ಮಾಡಲು ಸಚಿವರಾಗಿದ್ದ ಮಾಧುಸ್ವಾಮಿ ನೇತೃತ್ವದಲ್ಲಿ ಸಮಿತಿ ರಚಿಸಿತ್ತು. ಈ ಸಮಿತಿಯ ಶಿಫಾರಸುಗಳು ಹೆಚ್ಚು ವೈಜ್ಞಾನಿಕವಾಗಿವೆ.

ಸಮಿತಿಯು 2011ರ ಜನಗಣತಿಯ ಆಧಾರದಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆಯನ್ನು ಪರಿಗಣಿಸಿದೆ. 1 ಕೋಟಿಯಷ್ಟಿರುವ ಜನಸಂಖ್ಯೆಯನ್ನು ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಿದೆ. ಪ್ರತಿ ಆರು ಲಕ್ಷ ಜನಸಂಖ್ಯೆಗೆ ಶೇ 1ರಷ್ಟು ಮೀಸಲಾತಿಯಂತೆ ಲೆಕ್ಕಹಾಕಿದೆ. ಸಮಿತಿಯು ಎಲ್ಲ ಉಪ ಜಾತಿಗಳಿಗೂ ಸಮುದಾಯಗಳಿಗೂ ನ್ಯಾಯ ಒದಗಿಸಲು ಪ್ರಯತ್ನಿಸಿದೆ.

ಭೋವಿ, ಬಂಜಾರ, ಕೊರಮ, ಕೊರಚ ಸಮುದಾಯಗಳು ಒಳಮೀಸಲಾತಿಯ ವಿರುದ್ಧವಾಗಿಲ್ಲ. ಆದರೆ, ಕಾಂಗ್ರೆಸ್, ಅಂತಹ ಅಭಿಪ್ರಾಯವನ್ನು ಜನರಲ್ಲಿ ಬಿತ್ತುತ್ತಿದೆ. ಕೇಂದ್ರ ಸರ್ಕಾರದ ಪರಿಶಿಷ್ಟ ಜಾತಿ ಆಯೋಗವು ಪರಿಶಿಷ್ಟ ಜಾತಿಯಲ್ಲಿರುವ 101 ಉಪಜಾತಿಗಳಲ್ಲಿ ಭೋವಿ, ಬಂಜಾರ, ಕೊರಮ, ಕೊರಚ ಸಮುದಾಯಗಳನ್ನು ಮೀಸಲಾತಿ ಪಡೆಯುವ ಜಾತಿಗಳ ಪಟ್ಟಿಯಿಂದ ಶಾಶ್ವತವಾಗಿ ಕೈಬಿಡುವ ಬಗ್ಗೆ ರಾಜ್ಯ ಸರ್ಕಾರದ ಅಭಿಪ್ರಾಯ ಕೇಳಿತ್ತು. ಈ ಸಮುದಾಯಗಳನ್ನು ಯಾವುದೇ ಕಾರಣಕ್ಕೂ ಕೈಬಿಡಬಾರದು ಎಂಬ ಅಭಿಪ್ರಾಯವನ್ನು ಹಿಂದಿದ್ದ ಬಿಜೆಪಿ ನೇತೃತ್ವದ ಸರ್ಕಾರ ವ್ಯಕ್ತಪಡಿಸಿತ್ತು.

ಆದರೆ, ಈ ಸಮುದಾಯಗಳಿಗಿರುವ ಮೀಸಲಾತಿಯನ್ನು ಕಿತ್ತುಕೊಳ್ಳಲಾಗುತ್ತಿದೆ ಎಂದು ರಾಜ್ಯದಲ್ಲಿ ಸುಳ್ಳು ಮಾಹಿತಿ ಹರಡಲಾಯಿತು. ಇದರಿಂದ ಸಮುದಾಯಗಳಲ್ಲಿ ಆತಂಕ ತಲೆದೋರಿತು. ಮೀಸಲಾತಿ ಎಲ್ಲಿ ರದ್ದಾಗುತ್ತದೆಯೋ ಎಂಬ ಭಯದಿಂದ ಸಮುದಾಯದವರು ಒಳಮೀಸಲಾತಿಗೆ ವಿರೋಧ ವ್ಯಕ್ತಪಡಿಸಿದ್ದರು. ಸದಾಶಿವ ಆಯೋಗವು ಈ ಸಮುದಾಯಗಳಿಗೆ ಶೇ 3ರಷ್ಟು ಮೀಸಲಾತಿ ನೀಡಬೇಕು ಎಂದು ಶಿಫಾರಸು ಮಾಡಿತ್ತು. ಮಾಧುಸ್ವಾಮಿ ಸಮಿತಿಯು ಶೇ 4.5ರಷ್ಟು ಮೀಸಲಾತಿ ನೀಡಬೇಕು ಎಂದು ಶಿಫಾರಸು ಮಾಡಿದೆ. ಇದು ವೈಜ್ಞಾನಿಕವಾಗಿದೆ. ಬಂಜಾರ ಸಮುದಾಯಕ್ಕೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಇಲ್ಲಿಯವರೆಗೂ ಸಿಕ್ಕಿಲ್ಲ. ಇದರಿಂದ ವಿದ್ಯಾವಂತರಿಗೆ ನಷ್ಟವಾಗಿದೆ. ಶೇ 4.5ರಷ್ಟು ಮೀಸಲಾತಿಯಿಂದ ಸಮುದಾಯದ ಮಕ್ಕಳಿಗೆ ಶಿಕ್ಷಣ, ಉದ್ಯೋಗದಲ್ಲಿ ಅವಕಾಶಗಳು ಸಿಗಲಿವೆ.

ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರಕ್ಕೆ ಒಳ ಮೀಸಲಾತಿಯನ್ನು ವೈಜ್ಞಾನಿಕವಾಗಿ ಜಾರಿ ಮಾಡುವ ಇಚ್ಛೆ ಇಲ್ಲ. ಕಣ್ಣೊರೆಸುವ ತಂತ್ರ ಅನುಸರಿಸುತ್ತಿದೆ. ಮಾಧುಸ್ವಾಮಿ ಸಮಿತಿ ಶಿಫಾರಸಿನಂತೆ ರಾಜ್ಯದಲ್ಲಿ ಒಳಮೀಸಲಾತಿ ಜಾರಿಗೆ ಬಂದರಷ್ಟೇ ಪರಿಶಿಷ್ಟ ಜಾತಿಯ ಎಲ್ಲ ಸಮುದಾಯಗಳಿಗೂ ನ್ಯಾಯ ಸಿಗಲಿದೆ.

ಲೇಖಕ: ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ

ಸುಪ್ರೀಂ ಕೋರ್ಟ್ ತೀರ್ಪಿನ ಬಳಿಕ ಒಳ ಮೀಸಲಾತಿ ವಿಚಾರ ಮತ್ತೆ ಮುನ್ನೆಲೆಗೆ ಬಂದಿದೆ. 'ಪ್ರಜಾವಾಣಿ'ಯ 'ಅನುಭವ ಮಂಟಪ'ದ ಸರಣಿ ಲೇಖನಗಳ ಮೂಲಕ ಸಮಾಜ, ಸಮುದಾಯದ ಹಲವು ಪ್ರಮುಖರು ಈ ವಿಚಾರಕ್ಕೆ ಸಂಬಂಧಿಸಿದಂತೆ ತಮ್ಮ ವಾದ, ದೃಷ್ಟಿಕೋನ ಮಂಡಿಸಿದ್ದಾರೆ. ಒಳ ಮೀಸಲಾತಿಗೆ ಸಂಬಂಧಿಸಿ ಬಹುತೇಕ ಆಯಾಮಗಳು ಸರಣಿಯಲ್ಲಿ ಚರ್ಚೆಗೊಳಗಾಗಿವೆ. ಈ ಪಟ್ಟಿಗೆ ಇಂದಿನ ಮೂರು ಲೇಖನಗಳು ಸೇರಿದ್ದು, ಭಿನ್ನ ಹಿನ್ನೆಲೆಯ ಮೂವರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ

ಸಮತಳ ಮೀಸಲಾತಿಯೇ ದಾರಿ

• ಪ್ರೊ.ಎಂ.ನಾರಾಯಣಸ್ವಾಮಿ ತ್ಯಾವನಹಳ್ಳಿ



ಪರಿಶಿಷ್ಟರ ಒಳ ಮೀಸಲಾತಿಯ ಹೋರಾಟಕ್ಕೆ ಮೂವತ್ತು ವರ್ಷಗಳ ಇತಿಹಾಸವಿದೆ ಎಂದು ಹೇಳಲಾಗುತ್ತಿದೆ. ಒಳ ಮೀಸಲಾತಿಗಾಗಿ ಪರಿಶಿಷ್ಟ ಜಾತಿಯ ಅಂದಿನ ಶೇಕಡ 15 ಮೀಸಲಾತಿ ಪ್ರಮಾಣವನ್ನು ವರ್ಗೀಕರಣ ಮಾಡಬೇಕು ಎಂಬ ಬೇಡಿಕೆ ಮುನ್ನೆಲೆಗೆ ಬಂತು. 'ವರ್ಗೀಕರಣ'ದ ಬದಲಿಗೆ 'ಉಪವರ್ಗೀಕರಣ' ಎಂಬ ಪರಿಕಲ್ಪನೆಯನ್ನು ಬಳಸಿ ರೋಸ್ಟರ್ ಪದ್ಧತಿಯಲ್ಲಿ 'ಸಮತಳ ಮೀಸಲಾತಿ'ಯನ್ನು (ಹಾರಿಜಾಂಟಲ್ ರಿಸರ್ವೇಷನ್) ಕಲ್ಪಿಸಿದ್ದರೆ ಈ ಸಮಸ್ಯೆ ಎಂದೋ ಬಗೆಹರಿಯುತ್ತಿತ್ತು ಎನಿಸುತ್ತದೆ. ಅಂತಹ 'ಸಮತಳ' ಮೀಸಲಾತಿಯನ್ನು ಅನುಷ್ಠಾನ ಮಾಡಿದ್ದರೆ, ಪರಿಶಿಷ್ಟರಲ್ಲಿ ಪ್ರಾತಿನಿಧ್ಯ ಸಿಗದಿದ್ದ ವಂಚಿತ ಹಾಗೂ ಅಂಚಿನ ಜಾತಿಗಳಿಗೆ ಉದ್ಯೋಗ ಸಿಕ್ಕಿ ದಶಕಗಳೇ ಸರಿದುಹೋಗುತ್ತಿದ್ದವು. ನೇಮಕಾತಿಯಲ್ಲಿ ಕೆಲವು ಜಾತಿಗಳಿಗೆ ಸಾಮಾಜಿಕ ನ್ಯಾಯ ಸಿಗುತ್ತಿತ್ತು.

ಈಗಾಗಲೇ ಜಾರಿಯಲ್ಲಿರುವ ಸಮತಳ ಮೀಸಲಾತಿಯ ಉದಾಹರಣೆಗಳನ್ನು ಗಮನಿಸಬೇಕಿದೆ. ಸಮತಳ ಮೀಸಲಾತಿಯು ಸಾಮಾನ್ಯ ಅರ್ಹತೆಯ ಗುಂಪಿನಿಂದ ಹಿಡಿದು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ 1, 2ಎ, 2ಬಿ, 3ಎ ಹಾಗೂ 3ಬಿ ಗುಂಪುಗಳಿಗೂ ಅನ್ವಯಿಸುತ್ತದೆ. ಮಹಿಳಾ ಮೀಸಲಾತಿ, ಮಾಜಿ ಸೈನಿಕರು, ಅಂಗವಿಕಲರು ಗುಂಪಿನ ಅಭ್ಯರ್ಥಿಗಳಿಗೆ ಯಾವುದೇ ಒಂದು ಮೀಸಲಾತಿ ಗುಂಪಿನ ಒಳಗೆ (ಒಳ ಮೀಸಲಾತಿ) ಸಮತಳ ಮೀಸಲಾತಿಯನ್ನು 1996ರ ಜುಲೈನಿಂದ ಜಾರಿಗೆ ಬರುವಂತೆ ಕೊಡಲಾಗಿದೆ. ಸದ್ಯ, ಸಮತಳ ಮೀಸಲಾತಿಯು ಸಾಧ್ಯವಾದಷ್ಟು ಮಟ್ಟಿಗೆ ಪಾಲನೆಯಾಗುತ್ತಿದೆ.

ಇದೇ ರೀತಿಯ ಸಮತಳ ಮೀಸಲಾತಿಯನ್ನು ಒಳ ಮೀಸಲಾತಿಯ ಲೆಕ್ಕದಲ್ಲಿ ಪರಿಶಿಷ್ಟ ಜಾತಿಯನ್ನು ಒಳಗುಂಪುಗಳಾಗಿ ವಿಂಗಡಿಸಿ ನೀಡಬಹುದಿತ್ತಲ್ಲವೇ ಎಂಬ ಪ್ರಶ್ನೆ ಏಳುತ್ತದೆ. ಹೀಗೆ ಮಾಡಿದ್ದರೆ, ಮುಖ್ಯವಾಗಿ ಒಳ ಮೀಸಲಾತಿ ಕೇಳುತ್ತಿರುವ ಮಾದಿಗ ಮತ್ತು ಸಮಾನಾಂತರ ಜಾತಿಗಳಿಗೆ ಈಗಾಗಲೇ ಹಲವು ಹುದ್ದೆಗಳು ದಕ್ಕುತ್ತಿದ್ದವು. ಆ ಮೂಲಕ ಪರಿಶಿಷ್ಟ ಜಾತಿಯ ಹಿಂದಿನ ಶೇ 15 ಅಥವಾ ಈಗಿನ ಶೇ 17 ಮೀಸಲಾತಿ ಪ್ರಮಾಣವನ್ನು ಒಂದು ಅಖಂಡ ಪ್ರಮಾಣವನ್ನಾಗಿ ಸಂವಿಧಾನದ ಅನುಚ್ಛೇದ 16(4) ಮತ್ತು 341ರಂತೆ ಉಳಿಸಿಕೊಳ್ಳಬಹುದು.

ಪಂಜಾಬ್ ಮತ್ತು ತಮಿಳುನಾಡು ಕಂಡುಕೊಂಡಿರುವ ಸಮತಳ ಮೀಸಲಾತಿಯ ಸರಿದಾರಿಯು ನಮ್ಮ ರಾಜ್ಯದಲ್ಲೂ ಒಪ್ಪಿಗೆಯಾಗಬೇಕಿದೆ. ಆ ಮೂಲಕ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ ಎಲ್ಲಾ 101 ಜಾತಿಗಳೂ ಶೇ 17 ಮೀಸಲಾತಿಯ ಒಗ್ಗಟ್ಟನ್ನು ಪ್ರದರ್ಶಿಸಬೇಕಿದೆ.

ರಾಜ್ಯ ಸಿವಿಲ್ ಸೇವೆಗಳಲ್ಲಿ ಪರಿಶಿಷ್ಟ ಜಾತಿಗೆ ಶೇ 17ರಷ್ಟು ಮತ್ತು ಪರಿಶಿಷ್ಟ ಪಂಗಡಕ್ಕೆ ಶೇ 7ರಷ್ಟು ಮೀಸಲಾತಿ ನಿಗದಿಗೊಳಿಸಿ 2022ರ ಡಿಸೆಂಬರ್ 28ರಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಸದ್ಯ ಈ ಆದೇಶದ 100 ಬಿಂದುಗಳ ರೋಸ್ಟರ್ ಚಕ್ರ ಜಾರಿಯಲ್ಲಿದೆ. ಅದರಂತೆ, ಪರಿಶಿಷ್ಟ ಜಾತಿಗೆ 01, 09, 15, 23, 27, 33, 41, 46, 49, 53, 59, 67, 75, 81, 89, 93, ಮತ್ತು 96ನೇ ಬಿಂದುಗಳನ್ನು ಮೀಸಲಿಡಲಾಗಿದೆ. ಈ ಬಿಂದುಗಳಿಗೆ ಮಹಿಳಾ ಮೀಸಲಾತಿ, ಗ್ರಾಮೀಣ ಅಭ್ಯರ್ಥಿ, ಮಾಜಿ ಸೈನಿಕರು, ಕನ್ನಡ ಮಾಧ್ಯಮ ಅಭ್ಯರ್ಥಿ, ಯೋಜನೆಗಳಿಂದ ನಿರಾಶ್ರಿತರಾದ ಅಭ್ಯರ್ಥಿ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ನವೆಂಬರ್ 2002ರ ಆದೇಶದಲ್ಲಿ ನಿಗದಿಪಡಿಸಲಾದ ಸಮತಳ ಮೀಸಲಾತಿಯ ಬಿಂದುಗಳು ಅನ್ವಯವಾಗುತ್ತವೆ. ಸಮತಳ ಮೀಸಲಾತಿಯಲ್ಲಿ ಯಾವುದೇ ಪರಿಶಿಷ್ಟ ಜಾತಿಯ ಗುಂಪು ಪರಸ್ಪರ ಪ್ರತ್ಯೇಕ ಗುಂಪಾಗುವುದಿಲ್ಲ. ಇಲ್ಲಿ ಪರಸ್ಪರ 'ಒಳಗೊಳ್ಳುವಿಕೆ'ಯ ಮೂಲಕ ತಟ್ಟೆಯ ಊಟವನ್ನು ಹಂಚಿಕೊಳ್ಳಬೇಕಿದೆ.

ಶೇ 17ರಲ್ಲಿ ಕಡ್ಡಿ ಮುರಿದಂತೆ ವಿಭಾಗಗಳನ್ನಾಗಿ ಮಾಡಿ, ಶೇಕಡ ಏಳೋ, ಆರೋ, ಮೂರೋ, ಒಂದೋ ಮಾಡಿ ಮೀಸಲಾತಿ ನಿಗದಿ ಮಾಡುವುದಕ್ಕಿಂತ, ಈ ಹಂಚುವಿಕೆಯನ್ನೇ ಸಮತಳ ಮೀಸಲಾತಿಯ ಮೂಲಕ ಮಾಡಿದರೆ ನೋಡುವ ಕಣ್ಣುಗಳಿಗೆ ಒಗ್ಗಟ್ಟಾದರೂ ಕಾಣಿಸಬಹುದು. ಈಗಾಗಲೇ ಇರುವ ಹಲವು ಸಮಸ್ಯೆಗಳ ಜೊತೆಗೆ, ಮುಂದೆ ಒದಗಬಹುದಾದ ಪರಿಶಿಷ್ಟರ ಸಮಸ್ಯೆಗಳನ್ನು ಒಗ್ಗಟ್ಟಿನಿಂದ ಹೋರಾಡಿ ಬಗೆಹರಿಸಿಕೊಳ್ಳಬಹುದು. ಸಮತಳ ಮೀಸಲಾತಿಯ ಮೂಲಕ ನ್ಯಾಯ ಪಡೆಯುವುದು ಪರಿಶಿಷ್ಟರಿಗಿರುವ ವಿವೇಕದ ಸರಿದಾರಿ.

ಲೇಖಕ: ಕರ್ನಾಟಕ ಮೀಸಲಾತಿ ಕಾವಲು ಸಮಿತಿಯ ಮಾಜಿ ಪ್ರಧಾನ ಕಾರ್ಯದರ್ಶಿ

ಒಳ ಮೀಸಲಿನ ಒಡಲಾಳ

ಒಳ ಮೀಸಲಾತಿಯೇ ಜೀವಜಲ

• ಎಚ್.ಲಕ್ಷ್ಮೀನಾರಾಯಣಸ್ವಾಮಿ

ಪ್ರತ್ಯೇಕ ಮೀಸಲಾತಿಗಾಗಿ ಮಾದಿಗ ಜನಾಂಗ ಆರಂಭಿಸಿದ ಒಳಮೀಸಲಾತಿ ಚಳವಳಿಗೆ ಮೂರು ದಶಕಗಳು ಸಲ್ಲುತ್ತಿವೆ. ದಲಿತ ಚಳವಳಿ (ದಸಂಸ) ಸಮಗ್ರತೆಯ ನೋಟಕ್ಕೆ ಕಣ್ಣಾಗದ ಕಾರಣ, ಮಾದಿಗ ಚಳವಳಿ ಹುಟ್ಟಿತ್ತಾದರೂ, ಅದು ದಸಂಸದ ಬೇರುಗಳಿಂದಲೇ ಕವಲೊಡೆಯಿತು. ಮೀಸಲಾತಿ ಹಂಚಿಕೆಯ ಅಸಮಾನತೆಯನ್ನು ನಾಯಕರೆನಿಸಿಕೊಂಡವರು ಒಪ್ಪದಾದರು; ಮಾದಿಗರ ಹಕ್ಕನ್ನು ಜಾತಿವಾದವೆಂದು ಬಿಂಬಿಸಿದ್ದಲ್ಲದೇ, ಅದು ಒಗ್ಗಟ್ಟು ಒಡೆಯುತ್ತದೆಂಬ ಸನ್ನಿರೋಗಕ್ಕೆ ಅನೇಕ ಪ್ರಗತಿಪರರನ್ನೂ ದೂಡಲಾಯಿತು. ಗಂಡಭೇರುಂಡ ಕಥೆಯ ಮೂಲಕ ಬೆಣ್ಣೆಯಲ್ಲಿ ಕೂದಲು ತೆಗೆದ ಹಾಗೆ ವಿರೋಧ ಒಡ್ಡಲಾಯಿತು. ಮಾದಿಗರದ್ದು ಅಂಬೇಡ್ಕರ್ ವಿರೋಧಿ ನಡೆ, ಸಂವಿಧಾನದಲ್ಲಿ ಇದಕ್ಕೆಲ್ಲ ಅವಕಾಶವಿಲ್ಲ, ಅಂಬೇಡ್ಕರ್‌ಗೆ ಪರ್ಯಾಯವಾಗಿ ಬಾಬುಜಗಜೀವನರಾಮ್ ಅವರನ್ನು ತರುತ್ತಿದ್ದಾರೆ ಎಂದು ದಲಿತರಲ್ಲಿ ದ್ವೇಷದ ಭಾವನೆ ಬಿತ್ತಲಾಯಿತು.

ಅನೇಕ ವೈರುಧ್ಯ, ಪಿತೂರಿಗಳ ನಡುವೆಯೂ ಮಾದಿಗ ಜನಾಂಗ ಪುಟಗೋಸಿ ಚಳವಳಿ, ಅರೆಬೆತ್ತಲೆ ಚಳವಳಿ, ಉಪವಾಸ ಸತ್ಯಾಗ್ರಹ, ಪಾದಯಾತ್ರೆಗಳಂತಹ ಹತ್ತು ಹಲವು ಕಾರ್ಯಕ್ರಮಗಳ ಮೂಲಕ ನಿರಂತರ ಹೆಜ್ಜೆ ಹಾಕುತ್ತ, ಇದೀಗ ನ್ಯಾಯಾಂಗದಲ್ಲೂ ಯಶಸ್ಸು ಕಂಡಿದೆ. ಒಳ ಮೀಸಲಾತಿ ಹೋರಾಟವು ಕರ್ನಾಟಕದ ಪ್ರಮುಖ ಹೋರಾಟವಾಗಿದ್ದು, 12ನೇ ಶತಮಾನದಲ್ಲಿ ನಡೆದ ಕಲ್ಯಾಣ ಕ್ರಾಂತಿಯ ಮುಂದುವರಿದ ಭಾಗವಾಗಿದೆ. ದಲಿತರ ಜೊತೆಗೆ ದಲಿತೇತರ ಬರಹಗಾರರು, ಚಿಂತಕರು, ಹೋರಾಟಗಾರರು ಇದೊಂದು ನ್ಯಾಯೋಚಿತವಾದ ಚಳವಳಿ ಎಂದು ದನಿಗೂಡಿಸಿದ್ದಾರೆ. ಕರ್ನಾಟಕದ ಚರಿತ್ರೆಯಲ್ಲಿ ಜನಾಂಗವೊಂದು ನಡೆಸಿದ ಸುದೀರ್ಘವಾದ ಹೋರಾಟ ಇದು.

ಆರಂಭದಲ್ಲಿ ಮಾದಿಗ ಸಂಘಟನೆಗಳನ್ನು ವಿರೋಧಿಸುತ್ತಿದ್ದ ಸಾಹಿತಿ, ಕಲಾವಿದ, ಚಿಂತಕರು, ಇದು ಮೀಸಲಾತಿ ವರ್ಗೀಕರಣಕ್ಕೆ ಸೂಕ್ತವಾದ ಚಳವಳಿಯೆಂದು ನಂತರದಲ್ಲಿ ಮಾನ್ಯಮಾಡಿ ಅದರೊಟ್ಟಿಗೆ ಹೆಜ್ಜೆ ಹಾಕಿದರು. ಮಾದಿಗ ಮೀಸಲಾತಿ ಹೋರಾಟ ಸಮಿತಿ, ಮಾದಿಗ ಸಂಘಟನೆಗಳ ಒಕ್ಕೂಟ, ವಿಶ್ವ ಆದಿಜಾಂಬವ ಮಹಾಸಭಾ, ಮಾದಿಗ ಮಹಾಸಭಾದಂತಹ ಹತ್ತಾರು ಸಂಘಟನೆಗಳು ಜಾತಿಯ ಕೀಳರಿಮೆಯನ್ನು ತೊಳೆದವು. ಆದರೆ, ದಸಂಸಗೆ ಬಿ.ಕೃಷ್ಣಪ್ಪ ಅವರು ಸಿಕ್ಕ ಹಾಗೆ ಮಾದಿಗ ಚಳವಳಿಗೆ ಕರ್ನಾಟಕದಲ್ಲಿ ಸಮರ್ಥ ನಾಯಕತ್ವ ದಕ್ಕಲಿಲ್ಲ.

ದಲಿತ ಚಳವಳಿಗೆ 50 ವರ್ಷಗಳು ಸಲ್ಲುತ್ತಿವೆ ಎಂದು ಹೇಳುವುದಾದರೆ, ಅದರಲ್ಲಿ 30 ವರ್ಷದ ಮಾದಿಗ ಚಳವಳಿಯ ಕೊಡುಗೆಯನ್ನು ಸ್ಮರಿಸಿಕೊಳ್ಳುವುದು ನ್ಯಾಯೋಚಿತ. ದಲಿತ ಚಳವಳಿಯಲ್ಲಿ ಮಾದಿಗರ ಬೆವರೂ ಇದೆ. ಆದರೆ, ಒಳ ಮೀಸಲಾತಿ ಚಳವಳಿಯಲ್ಲಿ ಮಾದಿಗರ ಬೆವರಷ್ಟೇ ಇದೆ.

ಪಾರಂಪರಿಕವಾಗಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತಾ ಬಂದರೂ ಮಾದಿಗರ ಒಳ ಮೀಸಲಾತಿಗೆ ಕಾಂಗ್ರೆಸ್ ಏಕೆ ಸ್ಪಂದಿಸಲಿಲ್ಲ, ಈಗಲೂ ಸ್ಪಂದಿಸುತ್ತಿಲ್ಲ ಎಂಬ ಪ್ರಶ್ನೆಗೆ ಮಾದಿಗರನ್ನು ಕಾಂಗ್ರೆಸ್ ಟಿಷ್ಯೂನಂತೆ ಬಳಸುತ್ತಿದೆ ಎಂಬುದೇ ಕಣ್ಣಮುಂದಿನ ಉತ್ತರ. ಕಾಂಗ್ರೆಸ್‌ನಲ್ಲಿ ಪರಿಶಿಷ್ಟ ಸಮಾಜದ ಇತರೆ ನಾಯಕರಿಗೆ ಸಿಗುವಷ್ಟು ಮಾನ್ಯತೆ ಎಡಗೈ ಸಮಾಜದವರಿಗೆ ಸಿಗುತ್ತಿಲ್ಲ. ಎಡಗೈ ಪಂಗಡದವರನ್ನು ಚುನಾವಣೆಗಳಲ್ಲಿ ಸೋಲುವಂತೆ ಮಾಡಿ, ಅವರಿಗೆ ಅವಕಾಶ ತಪ್ಪಿಸಲಾಗಿದೆ.

ಆರ್‌ಎಸ್‌ಎಸ್‌ನವರು ಒಳ ಮೀಸಲಾತಿಯ ವಿಚಾರದಲ್ಲಿ ಮಾದಿಗರ ಪರವಾಗಿ ನಿಂತು, ಅವರನ್ನು ಇತರರ ಮೇಲೆ ಎತ್ತಿ ಕಟ್ಟುತ್ತಿದ್ದಾರೆಂಬ ಚರ್ಚೆ ಇಂದು ಎಲ್ಲೆಡೆ ನಡೆಯುತ್ತಿದೆ. ಆದರೆ, ದಸಂಸ ನಾಯಕರು ಒಳ ಮೀಸಲಾತಿಯನ್ನು ಇತ್ಯರ್ಥಪಡಿಸಿದ್ದರೆ, ಅದು ಇಂದು ಆರ್‌ಎಸ್‌ಎಸ್ ಅಂಗಳದ ಕೂಸೇಕೆ ಆಗುತಿತ್ತು? ಮಾದಿಗರ ಹಸಿವು ದಸಂಸಗೆ ಒಡಕಿನಂತೆ ಕಂಡರೆ, ಅಂಬೇಡ್ಕರ್ ಸಾಹೇಬರ ಹಸಿವು ಗಾಂಧೀಜಿಗೆ ಹೇಗೆ ಕಂಡಿರಬೇಕು? ಬರಹಗಳಲ್ಲಿ ಭಾಷಣಗಳಲ್ಲಿ ಸಮಾನತೆಯ ಬಗ್ಗೆ ಮಾತನಾಡಿದ ಉತ್ತಮೋತ್ತಮರೇ ಒಳ ಮೀಸಲಾತಿ ಕೂಸು ಆರ್‌ಎಸ್‌ಎಸ್ ಅಂಗಳದಲ್ಲಿ ಆಡಿ ಬೆಳೆಯಲಿಕ್ಕೆ ಕಾರಣೀಭೂತರಾಗಿದ್ದಾರೆ.

30 ವರ್ಷಗಳಿಂದ ಒಳ ಮೀಸಲಾತಿ ವಿರೋಧಿಸುತ್ತಾ ಆತ್ಮವಂಚನೆ ಮಾಡಿಕೊಂಡಿದ್ದವರು ಈಗಲಾದರೂ ದನಿಯಾಗಿ ನಿಲ್ಲಬೇಕಿತ್ತು. ಆದರೆ, ಅದಾವುದಕ್ಕೂ ಸಿದ್ಧವಿರದೇ, ದತ್ತಾಂಶವಿಲ್ಲ, ಮರು ಜಾತಿಗಣತಿ ಆಗಬೇಕಿದೆ ಎಂಬೆಲ್ಲ ನೆಪ ಮುಂದಿಡುತ್ತಿದ್ದಾರೆ. ಸದಾಶಿವ ಆಯೋಗದ ವರದಿ, ಕಾಂತರಾಜ ವರದಿಯಲ್ಲಿ ಪರಿಶಿಷ್ಟರ ದತ್ತಾಂಶವಿಲ್ಲವೇ? ಒಳ ಮೀಸಲಾತಿ ಚಳವಳಿ ಹಿಂಸಾ ಚಳವಳಿಯಾಗಿ ರೂಪುಗೊಳ್ಳುವುದಕ್ಕೆ ಮೊದಲು ಸರ್ಕಾರ ಎಚ್ಚೆತ್ತುಕೊಳ್ಳಬೇಕಿದೆ. ಅತ್ಯಂತ ಶೋಚನೀಯ ಸ್ಥಿತಿಯಲ್ಲಿರುವ ಮಾದಿಗ ಜನಾಂಗಕ್ಕೆ ಒಳ ಮೀಸಲಾತಿಯ ಹೊರತಾಗಿ ಬೇರಾವ ಜೀವಜಲವಿಲ್ಲ.

ಲೇಖಕ: ಸಾಹಿತಿ

ಸಿನಿ ಬಿಟ್ಸ್

ಹೊರಬಂತು 'ಬಘೀರ'ನ ಹಾಡು

ಶ್ರೀಮುರಳಿ ನಟನೆಯ 'ಬಘೀರ' ಚಿತ್ರ ಅಕ್ಟೋಬರ್ 31ರಂದು ತೆರೆಗೆ ಬರುತ್ತಿದೆ. ಅದರ ಬೆನ್ನಲ್ಲೇ ಚಿತ್ರದ ಪ್ರಚಾರ ಕಾರ್ಯ ಪ್ರಾರಂಭವಾಗಿದ್ದು, 'ರುಧಿರ ಧಾರ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಹೊಂಬಾಳೆ ಫಿಲ್ಮ್ಸ್ ನಿರ್ಮಾಣದ ಚಿತ್ರವನ್ನು ಸೂರಿ ನಿರ್ದೇಶಿಸಿದ್ದಾರೆ.

'ರುಧಿರ ಧಾರ' ಶೀರ್ಷಿಕೆ ಗೀತೆಗೆ ಅನಿರುದ್ಧ ಶಾಸ್ತ್ರೀ ಸಾಹಿತ್ಯ ಬರೆದು, ಹಾಡಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತವಿದೆ. ಮಾತಿಲ್ಲದೆ, ಬರೀ ಆ್ಯಕ್ಷನ್ ದೃಶ್ಯಗಳಿಂದಲೇ ಕೂಡಿರುವ ಚಿತ್ರದ ಟೀಸರ್ ಮುರಳಿ ಬತ್ತಳಿಕೆಯಿಂದ ಮತ್ತೊಂದು ಮಾಸ್ ಚಿತ್ರದ ಮುನ್ಸೂಚನೆ ನೀಡಿತ್ತು. ಸಮಾಜದಲ್ಲಿನ ದುಷ್ಟಶಕ್ತಿಯನ್ನು ಮಟ್ಟಹಾಕಲು ಮುಖವಾಡ ಧರಿಸಿರುವ ಶ್ರೀಮುರಳಿ ವಿಭಿನ್ನ ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದಾರೆ.

'ಬಘೀರ'ನಿಗೆ ಪ್ರಶಾಂತ್ ನೀಲ್ ಕಥೆ ಬರೆದಿದ್ದು, 'ಉಗ್ರಂ' ಬಳಿಕ ಪ್ರಶಾಂತ್ ನೀಲ್– ಶ್ರೀಮುರಳಿ ಜೋಡಿಯ ಬಹುನಿರೀಕ್ಷಿತ ಚಿತ್ರ ಇದಾಗಿದೆ. ನವೀನ್ ಕುಮಾರ್ ಛಾಯಾಗ್ರಹಣವಿದೆ. 'ಕೆಜಿಎಫ್: ಚಾಪ್ಟರ್ 2', 'ಸಲಾರ್' ರೀತಿಯೇ ಈ ಸಿನಿಮಾದ ಕಥೆ ಕೂಡ ಕತ್ತಲಿನಲ್ಲಿಯೇ ನಡೆಯುತ್ತದೆ ಎಂಬ ಮುನ್ಸೂಚನೆ ನೀಡುತ್ತಿದೆ ಚಿತ್ರದ ಪೋಸ್ಟರ್ ಹಾಗೂ ಟೀಸರ್.

ಸ್ಮೈಲ್ ಶ್ರೀನುಗೆ ಜೊತೆಯಾದ ಕೆ.ಮಂಜು

'ರಾಜಾಹುಲಿ', 'ರಾಮ ಶಾಮ ಭಾಮ' ಸೇರಿದಂತೆ ಸಾಕಷ್ಟು ಸಿನಿಮಾಗಳನ್ನು ನಿರ್ಮಿಸಿರುವ ನಿರ್ಮಾಪಕ ಕೆ.ಮಂಜು ಈಗ ಯುವ ನಿರ್ದೇಶಕ ಸ್ಮೈಲ್ ಶ್ರೀನು ಜೊತೆ ಕೈಜೋಡಿಸಿದ್ದಾರೆ. 'ತೂಫಾನ್', 'ಬಳ್ಳಾರಿ ದರ್ಬಾರ್' ಮೊದಲಾದ ಚಿತ್ರಗಳನ್ನು ನಿರ್ದೇಶಿಸಿರುವ ಶ್ರೀನು ಅವರ ಹೊಸ ಚಿತ್ರವನ್ನು ಕೆ.ಮಂಜು ನಿರ್ಮಾಣ ಮಾಡಲಿದ್ದಾರೆ.

'ಸ್ಮೈಲ್ ಶ್ರೀನು, ನಾನು ಸೇರಿ ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಳ್ಳುವಂಥ ಒಂದು ಸಿನಿಮಾ ಮಾಡಬೇಕೆಂದು ಬಹಳ ದಿನಗಳಿಂದ ಅಂದುಕೊಂಡಿದ್ದೆವು. ಈ ಬಗ್ಗೆ ಸಾಕಷ್ಟು ಚರ್ಚಿಸಿದ್ದೆವು. ಅದಕ್ಕೀಗ ಕಾಲ ಕೂಡಿಬಂದಿದೆ. ಇದೊಂದು ನ್ಯಾಷನಲ್ ಸಬ್ಜೆಕ್ಟ್ ಆಗಿದ್ದು, ಸಾಮಾಜಿಕ ಕಳಕಳಿ ಇರುವ, ಇಡೀ ಪ್ರಪಂಚಕ್ಕೆ ಗೊತ್ತಿರುವ ದೊಡ್ಡ ವ್ಯಕ್ತಿಯೊಬ್ಬರ ಬದುಕಿನ ನೈಜಘಟನೆ ಆಧಾರಿತ ಚಿತ್ರ. ಸದ್ಯ ಚಿತ್ರದ ಸ್ಕ್ರಿಪ್ಟ್ ವರ್ಕ್ ನಡೆಯುತ್ತಿದೆ. ಇದು ಯಾರ ಕುರಿತಾದ ಚಿತ್ರ ಮತ್ತು ಕಲಾವಿದರುಗಳು ಯಾರೆಂದು ಶೀಘ್ರದಲ್ಲಿ ತಿಳಿಸುತ್ತೇವೆ' ಎಂದಿದ್ದಾರೆ ಕೆ.ಮಂಜು.

'ನಾನು ಈವರೆಗೆ ಗುಣಮಟ್ಟದ ಸಿನಿಮಾಗಳನ್ನೇ ನಿರ್ದೇಶನ ಹಾಗೂ ನಿರ್ಮಾಣ ಮಾಡುತ್ತಾ ಬಂದಿರುವೆ. ಅವುಗಳನ್ನು ಸರಿಯಾದ ರೀತಿಯಲ್ಲಿ ಹೇಗೆ ಮಾರ್ಕೆಟಿಂಗ್ ಮಾಡಬೇಕು, ಚಿತ್ರಗಳನ್ನು ಯಾವ ರೀತಿ ಜನರಿಗೆ ತಲುಪಿಸಬೇಕು ಎಂಬುದನ್ನು ತಿಳಿದುಕೊಳ್ಳಲು ನನ್ನ ಚಿತ್ರಕ್ಕೆ ಅನುಭವಿ ನಿರ್ಮಾಪಕರು ಹಾಗೂ ವಿತರಕರೂ ಆದ ಕೆ. ಮಂಜು ಅವರು ಜೊತೆಯಾಗಿದ್ದಾರೆ. ಉಳಿದ ಮಾಹಿತಿಗಳನ್ನು ಶೀಘ್ರದಲ್ಲಿ ಹಂಚಿಕೊಳ್ಳುತ್ತೇವೆ' ಎಂದು ಶ್ರೀನು ತಿಳಿಸಿದ್ದಾರೆ.

ಸ್ಮೈಲ್ ಶ್ರೀನು, ಕೆ.ಮಂಜು

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಬಾಲಿವುಡ್ ನಟ ಸಲ್ಮಾನ್ ಖಾನ್ ಅವರ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಮುಂಬೈನಲ್ಲಿ ಎನ್‌ಸಿಪಿ ಮುಖಂಡ, ಮಾಜಿ ಸಚಿವ ಬಾಬಾ ಸಿದ್ದೀಕಿ ಅವರ ಹತ್ಯೆಯ ನಂತರ ಈ ವಿಡಿಯೊಗಳನ್ನು ಇಂಟರ್‌ನೆಟ್ ಬಳಕೆದಾರರು ಹಂಚಿಕೊಳ್ಳುತ್ತಿದ್ದು, ವಿಡಿಯೊದ ಮೂಲಕ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯಿಗೆ ಸಲ್ಮಾನ್ ಖಾನ್ ಎಚ್ಚರಿಕೆ ನೀಡಿದ್ದಾರೆ ಎಂದು ಹೇಳುತ್ತಿದ್ದಾರೆ. ಆದರೆ, ಇದು ಸುಳ್ಳು. ಹರಿದಾಡುತ್ತಿರುವ ವಿಡಿಯೊ ಈಗಿನದ್ದಲ್ಲ.

ವಿಡಿಯೊ ತುಣುಕಿನ ಒಂದು ಕೀಫ್ರೇಮ್ ಅನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ ವರ್ಲ್ಡ್ ಆಫ್ ಕ್ಲಿಪ್ಸ್ ಎಂಬ ಯು–ಟ್ಯೂಬ್ ಚಾನೆಲ್‌ನಲ್ಲಿ 2020ರ ಏಪ್ರಿಲ್ 19ರಂದು ಅಪ್‌ಲೋಡ್ ಮಾಡಲಾದ ವಿಡಿಯೊ ಸಿಕ್ಕಿತು. 'ಕೋವಿಡ್ ಲಾಕ್‌ಡೌನ್ ಬಗ್ಗೆ ಸಲ್ಮಾನ್ ಖಾನ್ ಅವರು ಭಾವುಕ ಸಂದೇಶ ನೀಡಿದ್ದಾರೆ' ಎಂಬ ಶೀರ್ಷಿಕೆ ಅಡಿಯಲ್ಲಿ ವಿಡಿಯೊ ಅಪ್‌ಲೋಡ್ ಮಾಡಲಾಗಿತ್ತು. ಈ ವಿಡಿಯೊ 'ಸಂಸದ್ ಟಿವಿ'ಯ ಅಧಿಕೃತ ಯು–ಟ್ಯೂಬ್ ಚಾನೆಲ್‌ನಲ್ಲೂ ಅಪ್‌ಲೋಡ್ ಆಗಿರುವುದು ಕಂಡು ಬಂತು. ಸ್ವತಃ ಸಲ್ಮಾನ್ ಖಾನ್ ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲೂ ವಿಡಿಯೊವನ್ನು ಪೋಸ್ಟ್ ಮಾಡಿದ್ದರು. 2020ರಲ್ಲಿ ಕೋವಿಡ್ ಸಮಯದಲ್ಲಿ ಲಾಕ್‌ಡೌನ್ ನಿಯಮ ಉಲ್ಲಂಘಿಸಬಾರದು ಎಂಬ ಸಂದೇಶವನ್ನು ಸಲ್ಮಾನ್ ಖಾನ್ ವಿಡಿಯೊದಲ್ಲಿ ನೀಡಿದ್ದು, ಈಗ ಸಾಮಾಜಿಕ ಜಾಲತಾಣಗಳ ಬಳಕೆದಾರರು, ವಿಡಿಯೊದ ನಿರ್ದಿಷ್ಟ ಭಾಗವನ್ನು ಎಡಿಟ್ ಮಾಡಿ, 'ಸಲ್ಮಾನ್ ಖಾನ್ ಬಿಷ್ಣೋಯಿಗೆ ಎಚ್ಚರಿಕೆ ನೀಡಿದ್ದಾರೆ' ಎಂದು ಹೇಳಿ ಪೋಸ್ಟ್ ಮಾಡುತ್ತಿದ್ದಾರೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



'ನ' ತೆಗೆದು 'ನಿ' ಹಾಕಿ ಅಷ್ಟೆ!

ನುಡಿ ಬೆಳಗು 47

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ಅಲೆಗ್ಸಾಂಡರ್ ಮಹಾರಾಜ ಇಡೀ ಜಗತ್ತನ್ನೇ ಗೆದ್ದಿದ್ದ. ಆತ ಒಂದು ಮಾತು ಹೇಳಿದ್ದ. 'ನಾನು ಸತ್ತ ನಂತರ ಹೆಣವನ್ನು ಪೆಟ್ಟಿಗೆಯಲ್ಲಿ ತುಂಬುವಾಗ ನನ್ನ ಎರಡೂ ಕೈಗಳು ಹೊರಗೆ ಕಾಣುವಂತೆ ಇರಲಿ. ಯಾಕೆಂದರೆ ಜಗತ್ತನ್ನೇ ಗೆದ್ದ ರಾಜ ಸಾಯುವಾಗ ಖಾಲಿ ಕೈಯಲ್ಲಿ ಹೋದ ಎನ್ನುವುದು ಜಗತ್ತಿಗೆ ಗೊತ್ತಾಗಲಿ' ಎಂದು. 'ನಾನು ಶ್ರೀಮಂತ ರಾಷ್ಟ್ರದ ಬಡ ರಾಜ' ಎಂದು ಅವ ಹೇಳುತ್ತಿದ್ದ.

ಒಬ್ಬನಿಗೆ 20 ಲಕ್ಷ ರೂಪಾಯಿ ಲಾಟರಿ ಬಂದಿತ್ತು. ಅದನ್ನು ಆತನಿಗೆ ತಿಳಿಸಿದರೆ ಆಘಾತವಾಗಬಹುದು ಎಂದು ಆತನ ಸಂಬಂಧಿಗಳು ಈ ವಿಷಯವನ್ನು ಮಠದ ಸ್ವಾಮೀಜಿಗಳಿಂದ ಹೇಳಿಸುವುದು ಎಂದು ನಿರ್ಧರಿಸಿದರು. ವಿಷಯವನ್ನು ನಿಧಾನವಾಗಿ ತಿಳಿಸುವಂತೆ ಸ್ವಾಮೀಜಿಯನ್ನು ಕೇಳಿಕೊಂಡರು. ಅದರಂತೆ ಸ್ವಾಮೀಜಿ ಆತನಿಗೆ, 'ನಿನಗೆ 2.5 ಲಕ್ಷ ರೂಪಾಯಿ ಲಾಟರಿ ಹಣ ಬಂದರೆ ಏನು ಮಾಡ್ತಿ' ಎಂದು ಕೇಳಿದರು. ಆತ 'ಒಂದಿಷ್ಟು ಸಾಲ ಇದೆ, ಅದನ್ನು ತೀರಿಸುತ್ತೇನೆ' ಎಂದ. '5 ಲಕ್ಷ ರೂಪಾಯಿ ಬಂದರೆ?' ಅಂತ ಕೇಳಿದರು ಅಜ್ಜಾರು. 'ಮನೆ ದುರಸ್ತಿ ಮಾಡಿಸ್ತೀನಿ' ಅಂದ ಆತ. '10 ಲಕ್ಷ ರೂಪಾಯಿ ಬಂದರೆ?' ಮತ್ತೆ ಕೇಳಿದರು ಸ್ವಾಮಿಗಳು. '10 ಲಕ್ಷ ಬಂದರೆ ಮಗಳ ಮದುವೆ ಮಾಡಿಸ್ತೀನಿ. ಒಂದಿಷ್ಟು ಹೊಲ ತಗೋತೀನಿ' ಅಂದ. 'ಅಕಸ್ಮಾತ್ 20 ಲಕ್ಷ ರೂಪಾಯಿ ಲಾಟರಿ ಹಣ ಬಂತು ಅಂದ್ರೆ ಏನ್ ಮಾಡ್ತಿ' ಎಂದು ಕೇಳಿದಾಗ 'ಅದರಲ್ಲಿ 10 ಲಕ್ಷ ರೂಪಾಯಿ ಮಠಕ್ಕೆ ಕೊಡ್ತೀನಿ' ಎಂದ. ಆ ಮಾತನ್ನು ಕೇಳಿದ ಗುರುಗಳಿಗೇ ಹಾರ್ಟ್ ಅಟ್ಯಾಕ್ ಆಗಿತ್ತು. ಗುರುಗಳಿಗೇ ಹೀಗಾದರೆ ಇನ್ನು ಸಾಮಾನ್ಯ ಜನರ ಕತೆ ಏನು?

ನಂದು ಅನ್ನೋದು ಒಳಕ್ಕೆ ಕುಂತಿದ್ದಕ್ಕೇ ಇಷ್ಟೆಲ್ಲಾ ದುಃಖ ಆಗತೈತಿ ಮನುಷ್ಯಗ. ಯಾವುದನ್ನೂ ನಂದು ಅನಬ್ಯಾಡಿ ಅಂತೀರಿ. ದೇಹ ನಂದಲ್ಲ. ಹೊಲ ನಂದಲ್ಲ. ಸಂಪತ್ತು ನಂದಲ್ಲ ಅಂತೀರಿ. ಏನ್ ನಿಮ್ದು, ನಿಮ್ದು ಅಂತ ಹೇಳಕೋತ ಹೋಗಬೇಕೇನು? ಹಂಗೇನಿಲ್ಲ, ಆದರ ಬಸವಣ್ಣನವರು ಒಂದು ಮಾತು ಹೇಳ್ಯಾರ 'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ' ಅಂತ. ಹೊರಗೆ ವ್ಯವಹಾರದೊಳಗೆ ನಂದು ಅಂತಲೇ ಇರಬೇಕು. ಆದರೆ ಒಳಗೆ ಇದು ಶಿವ ನಿಂದು ಎಂಬ ಬೆಳಕು ಇರಬೇಕು. ಇದು ಅಧ್ಯಾತ್ಮ.

ಮನೆ ಕಟ್ಟಿದ ಮೇಲೆ ನಂದು ಅನ್ತೀವಿ ಖರೆ. ಆದರೆ ಕಲ್ಲು, ಮಣ್ಣು, ನೀರು ಇರದಿದ್ದರೆ ನಾವೆಲ್ಲಿ ಮನೆ ಕಟ್ಟಲು ಸಾಧ್ಯವಿತ್ತು? ಅದಕ್ಕೆ ಹೊರಗೆ ನಂದು ಅನಬೇಕು. ಒಳಗೆ ನಿಂದು ಅನಬೇಕು. ಪ್ರತಿ ದಿನ ಬೆಳಿಗ್ಗೆ ದೀಪ ಹಚ್ಚುವಾಗ ಇದು ನಾ ಹಚ್ಚಿದ ದೀಪವಲ್ಲ, ನೀ ಕೊಟ್ಟ ಬೆಳಕು ಅಂದರೆ ಜೀವನ ತಾಪ ಆಗಲ್ಲ. ಉಣ್ಣುವಾಗ ಇದು ನೀ ಕೊಟ್ಟ ಅನ್ನ ಅಂತ ಉಣ್ಣಬೇಕು. ಮನೆಯ ನೆರಳಲ್ಲಿ ಇರುವಾಗ ಇದು ನೀ ಕೊಟ್ಟ ನೆರಳು ಅಂತ ಇರಬೇಕು. ಅಡುಗೆ ಮನೆಗೆ ಹೋಗಿ ಹೆಂಡತಿಗೆ ಎಲ್ಲಾ ನಿಂದೇ ಅನಬೇಕು. ಹೊರಕ್ಕೆ ಬಂದರೆ ಸ್ನೇಹಿತರಿಗೆ ನನ್ನದೇನಿಲ್ಲ. ನೀವಿದ್ದಿದ್ದಕ್ಕೆ ನಾನು ಅನಬೇಕು. 'ನ' ಅಂದರೆ ಬಂಧನ, 'ನಿ' ಅಂದರೆ ಮುಕ್ತ. 'ನ' ತೆಗೆದು 'ನಿ' ಹಾಕೋದು ಅಷ್ಟೆ. ಇದು ಮನುಷ್ಯನನ್ನು ಹಗುರ ಮಾಡತೈತಿ. ಇಲ್ಲವಾದರೆ ಜೀವನ ಒಜ್ಜೆ ಆಗತೈತಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಅಕ್ಟೋಬರ್ 18, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಿನ ಕೃಷ್ಣಪ್ರತಿಪದ್ ಗಂ. 13-16 ನಕ್ಷತ್ರ: ಅಶ್ವಿನಿ ಗಂ. 13-26 ಯೋಗ: ವಜ್ರ ಗಂ. 21-34 ಕರಣ: ಕೌಲವ ಗಂ. 06-49, ತುಲಾ ಮಾಸದ 01 ನೇ ದಿನ, ಮಳೆನಕ್ಷತ್ರ: ಚಿತ್ರ 3.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-25 ಸೂರ್ಯಾಸ್ತ : 06-06
ಮುಸ್ಲಿಂ ದಿನಾಂಕ : 14 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ : 1, 4

ಮೇಷ: ಅವಿವಾಹಿತರ ಮನಸ್ಸಿಗೆ ಇಷ್ಟವಾಗುವ ರೀತಿಯ ಸಂಬಂಧಗಳು ಈ ದಿನ ಪ್ರಾಪ್ತಿ. ಕೌಟುಂಬಿಕವಾಗಿ ನೆಲೆ ನಿಂತಿದ್ದರಿಂದ ಮನಸ್ಸಿಗೆ ಸಮಾಧಾನ. ಮನಸ್ಸಿಗೆ ಮುದ ನೀಡುವಂಥ ಸಂಗತಿಗಳು ಜರುಗುತ್ತವೆ.

ವೃಷಭ: ವೃತ್ತಿಯಲ್ಲಿ ಅಧಿಕಾರಿಗಳು ಕಾರ್ಯಸಾಧನೆಯನ್ನು ಗುರುತಿಸಿ ಹಾಗೂ ಕೆಲಸಕ್ಕೆ ಅನುಕೂಲವಾಗುವ ರೀತಿಯಲ್ಲಿ ನಿಯಮವನ್ನು ಸಡಿಲಗೊಳಿಸುವರು. ಹೆಚ್ಚಿನ ಸೌಲಭ್ಯ ಒದಗಿಸಿ ಕೊಡುವರು.

ಮಿಥುನ: ಬಂದಿರುವ ಅವಕಾಶವನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂದು ಯೋಚಿಸಿ ಉಪಯೋಗಿಸಿಕೊಂಡರೆ ಪೂರ್ಣ ಪ್ರಮಾಣದ ಲಾಭಾಂಶ ಅನುಭವಕ್ಕೆ ಬರುವುದು. ನಿಲುವನ್ನು ತೀರ್ಮಾನಿಸುವುದು ಉತ್ತಮ.

ಕರ್ಕಾಟಕ: ದ್ವಿಸ್ವಭಾವದ ನಡವಳಿಕೆಯನ್ನು ಕೊಂಚ ಹಿಡಿತದಲ್ಲಿಟ್ಟುಕೊಂಡರೆ ಸಂದಿಗ್ಧ ಪರಿಸ್ಥಿತಿಗೆ ಸಿಲುಕುವುದು ತಪ್ಪುವುದು. ಮೋಸಗಳು ನಡೆಯಬಹುದಾದ ಪಾಲುದಾರಿಕೆಯಿಂದ ಹೊರಬರುವ ಚಿಂತನೆ ಸೂಕ್ತ.

ಸಿಂಹ: ಸ್ವಲ್ಪ ಪ್ರಯತ್ನಕ್ಕೂ ಹೆಚ್ಚಿನ ಫಲ ಪ್ರಾಪ್ತಿ. ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಹೆಣಗಬೇಕಾಗಬಹುದು. ಸಮಸ್ಯೆ ಇತ್ಯರ್ಥಗೊಂಡು ಪ್ರತಿವಾದಿಗಳು ನಿರುತ್ತರರಾಗುವರು.

ಕನ್ಯಾ: ಗೃಹಾಲಂಕಾರ ವಸ್ತುಗಳ ಅಥವಾ ಪೀಠೋಪಕರಣಗಳ ವ್ಯಾಪಾರದಿಂದ ಅಧಿಕ ಲಾಭ. ಪರಿಶ್ರಮಕ್ಕೆ ತಕ್ಕಂಥ ಫಲ ದೊರೆಯುವುದು ತುಸು ಕಷ್ಟವಾಗುವುದು.

ತುಲಾ: ನರರೋಗ ತಜ್ಞರಿಗೆ ಹೊಸ ಅನುಭವಗಳೊಂದಿಗೆ ವಿದೇಶ ಪ್ರಯಾಣದ ಸಾಧ್ಯತೆ. ವೃತ್ತಿ ನಡೆಸಲು ಅವಕಾಶ ಸಿಗಲಿದೆ. ಕೆಲಸದ ಒತ್ತಡದಿಂದ ದಿನಾಂತ್ಯದಲ್ಲಿ ಶಿರೋವೇದನೆ, ಬೆನ್ನುನೋವು ಕಾಣಿಸಿಕೊಳ್ಳಬಹುದು.

ವೃಶ್ಚಿಕ: ಪಾಲುದಾರಿಕೆಯಲ್ಲಿ ಉತ್ತಮ ಲಾಭ. ಆರ್ಥಿಕ ಪರಿಸ್ಥಿತಿಯಿಂದಾಗಿ ಮುಂದುವರಿಯಲು ಮತ್ತು ಕಾರ್ಯ ಕ್ಷೇತ್ರವನ್ನು ವಿಸ್ತರಿಸಲು ಪೂರಕವಾಗುವುದು. ಬಂಧುಗಳೊಡನೆ ಸುಖ ಭೋಜನ ನಡೆಯಬಹುದು.

ಧನು: ಆದಾಯಕ್ಕಿಂತ ಜಾಸ್ತಿ ಅನಿವಾರ್ಯತೆಯ ಖರ್ಚುಗಳು ಎದುರಾಗಬಹುದು. ಹಣಕಾಸಿನ ವಿಚಾರದಲ್ಲಿ ಜಾಗ್ರತೆ ವಹಿಸಿ. ಹೊಸ ಯೋಜನೆಗಳ ತಯಾರಿ ಕೆಲಸಗಳಿಗೆ ಒಳ್ಳೆಯ ಸಮಯ. ಸರಕು ಸಾಗಾಟದಿಂದ ಲಾಭ

ಮಕರ: ಬದುಕಿನ ಕವಲುದಾರಿಯಲ್ಲಿರುವ ದೇವತಾನುಗ್ರಹದಿಂದ ಸರಿಯಾದ ಮಾರ್ಗದರ್ಶನ ಸಿಗುವುದು. ಯಶಸ್ಸು ಹುಡುಕಿಕೊಂಡು ಬರುವುದರಿಂದ ಸಂತಸವಾಗಲಿದೆ. ಆದಾಯ ಉತ್ತಮ ಸ್ಥಿತಿಯಲ್ಲಿರುತ್ತದೆ.

ಕುಂಭ: ಕೌಟುಂಬಿಕ ನೆಮ್ಮದಿ ಸಮೃದ್ಧವಾಗಿದ್ದರೂ ಅಣ್ಣತಮ್ಮಂದಿರ ನಡುವೆ ಸಣ್ಣ-ಪುಟ್ಟ ಮಾನಸಿಕ ಕಿರಿಕಿರಿಗಳು ತಪ್ಪದು. ಮಕ್ಕಳಿಂದ ಅಹಿತಕರ ಕಾರ್ಯಗಳು ನಡೆದು ಮಾನಸಿಕ ಚಿಂತೆ ಉಂಟಾಗಬಹುದು.

ಮೀನ: ಮುಂದಿನ ಯೋಜನೆಗಳ ಕುರಿತು ಪರಿಣತರ ಜತೆ ಚರ್ಚೆಯನ್ನು ನಡೆಸಿ. ಹಂತ–ಹಂತವಾಗಿ ವಿವಾದಗಳ ನಿವಾರಣೆ ಆಗಲಿವೆ. ವಿದ್ಯಾರ್ಥಿಗಳಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಅಪಾರ ಉತ್ಸಾಹ ಮೂಡುವುದು.

ಪದಬಂಧ 5835

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
4.ಬಿತ್ತನೆಯ ಬೀಜ (2)
5.ವರ ನೀಡಿದ್ದು ಅನವಶ್ಯಕ ವಿವರಣೆ! (3)
6.ಮಂಗಳಗ್ರಹವನ್ನು ಹೀಗೂ ಕರೆಯುತ್ತಾರೆ (4)
7.ಲಾಬಿ ಮಾಡಿದಾಗ ಸಿಕ್ಕಿರುವ ಹೂವು (3)
9.ಆಯ್ದಕ್ಕಿ ಕಾಯಕವನ್ನು ಆರಿಸಿಕೊಂಡಿದ್ದ ಶರಣ ದಂಪತಿ (9)
11.ಅನ್ನ ಮಾಡುವ ಪಾತ್ರೆ (3)
14.ಅಹಿಂಸಾಮೂರ್ತಿ ಎಂಬ ಕೀರ್ತಿಗೆ ಭಾಜನರಾದ ಈ ಶರಣರ ಪತ್ನಿ ವೀರಮ್ಮ (4)
16.ಮಾತಿನ ಸರಣಿ (3)
17.ಸೊರಗಿರುವಂಥದ್ದು (2)

ಮೇಲಿಂದ ಕೆಳಕ್ಕೆ
1.ಸದ್ಯದ ಪರಿಸ್ಥಿತಿ (3)
2.ಮುದ್ರೆ ಮಾಡಲು ಬಳಸುವ ದ್ರವ್ಯ (3)
3.ನಾಣ್ಣುಡಿ ಇಲ್ಲಿ ಉಲ್ಟಾ ಆಗಿದೆ (2)
4.ಮಾರಾಟಕ್ಕೊಂದು ಪರ್ಯಾಯ ಪದ (3)
6.ದೋಣಿ ನಡೆಸುವ ವೃತ್ತಿಯಲ್ಲಿದ್ದ ಈ ಶರಣ ತನ್ನ ಹೆಸರನ್ನೇ ವಚನಾಂಕಿತ ಮಾಡಿಕೊಂಡಿದ್ದಾನೆ (7)
8.ಕಾಲ್ಪನಿಕ ಭೂತವು ಗುಮ್ಮಟದಲ್ಲಿದೆ! (2)
9.ಕಬ್ಬಿನ ಗಾಣ (2)
10.ಅಂದವಾಗಿರುವ ಮೇನೆ (3)
12.ರೀತಿಯೊಡಗಿರುವ ಸಂಪ್ರದಾಯ (3)
13.ಅಂಗುಳಿನ ಒಳಭಾಗ (3)
15.ತೋಳು ಅಥವಾ ಬಾಹು (2)



5834ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಸಲೀಸು 4.ಆರಂಬ 6.ಹರಳು 7.ಕಡ 8.ಭಗ್ನಮನೋರಥ 10.ರಜ 12.ನಗು 14.ನಾರಿಕೇಳಪಾಕ 16.ಗಾನ 17.ಕಲಿಲ 19.ದಡಾರ 20.ಸಾರಣೆ

ಮೇಲಿಂದ ಕೆಳಕ್ಕೆ: 1.ವಾಯುಸಂಚಾರ 2.ಸಮಾರಂಭ 3.ಸುಹ 4.ಆಳು 5.ಬಗ್ಗಡ 7.ಕಥನ 9.ಮರುಳ 11.ಜನಾನ 13.ಗುಲಾಮಗಿರಿ 15.ಕಟ್ಟಪ್ಪಣೆ 16.ಗಾವುದ 17.ಕರ 18.ಲಸಾ

ಸುಡೊಕು 6220

	3		9		2	1		6
1		6					8	
	8	2		6			4	5
7								
	5		7	1	4	2		8
4					6			7
2		5		7			6	
	6					8		
8		1	6		3		2	9

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6219 ಸುಡೊಕು

4	3	8	2	1	9	5	6	7
1	2	9	6	5	7	3	4	8
7	6	5	8	4	3	2	9	1
3	4	2	9	6	1	8	7	5
8	7	6	3	2	5	9	1	4
5	9	1	7	8	4	6	3	2
9	1	7	5	3	2	4	8	6
6	5	3	4	7	8	1	2	9
2	8	4	1	9	6	7	5	3

ಷೇರುಪೇಟೆ ವಹಿವಾಟು

494



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,971
ಇಂದಿನ ಅಂತ್ಯ	24,749
▼	221
ದಿನದ ಕನಿಷ್ಠ	24,728

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹550
12 ಕ್ಕೆ	₹75
ಮೈಸೂರು	
100ಕ್ಕೆ	₹555

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹255-479

ದ್ವಿತಳಿ (ಬಿ.ವಿ) ₹277-623

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹192

ಆರ್‌ಎಸ್‌ಎಸ್-5 ₹187

ಗುಡ್ ಲಾಟ್ ₹183

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹18000
ಎಸಿ	₹11370
ಆರ್‌ಪಿ	₹20000
ಆರ್‌ಸಿ	₹10375

ಚಿನ್ನದ ದರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನದ ದರ ಏರಿಕೆಯಾಗಿದ್ದರೆ, ಬೆಳ್ಳಿ ಧಾರಣೆ ಯಥಾಸ್ಥಿತಿಯಲ್ಲಿದೆ.

ಚಿನ್ನದ ದರವು 10 ಗ್ರಾಂಗೆ ₹450 ಏರಿಕೆಯಾಗಿ, ₹79,350ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹93,500 ಇದೆ. ಆಭರಣ ತಯಾರಕರಿಂದ ಖರೀದಿ ಹೆಚ್ಚಳವಾಗಿರುವುದೇ ಹಳದಿ ಲೋಹದ ಬೆಲೆ ಏರಿಕೆಗೆ ಕಾರಣ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಬೆಂಗಳೂರಿನಲ್ಲಿ 10 ಗ್ರಾಂ ಚಿನ್ನದ ದರವು ₹80,450 ಮತ್ತು ಬೆಳ್ಳಿ ಧಾರಣೆಯು ಕೆ.ಜಿಗೆ ₹96,600 ಇದೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

4th DEATH ANNIVERSARY

H.K. Seetha Bai

W/o late M. Ramachandra Rao Sindhya

Inspector of Police

A mother is she who can take the place of all others but whose place no one else can take.

Sindhya & Brothers, Gubbi, Tumkur Dist.

Ph: 7019912316, 9741130135

ಶ್ರದ್ಧಾಂಜಲಿ

ಶ್ರೀ ಜಿ. ವೈ. ಮುನೇಶ್ವರಸಾ (ಮೋತಿ)

ಜನನ : 06-09-1955

ಮರಣ : 17-10-2024

ಮೆ॥ ಮಧುಸೂದನ್ ಸಿಲ್ಕ್ ಫ್ಯಾಬ್ರಿಕ್ಸ್ ಕಬ್ಬನ್‌ಪೇಟೆ, ಬೆಂಗಳೂರು

ಇಂತಿ ದುಃಖತಪ್ತರು:

ಧರ್ಮಪತ್ನಿ, ಮಗ, ಮಗಳು ಹಾಗೂ ಕುಟುಂಬವರ್ಗದವರು

ರಿಯಾಯಿತಿ ದರದಡಿ ಮಾರಾಟಕ್ಕೆ ಒತ್ತು– ಕೇಂದ್ರ ಸರ್ಕಾರ ಹೇಳಿಕೆ

ಈರುಳ್ಳಿ ದರ ನಿಯಂತ್ರಣಕ್ಕೆ ಕ್ರಮ

ನವದೆಹಲಿ (ಪಿಟಿಐ): ಪ್ರಸ್ತುತ ದೇಶದ ವಿವಿಧೆಡೆ ಕೆ.ಜಿ ಈರುಳ್ಳಿ ಧಾರಣೆಯು ₹75ಕ್ಕೆ ತಲುಪಿದೆ. ದೀಪಾವಳಿ ಹಬ್ಬದ ಅಂಗವಾಗಿ ಚಿಲ್ಲರೆ ಮಾರುಕಟ್ಟೆಯಲ್ಲಿ ಬೆಲೆ ನಿಯಂತ್ರಣಕ್ಕೆ ಕ್ರಮವಹಿಸಲಾಗಿದೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯವು ಗುರುವಾರ ತಿಳಿಸಿದೆ.

ಸೆಪ್ಟೆಂಬರ್ 5ರಂದು ರಿಯಾಯಿತಿ ದರದಡಿ ಕೆ.ಜಿಗೆ ₹35 ದರದಲ್ಲಿ ಈರುಳ್ಳಿ ಮಾರಾಟಕ್ಕೆ ಕೇಂದ್ರ ಸರ್ಕಾರ ಚಾಲನೆ ನೀಡಿತ್ತು. ರಾಷ್ಟ್ರೀಯ ಸಹಕಾರ ಗ್ರಾಹಕರ ಮಹಾಮಂಡಳ (ಎನ್‌ಸಿಸಿಎಫ್), ನಾಫೆಡ್ ಮಳಿಗೆ, ಇ–ಕಾಮರ್ಸ್ ವೇದಿಕೆ, ಮದರ್ ಡೇರಿ ಮಳಿಗೆ ಮತ್ತು ಕೇಂದ್ರೀಯ ಭಂಡಾರದ ಮೂಲಕ ಮಾರಾಟ ಆರಂಭಿಸಿತ್ತು.

‘ರಿಯಾಯಿತಿ ದರದಡಿ ಈರುಳ್ಳಿ ಮಾರಾಟಕ್ಕೆ ಸಂಚಾರ ವಾಹನಗಳ ಸಂಖ್ಯೆಯನ್ನು 600ರಿಂದ ಒಂದು ಸಾವಿರಕ್ಕೆ ಹೆಚ್ಚಿಸಲಾಗುವುದು’ ಎಂದು ಸಚಿವಾಲಯದ ಕಾರ್ಯದರ್ಶಿ ನಿಧಿ ಖರೆ ತಿಳಿಸಿದ್ದಾರೆ.

‘ಸದ್ಯ 4.7 ಲಕ್ಷ ಟನ್ ಕಾಪು ದಾಸ್ತಾನು ಇದೆ. ಈ ಪೈಕಿ ರಿಯಾಯಿತಿ ದರದಡಿ ಮಾರಾಟಕ್ಕೆ ಎನ್‌ಸಿಸಿಎಫ್‌ಗೆ 91,960 ಟನ್ ಮತ್ತು ನಾಫೆಡ್‌ಗೆ 86,000 ಟನ್ ಹಂಚಿಕೆ ಮಾಡಲಾಗಿದೆ. ಗುಜರಾತ್, ಮಹಾರಾಷ್ಟ್ರ, ಕರ್ನಾಟಕ, ಗೋವಾ, ರಾಜಸ್ಥಾನ, ಬಿಹಾರ, ಉತ್ತರ ಪ್ರದೇಶ ಮತ್ತು ಮಣಿಪುರದಲ್ಲಿ ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ’ ಎಂದು ತಿಳಿಸಿದ್ದಾರೆ.

‘ಮಹಾರಾಷ್ಟ್ರದಿಂದ ಹೊಸ ಫಸಲು ಮಾರುಕಟ್ಟೆಗೆ ಬಂದ ಬಳಿಕ ಈರುಳ್ಳಿ ಬೆಲೆಯು ನಿಯಂತ್ರಣಕ್ಕೆ ಬರಲಿದೆ. ಸರ್ಕಾರವು ಕಾಪು ದಾಸ್ತಾನಿಗಾಗಿ ಕೆ.ಜಿ ₹28 ದರದಲ್ಲಿ ಈರುಳ್ಳಿ ಖರೀದಿಸಲಿದೆ’ ಎಂದು ಹೇಳಿದ್ದಾರೆ.

ಈರುಳ್ಳಿ ಮೇಲಿನ ಕನಿಷ್ಠ ರಫ್ತು ದರವನ್ನು ಶೇ 40ರಿಂದ ಶೇ 20ಕ್ಕೆ ಇಳಿಕೆ ಮಾಡಿದ್ದರಿಂದ ಅಲ್ಪ ಪ್ರಮಾಣದಲ್ಲಿ ಬೆಲೆ ಏರಿಕೆಯಾಗಿತ್ತು ಎಂದು ತಿಳಿಸಿದ್ದಾರೆ.

ದೆಹಲಿ: ₹100 ದಾಟಿದ ಟೊಮೆಟೊ ದರ

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಟೊಮೆಟೊ ಧಾರಣೆಯು ಕೆ.ಜಿಗೆ ₹100 ದಾಟಿದೆ. ಸದ್ಯ ಮಹಾರಾಷ್ಟ್ರದಲ್ಲಿ ಕಟಾವು ಆರಂಭಗೊಂಡಿದೆ. ಅಲ್ಲಿಂದ ಪೂರೈಕೆ ಹೆಚ್ಚಳ ಆಗಲಿದ್ದು, ಮುಂದಿನ ದಿನಗಳಲ್ಲಿ ಬೆಲೆ ಇಳಿಕೆಯಾಗಲಿದೆ’ ಎಂದು ನಿಧಿ ಖರೆ ತಿಳಿಸಿದ್ದಾರೆ.

‘ಬೆಲೆ ನಿಯಂತ್ರಣಕ್ಕೆ ಸರ್ಕಾರ ಕ್ರಮವಹಿಸಿದೆ. ದೆಹಲಿ ಮತ್ತು ಮುಂಬೈನಲ್ಲಿ ಎನ್‌ಸಿಸಿಎಫ್ ಮೂಲಕ ರಿಯಾಯಿತಿ ದರದಲ್ಲಿ ಕೆ.ಜಿಗೆ ₹65ರಂತೆ ಮಾರಾಟವನ್ನು ಮುಂದುವರಿಸಲಾಗುವುದು’ ಎಂದು ಹೇಳಿದ್ದಾರೆ.

ಕರ್ನಾಟಕ ಮತ್ತು ಆಂಧ್ರಪ್ರದೇಶದಲ್ಲಿ ಮುಂಗಾರು ಅವಧಿಯಲ್ಲಿ ಸುರಿದ ಭಾರಿ ಮಳೆಗೆ ಟೊಮೆಟೊ ಬೆಳೆ ಹಾನಿಗೀಡಾಗಿತ್ತು. ಜೊತೆಗೆ, ರೋಗ ಬಾಧೆ ಕಾಣಿಸಿಕೊಂಡಿತ್ತು. ಹಾಗಾಗಿ, ಈ ಎರಡು ರಾಜ್ಯದಿಂದ ಪೂರೈಕೆ ಕಡಿಮೆಯಾಗಿತ್ತು. ಇದರಿಂದ ಚಿಲ್ಲರೆ ಮಾರುಕಟ್ಟೆಯಲ್ಲಿ ಟೊಮೆಟೊ ಧಾರಣೆ ಏರಿಕೆಯಾಗಿದೆ ಎಂದು ತಿಳಿಸಿದ್ದಾರೆ.

ಅಕ್ಟೋಬರ್ ಮೊದಲ ವಾರದಲ್ಲಿ ದೆಹಲಿ ಮತ್ತು ಮುಂಬೈನಲ್ಲಿ ರಿಯಾಯಿತಿ ದರದಲ್ಲಿ 10 ಸಾವಿರ ಕೆ.ಜಿ ಟೊಮೆಟೊ ಮಾರಾಟ ಮಾಡಲಾಗಿದೆ.

ಸಾಗಣೆಗೆ ರೈಲು ಬಳಕೆ

ಮಹಾರಾಷ್ಟ್ರದಿಂದ ದೆಹಲಿಗೆ ಇದೇ ಮೊದಲ ಬಾರಿಗೆ ರೈಲಿನ ಮೂಲಕ 1,600 ಟನ್ ಈರುಳ್ಳಿ ಸಾಗಣೆಗೆ ಕೇಂದ್ರ ಸರ್ಕಾರವು ಕ್ರಮಕೈಗೊಂಡಿದೆ.

ಇದಕ್ಕಾಗಿ ಕಾಂದಾ ಎಕ್ಸ್‌ಪ್ರೆಸ್‌ಗೆ ವಿಶೇಷ ಬೋಗಿಗಳನ್ನು ಅಳವಡಿಸಲಾಗಿದೆ. ಮಹಾರಾಷ್ಟ್ರದ ಲಾಸನ್‌ಗಾಂವ್‌ನಿಂದ ಹೊರಟಿರುವ ಈ ರೈಲು ಅಕ್ಟೋಬರ್ 20ರಂದು ದೆಹಲಿಯ ಕಿಶನ್‌ಗಂಜ್ ನಿಲ್ದಾಣವನ್ನು ತಲುಪಲಿದೆ ಎಂದು ನಿಧಿ ಖರೆ ತಿಳಿಸಿದ್ದಾರೆ.

ಇದರಿಂದ ಸಾಗಣೆ ವೆಚ್ಚ ತಗ್ಗಲಿದೆ. ನಾಸಿಕ್‌ನಿಂದ ದೆಹಲಿಗೆ ಒಂದು ಬೋಗಿ (56 ಟ್ರಕ್‌ಗಳಿಗೆ ಸಮ) ಈರುಳ್ಳಿ ಸಾಗಣೆಗೆ ₹70.20 ಲಕ್ಷ ವೆಚ್ಚವಾಗಲಿದೆ. ರಸ್ತೆ ಮೂಲಕ ಇಷ್ಟೇ ಪ್ರಮಾಣದ ಈರುಳ್ಳಿ ಸಾಗಣೆಗೆ ₹84 ಲಕ್ಷ ವೆಚ್ಚವಾಗಲಿದೆ. ಒಟ್ಟಾರೆ ಸಾಗಣೆ ವೆಚ್ಚದಲ್ಲಿ ₹13.80 ಲಕ್ಷ ಉಳಿತಾಯವಾಗಲಿದೆ ಎಂದು ವಿವರಿಸಿದ್ದಾರೆ.

ಸುದ್ದಿ 2 ನಿಮಿಷ

ಹುಂಡೈ ಐಪಿಒ ದಾಖಲೆ

ನವದೆಹಲಿ (ಪಿಟಿಐ): ಹುಂಡೈ ಮೋಟರ್ ಇಂಡಿಯಾ ಕಂಪನಿಯ ಆರಂಭಿಕ ಸಾರ್ವಜನಿಕ ಕೊಡುಗೆಗೆ (ಐಪಿಒ) ಹೂಡಿಕೆದಾರರಿಂದ ಉತ್ತಮ ಸ್ಪಂದನೆ ಸಿಕ್ಕಿದೆ. ಬಿಡ್ ಸಲ್ಲಿಕೆಗೆ ಕೊನೆಯ ದಿನವಾದ ಗುರುವಾರ ಕಂಪನಿಯು ನಿರೀಕ್ಷಿಸಿದ್ದ ₹27,870 ಕೋಟಿ ಬಂಡವಾಳ ಸಂಗ್ರಹವಾಗಿದೆ.

ಒಟ್ಟು 9.97 ಕೋಟಿ ಷೇರುಗಳಿಗೆ ಬಿಡ್ ಕರೆಯಲಾಗಿತ್ತು. ಷೇರುಪೇಟೆಯ ಮಾಹಿತಿ ಪ್ರಕಾರ 14 ಕೋಟಿ ಷೇರುಗಳಿಗೆ ಬಿಡ್ ಸಲ್ಲಿಕೆಯಾಗಿದೆ. ಕಂಪನಿಯ ಷೇರುಗಳಿಗೆ ಒಟ್ಟಾರೆ 1.41 ಪಟ್ಟು ಬೇಡಿಕೆ ಕಂಡುಬಂದಿದೆ.

ಅರ್ಹ ಸಾಂಸ್ಥಿಕ ಹೂಡಿಕೆದಾರರ (ಕ್ಯುಐಬಿ) ವಿಭಾಗದಲ್ಲಿ 3.88 ಪಟ್ಟು ಅರ್ಜಿ ಸಲ್ಲಿಕೆಯಾಗಿವೆ. ಚಿಲ್ಲರೆ ವೈಯಕ್ತಿಕ ಹೂಡಿಕೆದಾರರ ವಿಭಾಗದಿಂದ ಶೇ 44ರಷ್ಟು ಬಿಡ್ ಸಲ್ಲಿಕೆಯಾಗಿದೆ. ಸಾಂಸ್ಥಿಕೇತರ ಹೂಡಿಕೆದಾರರ ವಿಭಾಗವು ಶೇ 39ರಷ್ಟು ಅರ್ಜಿ ಸ್ವೀಕರಿಸಿದೆ.

ಸೋಮವಾರದಂದು ಕಂಪನಿಯು ಆರಂಭಿಕ ಹೂಡಿಕೆದಾರರ (ಆ್ಯಂಕರ್ ಇನ್‌ವೆಸ್ಟರ್) ಮೂಲಕ ₹8,315 ಕೋಟಿ ಬಂಡವಾಳ ಸಂಗ್ರಹಿಸಿತ್ತು.

ಭಾರತೀಯ ಜೀವ ವಿಮಾ ನಿಗಮವು ಐಪಿಒ ಮೂಲಕ ₹21 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಿತ್ತು. ಇದಾದ ಬಳಿಕ ಹುಂಡೈ ಕಂಪನಿಯು ಐಪಿಒ ಮೂಲಕ ಅತಿಹೆಚ್ಚು ಬಂಡವಾಳ ಸಂಗ್ರಹಿಸಿ, ದಾಖಲೆ ಬರೆದಿದೆ. ಪ್ರತಿ ಷೇರಿಗೆ ₹1,865ರಿಂದ ₹1,960 ಬೆಲೆ ನಿಗದಿಪಡಿಸಿತ್ತು.

ನೇರ ತೆರಿಗೆ ಸಂಗ್ರಹ ದಶಕದಲ್ಲಿ ಶೇ 182ರಷ್ಟು ಏರಿಕೆ

ನವದೆಹಲಿ (ಪಿಟಿಐ): ಕಳೆದ ಹತ್ತು ವರ್ಷದ ಅವಧಿಯಲ್ಲಿ ನೇರ ತೆರಿಗೆ ಸಂಗ್ರಹದಲ್ಲಿ ಶೇ 182ರಷ್ಟು ಏರಿಕೆಯಾಗಿದೆ ಎಂದು ಆದಾಯ ತೆರಿಗೆ ಇಲಾಖೆ ತಿಳಿಸಿದೆ.

ಇಲಾಖೆಯು ಗುರುವಾರ ಈ ಕುರಿತು ವಾರ್ಷಿಕವಾರು ತೆರಿಗೆ ಸಂಗ್ರಹದ ಪಟ್ಟಿ ಪ್ರಕಟಿಸಿದೆ. ಈ ಅವಧಿಯಲ್ಲಿ ಕಾರ್ಪೊರೇಟ್ ತೆರಿಗೆ ಸಂಗ್ರಹವು ದ್ವಿಗುಣಗೊಂಡಿದ್ದರೆ, ವೈಯಕ್ತಿಕ ಆದಾಯ ತೆರಿಗೆ ಸಂಗ್ರಹದಲ್ಲಿ ನಾಲ್ಕು ಪಟ್ಟು ಹೆಚ್ಚಳವಾಗಿದೆ.

2023–24ನೇ ಆರ್ಥಿಕ ವರ್ಷದಲ್ಲಿ ₹19.60 ಲಕ್ಷ ಕೋಟಿ ಸಂಗ್ರಹವಾಗಿದೆ. ಈ ಪೈಕಿ ಕಾರ್ಪೊರೇಟ್ ತೆರಿಗೆ ₹9.11 ಲಕ್ಷ ಕೋಟಿ ಹಾಗೂ ವೈಯಕ್ತಿಕ ಆದಾಯ ತೆರಿಗೆಯು ₹10.45 ಲಕ್ಷ ಕೋಟಿ ಸಂಗ್ರಹವಾಗಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು, 2014–15ರ ಆರ್ಥಿಕ ವರ್ಷದಲ್ಲಿ ₹6.96 ಲಕ್ಷ ಕೋಟಿ ನೇರ ತೆರಿಗೆ ಸಂಗ್ರಹಿಸಿತ್ತು. ಈ ಪೈಕಿ ₹4.29 ಲಕ್ಷ ಕೋಟಿ ಕಾರ್ಪೊರೇಟ್ ತೆರಿಗೆ ಹಾಗೂ ವೈಯಕ್ತಿಕ ಆದಾಯ ತೆರಿಗೆಯು ₹2.66 ಲಕ್ಷ ಕೋಟಿ ಸಂಗ್ರಹವಾಗಿತ್ತು.

2014–15ರಲ್ಲಿ 4.04 ಕೋಟಿ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಕೆಯಾಗಿದ್ದವು. 2023–24ರಲ್ಲಿ 8.16 ಕೋಟಿ ರಿಟರ್ನ್ಸ್ ಸಲ್ಲಿಕೆಯಾಗಿವೆ. ತೆರಿಗೆ ಪಾವತಿದಾರರ ಸಂಖ್ಯೆಯು 5.70 ಕೋಟಿಯಿಂದ 10.41 ಕೋಟಿಗೆ ಹೆಚ್ಚಳವಾಗಿದೆ.

ನೇರ ತೆರಿಗೆ ಮತ್ತು ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಅನುಪಾತವು ಶೇ 5.55ರಿಂದ ಶೇ 6.64ಕ್ಕೆ ಏರಿಕೆಯಾಗಿದೆ.

ಕನಿಷ್ಠ ₹2.5 ಲಕ್ಷದಿಂದ ಗರಿಷ್ಠ ₹7 ಲಕ್ಷದವರೆಗೆ ಸೌಲಭ್ಯ

ಇಪಿಎಫ್ ಖಾತೆದಾರರಿಗೆ ಠೇವಣಿ ಆಧಾರಿತ ವಿಮೆ ವಿಸ್ತರಣೆ

ನವದೆಹಲಿ (ಪಿಟಿಐ): ನೌಕರರ ಭವಿಷ್ಯ ನಿಧಿ ಸಂಘಟನೆಯಿಂದ (ಇಪಿಎಫ್‌ಒ) ಇಪಿಎಫ್ ಖಾತೆದಾರರಿಗೆ ನೀಡುವ ಉದ್ಯೋಗಿಯ ಠೇವಣಿ ಆಧಾರಿತ ವಿಮಾ (ಇಡಿಎಲ್‌ಐ) ಸೌಲಭ್ಯವನ್ನು ಪ್ರಸಕ್ತ ವರ್ಷದ ಏಪ್ರಿಲ್ 28ರಿಂದ ಪೂರ್ವಾನ್ವಯ ವಾಗುವಂತೆ ಮುಂದಿನ ಮೂರು ವರ್ಷದವರೆಗೆ ವಿಸ್ತರಿಸಲಾಗಿದೆ ಎಂದು ಕೇಂದ್ರ ಕಾರ್ಮಿಕ ಸಚಿವ ಮನ್ಸುಖ್ ಮಾಂಡವೀಯ ತಿಳಿಸಿದ್ದಾರೆ.

ಈ ವಿಮಾ ಯೋಜನೆಯಡಿ ಖಾತೆದಾರರಿಗೆ ಗರಿಷ್ಠ ₹7 ಲಕ್ಷದವರೆಗೆ ಕವರೇಜ್ ಸಿಗುತ್ತದೆ. ಸರ್ಕಾರದ ಈ ಕ್ರಮದಿಂದ 6 ಕೋಟಿ ಇಪಿಎಫ್‌ಒ ಸದಸ್ಯರಿಗೆ ಅನುಕೂಲವಾಗಲಿದೆ.

1976ರಲ್ಲಿ ಇಡಿಎಲ್‌ಐ ಯೋಜನೆಯನ್ನು ಅನುಷ್ಠಾನಗೊಳಿಸಲಾಯಿತು. ಉದ್ಯೋಗಿಯು ಮರಣ ಹೊಂದಿದರೆ ಆತನ ಕುಟುಂಬಕ್ಕೆ ಆರ್ಥಿಕ ನೆರವು ಕಲ್ಪಿಸುವುದು ಇದರ ಗುರಿಯಾಗಿದೆ.

2018ರಲ್ಲಿ ಇದರಡಿ ಕನಿಷ್ಠ ₹1.5 ಲಕ್ಷ ವಿಮಾ ಸೌಲಭ್ಯ ಕಲ್ಪಿಸಲಾಗಿತ್ತು. ಬಳಿಕ 2021ರ ಏಪ್ರಿಲ್‌ವರೆಗೆ ಗರಿಷ್ಠ ಸೌಲಭ್ಯವನ್ನು ₹6 ಲಕ್ಷಕ್ಕೆ ನಿಗದಿಪಡಿಸಲಾಗಿತ್ತು. ಆ ನಂತರ ಕೇಂದ್ರ ಸರ್ಕಾರವು 2021ರ ಏಪ್ರಿಲ್ 28ರಂದು ಕನಿಷ್ಠ ₹2.5 ಲಕ್ಷ ಹಾಗೂ ಗರಿಷ್ಠ ₹7 ಲಕ್ಷ ವಿಮಾ ಸೌಲಭ್ಯವನ್ನು ನಿಗದಿಪಡಿಸಿ ಮೂರು ವರ್ಷದವರೆಗೆ ವಿಸ್ತರಿಸಿತ್ತು.

ಅಲ್ಲದೆ, ವಿಮಾ ಸೌಲಭ್ಯ ಪಡೆಯಲು ಯಾವುದೇ ಒಂದು ಸಂಸ್ಥೆಯಲ್ಲಿ ಉದ್ಯೋಗಿಯು 12 ತಿಂಗಳು ನಿರಂತರವಾಗಿ ಸೇವೆ ಸಲ್ಲಿಸಬೇಕು ಎಂಬ ಷರತ್ತನ್ನು ಸಡಿಲಗೊಳಿಸಿತು. ಈ ಅವಧಿಯಲ್ಲಿ ಕೆಲಸ ಬದಲಾಯಿಸಿದ ಉದ್ಯೋಗಿಗಳಿಗೂ ಇದರಡಿ ವಿಮಾ ರಕ್ಷಣೆ ಕಲ್ಪಿಸಿತು.

ಉದ್ಯೋಗಿಯು ಕಾರ್ಮಿಕರ ಭವಿಷ್ಯ ನಿಧಿಗೆ (ಇಪಿಎಫ್) ಸೇರ್ಪಡೆಗೊಂಡಾಗ ಉದ್ಯೋಗದಾತ ಸಂಸ್ಥೆಯು ನೀಡುವ ಇಪಿಎಫ್ ಪಾಲಿನಲ್ಲಿ ಒಂದಿಷ್ಟು ಮೊತ್ತವು ಉದ್ಯೋಗಿಯ ಠೇವಣಿ ಆಧಾರಿತ ವಿಮೆಗೆ ಜಮೆಯಾಗುತ್ತದೆ. ಈ ವಿಮಾ ಮೊತ್ತವು ಸಿಗಬೇಕು ಅಂದರೆ ಮೃತಪಡುವ ಸಂದರ್ಭದಲ್ಲಿ ಉದ್ಯೋಗಿಯು ಕೆಲಸದಲ್ಲಿರಬೇಕು. ಸಕಾಲಕ್ಕೆ ಇಪಿಎಫ್‌ಗೆ ತನ್ನ ಪಾಲಿನ ಕೊಡುಗೆ ಪಾವತಿಸಿರಬೇಕಿದೆ.

ಬೆಂಗಳೂರಿನಲ್ಲಿ ಇ–ಏರ್ ಟ್ಯಾಕ್ಸಿ ಸೇವೆಗೆ ಒಪ್ಪಂದ

ನವದೆಹಲಿ (ಪಿಟಿಐ): ಬೆಂಗಳೂರಿನಲ್ಲಿ ವಿದ್ಯುತ್‌ಚಾಲಿತ ಏರ್ ಟ್ಯಾಕ್ಸಿ ಸೇವೆ (ಫ್ಲೈಯಿಂಗ್ ಟ್ಯಾಕ್ಸಿ) ಆರಂಭಿಸಲು ಸರಳಾ ಏವಿಯೇಷನ್ ಕಂಪನಿ ಮತ್ತು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತವು (ಬಿಐಎಎಲ್) ತಿಳಿವಳಿಕೆ ಪತ್ರಕ್ಕೆ ಸಹಿ ಹಾಕಿವೆ.

ಈ ಏರ್ ಟ್ಯಾಕ್ಸಿಯು ಏಳು ಆಸನಗಳ ಸಾಮರ್ಥ್ಯ ಹೊಂದಿರಲಿದೆ.

ಸದ್ಯ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ರಸ್ತೆ ಮಾರ್ಗದಲ್ಲಿ ತಲುಪಲು 152 ನಿಮಿಷ ಬೇಕಿದೆ. ಏರ್ ಟ್ಯಾಕ್ಸಿ ಸೇವೆ ಆರಂಭಗೊಂಡರೆ ಈ ಮಾರ್ಗವನ್ನು 19 ನಿಮಿಷದಲ್ಲಿ ತಲುಪಬಹುದಾಗಿದೆ ಎಂದು ಕಂಪನಿ ತಿಳಿಸಿದೆ.

ಒಬ್ಬರಿಗೆ ಪ್ರಯಾಣ ದರ ₹1,700 ಇರಲಿದೆ. ಮುಂಬೈ, ದೆಹಲಿ ಮತ್ತು ಪುಣೆಯಲ್ಲೂ ಈ ಸೇವೆ ಆರಂಭಿಸುವ ಯೋಜನೆ ಹೊಂದಲಾಗಿದೆ ಎಂದು ತಿಳಿಸಿದೆ. ‘ಮುಂದಿನ 2–3 ವರ್ಷದಲ್ಲಿ ಇದರ ಕಾರ್ಯಾಚರಣೆಯನ್ನು ಆರಂಭಿಸಲಾಗುವುದು. ಸಾಂಪ್ರದಾಯಿಕ ಹೆಲಿಕಾಪ್ಟರ್ ಸೇವೆಗೆ ಹೋಲಿಸಿದರೆ ಇದರ ವೆಚ್ಚ ಕಡಿಮೆಯಾಗಿದೆ. ಸಾರ್ವಜನಿಕರಿಗೆ ಕೈಗೆಟಕುವ ದರದಲ್ಲಿ ಸೇವೆ ದೊರೆಯಲಿದೆ’ ಎಂದು ವಿವರಿಸಿದೆ.

ಸಂಕ್ಷಿಪ್ತ ಸುದ್ದಿ

ವಿಪ್ರೊಗೆ ಶೇ 21ರಷ್ಟು ನಿವ್ವಳ ಲಾಭ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ವಿಪ್ರೊ ಕಂಪನಿಯ ನಿವ್ವಳ ಲಾಭದಲ್ಲಿ ಶೇ 21ರಷ್ಟು ಏರಿಕೆಯಾಗಿದೆ.

2023–24ನೇ ಹಣಕಾಸು ವರ್ಷದ ಇದೇ ತ್ರೈಮಾಸಿಕದಲ್ಲಿ ₹2,646 ಕೋಟಿ ಲಾಭ ಗಳಿಸಲಾಗಿತ್ತು. ಈ ಬಾರಿ ₹3,208 ಕೋಟಿ ಲಾಭ ಗಳಿಸಲಾಗಿದೆ ಎಂದು ಕಂಪನಿಯು ಗುರುವಾರ ತಿಳಿಸಿದೆ. ವರಮಾನದಲ್ಲಿ ಇಳಿಕೆಯಾಗಿದ್ದು ₹22,301 ಕೋಟಿ ಗಳಿಸಿದೆ. ಕಳೆದ ಬಾರಿ ₹22,515 ಕೋಟಿ ವರಮಾನ ಗಳಿಸಿತ್ತು. ಆಡಳಿತ ಮಂಡಳಿ 1:1 ಬೋನಸ್ ಷೇರು ನೀಡಲು ಅನುಮೋದನೆ ನೀಡಿದೆ.

ಇನ್ಫೊಸಿಸ್‌ಗೆ ₹6,506 ಕೋಟಿ ಲಾಭ

ನವದೆಹಲಿ (ಪಿಟಿಐ): ಇನ್ಫೊಸಿಸ್ ಕಂಪನಿಯು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹6,506 ಕೋಟಿ ನಿವ್ವಳ ಲಾಭ ಗಳಿಸಿದ್ದು, ಶೇ 5ರಷ್ಟು ಏರಿಕೆಯಾಗಿದೆ. ಕಳೆದ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹6,212 ಕೋಟಿ ಲಾಭ ಗಳಿಸಿತ್ತು. ವರಮಾನದಲ್ಲಿ ಶೇ 5ರಷ್ಟು ಹೆಚ್ಚಳವಾಗಿದ್ದು, ₹40,986 ಕೋಟಿ ಗಳಿಸಿದೆ.

ಈ ತ್ರೈಮಾಸಿಕದಲ್ಲಿ 2,500 ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿದೆ. ವರಮಾನ, ಬಡ್ಡಿ ಮತ್ತು ತೆರಿಗೆ ಕಡಿತಕ್ಕಿಂತ ಮೊದಲಿನ ಗಳಿಕೆಯು (ಇಬಿಐಟಿ) ₹8,649 ಕೋಟಿಯಾಗಿದ್ದು, ಶೇ 4ರಷ್ಟು ಏರಿಕೆಯಾಗಿದೆ. ಪ್ರತಿ ಷೇರಿಗೆ ₹21 ಮಧ್ಯಂತರ ಲಾಭಾಂಶವನ್ನು ಕಂಪನಿಯು ಘೋಷಿಸಿದೆ.

ಎಕ್ಸಿಸ್ ಬ್ಯಾಂಕ್ ಲಾಭ ಹೆಚ್ಚಳ

ನವದೆಹಲಿ (ಪಿಟಿಐ): ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಖಾಸಗಿ ವಲಯದ ಎಕ್ಸಿಸ್ ಬ್ಯಾಂಕ್ ₹6,918 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹5,864 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 18ರಷ್ಟು ಏರಿಕೆಯಾಗಿದೆ ಎಂದು ಬ್ಯಾಂಕ್, ಷೇರುಪೇಟೆಗೆ ತಿಳಿಸಿದೆ.

ಒಟ್ಟು ವರಮಾನವು ₹37,142 ಕೋಟಿಯಾಗಿದ್ದು, ಕಳೆದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹31,660 ಕೋಟಿ ದಾಖಲಾಗಿತ್ತು. ಬಡ್ಡಿ ವರಮಾನವು ₹30,420 ಕೋಟಿಯಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1520	(1530)
ಸೋಯಾ (ರಿಫೈನ್ಡ್)	₹1265	(1265)
ಸೂರ್ಯಕಾಂತಿ (ರಿಫೈನ್ಡ್)	₹1290	(1290)
ಪಾಮೋಲಿನ್	₹1265	(1270)

ವಿನಿಮಯ ದರ

$	ಡಾಲರ್	84.06
£	ಪೌಂಡ್	109.25
€	ಯುರೊ	91.31
¥	ಯೆನ್ (100ಕ್ಕೆ)	56

ಹಸೀನಾ ವಿರುದ್ಧ ಬಂಧನ ವಾರಂಟ್

ಢಾಕಾ (ಪಿಟಿಐ): ಬಾಂಗ್ಲಾದೇಶದ ಅಂತರರಾಷ್ಟ್ರೀಯ ಅಪರಾಧಗಳ ನ್ಯಾಯಮಂಡಳಿಯು (ಐಸಿಟಿ) ಮಾಜಿ ಪ್ರಧಾನಿ ಶೇಖ್ ಹಸೀನಾ ಮತ್ತು ಇತರ 45 ಮಂದಿ ವಿರುದ್ಧ ವಿವಿಧ ಅಪರಾಧಗಳ ಆರೋಪದ ಮೇಲೆ ಗುರುವಾರ ಬಂಧನ ವಾರಂಟ್ ಹೊರಡಿಸಿದೆ.

ಈಚೆಗೆ ಪುನರ್‌ರಚನೆಗೊಂಡಿರುವ ಬಾಂಗ್ಲಾದೇಶ ಐಸಿಟಿ, ನ್ಯಾಯಿಕ ಪ್ರಕ್ರಿಯೆ ಆರಂಭಿಸಿದ ಮೊದಲ ದಿನದಂದೇ 77 ವರ್ಷದ ಹಸೀನಾ ಮತ್ತು ಅವಾಮಿ ಲೀಗ್ ಪಕ್ಷದ ಹಿರಿಯ ನಾಯಕರ ವಿರುದ್ಧ ಬಂಧನ ವಾರಂಟ್ ಹೊರಡಿಸಿದೆ ಎಂದು ಢಾಕಾ ಟ್ರಿಬ್ಯೂನ್ ಪತ್ರಿಕೆ ವರದಿ ಮಾಡಿದೆ.

ಪ್ರಾಸಿಕ್ಯೂಟರ್ ಅವರು ಬಂಧನ ವಾರಂಟ್ ಕೋರಿ ಎರಡು ಅರ್ಜಿಗಳನ್ನು ಸಲ್ಲಿಸಿದ ಬಳಿಕ ಜಸ್ಟೀಸ್ ಮೊಹಮ್ಮದ್ ಗೊಲಾಮ್ ಮುರ್ತಜಾ ಮಜುಮ್ದರ್ ನೇತೃತ್ವದ ನ್ಯಾಯಮಂಡಳಿಯು ಈ ಆದೇಶ ನೀಡಿತು ಎಂದು ಮುಖ್ಯ ಪ್ರಾಸಿಕ್ಯೂಟರ್ ಮೊಹಮ್ಮದ್ ತಾಜುಲ್ ಇಸ್ಲಾಮ್ ಅವರನ್ನು ಉಲ್ಲೇಖಿಸಿ ಡೈಲಿ ಸ್ಟಾರ್ ವರದಿ ಮಾಡಿದೆ.

ಹಸೀನಾ ಮತ್ತು ಇತರ 45 ಮಂದಿಯನ್ನು ನವೆಂಬರ್ 18ರ ಒಳಗಾಗಿ ತನ್ನ ಮುಂದೆ ಹಾಜರುಪಡಿಸುವಂತೆ ಐಸಿಟಿ, ಸಂಬಂಧಪಟ್ಟವರಿಗೆ ನಿರ್ದೇಶಿಸಿದೆ.

ಹಸ್ತಾಂತರಕ್ಕೆ ಮನವಿ ಸಾಧ್ಯತೆ: ಹಸೀನಾ ವಿರುದ್ಧ ಬಂಧನ ವಾರಂಟ್ ಜಾರಿಯಾಗಿರುವುದರಿಂದ ಅವರನ್ನು ಹಸ್ತಾಂತರಿಸುವಂತೆ ಭಾರತ ಸರ್ಕಾರಕ್ಕೆ ಮನವಿ ಮಾಡುವ ಅವಕಾಶ ಬಾಂಗ್ಲಾದೇಶದ ಮಧ್ಯಂತರ ಸರ್ಕಾರಕ್ಕೆ ಸಿಕ್ಕಂತಾಗಿದೆ. ಹಸೀನಾ ಅವರು ಆಗಸ್ಟ್ 5ರಂದು ದೇಶ ತೊರೆದು ಭಾರತಕ್ಕೆ ಬಂದಿದ್ದರು. ಹಸೀನಾ ಒಳಗೊಂಡಂತೆ ‘ಪರಾರಿಯಾಗಿರುವ’ ಇತರರನ್ನು ಮರಳಿ ಕರೆತರಲು ಇಂಟರ್‌ಪೋಲ್‌ನ ನೆರವು ಕೋರಲಾಗುವುದು ಎಂದು ತಾಜುಲ್ ಇಸ್ಲಾಮ್ ಹೇಳಿದ್ದಾರೆ.

ಸಾಮಾಜಿಕ ಜಾಲತಾಣಗಳ 7 ಖಾತೆಗಳಿಗೆ ನಿರ್ಬಂಧ

ನವದೆಹಲಿ (ಪಿಟಿಐ): ದೇಶೀಯ ಹಲವು ವಿಮಾನಯಾನ ಸಂಸ್ಥೆಗಳಿಗೆ ಹುಸಿ ಬಾಂಬ್ ಕರೆ ಮಾಡಿ ಬೆದರಿಕೆ ಒಡ್ಡಿದ ಆರೋಪದ ಮೇಲೆ ಅರ್ಧ ಡಜನ್‌ಗೂ ಅಧಿಕ ಸಾಮಾಜಿಕ ಜಾಲತಾಣಗಳ ಖಾತೆಗಳ ಮೇಲೆ ಸೈಬರ್ ಭದ್ರತಾ ತನಿಖಾ ಸಂಸ್ಥೆಗಳ ಅಧಿಕಾರಿಗಳು ನಿರ್ಬಂಧ ವಿಧಿಸಿದ್ದಾರೆ.

ಸೈಬರ್ ಏವಿಯೇಷನ್ ಸೆಕ್ಯುರಿಟಿ ಹಾಗೂ ಗುಪ್ತಚರ ಸಂಸ್ಥೆಗಳ ಜಂಟಿ ತಂಡವು ವಿಸ್ತೃತ ತನಿಖೆ ನಡೆಸಿ, ಅಮಾನತಿನ ಜತೆಗೆ ಖಾತೆಗಳನ್ನು ನಿರ್ಬಂಧಗೊಳಿಸಿ ಆದೇಶ ಹೊರಡಿಸಿವೆ ಎಂದು ಮೂಲಗಳು ತಿಳಿಸಿವೆ.

ಸಾಮಾಜಿಕ ಜಾಲತಾಣವಾದ ‘ಎಕ್ಸ್’ನ 7ರಿಂದ 8 ಖಾತೆಗಳನ್ನು ಸೋಮವಾರದಿಂದಲೇ ನಿರ್ಬಂಧಿಸಲಾಗಿದೆ. ಈ ಖಾತೆಗಳಿಂದಲೇ ವರ್ಚುವಲ್ ಆಗಿ ದೇಶೀಯ ವಿಮಾನಯಾನ ಸಂಸ್ಥೆಗಳಿಗೆ ಹುಸಿ ಬಾಂಬ್ ಬೆದರಿಕೆ ಸಂದೇಶ ಕಳುಹಿಸಲಾಗಿತ್ತು ಎಂದು ತನಿಖಾ ಸಂಸ್ಥೆಗಳು ತಿಳಿಸಿವೆ.

‘ಬಾಂಬ್, ಎಲ್ಲೆಡೆಯೂ ರಕ್ತ ಚೆಲ್ಲಲಿದೆ, ಸ್ಫೋಟಕ ವಸ್ತುಗಳು, ಇದು ತಮಾಷೆಯ ವಿಚಾರವಲ್ಲ, ನೀವೂ ಎಲ್ಲರೂ ಸಾಯಲಿದ್ದೀರಿ, ಬಾಂಬ್ ಇಡಲಾಗಿದೆ’ ಎಂದು ಬೆದರಿಕೆ ಸಂದೇಶದಲ್ಲಿ ಸಾಮಾನ್ಯ ಸಾಲು ಹಾಗೂ ಪದಗಳನ್ನು ಬಳಸಿದ್ದರು ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ಕಠಿಣ ಕ್ರಮಕ್ಕೆ ಚಿಂತನೆ

ವಿಮಾನಯಾನ ಸಂಸ್ಥೆಗಳಿಗೆ ಬಾಂಬ್ ಬೆದರಿಕೆ ಘಟನೆಗಳನ್ನು ತಡೆಯುವುದಕ್ಕಾಗಿ ಕಠಿಣ ಕ್ರಮ ಕೈಗೊಳ್ಳಲು ನಾಗರಿಕ ವಿಮಾನಯಾನ ಸಚಿವಾಲಯ ಮುಂದಾಗಿದೆ.

ಬೆದರಿಕೆ ಕರೆ ಪ್ರಕರಣದ ಅಪರಾಧಿಗಳನ್ನು ‘ನೋ ಫ್ಲೈ’ ಪಟ್ಟಿಗೆ ಸೇರಿಸುವುದು ಸೇರಿ ವಿವಿಧ ಕಠಿಣ ಕ್ರಮ ಕೈಗೊಳ್ಳುವ ಚಿಂತನೆ ನಡೆದಿದೆ.

‘ವಿಮಾನಯಾನ ಸಂಸ್ಥೆಗಳಿಗೆ ಬಾಂಬ್ ಬೆದರಿಕೆ ಘಟನೆಗಳ ಕುರಿತು ಕಠಿಣ ಕ್ರಮ ಕೈಗೊಳ್ಳುವುದಕ್ಕಾಗಿ ನಿಯಮಗಳಿಗೆ ತಿದ್ದುಪಡಿ ತರುವ ಚಿಂತನೆ ಇದೆ’ ಎಂದು ಸಚಿವ ಕೆ.ರಾಮಮೋಹನ್ ನಾಯ್ಡು ಹೇಳಿದ್ದಾರೆ.

2 ವಿಮಾನಗಳಿಗೆ ಬಾಂಬ್ ಬೆದರಿಕೆ

ಸತತ ನಾಲ್ಕನೇ ದಿನವೂ ವಿಮಾನಗಳಿಗೆ ಬಾಂಬ್ ಬೆದರಿಕೆ ಕರೆ ಮುಂದುವರಿದಿದ್ದು, ‘ವಿಸ್ತಾರಾ’, ಇಂಡಿಗೊ ಸಂಸ್ಥೆಯ ತಲಾ ಒಂದು ವಿಮಾನಗಳಿಗೆ ಸಾಮಾಜಿಕ ಜಾಲತಾಣದ ಮೂಲಕ ಬೆದರಿಕೆ ಸಂದೇಶ ರವಾನಿಸಲಾಗಿದೆ.

ಇಸ್ತಾಂಬುಲ್‌ನಿಂದ ಮುಂಬೈಗೆ ಬರುತ್ತಿದ್ದ ‘ಇಂಡಿಗೊ’ ವಿಮಾನಕ್ಕೆ ಬೆದರಿಕೆ ಒಡ್ಡಿದ ನಂತರ, ವಿಮಾನವನ್ನು ಸಂಪೂರ್ಣವಾಗಿ ಪರಿಶೀಲಿಸಲಾಯಿತು. ಮುಂಬೈನಿಂದ ಫ್ರಾಂಕ್‌ಫರ್ಟ್‌ಗೆ ತೆರಳುತ್ತಿದ್ದ ‘ವಿಸ್ತಾರಾ’ ಸಂಸ್ಥೆಯ ವಿಮಾನಕ್ಕೂ ಸಾಮಾಜಿಕ ಜಾಲತಾಣದ ಮುಖಾಂತರ ಬೆದರಿಕೆ ಹಾಕಿದ್ದರು. ವಿಮಾನ ನಿಲ್ದಾಣದಲ್ಲಿ ಕೆಳಗಿಳಿಯುತ್ತಿದ್ದಂತೆಯೇ, ವಿಸ್ತೃತ ಪರಿಶೀಲನೆ ನಡೆಸಲಾಯಿತು.

ಹೂಥಿ ಉಗ್ರರ ನೆಲೆಗಳ ಮೇಲೆ ಅಮೆರಿಕ ವೈಮಾನಿಕ ದಾಳಿ

ದುಬೈ (ಎಪಿ): ಯೆಮೆನ್‌ನ ಹೂಥಿ ಬಂಡುಕೋರರು ಬಳಸುತ್ತಿದ್ದ ಸುರಂಗ ಬಂಕರ್‌ಗಳನ್ನು ಗುರಿಯಾಗಿಸಿಕೊಂಡು ಅಮೆರಿಕವು ದೂರ ವ್ಯಾಪ್ತಿಯ ಬಿ-2 ಸ್ಟೆಲ್ತ್ ಬಾಂಬರ್‌ಗಳ ಮೂಲಕ ಗುರುವಾರ ನಸುಕಿನಲ್ಲಿ ವೈಮಾನಿಕ ದಾಳಿ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ದಾಳಿಯಿಂದ ಯಾವ ಸ್ವರೂಪದಲ್ಲಿ ಹಾನಿ ಉಂಟಾಗಿದೆ ಎನ್ನುವುದು ಇನ್ನೂ ಸ್ಪಷ್ಟವಾಗಿಲ್ಲ.

ಗಾಜಾ ಪಟ್ಟಿಯಲ್ಲಿ ಇಸ್ರೇಲ್, ಹಮಾಸ್ ಬಂಡುಕೋರರ ವಿರುದ್ಧ ಯುದ್ಧ ನಡೆಸುತ್ತಿರುವಾಗ, ಹಮಾಸ್ ಬಂಡುಕೋರರನ್ನು ಬೆಂಬಲಿಸಿ ಹೂಥಿ ಬಂಡುಕೋರರು ಕೆಂಪು ಸಮುದ್ರದಲ್ಲಿ ಸರಕು ಸಾಗಣೆ ಹಡಗುಗಳ ಮೇಲೆ ಹಲವು ತಿಂಗಳುಗಳಿಂದ ದಾಳಿ ನಡೆಸುತ್ತಿದ್ದರು. ಹೂಥಿ ಬಂಡುಕೋರರನ್ನು ಗುರಿಯಾಗಿಸಿ ಅಮೆರಿಕ ಅಪರೂಪದ ಬೆಳವಣಿಗೆಯಲ್ಲಿ ಅತ್ಯಾಧುನಿಕ ಬಿ-2 ಸ್ಟೆಲ್ತ್ ಬಾಂಬರ್‌ಗಳನ್ನು ಬಳಸಿದೆ.

ಯೆಮೆನ್‌ನ ರಾಜಧಾನಿ ಸನಾ ಸುತ್ತಲೂ ಮತ್ತು ಹೂಥಿ ಭದ್ರಕೋಟೆಯಾದ ಸಾದಾ ಸುತ್ತಲೂ ವೈಮಾನಿಕ ದಾಳಿಗಳು ನಡೆದಿವೆ ಎಂದು ಹೂಥಿ ಬಂಡುಕೋರರ ಅಲ್-ಮಸಿರಾಹ್ ಉಪಗ್ರಹ ಸುದ್ದಿ ವಾಹಿನಿ ವರದಿ ಮಾಡಿದೆ. ಈ ದಾಳಿಯಲ್ಲಿ ಉಂಟಾಗಿರುವ ಸಾವುನೋವು ಅಥವಾ ಹಾನಿಯ ಬಗ್ಗೆ ವಾಹಿನಿಯು ಮಾಹಿತಿ ನೀಡಿಲ್ಲ.

ಅಮೆರಿಕ ನಡೆಸಿರುವ ಈ ವೈಮಾನಿಕ ದಾಳಿಯು, ಕಳೆದ ವರ್ಷ ಎರಡು ಬಾರಿ ಇಸ್ರೇಲ್ ಮೇಲೆ ಗುರಿ ನಿರ್ದೇಶಿತ ಕ್ಷಿಪಣಿಗಳ ದಾಳಿ ನಡೆಸಿರುವ ಹೂಥಿಗಳನ್ನು ಬೆಂಬಲಿಸುತ್ತಿರುವ ಇರಾನ್‌ಗೆ ನೀಡಿರುವ ಪರೋಕ್ಷ ಎಚ್ಚರಿಕೆಯಂತೆ ಕಂಡುಬಂದಿದೆ.

> **ಯೆಮೆನ್‌ನ ಹೂಥಿ ನಿಯಂತ್ರಿತ ಪ್ರದೇಶಗಳಲ್ಲಿನ ನೆಲದಾಳದ 5 ಶಸ್ತ್ರಾಗಾರಗಳನ್ನು ಬಿ–2 ಬಾಂಬರ್‌ಗಳು ಧ್ವಂಸಗೊಳಿಸಿವೆ. ಈ ಮೂಲಕ ಅಮೆರಿಕದ ವಿಶಿಷ್ಟ ಸಾಮರ್ಥ್ಯವನ್ನು ವಿರೋಧಿಗಳಿಗೆ ತೋರಿಸಿದ್ದೇವೆ**
>
> **ಲಾಯ್ಡ್ ಆಸ್ಟಿನ್,** ಅಮೆರಿಕ ರಕ್ಷಣಾ ಕಾರ್ಯದರ್ಶಿ

ಯುದ್ಧ ನಿಂತಿಲ್ಲ, ಹಮಾಸ್ ನಿರ್ಮೂಲನೆಯಲ್ಲಿ ಪ್ರಮುಖ ಹೆಜ್ಜೆ- ಇಸ್ರೇಲ್ ಪ್ರಧಾನಿ

ಹಮಾಸ್ ಮುಖ್ಯಸ್ಥ ಸಿನ್ವರ್ ಹತ್ಯೆ



ಯಹ್ಯಾ ಸಿನ್ವರ್

ಜೆರುಸಲೇಂ (ಎಎಫ್‌ಪಿ/ ರಾಯಿಟರ್ಸ್/ ಎಪಿ): ಹಮಾಸ್ ಬಂಡುಕೋರ ಸಂಘಟನೆಯ ಮುಖ್ಯಸ್ಥ ಯಹ್ಯಾ ಸಿನ್ವರ್ (61) ಎಂಬಾತನನ್ನು ಹತ್ಯೆ ಮಾಡಲಾಗಿದೆ ಎಂದು ಇಸ್ರೇಲ್ ಗುರುವಾರ ಹೇಳಿದೆ.

ಅ. 7, 2023ರಂದು ಇಸ್ರೇಲ್ ಮೇಲೆ ನಡೆಸಲಾಗಿದ್ದ ದಾಳಿಯ ಪ್ರಮುಖ ಸಂಚುಕೋರ ಈತನಾಗಿದ್ದ. ಈ ಹತ್ಯೆಯಿಂದ ಹಮಾಸ್‌ಗೆ ಭಾರಿ ಪೆಟ್ಟು ಬಿದ್ದಿದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ.

‘ಆದರೆ, ಇದರಿಂದ ಯುದ್ಧ ಅಂತ್ಯಗೊಂಡಿಲ್ಲ. ಸಿನ್ವನ್ ಹತ್ಯೆಯೂ ಹಮಾಸ್ ಪಿಡುಗು ನಿರ್ಮೂಲನೆಗೊಳಿಸುವ ಯತ್ನದಲ್ಲಿ ದೊಡ್ಡ ಮೈಲುಗಲ್ಲು ಇದಾಗಿದೆ’ ಎಂದು ಹೇಳಿದ್ದಾರೆ.

‘ಗಾಜಾದಲ್ಲಿ ಗುರುವಾರ ಸೇನೆ ನಡೆಸಿದ ಕಾರ್ಯಾಚರಣೆಯಲ್ಲಿ ಒಟ್ಟು ಮೂವರು ಬಂಡುಕೋರರು ಮೃತಪಟ್ಟಿದ್ದು, ಇವರಲ್ಲಿ ಸಿನ್ವರ್ ಕೂಡ ಒಬ್ಬರು’ ಎಂದಿದೆ.

ಇದಕ್ಕೂ ಮುನ್ನ ‘ಮೃತರಲ್ಲಿ ಸಿನ್ವರ್ ಇರಬಹುದೇ ಎಂದು ಖಚಿತಪಡಿಸಿಕೊಳ್ಳಲು ಡಿಎನ್‌ಎ ಪರೀಕ್ಷೆ ನಡೆಸಲಾಗುತ್ತಿದೆ’ ಎಂದು ಇಸ್ರೇಲ್ ಸೇನೆ ತಿಳಿಸಿತ್ತು. ಆದರೆ ಯಾವಾಗ, ಎಲ್ಲಿ ದಾಳಿ ಮಾಡಲಾಗಿದೆ ಎಂಬುದರ ಕುರಿತು ಯಾವುದೇ ಅಧಿಕೃತ ಮಾಹಿತಿ ನೀಡಿಲ್ಲ.

‘ಸಿನ್ವರ್ ಮೃತಪಟ್ಟಿದ್ದಾರೆ’ ಎಂಬುದನ್ನು ಹಮಾಸ್ ಸಂಘಟನೆ ದೃಢಪಡಿಸಿಲ್ಲ.

‘ಸಿನ್ವರ್ ಕುರಿತು ಹಮಾಸ್ ನೀಡುವ ಮಾಹಿತಿಯನ್ನು ಮಾತ್ರವೇ ನಂಬಿ. ಇಸ್ರೇಲ್‌ನ ಮಾಧ್ಯಮಗಳು ನೀಡುವ ಮಾಹಿತಿಗಳನ್ನು ನಂಬಬೇಡಿ. ಅವುಗಳು ನಮ್ಮ ಮನೋಬಲ ಕುಗ್ಗಿಸುವುದಕ್ಕೆ ಸುದ್ದಿ ಬಿತ್ತರಿಸುತ್ತವೆ’ ಎಂದು ಹಮಾಸ್ ಬೆಂಬಲಿತ ‘ಅಲ್–ಮಜ್ದ್’ ವೆಬ್‌ಸೈಟ್‌ನಲ್ಲಿ ಪೋಸ್ಟ್‌ವೊಂದು ಹಂಚಿಕೆಯಾಗಿದೆ.

‘ದಕ್ಷಿಣ ಗಾಜಾದ ರಫಾ ನಗರದಲ್ಲಿ ನೆಲ ಮಾರ್ಗದಲ್ಲಿ ನಡೆಸಿದ ದಾಳಿಯ ವೇಳೆ ಸಿನ್ವರ್ ಅವರನ್ನು ಸೇನೆ ಹತ್ಯೆ ಮಾಡಿದೆ’ ಎಂದು ಇಸ್ರೇಲ್ ಸೇನೆಯ ರೇಡಿಯೊ ವಾಹಿನಿ ಸುದ್ದಿ ಬಿತ್ತರಿಸಿದೆ. ‘ಮೂವರು ಬಂಡುಕೋರರಲ್ಲಿ ಸಿನ್ವರ್ ಅವರ ಶವವಿರುವ ದೃಶ್ಯಗಳ ವಿಡಿಯೊ, ಸೇನೆಯ ಬಳಿ ಇದೆ’ ಎಂದೂ ಅದು ಹೇಳಿದೆ. ಸಿನ್ವರ್ ಅವರ ಇಸ್ರೇಲ್‌ನ ಜೈಲಿನಲ್ಲಿದ್ದ ಸಮಯದಲ್ಲಿ, ಅವರ ಡಿಎನ್‌ಎ ಮಾದರಿಗಳನ್ನು ಇಸ್ರೇಲ್ ಸಂಗ್ರಹಿಸಿ ಇಟ್ಟುಕೊಂಡಿದೆ.

ಗಾಜಾದ ಅಲ್ ಶಾತಿ ನಿರಾಶ್ರಿತರ ಶಿಬಿರದಲ್ಲಿ ಆಹಾರ ಪಡೆಯಲು ಮುಗಿಬಿದ್ದ ಪ್ಯಾಲೆಸ್ಟೀನಿಯನ್ನರು —ಎಎಫ್‌ಪಿ ಚಿತ್ರ

ನಿರಾಶ್ರಿತರ ಶಿಬಿರದ ಮೇಲೆ ದಾಳಿ: 15 ಸಾವು

‘ಗಾಜಾಪಟ್ಟಿಯ ಉತ್ತರದ ಜಬಲಿಯಾ ನಗರದಲ್ಲಿನ ನಿರಾಶ್ರಿತ ಶಿಬಿರದ ಮೇಲೆ ಇಸ್ರೇಲ್ ಗುರುವಾರ ನಡೆಸಿದ ದಾಳಿಯಲ್ಲಿ ಐವರು ಮಕ್ಕಳು ಸೇರಿದಂತೆ 15 ಮಂದಿ ಮೃತಪಟ್ಟಿದ್ದಾರೆ’ ಎಂದು ಗಾಜಾ ಆರೋಗ್ಯ ಸಚಿವಾಲಯ ಹೇಳಿದೆ.

ಜಬಲಿಯಾ ನಗರದ ಮೇಲೆ ಹಲವು ದಿನಗಳಿಂದ ಇಸ್ರೇಲ್ ಸೇನೆ ವಾಯು ಹಾಗೂ ನೆಲ ಮಾರ್ಗವಾಗಿ ದಾಳಿ ನಡೆಸುತ್ತಿದೆ. ಈ ಹಿನ್ನೆಲೆಯಲ್ಲಿ ಇಲ್ಲಿನ ನಿರಾಶ್ರಿತರು ಅಬು ಹುಸೇನ್ ಎಂಬ ಶಾಲೆಯಲ್ಲಿ ಆಶ್ರಯ ಪಡೆದುಕೊಂಡಿದ್ದರು. ಇಸ್ರೇಲ್ ಸೇನೆ ಈ ಶಾಲೆಯ ಮೇಲೆ ದಾಳಿ ನಡೆಸಿದೆ.

‘ಈ ಶಾಲೆಯಲ್ಲಿ ಹಮಾಸ್ ಬಂಡುಕೋರರು ಹಾಗೂ ಜಿಹಾದಿ ಉಗ್ರರು ಆಶ್ರಯ ಪಡೆದುಕೊಂಡಿದ್ದರು. ಬಂಡುಕೋರರು ಶಾಲೆಯನ್ನು ಕಮಾಂಡ್ ಕೇಂದ್ರವಾಗಿ ಬಳಸುತ್ತಿದ್ದರು. ಇವರನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ’ ಎಂದು ಇಸ್ರೇಲ್ ಸೇನೆ ಪ್ರತಿಕ್ರಿಯಿಸಿದೆ. ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು ಎನ್ನಲಾದ ಉಗ್ರರು, ಬಂಡುಕೋರರ ಹೆಸರುಗಳ ಪಟ್ಟಿಯನ್ನು ಇಸ್ರೇಲ್ ಸೇನೆ ನೀಡಿದೆ. ದಾಳಿಯ ವೇಳೆ ಈ ಎಲ್ಲರೂ ಶಾಲೆಯಲ್ಲಿದ್ದರು ಎಂದೂ ಅದು ಹೇಳಿದೆ.

> **ನೀವು ನಿಮ್ಮ ಶತ್ರುವನ್ನು ಬಿಡದೇ ಬೆನ್ನುಹತ್ತಿದರೆ, ಅವರು ನಿಮ್ಮ ಕತ್ತಿಯ ಮುಂದೆ ಮಂಡಿಯೂರುತ್ತಾರೆ’ ಎಂದು ಲೆವಿಟಿಕಸ್ 26 (ಮೋಸೆಸ್ ಅವರ ಮೂರನೇ ಪುಸ್ತಕ) ಹೇಳುತ್ತದೆ. ನಮ್ಮ ಶತ್ರುಗಳು ನಮ್ಮ ಕಣ್ತಪ್ಪಿಸಿ ಓಡಾಡಲು ಸಾಧ್ಯವಿಲ್ಲ. ಅವರನ್ನು ಹುಡುಕಿ, ಹತ್ಯೆ ಮಾಡುತ್ತೇವೆ**
>
> **ಯೊಯಾವ್ ಗಲಾಂಟ್,** ಇಸ್ರೇಲ್‌ನ ರಕ್ಷಣಾ ಸಚಿವ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ. 'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಭವಿಷ್ಯ

Astrology

★॥ಇಷ್ಟಪಟ್ಟವರು॥★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

ಹೆಸರು ಬದಲಾವಣೆ

@50/-* PER WORDS

ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ

*Conditions apply

www.dhclassifieds.com ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

7795158424

9900428036

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಮಹರ್ಷಿ ವಾಲ್ಮೀಕಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

‘ತಳಸಮುದಾಯದವರಿಂದಲೇ ಮಹಾಕಾವ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದಲ್ಲಿ ಮಹಾಕಾವ್ಯಗಳನ್ನು ಬರೆದವರೆಲ್ಲಾ ತಳಸಮುದಾಯದವರೇ. ಮಹಾಭಾರತ ಬರೆದ ವ್ಯಾಸಮುನಿ ಬೆಸ್ತ ಸಮುದಾಯದವರು, ಶಾಕುಂತಲ ನಾಟಕ ಬರೆದ ಕಾಳಿದಾಸ ಕುರುಬ ಸಮುದಾಯದವರು, ರಾಮಾಯಣ ಬರೆದದ್ದು ಮಹರ್ಷಿ ವಾಲ್ಮೀಕಿ. ಆದರೆ ಅವರ ಪ್ರತಿಭೆಯನ್ನು ನಿರಾಕರಿಸುವ ಉದ್ದೇಶದಿಂದ ಅವರ ಸುತ್ತ ಒಂದು ಕತೆಯನ್ನು ಕಟ್ಟಲಾಗಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸೌಧದಲ್ಲಿ ಗುರುವಾರ ನಡೆದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘ಆ ಕಾಲದಲ್ಲಿ ತಳಸಮುದಾಯದವರಿಗೆ ಶಿಕ್ಷಣ ನಿಷಿದ್ಧವಾಗಿತ್ತು. ಅಂಥದ್ದರಲ್ಲಿ ಸಂಸ್ಕೃತ ಕಲಿತು ಇವರೆಲ್ಲಾ ಮಹಾ ಕಾವ್ಯಗಳನ್ನು ಬರೆದಿದ್ದಾರೆ. 24,000 ಶ್ಲೋಕಗಳಿರುವ ರಾಮಾಯಣ ಬರೆದ ವಾಲ್ಮೀಕಿ ದರೋಡೆ ಮಾಡುತ್ತಿದ್ದರು ಎಂದು ನಮಗೆಲ್ಲಾ ಹೇಳಿಕೊಡುತ್ತಾ ಬರಲಾಗಿದೆ. ಆದರೆ ದರೋಡೆ ಮಾಡಿಕೊಂಡು ಓಡಾಡುತ್ತಿದ್ದದ್ದೇ ನಿಜವಾಗಿದ್ದರೆ, ಅವರಿಂದ ಮಹಾಕಾವ್ಯ ಬರೆಯಲು ಸಾಧ್ಯವಿತ್ತೇ’ ಎಂದು ಪ್ರಶ್ನಿಸಿದರು.

‘ತಳಸಮುದಾಯದವರ ಪ್ರತಿಭೆ ನಿರಾಕರಿಸುವ ಉದ್ದೇಶದಿಂದಲೇ ಅಂದಿನ ಸಮಾಜ ಇಂತಹ ಕತೆಗಳನ್ನು ಕಟ್ಟುತ್ತಾ ಬಂದಿದೆ’ ಎಂದರು.

‘ನಿಷೇಧದ ಮಧ್ಯೆಯೂ ಅವಕಾಶ ಸಿಕ್ಕಾಗ ಇವರೆಲ್ಲಾ ಕಲಿತರು. ಸಂವಿಧಾನವನ್ನು ಅಂಗೀಕರಿಸುವ ಮುನ್ನಾ ದಿನ ಬಾಬಾಸಾಹೇಬ್ ಅಂಬೇಡ್ಕರ್ ಅವರು, ರಾಜಕೀಯ ಸ್ವಾತಂತ್ರ್ಯವೇನೋ ಸಿಕ್ಕಿದೆ. ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ಸಿಗಬೇಕೆಂದರೆ ಶಿಕ್ಷಣ ಬೇಕು ಎಂದು ಹೇಳಿದ್ದರು. ಹೀಗಾಗಿಯೇ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವಿದೆ. ತಳ ಸಮುದಾಯಗಳು ಮುಂದಕ್ಕೆ ಬರಬೇಕು ಎಂದೇ ಅವರ ಶಿಕ್ಷಣಕ್ಕೆ ಆದ್ಯತೆ ನೀಡಿದ್ದೇವೆ’ ಎಂದರು.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ರಾಜಶೇಖರ ತಳವಾರ, ಕಿಲಾರಿ ಜೋಗಯ್ಯ,ರತ್ನಮ್ಮ ಬಿ. ಸೋಗಿ, ಕೆ.ಎಸ್.ಮೃತ್ಯುಂಜಯ ಮತ್ತು ಎಸ್. ರತ್ನಮ್ಮ ಅವರಿಗೆ ‘ಮಹರ್ಷಿ ವಾಲ್ಮೀಕಿ ಪ್ರಶಸ್ತಿ’ ನೀಡಿ ಗೌರವಿಸಲಾಯಿತು.ಕಾಂಗ್ರೆಸ್ ನಾಯಕ ವಿ.ಎಸ್.ಉಗ್ರಪ್ಪ, ಸಚಿವರಾದ ಎಚ್.ಕೆ.ಪಾಟೀಲ, ಸತೀಶ ಜಾರಕಿಹೊಳಿ,ಮಹರ್ಷಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ, ಸಚಿವ ಕೆ.ಎನ್.ರಾಜಣ್ಣ, ಮುಖ್ಯಮಂತ್ರಿ ಸಿದ್ದರಾಮಯ್ಯ,ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್ ಮತ್ತು ಇತರರು ಇದ್ದರು ಪ್ರಜಾವಾಣಿ ಚಿತ್ರ

‘ಕೇಳಿದಾಕ್ಷಣ ಅನುದಾನ ನೀಡಿದರು’

‘ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಣ ದುರ್ಬಳಕೆ ಪ್ರಕರಣದ ನಂತರ, ನಿಗಮದಲ್ಲಿ ಹಣ ಇಲ್ಲದಂತಾಗಿತ್ತು. ಈ ಬಗ್ಗೆ ಕಳವಳ ವ್ಯಕ್ತಪಡಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದೆವು. ಅವರು ಸ್ವಲ್ಪವೂ ತಡಮಾಡದೆ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಿಸಿದರು’ ಎಂದು ಮಹರ್ಷಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಹೇಳಿದರು. ‘ತನಿಖಾ ತಂಡವು ನಿಗಮದ ಹಣವನ್ನು ಮುಟ್ಟುಗೋಲು ಹಾಕಿಕೊಂಡಿದೆ. ಇದರಿಂದ ಅಭಿವೃದ್ಧಿ ಚಟುವಟಿಕೆಗಳನ್ನು ನಡೆಸಲು ಸಾಧ್ಯವಾಗುತ್ತಿರಲಿಲ್ಲ. ಹೆಚ್ಚುವರಿ ಅನುದಾನ ದೊರೆತ ಕಾರಣದಿಂದ ಚಟುವಟಿಕೆಗಳನ್ನು ಆರಂಭಿಸಲು ಸಾಧ್ಯವಾಗಿದೆ’ ಎಂದರು.

ರಾಯಚೂರು ವಿಶ್ವವಿದ್ಯಾಲಯವನ್ನು ‘ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ’ ಎಂದು ಮರುನಾಮಕರಣ ಮಾಡಲಾಗುತ್ತದೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

‘ಬಿಜೆಪಿಯವರು ಅಸಮಾನತೆ, ಜಾತಿವಾದ ಇಲ್ಲ ಎಂದೆಲ್ಲಾ ಹೇಳುತ್ತಾರೆ. ಅದನ್ನು ಹೋಗಲಾಡಿಸಲು ಏನಾದರೂ ಕೆಲಸ ಮಾಡಿದ್ದಾರಾ? ನಾವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಎಂದು ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಉಪಯೋಜನೆಗಳನ್ನು ಕಡ್ಡಾಯ ಮಾಡಲು ಕಾಯ್ದೆ ಜಾರಿಗೆ ತಂದಿದ್ದೇವೆ. ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದು 11 ವರ್ಷವಾಗುತ್ತಿದೆ, ಇಂತಹ ಕಾಯ್ದೆಯನ್ನು ಏಕೆ ಜಾರಿಗೆ ತಂದಿಲ್ಲ. ಬಿಜೆಪಿ ಆಡಳಿತದಲ್ಲಿರುವ ಒಂದಾದರೂ ರಾಜ್ಯದಲ್ಲಿ ಜಾರಿಗೆ ತಂದಿದ್ದಾರಾ’ ಎಂದು ಪ್ರಶ್ನಿಸಿದರು.

‘ಮಹರ್ಷಿ ವಾಲ್ಮೀಕಿ ಸಮಸಮಾಜದ ಪ್ರತಿಪಾದಕರಾಗಿದ್ದರು. ಅದನ್ನೇ ಅವರು ರಾಮರಾಜ್ಯ ಎಂದು ಕರೆದರು. ಮಹಾತ್ಮ ಗಾಂಧಿ ಹೇಳಿದ ರಾಮರಾಜ್ಯವೂ ಅದೇ. ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಲೆಂದೇ ನಮ್ಮ ಸರ್ಕಾರ ದುಡಿಯತ್ತಿದೆ’ ಎಂದು ಸಿದ್ದರಾಮಯ್ಯ ಹೇಳಿದರು.

ಮಾಲಾರ್ಪಣೆ: ಇದಕ್ಕೂ ಮುನ್ನ ನಡೆದ ಕಾರ್ಯಕ್ರಮದಲ್ಲಿ, ಶಾಸಕರ ಭವನದ ಎದುರು ಇರುವ ಮಹರ್ಷಿ ವಾಲ್ಮೀಕಿ ಪ್ರತಿಮೆಗೆ ಸಿದ್ದರಾಮಯ್ಯ ಮಾಲಾರ್ಪಣೆ ಮಾಡಿದರು.

‘ರಾಜೀನಾಮೆ ಮೂಲಕ ಸಿ.ಎಂ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಿತ್ತು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಾಲ್ಮೀಕಿ ಜಯಂತಿಯ ದಿನದಂದೇ ರಾಜೀನಾಮೆ ನೀಡಿ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಿತ್ತು ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಹೇಳಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಗರಣದ ಕುರಿತಂತೆ ಜಾರಿ ನಿರ್ದೇಶನಾಲಯದ ಚಾರ್ಜ್‌ಶೀಟ್ ಸಿದ್ದರಾಮಯ್ಯ ಅವರಿಗೆ ಜ್ಞಾನೋದಯಕ್ಕೆ ಒಂದು ದಾಖಲೆಯಂತಿದೆ. ಅದನ್ನು ಓದಿ ಪಶ್ಚಾತಾಪ ಪಟ್ಟು, ಗೌರವದಿಂದ ನಿರ್ಗಮಿಸಬೇಕಿತ್ತು ಎಂದರು.

ಜಾರಿ ನಿರ್ದೇಶನಾಲಯದ ಚಾರ್ಜ್‌ಶೀಟ್‌ನಲ್ಲಿ ಮಾಜಿ ಸಚಿವ ನಾಗೇಂದ್ರ ಅವರು ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿದ್ದ ಹಣದಿಂದ ಕಾರು ಖರೀದಿ, ಕುಟುಂಬದ ವಿಮಾನ ಪ್ರಯಾಣದ ಟಿಕೆಟ್, ಪೆಟ್ರೋಲ್– ಡೀಸೆಲ್ ಖರೀದಿ, ಮನೆ ವಿದ್ಯುತ್ ಶುಲ್ಕ, ಮನೆ ಕೆಲಸದವರ ವೇತನ ಪಾವತಿಸಿದ್ದನ್ನು ಉಲ್ಲೇಖಿಸಿದ್ದಾರೆ. 2024ರ ಲೋಕಸಭಾ ಚುನಾವಣೆಯಲ್ಲಿ ಬಳ್ಳಾರಿ ಮತ್ತು ರಾಯಚೂರು ಲೋಕಸಭಾ ಚುನಾವಣೆಗೆ ನಿಗಮದ ಹಣ ಬಳಕೆಯಾಗಿರುವುದು ಚಾರ್ಜ್‌ಶೀಟ್‌ನಲ್ಲಿ ವಿವರಿಸಲಾಗಿದೆ ಎಂದರು.

ಡಿ.ವಿ. ಸದಾನಂದಗೌಡ

ಬಳ್ಳಾರಿ ಲೋಕಸಭಾ ಚುನಾವಣೆಗಾಗಿ ಮೂವರು ಶಾಸಕರ ಮೂಲಕ ₹14.80 ಕೋಟಿ ಬಳಕೆಯಾಗಿರುವುದು ಗೊತ್ತಾಗಿದೆ. ಬಳ್ಳಾರಿ ವಿಧಾನಸಭಾ ಕ್ಷೇತ್ರದ ಶಾಸಕ ಭರತ್ ರೆಡ್ಡಿ, ಕಂಪ್ಲಿ ವಿಧಾನಸಭಾ ಕ್ಷೇತ್ರದ ಶಾಸಕ ಗಣೇಶ್ ಮತ್ತು ಕೂಡ್ಲಿಗಿ ಶಾಸಕ ಶ್ರೀನಿವಾಸ್ ಅವರ ಮೂಲಕ ಸುಮಾರು ₹15 ಕೋಟಿ ವಿತರಣೆ ಮಾಡಿದ್ದಾರೆ ಎಂದು ದೂರಿದರು.

ಪ್ರತಿಯೊಬ್ಬ ಕಾಂಗ್ರೆಸ್ ಕಾರ್ಯಕರ್ತನಿಗೆ ಲೋಕಸಭಾ ಚುನಾವಣೆಯಲ್ಲಿ ಕೆಲಸ ಮಾಡಲು ತಲಾ ₹10 ಸಾವಿರ ವೆಚ್ಚ ಮಾಡಿದ್ದಾರೆ. ಅಲ್ಲದೇ, ನಿಗಮದ ಹಣವನ್ನು ತೆಲಂಗಾಣ ಲೋಕಸಭಾ ಚುನಾವಣೆಗೂ ಉಪಯೋಗಿಸಿದ್ದಾರೆ ಎಂಬ ಅಂಶಗಳೂ ಗೊತ್ತಾಗಿವೆ ಎಂದು ಸದಾನಂದಗೌಡ ಹೇಳಿದರು.

ಪಾಪ ಪರಿಹಾರಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪತ್ನಿ ಹೆಸರಿನಲ್ಲಿ ಅರ್ಚನೆ ಮಾಡಿಸಿದ್ದಾರೆ. ಮೈಸೂರಿನ ಚಾಮುಂಡೇಶ್ವರಿ ದೇವಾಲಯದಲ್ಲಿ ಅತ್ಯಂತ ದೀನತೆಯಿಂದ ತಾವೇ ಕೈ ಹಾಕಿ ಹಣೆಗೆ ಕುಂಕುಮ ಇಟ್ಟುಕೊಂಡಿದ್ದಾರೆ, ಇವೆಲ್ಲ ನೋಡಿದಾಗ, ಅವರಿಗೆ ಪಶ್ಚಾತಾಪದಿಂದ ಜ್ಞಾನೋದಯ ಆದಂತೆ ಭಾಸವಾಗಿದೆ ಎಂದರು.

ಜೈಲಿನಲ್ಲಿ ಕುಳಿತು ಕೈದಿಗಳ ಹನಿಟ್ರ್ಯಾಪ್?

ವಿಡಿಯೊ ಕಾಲ್ ನೆಪದಲ್ಲಿ ಅಶ್ಲೀಲ ದೃಶ್ಯಗಳ ಸ್ಕ್ರೀನ್ ರೆಕಾರ್ಡ್

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಲ್ಲಿನ ಕೇಂದ್ರ ಕಾರಾಗೃಹದಲ್ಲಿನ ವಿಚಾರಣಾಧೀನ ಕೈದಿಗಳಿಬ್ಬರು ಕೆಲ ಕೈದಿಗಳನ್ನು ವಿಡಿಯೊ ಕಾಲ್ ನೆಪದಲ್ಲಿ ಹನಿ ಟ್ರ್ಯಾಪ್‌ಗೆ ಕೆಡವಿ, ಅವರಿಗೆ ಹಣದ ಬೇಡಿಕೆ ಇರಿಸುತ್ತಿದ್ದಾರೆ. ಕೈದಿಗಳಿಂದ ಹಣ ಪಡೆದ ಕೆಲ ಜೈಲು ಸಿಬ್ಬಂದಿಯ ದೃಶ್ಯಗಳನ್ನೂ ವಿಡಿಯೊ ಮಾಡಿಕೊಂಡು ಅವರಿಗೂ ಬೆದರಿಕೆ ಹಾಕುತ್ತಿದ್ದಾರೆ ಎನ್ನಲಾದ ಜೈಲಿನ ಕೈದಿಯೊಬ್ಬರ ಫೋನ್ ಕರೆಯ ಸಂಭಾಷಣೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಭಯೋತ್ಪಾದನೆ ಪ್ರಕರಣದ ವಿಚಾರಣಾಧೀನ ಕೈದಿ ಜುಲ್ಫಿಕರ್ ಹಾಗೂ ಶಿವಮೊಗ್ಗದ ರೌಡಿ ಶೀಟರ್ ಬಚ್ಚನ್ ಬೆದರಿಕೆ ಹಾಕಿದವರು. ಕೊಲೆ ಪ್ರಕರಣದ ಸಜಾ ಕೈದಿ ಸಾಗರ ಶಿವಪ್ಪ ತನ್ನ ಸ್ನೇಹಿತ ಅಯ್ಯಪ್ಪ ಜತೆಗೆ ಫೋನ್‌ನಲ್ಲಿ ಮಾತನಾಡಿದ 4.50 ನಿಮಿಷಗಳ ಆಡಿಯೊದಿಂದ ಈ ವಿಷಯ ತಿಳಿದುಬಂದಿದೆ.

ಕಾಲ್ ಸಂಭಾಷಣೆಯಲ್ಲಿ ಏನಿದೆ?: ‘ಬಚ್ಚನ್ ಮತ್ತು ಜುಲ್ಫಿಕರ್ ಬಳಿ ನಾಲ್ಕೈದು ಮೊಬೈಲ್‌ಗಳಿವೆ. ಮೊನ್ನೆ ನನ್ನನ್ನು ಅವರ ಸೆಲ್‌ಗೆ ಕರೆಸಿಕೊಂಡು, ಆಂಟಿ ಜತೆಗೆ ವಿಡಿಯೊ ಕಾಲ್‌ನಲ್ಲಿ ಮಾತಾಡುವಂತೆ ಮೊಬೈಲ್ ಕೊಟ್ಟರು. ಇಬ್ಬರನ್ನೂ ಬೆತ್ತಲೆಯೂ ಮಾಡಿಸಿದ್ದರು. ನನ್ನ ಗಮನಕ್ಕೆ ಬಾರದಂತೆ ಮೊಬೈಲ್ ಸ್ಕ್ರೀನ್ ರೆಕಾರ್ಡಿಂಗ್ ಸಹ ಮಾಡಿಕೊಂಡಿದ್ದರು’ ಎಂದು ಸಾಗರ ಹೇಳಿರುವುದು ಆಡಿಯೊದಲ್ಲಿದೆ.

‘ಅಶ್ಲೀಲ ವಿಡಿಯೊ ಮುಂದಿಟ್ಟುಕೊಂಡು ಈಗ ₹50 ಸಾವಿರಕ್ಕೆ ಬೇಡಿಕೆ ಇರಿಸಿದ್ದಾರೆ. ವಿಡಿಯೊ ಕಾಲ್ ಪ್ರಕರಣದಲ್ಲಿ ನಾನು ಕೊಟ್ಟ ಹೇಳಿಕೆಯನ್ನೂ ಹಿಂಪಡೆಯಬೇಕು. ಇಲ್ಲದಿದ್ದರೆ ಅಶ್ಲೀಲ ವಿಡಿಯೊವನ್ನು ಹೈಕೋರ್ಟ್, ಮಾಧ್ಯಮದವರಿಗೆ ಕೊಡುವ ಬೆದರಿಕೆ ಹಾಕುತ್ತಿದ್ದಾರೆ’ ಎಂದು ಹೇಳಿದ್ದು ಆಡಿಯೊದಲ್ಲಿದೆ.

‘ಜೈಲಿನ 60–70 ಸಿಬ್ಬಂದಿ ಕೈದಿಗಳಿಂದ ಹಣ ಪಡೆದಿರುವ ದೃಶ್ಯಗಳ ವಿಡಿಯೊ ಮಾಡಿಕೊಂಡಿದ್ದಾರೆ. ತಮ್ಮ ಕೃತ್ಯಕ್ಕೆ ಅಡ್ಡಿಪಡಿಸಿದರೆ ಆ ವಿಡಿಯೊಗಳನ್ನು ಹರಿಬಿಡುವುದಾಗಿ ಅವರಿಗೂ ಬ್ಲ್ಯಾಕ್ ಮೇಲ್ ಮಾಡುತ್ತಿದ್ದಾರೆ. ಸಿಬ್ಬಂದಿ ಸಹ ಅವರಿಗೆ ಸಾಥ್ ಕೊಡುತ್ತಿದ್ದಾರೆ. ಜುಲ್ಫಿಕರ್‌ಗೆ ಪಾಕಿಸ್ತಾನದ ಉಗ್ರರ ಜತೆಗೆ ನಂಟಿದ್ದು, ಮುಸ್ಲಿಂ ಆಗುವಂತೆ ಜೈಲಿನಲ್ಲಿ ಇದ್ದವರಿಗೆ ಹುರಿದುಂಬಿಸುತ್ತಾನೆ. ಸಕಲ ರೀತಿಯ ಸೌಕರ್ಯ ಪಡೆದಿದ್ದಾನೆ’ ಎಂದು ಸಾಗರ ಫೋನ್ ಸಂಭಾಷಣೆಯಲ್ಲಿ ಆರೋಪಿಸಿದ್ದಾನೆ.

ಕೈದಿ, ಸಿಬ್ಬಂದಿಯ ವಿಚಾರಣೆ: ‘ಫೋನ್ ಕಾಲ್ ಸಂಭಾಷಣೆಯ ಸತ್ಯಾಸತ್ಯತೆ ಪರಿಶೀಲಿಸಲಾಗುತ್ತಿದೆ. ಈ ಬಗ್ಗೆ ಈಗಾಗಲೇ ಮೇಲಾಧಿಕಾರಿಗಳ ಗಮನಕ್ಕೂ ತರಲಾಗಿದೆ. ಬೆದರಿಕೆ ಹಾಕಿದ, ಫೋನ್‌ನಲ್ಲಿ ಮಾತನಾಡಿದ ಕೈದಿಗಳ ಜತೆಗೆ ಸಿಬ್ಬಂದಿಯನ್ನೂ ವಿಚಾರಣೆಗೆ ಒಳಪಡಿಸಲಾಗುವುದು’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಕಾರಾಗೃಹದ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಅಕ್ರಮ ಗರ್ಭಪಾತ: ದೂರು ದಾಖಲು

ಪ್ರಜಾವಾಣಿ ವಾರ್ತೆ

ಹುಳಿಯಾರು (ತುಮಕೂರು): ಕೆಲವು ತಿಂಗಳ ಹಿಂದೆಯಷ್ಟೇ ಮಕ್ಕಳ ಮಾರಾಟ ಜಾಲದಲ್ಲಿ ಜೈಲು ಪಾಲಾಗಿದ್ದ ಗೂಬೆಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಫಾರ್ಮಾಸಿಸ್ಟ್ ಹಾಗೂ ಹುಳಿಯಾರು ಕಲ್ಪತರು ಆಸ್ಪತ್ರೆಯ ಮೆಹಬೂಬ್ ಷರೀಫ್ ವಿರುದ್ಧ ಅಕ್ರಮ ಗರ್ಭಪಾತ ಮತ್ತು ಭ್ರೂಣಹತ್ಯೆಯ ಮತ್ತೊಂದು ಪ್ರಕರಣ ದಾಖಲಾಗಿದೆ.

ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ಚಂದ್ರಶೇಖರ್ ಹಾಗೂ ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ.ರೇಖಾ ಈಚೆಗೆ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿದಾಗ ಅಕ್ರಮ ಗರ್ಭಪಾತ ಮತ್ತು ಭ್ರೂಣಹತ್ಯೆ ಪ್ರಕರಣ ಪತ್ತೆಯಾಗಿದೆ.

ಮೆಹಬೂಬ್ ಷರೀಫ್

ಹುಳಿಯಾರು ಪೊಲೀಸ್ ಠಾಣೆಯಲ್ಲಿ ಇದೇ 10ರಂದು ಪ್ರಕರಣ ದಾಖಲಾಗಿದ್ದು, ಆರೋಪಿ ಷರೀಫ್ ಮತ್ತು ಆತನ ಪತ್ನಿ ಬೀಬಿ ಫಾತೀಮಾ ತಲೆಮರೆಸಿಕೊಂಡಿದ್ದಾರೆ. ಕಲ್ಪತರು ಆಸ್ಪತ್ರೆಯು ಆರೋಪಿ ಪತ್ನಿ, ಬೀಬಿ ಫಾತೀಮಾ ಹೆಸರಿನಲ್ಲಿದೆ.

ಆಸ್ಪತ್ರೆಗೆ ದಾಖಲಾಗಿದ್ದ ಮಹಿಳೆಯೊಬ್ಬರ ಸ್ಕ್ಯಾನಿಂಗ್ ವರದಿ ಪರಿಶೀಲಿಸಿದಾಗ ಗರ್ಭವತಿಯಾಗಿದ್ದ ಆಕೆ ಅಲ್ಲಿಯೇ ಗರ್ಭಪಾತ ಮಾಡಿಸಿಕೊಂಡ ವಿಚಾರವನ್ನು ಸ್ವತಃ ಮಹಿಳೆಯೇ ವೈದ್ಯಾಧಿಕಾರಿಗಳಿಗೆ ಹೇಳಿದ್ದಾರೆ ಎಂದು ತಿಳಿದು ಬಂದಿದೆ.

‘ಕಲ್ಪತರು ಆಸ್ಪತ್ರೆಯಲ್ಲಿ ಅಕ್ರಮ ಗರ್ಭಪಾತ ಮತ್ತು ಭ್ರೂಣಹತ್ಯೆ ನಡೆಯುತ್ತಿವೆ ಎಂದು ಸಾರ್ವಜನಿಕರಿಂದ ದೂರು ಬಂದ ಹಿನ್ನೆಲೆಯಲ್ಲಿ ಜಿಲ್ಲಾ ಆರೋಗ್ಯ ಅಧಿಕಾರಿಗಳು ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿದ್ದರು. ಅಕ್ರಮ ಗರ್ಭಪಾತ ಮತ್ತು ಭ್ರೂಣಹತ್ಯೆ ಪ್ರಕರಣ ನಡೆದಿರುವುದು ದೃಢಪಟ್ಟಿದೆ. ಜಿಲ್ಲಾ ಆರೋಗ್ಯ ಅಧಿಕಾರಿಗಳ ಸೂಚನೆ ಮೇರೆಗೆ ಹುಳಿಯಾರು ಠಾಣೆಯಲ್ಲಿ ದೂರು ದಾಖಲಿಸಲಾಗಿದೆ’ ಎಂದು ತಾಲ್ಲೂಕು ವೈದ್ಯಾಧಿಕಾರಿ ಯಶವಂತ್ ‘ಪ್ರಜಾವಾಣಿ’ಗೆ ತಿಳಿಸಿದರು.

ನಾಲ್ಕೈದು ತಿಂಗಳ ಹಿಂದೆ ಗುಬ್ಬಿಯಲ್ಲಿ ಬೆಳಕಿಗೆ ಬಂದ ಅಲೆಮಾರಿ ಕುಟುಂಬವೊಂದರ ಮಗು ಮಾರಾಟ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿದ್ದ ಮೆಹಬೂಬ್ ಷರೀಫ್ ಜೈಲು ಸೇರಿದ್ದ.

ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಬಿಜೆಪಿ ವಿರುದ್ಧ ಶಾಸಕರ ಆಕ್ರೋಶ

ಸಮುದಾಯದ ಹಣ ತಿಂದಿಲ್ಲ: ನಾಗೇಂದ್ರ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ‘ನನ್ನ ಸಮಾಜದ (ವಾಲ್ಮೀಕಿ ಸಮುದಾಯ) ಹಣ ತಿನ್ನುವ ನೀಚ ಕೆಲಸ ಮಾಡದಿದ್ದರೂ ನನ್ನ ಮೇಲೆ ಆರೋಪ ಹೊರಿಸಿದ್ದಾರೆ. ನನ್ನನ್ನು ಜೈಲಿಗಟ್ಟಿದವರನ್ನು ಬಳ್ಳಾರಿ ಜಿಲ್ಲೆಯಿಂದ ಆಚೆಗಟ್ಟುವೆ’ ಎಂದು ಶಾಸಕ ಬಿ. ನಾಗೇಂದ್ರ ಹೇಳಿದರು.

ಜಿಲ್ಲಾಡಳಿತ ಗುರುವಾರ ಆಯೋಜಿಸಿದ್ದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಅಳುತ್ತ ಮಾತನಾಡಿದ ಅವರು,‘ವಾಲ್ಮೀಕಿಯೇ ಜಾಮೀನು ಕೊಟ್ಟು ಇಂಥ ದಿನ ಬಳ್ಳಾರಿ ಜಿಲ್ಲೆಗೆ ಕಳುಹಿಸಿದ್ದಾನೆ. ವಾಲ್ಮೀಕಿ ನಿಗಮದ ಹಣ ತಿಂದ ಆರೋಪ ವ್ಯಕ್ತವಾದಾಗ, ರಾಜಕೀಯ ತೊರೆಯಲು ಮತ್ತು ಜಿಲ್ಲೆಗೂ ಬಾರದಿರಲು ನಿರ್ಧರಿಸಿದ್ದೆ. ಆದರೆ, ನನ್ನನ್ನು ನಾನು ಸಾಬೀತು ಪಡಿಸಿಕೊಳ್ಳಲು ಇಲ್ಲಿಗೆ ಬಂದಿರುವೆ’ ಎಂದರು.

‘ಬೇರೇನೆ ಆರೋಪಗಳಿದ್ದರೂ ಧೈರ್ಯವಾಗಿರುತ್ತಿದ್ದೆ. ನನ್ನ ಸಮಾಜದ ಹಣ ತಿಂದೆ ಎಂದು ಆರೋಪಿಸಿದ್ದು ತುಂಬಾ ನೋವುಂಟು ಮಾಡಿದೆ. ನಿಗಮದಲ್ಲಿ ಏನಾಗಿದೆ ಎಂಬುದು ನನಗೆ ಗೊತ್ತು. ಬಿಜೆಪಿಯವರಿಗೂ ಪರಪ್ಪನ ಅಗ್ರಹಾರಕ್ಕೆ ಹೋಗುವ ಕಾಲ ಬರುತ್ತದೆ. ಜೈಲಿನ ಗೋಡೆ ಮೇಲೆ ಬಿಜೆಪಿಯವರ ಹೆಸರು ಬರೆದಿಟ್ಟು ಬಂದಿದ್ದೇನೆ. ಅವರೆಲ್ಲರೂ ಜೈಲಿಗೆ ಹೋಗುತ್ತಾರೆ’ ಎಂದರು.

‘ಹಗರಣ ನಡೆದ ಮೂರು ತಿಂಗಳಲ್ಲಿ ಹಣ ಸಂಪೂರ್ಣ ವಾಪಸ್ ಬಂದಿದೆ. ಮುಖ್ಯಮಂತ್ರಿ ವಿರುದ್ಧವೂ ಷಡ್ಯಂತ್ರ ನಡೆದಿದೆ. ಹಿಂದುಳಿದ ವರ್ಗದವರು ಎಂಬ ಕಾರಣಕ್ಕೆ ಕಾಟ ಕೊಡುತ್ತಾರೆ’ ಎಂದರು.

ಬಳ್ಳಾರಿಯಲ್ಲಿ ಕಣ್ಣೀರು ಹಾಕುತ್ತ ಭಾಷಣ ಮಾಡಿದ ಶಾಸಕ ಬಿ.ನಾಗೇಂದ್ರ ಅವರನ್ನು ಶಾಸಕ ಭರತ್ ರೆಡ್ಡಿ, ಸೋದರ ವೆಂಕಟೇಶ್ ಪ್ರಸಾದ್ ಮತ್ತಿತರರು ಸಂತೈಸಿದರು

ಜೆರಾಕ್ಸ್ ಫೋಟೊಗೆ ಪೂಜೆ! (ಕಲಬುರಗಿ ವರದಿ): ಜೇವರ್ಗಿ ತಾಲ್ಲೂಕಿನ ನೆಲೋಗಿ (ಮಾಜಿ ಮುಖ್ಯಮಂತ್ರಿ ದಿ.ಧರ್ಮಸಿಂಗ್ ಅವರ ಸ್ವಗ್ರಾಮ) ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ (ಪಿಎಚ್‌ಸಿ) ವಾಲ್ಮೀಕಿ ಜಯಂತಿ ಅಂಗವಾಗಿ ವಾಲ್ಮೀಕಿ ಭಾವ ಚಿತ್ರದ ಜೆರಾಕ್ಸ್ ಪ್ರತಿ ಇರಿಸಿ ಪೂಜೆ ಸಲ್ಲಿಸಲಾಗಿದೆ ಎಂಬ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಭಾವಚಿತ್ರಗಳನ್ನು ಬಳಸದೆ ಗಣ್ಯರಿಗೆ ಅಪಮಾನ ಮಾಡಲಾಗುತ್ತಿದೆ ಎಂದು ಸ್ಥಳೀಯರು ವಿಡಿಯೊದಲ್ಲಿನ ದೃಶ್ಯಕ್ಕೆ ಬೇಸರ ವ್ಯಕ್ತಪಡಿಸಿದ್ದಾರೆ.

ಗ್ಲಾಸ್ ಫ್ರೇಮ್ ಇಲ್ಲದ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರದ ಮೇಲೆ ಡಾ.ಬಾಬು ಜಗಜೀವನರಾಂ ಅವರ ಭಾವಚಿತ್ರ ಅಂಟಿಸಲಾಗಿದೆ. ಅದರ ಮೇಲೆ ಮಹರ್ಷಿ ವಾಲ್ಮೀಕಿ ಅವರ ಜೆರಾಕ್ಸ್ ಪ್ರತಿಯ ಫೋಟೊವನ್ನು ಅಂಟಿಸಿ ಪೂಜೆ ಸಲ್ಲಿಸಲಾಗಿದೆ ಎಂಬ ದೃಶ್ಯಗಳು ಬಹಿರಂಗವಾಗಿವೆ.

ಈ ಬಗ್ಗೆ ‘ಪ್ರಜಾವಾಣಿ’ ಜತೆಗೆ ಮಾತನಾಡಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಶರಣಬಸಪ್ಪ ಕ್ಯಾತನಾಳ, ‘ಮಹರ್ಷಿ ವಾಲ್ಮೀಕಿ ಅವರ ಜೆರಾಕ್ಸ್ ಪ್ರತಿಯ ಫೋಟೊ ಇರಿಸಿ ಪೂಜೆ ಸಲ್ಲಿಸಿದ್ದು ನನ್ನ ಗಮನಕ್ಕೆ ಬಂದಿಲ್ಲ. ಆ ರೀತಿ ಪೂಜೆ ಮಾಡಿದ್ದು ಕಂಡುಬಂದರೆ ಸಂಬಂಧಪಟ್ಟವರಿಗೆ ಕಾರಣ ಕೇಳಿ ನೋಟಿಸ್ ನೀಡುತ್ತೇನೆ’ ಎಂದರು.

ಜಿಲ್ಲಾಡಳಿತ ಭವನದ ಆವರಣಕ್ಕೆ ನುಗ್ಗಲು ಯತ್ನ: ವಶ

ಚಾಮರಾಜನಗರ: ಜಿಲ್ಲಾಡಳಿತ ಭವನದ ಆವರಣದಲ್ಲಿ ಮಹರ್ಷಿ ವಾಲ್ಮೀಕಿ ಪುತ್ಥಳಿ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಲೆತ್ನಿಸಿದ ನಾಯಕ ಸಮಾಜದ ಹಲವು ಮುಖಂಡರನ್ನು ಪೊಲೀಸರು ಗುರುವಾರ ವಶಕ್ಕೆ ಪಡೆದುಕೊಂಡರು.

ಜಿಲ್ಲಾಡಳಿತ ಹಮ್ಮಿಕೊಂಡಿದ್ದ ವಾಲ್ಮೀಕಿ ಜಯಂತಿಯನ್ನು ಬಹಿಷ್ಕರಿಸಿ, ಪ್ರತ್ಯೇಕವಾಗಿ ಜಯಂತಿ ಆಚರಿಸಿದ ಮುಖಂಡರು ಜಿಲ್ಲಾಡಳಿತ ಭವನದ ಆವರಣದೊಳಗೆ ನುಗ್ಗಲು ಯತ್ನಿಸಿದಾಗ ಪೊಲೀಸರು ತಡೆದು ಲಾಠಿ ಬೀಸಿ ಉದ್ರಿಕ್ತರ ಗುಂಪನ್ನು ಚದುರಿಸಿದರು.

ಇದೇ ವೇಳೆ ಸಭೆ ನಡೆಸಿದ ಸಮಾಜದ ಮುಖಂಡರು, ಎರಡು ತಿಂಗಳೊಳಗೆ ಸರ್ಕಾರ ವಾಲ್ಮೀಕಿ ಪುತ್ಥಳಿ ನಿರ್ಮಿಸದಿದ್ದರೆ ಹೋರಾಟ ತೀವ್ರಗೊಳಿಸುವ ಒಮ್ಮತದ ನಿರ್ಣಯ ಕೈಗೊಂಡರು.

ಅಕಾಲಿಕ ಮಳೆ: ಬೆಳೆ ಹಾನಿ ಸಮೀಕ್ಷೆಗೆ ಅಶೋಕ ಒತ್ತಾಯ

ಬೆಂಗಳೂರು: ಅಕಾಲಿಕ ಮಳೆಯಿಂದ ಹಲವು ಜಿಲ್ಲೆಗಳಲ್ಲಿ ಆಹಾರ– ಧಾನ್ಯಗಳು, ಹಣ್ಣು–ತರಕಾರಿಗಳು, ಎಣ್ಣೆಕಾಳುಗಳು, ವಾಣಿಜ್ಯ ಬೆಳೆಗಳು ನಾಶವಾಗಿವೆ. ಬೆಳೆ ಹಾನಿ ಸಮೀಕ್ಷೆ ನಡೆಸಿ ತಕ್ಷಣವೇ ರೈತರಿಗೆ ಪರಿಹಾರ ನೀಡಬೇಕು ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಒತ್ತಾಯಿಸಿದ್ದಾರೆ.

ಈ ವರ್ಷವಾದರೂ ಉತ್ತಮ ಫಸಲು ಬರಬಹುದು ಎಂಬ ನಿರೀಕ್ಷೆಯಲ್ಲಿದ್ದ ರೈತರಿಗೆ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎನ್ನುವ ಪರಿಸ್ಥಿತಿ ಎದುರಾಗಿದೆ ಎಂದು ಅವರು ‘ಎಕ್ಸ್’ ಮೂಲಕ ಹೇಳಿದ್ದಾರೆ.

ಕಳೆದ ವರ್ಷ ಬರ ಪರಿಸ್ಥಿತಿ ಇದ್ದಾಗ ಸರಿಯಾದ ಸಮಯಕ್ಕೆ ಸಮೀಕ್ಷೆ ನಡೆಸದೆ, ರಾಜಕೀಯ ಮಾಡುವುದರಲ್ಲೇ ಕಾಲಹರಣ ಮಾಡಿದ್ದ ಕಾಂಗ್ರೆಸ್ ಸರ್ಕಾರ, ಈಗಲಾದರೂ ಸರಿಯಾದ ಸಮಯಕ್ಕೆ ಬೆಳೆ ಹಾನಿ ಸಮೀಕ್ಷೆ ನಡೆಸಿ ಸಕಾಲಕ್ಕೆ ಪರಿಹಾರ ರೈತರ ಕೈಸೇರುವಂತೆ ನೋಡಿಕೊಳ್ಳಬೇಕು ಎಂದಿದ್ದಾರೆ.

ಕಳೆದ 15 ತಿಂಗಳಲ್ಲಿ 1,500 ಕ್ಕೂ ಹೆಚ್ಚು ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಈಗ ಇನ್ನಷ್ಟು ರೈತರು ಪ್ರಾಣ ಕಳೆದುಕೊಳ್ಳುವ ಯೋಚನೆ ಮಾಡುವ ಮುನ್ನ ಸೂಕ್ತಪರಿಹಾರ ಘೋಷಿಸಬೇಕು ಎಂದು ಕೃಷಿ ಸಚಿವ ಎನ್.ಚಲುವರಾಯ ಸ್ವಾಮಿ ಅವರನ್ನು ಒತ್ತಾಯಿಸಿದ್ದಾರೆ.



ಆರ್.ಅಶೋಕ

ಉಪಚುನಾವಣೆ: ಇಂದು ಅಧಿಸೂಚನೆ

ಬೆಂಗಳೂರು: ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳಿಗೆ ನಡೆಯಲಿರುವ ಉಪಚುನಾವಣೆಗೆ ಸಂಬಂಧ ಶುಕ್ರವಾರ ಅಧಿಸೂಚನೆ ಹೊರಬೀಳಲಿದೆ.

ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಲಿದ್ದು, ಇದೇ 25 ರವರೆಗೆ ನಾಮಪತ್ರ ಸಲ್ಲಿಕೆಗೆ ಅವಕಾಶವಿರಲಿದೆ. ಅ. 30 ನಾಮಪತ್ರ ವಾಪಸ್ ಪಡೆಯಲು ಕೊನೆ ದಿನ. ನವೆಂಬರ್ 13 ರಂದು ಮತದಾನ ನಡೆಯಲಿದೆ.

‘ನಾನೇ ಅಭ್ಯರ್ಥಿ’–‘ತೀರ್ಮಾನ ನನ್ನದು’

ಒಂದನೇ ಪುಟದಿಂದ...

ಈ ಮಧ್ಯೆ ನಿಖಿಲ್ ಕುಮಾರಸ್ವಾಮಿ ಕಣಕ್ಕೆ ಇಳಿಯುತ್ತಾರೆ ಎಂಬ ಮಾತು ಚಾಲ್ತಿಯಲ್ಲಿದೆ. ಅನಿತಾ ಕುಮಾರಸ್ವಾಮಿ ಅವರನ್ನು ಕಣಕ್ಕೆ ಇಳಿಸಲಾಗುತ್ತದೆ ಎಂಬ ಮಾತೂ ಗುರುವಾರ ಮುನ್ನೆಲೆಗೆ ಬಂದಿದೆ.

ಕಾಂಗ್ರೆಸ್‌ನಿಂದ ಡಿ.ಕೆ.ಸುರೇಶ್ ಕಣಕ್ಕೆ ಇಳಿಯಬಹುದು ಎಂಬ ಬಗ್ಗೆ ಪಕ್ಷದ ನಾಯಕರೇ ಸುಳಿವು ನೀಡಿದ್ದಾರೆ. ಮೈಸೂರಿನಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಕಾಂಗ್ರೆಸ್ ಶಾಸಕ ತನ್ವೀರ್ ಸೇಠ್, ‘ಡಿ.ಕೆ.ಸುರೇಶ್ ಅವರು ರಾಜಕೀಯದಲ್ಲಿ ಮುಂದುವರೆಯುವುದು ಕಾಂಗ್ರೆಸ್‌ಗೆ ಅನಿವಾರ್ಯ’ ಎಂದಿದ್ದಾರೆ. ಜತೆಗೆ, ಸುರೇಶ್ ಪರವಾಗಿ ಅವರ ಆಪ್ತರು ಕೊಲ್ಲೂರಿನಲ್ಲಿ ಚಂಡಿಕಾಯಾಗ ಮಾಡಿಸಿದ್ದಾರೆ. ಈ ಮಧ್ಯೆ ತೇಜಸ್ವಿನಿಗೌಡ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಪತ್ರ ಬರೆದು, ‘ನನಗೆ ಟಿಕೆಟ್ ಕೊಡಿ’ ಎಂದು ಕೋರಿದ್ದಾರೆ.

ಧಾರಾಕಾರ ಮಳೆ: ಭತ್ತದ ಬೆಳೆಗೆ ಹಾನಿ, ಕೆರೆ ಕೋಡಿ ಬಿದ್ದು ಮೆಕ್ಕೆಜೋಳ ಬೆಳೆ ನಾಶ • ರಸ್ತೆ ಸಂಪರ್ಕ ಕಡಿತ

ಉಕ್ಕಿ ಹರಿದ ಕಾಲುವೆ; ಮನೆಗಳಿಗೆ ನುಗ್ಗಿದ ನೀರು

ಪ್ರಜಾವಾಣಿ ವಾರ್ತೆ

ದಾವಣಗೆರೆ: ನಗರವೂ ಸೇರಿದಂತೆ ಜಿಲ್ಲೆಯ ವಿವಿಧೆಡೆ ಬುಧವಾರ ರಾತ್ರಿಯಿಂದ ಧಾರಾಕಾರ ಮಳೆ ಸುರಿದಿದ್ದು, ದೇವರಬೆಳಕೆರೆ ಪಿಕಪ್ ಕಾಲುವೆ ಉಕ್ಕಿ ಹರಿದು ಹರಿಹರ ನಗರಕ್ಕೆ ನೀರು ನುಗ್ಗಿದೆ. ನೂರಕ್ಕೂ ಹೆಚ್ಚು ಮನೆಗಳು ಜಲಾವೃತಗೊಂಡಿವೆ.

ಹರಿಹರ ತಾಲ್ಲೂಕಿನ ದೇವರಬೆಳಕೆರೆ ಪಿಕಪ್‌ನಿಂದ ಅಪಾರ ಪ್ರಮಾಣದ ನೀರು ಹರಿಯುತ್ತಿದೆ. ಕಾಲುವೆಯಲ್ಲಿ ಹೂಳು ತುಂಬಿದ್ದರಿಂದ ಹರಿಹರ ನಗರಕ್ಕೆ ನೀರು ನುಗ್ಗಿದೆ. ಜೈಭೀಮ್ ನಗರದಲ್ಲಿ ಗೋಡೆ ಕುಸಿದು 3 ವರ್ಷದ ಮಗು ಆಯೇಷಾ ಗಂಭೀರವಾಗಿ ಗಾಯಗೊಂಡಿದೆ.

ದಾವಣಗೆರೆಯ ಪಿಸಾಳೆ ಕಾಂಪೌಂಡ್‌ನ ಹಲವು ಮನೆಗಳಿಗೆ ನೀರು ನುಗ್ಗಿದೆ. ಹಳೆ ಕುಂದುವಾಡ ಸಂಪರ್ಕಿಸುವ ರಸ್ತೆಯ ಮೇಲೆ ನದಿಯಂತೆ ನೀರು ಹರಿದು ಸಂಪರ್ಕ ಕಡಿತಗೊಂಡಿತ್ತು. ಚಿಕ್ಕನಹಳ್ಳಿಯ ಹಳ್ಳ ತುಂಬಿ ರಸ್ತೆ ಮೇಲೆ ನೀರು ಹರಿದು ಸೇತುವೆ ಸಂಪರ್ಕ ಕಡಿತಗೊಂಡಿತ್ತು. ಹರಪನಹಳ್ಳಿ ಮಾರ್ಗದಲ್ಲಿ ಸಂಚಾರ ಕೆಲಹೊತ್ತು ಸ್ಥಗಿತಗೊಂಡಿತ್ತು.

ಹುಬ್ಬಳ್ಳಿ ವರದಿ: ವಿಜಯನಗರ ಜಿಲ್ಲೆಯ ಹೂವಿನಹಡಗಲಿ, ಅರಸೀಕೆರೆ ಭಾಗದಲ್ಲಿ ನೂರಾರು ಎಕರೆ ಭತ್ತದ ಫಸಲು ನಾಶವಾಗಿದೆ. ಹೂವಿನಹಡಗಲಿ ತಾಲ್ಲೂಕಿನ ಹಿರೇಬನ್ನಿಮಟ್ಟಿ, ಮಕರಬ್ಬಿ, ಬ್ಯಾಲಹುಣ್ಸೆ ಗ್ರಾಮಗಳಲ್ಲಿ 60 ಎಕರೆ ಭತ್ತದ ಬೆಳೆ ನೆಲಕ್ಕೆ ಬಿದ್ದು ಹಾನಿಯಾಗಿದೆ. ಹೀರೆಮೆಗಳಗೇರೆ ಸ್ಮಶಾನ ಜಲಾವೃತಗೊಂಡಿದೆ. ಕುರೆಮಾಗನಹಳ್ಳಿ ಕೆರೆ ಕೋಡಿಬಿದ್ದು ಮೆಕ್ಕೆಜೋಳ ಬೆಳೆ ನಾಶವಾಗಿದೆ. 15ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ.

ತುಂಗಭದ್ರಾ ಅಣೆಕಟ್ಟೆಯಿಂದ 17 ಸಾವಿರ ಕ್ಯುಸೆಕ್ ನೀರನ್ನು ಮೂರು ಗೇಟ್‌ಗಳ ಮೂಲಕ ನದಿಗೆ ಹರಿಸಲಾಗುತ್ತಿದೆ. ಜಲಾಶಯದ ಒಳಹರಿವಿನ ಪ್ರಮಾಣ 28,607 ಕ್ಯುಸೆಕ್ ಇದೆ.

ಬಳ್ಳಾರಿ ಜಿಲ್ಲೆ ತೆಕ್ಕಲಕೋಟೆಯಲ್ಲಿ ನಾಲ್ಕೈದು ದಿನಗಳಿಂದ ಸುರಿದ ಮಳೆಯಿಂದ ಭತ್ತದ ಬೆಳೆ ನೆಲಕಚ್ಚಿದೆ. ಸಿರುಗುಪ್ಪ ತಾಲೂಕಿನ ನಿಟ್ಟೂರು, ರುದ್ರಪಾದ, ನಡವಿ, ಉಡುಗೋಳ, ದೇವಿನಗರ, ಬಲಕುಂದಿ ಕರೂರು ಹೋಬಳಿಯ ಹಲವು ಪ್ರದೇಶಗಳಲ್ಲಿ ಬೆಳೆ ಗಾಳಿ ಮಳೆಗೆ ಭೂಮಿಗೆ ಒರಗಿವೆ.

ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಭಾಗದಲ್ಲಿ ದಾಂಡೇಲಿ, ಹಳಿಯಾಳ, ಮುಂಡಗೋಡ ಭಾಗದಲ್ಲಿ ರಭಸದ ಮಳೆ ಆಗಿದೆ. ಹಳಿಯಾಳ, ಮುಂಡಗೋಡ ಭಾಗದಲ್ಲಿ ಕಾಳು ಬಿಟ್ಟು ಕೊಯ್ಲು ಹಂತದಲ್ಲಿರುವ ಭತ್ತದ ಪೈರು ನೆಲಕ್ಕುರುಳಿವೆ. ನಿರಂತರ ಮಳೆಯಿಂದ ಗೋವಿನಜೋಳಕ್ಕೂ ಹಾನಿಯಾಗಿದೆ.

ಗದಗ ಜಿಲ್ಲೆಯ ವಿವಿಧೆಡೆ ಉತ್ತಮ ಮಳೆಯಾಗಿದ್ದು ಮುಂಡರಗಿ ಮತ್ತು ಲಕ್ಷ್ಮೇಶ್ವರ ತಾಲ್ಲೂಕಿನಲ್ಲಿ ರಭಸದ ಮಳೆ ಸುರಿದಿದೆ. ಧಾರವಾಡ ನಗರ ಸೇರಿ ಜಿಲ್ಲೆಯ ವಿವಿಧೆಡೆ ಮಳೆಯಾಗಿದೆ.

ಬೆಳಗಾವಿ ನಗರ, ತಾಲ್ಲೂಕು, ಸವದತ್ತಿ, ಚಿಕ್ಕೋಡಿ, ಬೈಲಹೊಂಗಲ ಮುಂತಾದ ಕಡೆ ಧಾರಾಕಾರ ಮಳೆ ಮುಂದುವರಿಯಿತು.

ಕೊಪ್ಪಳ ವರದಿ: ನಗರವೂ ಸೇರಿದಂತೆ ಜಿಲ್ಲೆಯಾದ್ಯಂತ ವ್ಯಾಪಕ ಮಳೆ ಸುರಿಯಿತು. ಬೆಳಿಗ್ಗೆಯಿಂದಲೇ ಜಿಟಿಜಿಟಿ ಮಳೆ ಸುರಿಯಿತು. ಇದರಿಂದಾಗಿ ಕೆಲಸಕ್ಕೆ ಹೋಗುವವರು ಪರದಾಡಿ ಜನಜೀವನ ಅಸ್ತವ್ಯಸ್ತವಾಯಿತು. ಇತ್ತೀಚೆಗೆ ಸುರಿದ ನಿರಂತರ ಮಳೆಗೆ 350 ಹೆಕ್ಟೇರ್ ಬೆಳೆಗೆ ಹಾನಿಯಾಗಿದೆ.

ಹುಬ್ಬಳ್ಳಿಯಲ್ಲಿ ಗುರುವಾರ ಸುರಿದ ಧಾರಾಕಾರ ಮಳೆಯಿಂದ ಉಣಕಲ್ ಕೆರೆ ಬಳಿಯ ಶ್ರೀನಗರ ವೃತ್ತದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ಸಂಗ್ರಹವಾದ ಕಾರಣ ವಾಹನಗಳ ಸುಗಮ ಸಂಚಾರಕ್ಕೆ ತೊಂದರೆಯಾಯಿತು ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಉತ್ತಮ ಮಳೆ: ಕೆಆರ್‌ಎಸ್ ಮತ್ತೆ ಭರ್ತಿ

ಮಂಡ್ಯ: ಕಾವೇರಿ ಜಲಾನಯನ ಪ್ರದೇಶದಲ್ಲಿ ಐದಾರು ದಿನಗಳಿಂದ ಉತ್ತಮ ಮಳೆಯಾಗುತ್ತಿರುವುದರಿಂದ, ಶ್ರೀರಂಗಪಟ್ಟಣ ತಾಲ್ಲೂಕಿನ ಕೆ.ಆರ್.ಎಸ್. ಜಲಾಶಯ ಇದೇ ವರ್ಷದಲ್ಲಿ ಮೂರನೇ ಬಾರಿಗೆ ಭರ್ತಿಯಾಗಿದ್ದು, ಗರಿಷ್ಠ ನೀರಿನ ಮಟ್ಟ 124.80 ಅಡಿ ತಲುಪಿದೆ.

ಜಲಾಶಯದಲ್ಲಿ ಪ್ರಸ್ತುತ 49.852 ಟಿಎಂಸಿ ಅಡಿಯಷ್ಟು ನೀರು ಸಂಗ್ರಹವಾಗಿದೆ. ಒಳಹರಿವು 8,547 ಕ್ಯುಸೆಕ್, ಹೊರಹರಿವು 8,287 ಕ್ಯುಸೆಕ್ ಇದೆ.

‘ಈ ಬಾರಿ ವಾಡಿಕೆಯಷ್ಟು ಮಳೆಯಾಗಿದೆ. ಜಲಾಶಯ ಕೂಡ ಭರ್ತಿಯಾಗಿದೆ. ಬೇಸಿಗೆಯಲ್ಲಿ ನೀರಿನ ಕೊರತೆ ಕಾಡುವುದಿಲ್ಲ ಮತ್ತು ಬೇಸಿಗೆ ಬೆಳೆಗೂ ಸಮಸ್ಯೆಯಾಗುವುದಿಲ್ಲ’ ಎಂದು ರೈತರು ಹರ್ಷ ವ್ಯಕ್ತಪಡಿಸಿದ್ದಾರೆ.

ಜಲಾಶಯ ಭರ್ತಿಯಾಗಿದ್ದರಿಂದ, ಜುಲೈ 29ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಾಗಿನ ಅರ್ಪಿಸಿದ್ದರು.

ದಾವಣಗೆರೆ ಹೊರವಲಯದ ಚಿಕ್ಕನಹಳ್ಳಿ ಹಳ್ಳ ತುಂಬಿ ಹರಿಯುತ್ತಿದ್ದು, ಸೇತುವೆ ಮೇಲೆ ನೀರು ಸಂಗ್ರಹವಾಗಿದ್ದರಿಂದ ವಾಹನ ಸವಾರರು ಪರದಾಡಿದರು ಪ್ರಜಾವಾಣಿ ಚಿತ್ರ/ಸತೀಶ್ ಬಡಿಗೇರ

ಒಬ್ಬರ ಕೈಯಲ್ಲಿ ಹಾರೆ, ಇನ್ನೊಬ್ಬರ ಕೈಯಲ್ಲಿ ಗುದ್ದಲಿ: ತನ್ವೀರ್ ಸೇಠ್ ವ್ಯಂಗ್ಯ

ಪ್ರಜಾವಾಣಿ ವಾರ್ತೆ

ಮೈಸೂರು: ‘ಮೈತ್ರಿ ಪಕ್ಷಗಳ ಪೈಕಿ ಒಬ್ಬರ ಕೈಯಲ್ಲಿ ಹಾರೆ, ಇನ್ನೊಬ್ಬರ ಕೈಯಲ್ಲಿ ಗುದ್ದಲಿ ಇದೆ. ಚನ್ನಪಟ್ಟಣದ ಉಪಚುನಾವಣೆಯಲ್ಲಿ ಯಾರೇ ಅಭ್ಯರ್ಥಿಯಾದರೂ ಒಬ್ಬರು ಗುಂಡಿ ತೋಡುತ್ತಾರೆ, ಮತ್ತೊಬ್ಬರು ಎಳೆಯುತ್ತಾರೆ. ಅಲ್ಲಿ ಕಾಂಗ್ರೆಸ್ ಗೆಲ್ಲುವುದು ನಿಶ್ಚಿತ’ ಎಂದು ಶಾಸಕ ತನ್ವೀರ್ ಸೇಠ್ ಪ್ರತಿಪಾದಿಸಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಚನ್ನಪಟ್ಟಣದಲ್ಲಿ ಅಭ್ಯರ್ಥಿಯಾಗುವುದಾಗಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಡಿ.ಕೆ. ಸುರೇಶ್ ಸ್ಪರ್ಧಿಸಬೇಕೆಂಬುದು ಮತದಾರರ ಆಶಯ. ರಾಜಕೀಯವಾಗಿ ಸುರೇಶ್ ಮುಂದುವರಿಯಬೇಕೆಂಬುದು ಪಕ್ಷಕ್ಕಿರುವ ಅನಿವಾರ್ಯತೆ. ನಾಲ್ಕೈದು ದಿನದಲ್ಲಿ ಅಭ್ಯರ್ಥಿ ಘೋಷಣೆಯಾಗಲಿದೆ. ಸಾಮಾಜಿಕ ನ್ಯಾಯದಂತೆ ಶಿಗ್ಗಾವಿಯಲ್ಲಿ ಮುಸ್ಲಿಮರಿಗೆ ಟಿಕೆಟ್ ನೀಡುವಂತೆ ಕೋರಿದ್ದೇವೆ’ಎಂದರು.

ತನ್ವೀರ್ ಸೇಠ್

ಶಿಗ್ಗಾವಿ ಟಿಕೆಟ್ ಆಕಾಂಕ್ಷಿಯಲ್ಲ: ನಿರಾಣಿ

ನವದೆಹಲಿ: ‘ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ನಾನು ಟಿಕೆಟ್ ಆಕಾಂಕ್ಷಿ ಅಲ್ಲ’ ಎಂದು ಮಾಜಿ ಸಚಿವ ಮುರುಗೇಶ ನಿರಾಣಿ ಸ್ಪಷ್ಟಪಡಿಸಿದರು.

ಗುರುವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಟಿಕೆಟ್‌ಗಾಗಿ ಭರತ್ ಬೊಮ್ಮಾಯಿ ಸೇರಿ 60 ಮಂದಿ ಅರ್ಜಿ ಹಾಕಿದ್ದಾರೆ. ನನ್ನ ಹೆಸರು ಸಹ ಕೇಳಿ ಬರುತ್ತಿದೆ. ಆದರೆ, ಮತ್ತೊಂದು ಜಿಲ್ಲೆಗೆ ಹೋಗಿ ಸ್ಪರ್ಧೆ ಮಾಡುವುದು ಸರಿ ಅಲ್ಲ. ಆ ಕ್ಷೇತ್ರದಲ್ಲಿ ಪಂಚಮಸಾಲಿ ಸಮಾಜದವರು ಸಾಕಷ್ಟು ಮಂದಿ ಇದ್ದಾರೆ. ಪಕ್ಷಕ್ಕಾಗಿ ದುಡಿದ ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ಇದ್ದಾರೆ. ಅವರಿಗೆ ಟಿಕೆಟ್ ಕೊಡಬೇಕು. ಬಿಜೆಪಿಯನ್ನು ಗೆಲ್ಲಿಸಿಕೊಂಡು ಬರುವುದು ನಮ್ಮ ಹೊಣೆ’ ಎಂದರು.

12 ಜನರ ಬಂಧನ • ಹಲವರು ಆಸ್ಪತ್ರೆಗೆ ದಾಖಲು • ಸರ್ಕಾರದ ವಿರುದ್ಧ ವಿರೋಧ ಪಕ್ಷಗಳ ವಾಗ್ದಾಳಿ

ನಕಲಿ ಮದ್ಯ ಸೇವನೆ: ಮೃತರ ಸಂಖ್ಯೆ 25ಕ್ಕೆ

ಸಿವಾನ್/ಸಾರಣ್ (ಪಿಟಿಐ): ಮದ್ಯಪಾನ ನಿಷೇಧ ಜಾರಿಯಲ್ಲಿರುವ ಬಿಹಾರದಲ್ಲಿ ನಕಲಿ ಮದ್ಯ ಸೇವಿಸಿ ಎರಡು ದಿನಗಳಲ್ಲಿ ಮೃತಪಟ್ಟವರ ಸಂಖ್ಯೆ 25ಕ್ಕೆ ಏರಿಕೆಯಾಗಿದೆ.

ಸಿವಾನ್ ಮತ್ತು ಸಾರಣ್ ಜಿಲ್ಲೆಗಳಲ್ಲಿ ಈ ದುರಂತ ಸಂಭವಿಸಿದೆ. ಬುಧವಾರ ಆರು ಮಂದಿ ಮೃತಪಟ್ಟಿದ್ದರು. ಗುರುವಾರ 19 ಮಂದಿ ಮೃತಪಟ್ಟಿದ್ದು, ಹಲವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ದುರಂತದ ಕುರಿತು ಬಿಹಾರ ವಿರೋಧ ಪಕ್ಷಗಳು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿವೆ. ಎಂಟು ವರ್ಷಗಳ ಹಿಂದೆ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಜಾರಿಗೊಳಿಸಿದ್ದ ಮದ್ಯಪಾನ ನಿಷೇಧ ಸಮರ್ಪಕವಾಗಿ ಅನುಷ್ಠಾನ ಆಗಿದೆಯೇ ಎಂದು ಅವು ಪ್ರಶ್ನಿಸಿವೆ.

ಕಠಿಣ ಕ್ರಮಕ್ಕೆ ಸಿ.ಎಂ ಸೂಚನೆ: ದುರಂತದ ಬೆನ್ನಲ್ಲೇ, ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಗುರುವಾರ ಸಭೆ ನಡೆಸಿ 'ಕಾನೂನುಬಾಹಿರವಾಗಿ ಮದ್ಯ ಮಾರಾಟದಲ್ಲಿ ತೊಡಗಿರುವ ವ್ಯಕ್ತಿಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಂತೆ' ಸೂಚನೆ ನೀಡಿದ್ದಾರೆ.

12 ಜನರ ಬಂಧನ: ನಕಲಿ ಮದ್ಯ ಮಾರಾಟ ಮಾಡುತ್ತಿದ್ದ 12 ಜನರನ್ನು ಬಂಧಿಸಲಾಗಿದ್ದು, ಅವರಿಗೆ ಕಾನೂನಿನ ಅಡಿ ಕಠಿಣ ಶಿಕ್ಷೆಯಾಗಲಿದೆ ಎಂದು ಡಿಜಿಪಿ ಅಲೋಕ್ ರಾಜ್ ತಿಳಿಸಿದ್ದಾರೆ.

ಬಿಹಾರದ ಸಾರಣ್ ಜಿಲ್ಲೆಯಲ್ಲಿ ನಕಲಿ ಮದ್ಯ ಸೇವಿಸಿ ಮೃತಪಟ್ಟ ವ್ಯಕ್ತಿಯ ಕುಟುಂಬದವರು ಮತ್ತು ಸಂಬಂಧಿಕರು ರೋದಿಸಿದರು ಪಿಟಿಐ ಚಿತ್ರ

ಪ್ರಕರಣದ ತನಿಖೆಗೆ ಎರಡು ವಿಶೇಷ ತನಿಖಾ ತಂಡಗಳನ್ನು (ಎಸ್ಐಟಿ) ರಚಿಸಲಾಗಿದ್ದು, ಒಂದು ತಂಡ ಈ ದುರಂತಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುತ್ತದೆ. ಮತ್ತೊಂದು ತಂಡ, ಈ ರೀತಿ ನಡೆದಿರುವ ದುರಂತಗಳ ಬಗ್ಗೆ ಸಮಗ್ರ ಅವಲೋಕನ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಲಿದೆ ಎಂದು ಅವರು ವಿವರಿಸಿದರು.

'ಸಿವಾನ್ ಜಿಲ್ಲೆಯ ಮಘರ್ ಮತ್ತು ಔರಿಯಾ ಪಂಚಾಯಿತಿ ವ್ಯಾಪ್ತಿಯಲ್ಲಿ ನಕಲಿ ಮದ್ಯ ಕುಡಿದು ಒಟ್ಟು 20 ಜನರು ಹಾಗೂ ಸಾರಣ್ ಜಿಲ್ಲೆ ವ್ಯಾಪ್ತಿಯಲ್ಲಿ ಐವರು ಮೃತಪಟ್ಟಿದ್ದಾರೆ' ಎಂದು ಸಾರಣ್ ವಲಯದ ಡಿಐಜಿ ನೀಲೇಶ್ ಕುಮಾರ್ ಮಾಹಿತಿ ನೀಡಿದ್ದಾರೆ.

ದೃಷ್ಟಿ ಕಳೆದುಕೊಂಡರು: ಸ್ಥಳೀಯ ಪೊಲೀಸರ ಪ್ರಕಾರ, 25ಕ್ಕೂ ಹೆಚ್ಚು ಜನರು ವಿವಿಧ ಆಸ್ಪತ್ರೆಗಳಲ್ಲಿ ಜೀವನ್ಮರಣ ಹೋರಾಟ ನಡೆಸುತ್ತಿದ್ದಾರೆ. ಅವರಲ್ಲಿ ಕೆಲವರು ದೃಷ್ಟಿ ಕಳೆದುಕೊಂಡಿದ್ದಾರೆ.

ಬಿಹಾರ ಸರ್ಕಾರ 2016ರ ಏಪ್ರಿಲ್ 5ರಂದು ಮದ್ಯಪಾನ ಮತ್ತು ಮದ್ಯ ಮಾರಾಟ ನಿಷೇಧ ಜಾರಿಗೊಳಿಸಿತು. ಆ ಬಳಿಕ ನಕಲಿ ಮದ್ಯ ಸೇವಿಸಿ ರಾಜ್ಯದಲ್ಲಿ 150ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ ಎಂದು ಸರ್ಕಾರ ಇತ್ತೀಚೆಗೆ ಮಾಹಿತಿ ನೀಡಿತ್ತು.

2022ರಲ್ಲಿ ಬಿಹಾರದ ಸಾರಣ್ ಜಿಲ್ಲೆಯಲ್ಲಿ ಸಂಭವಿಸಿದ್ದ ಕಳ್ಳಬಟ್ಟಿ ದುರಂತದಲ್ಲಿ 40 ಮಂದಿ ಮೃತಪಟ್ಟಿದ್ದರು. ಈ ಕುರಿತು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿ ತನಿಖೆ ನಡೆಸಿ, ಸಾವು ನೋವಿನ ಸಂಖ್ಯೆ 70ಕ್ಕಿಂತ ಹೆಚ್ಚಿದೆ ಎಂದು ಹೇಳಿತ್ತು.

'ಸಾವಿಗೆ ಯಾರು ಹೊಣೆ'

'ಬಿಹಾರದಲ್ಲಿ ಮದ್ಯ ವ್ಯಾಪಾರ ನಿಷೇಧವಿದ್ದರೂ ಆಡಳಿತ ಪಕ್ಷದ ನಾಯಕರ ಜತೆ ನಂಟು ಹೊಂದಿರುವವರು, ಪೊಲೀಸ್ ಮತ್ತು ಮಾಫಿಯಾದವರ ಸಹಕಾರದಿಂದ ಎಲ್ಲೆಡೆ ಮದ್ಯ ಲಭ್ಯವಿದೆ' ಎಂದು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ 'ಎಕ್ಸ್'ನಲ್ಲಿ ದೂರಿದ್ದಾರೆ.

'ರಾಜ್ಯದಲ್ಲಿ ನಕಲಿ ಮದ್ಯ ಸೇವಿಸಿ ನಿತ್ಯ ಸಾವುಗಳು ಸಂಭವಿಸುತ್ತಿವೆ. ಅ ಅಪರಾಧ ಪ್ರಕರಣಗಳೂ ಹೆಚ್ಚುತ್ತಿವೆ. ಇದು ಗೃಹ ಇಲಾಖೆ ಮತ್ತು ಮುಖ್ಯಮಂತ್ರಿಯ ವೈಫಲ್ಯವನ್ನು ತೋರಿಸುತ್ತದೆ. ಇಷ್ಟು ಜನರ ಸಾವಿಗೆ ಯಾರು ಹೊಣೆ?' ಎಂದು ಅವರು ಪೋಸ್ಟ್‌ನಲ್ಲಿ ಪ್ರಶ್ನಿಸಿದ್ದಾರೆ.

ಕಾಂಗ್ರೆಸ್ ಕಿಡಿ: 'ಈ ದುರಂತಕ್ಕೆ ಕಾರಣರಾದವರನ್ನು ಗಲ್ಲಿಗೇರಿಸಬೇಕು' ಎಂದು ಬಿಹಾರ ಕಾಂಗ್ರೆಸ್ ಘಟಕ ಸಮಿತಿ ಅಧ್ಯಕ್ಷ ಅಖಿಲೇಶ್ ಪ್ರಸಾದ್ ಸಿಂಗ್ ಆಗ್ರಹಿಸಿದ್ದಾರೆ.

ಮೂವರ ಅಮಾನತು

ನಿರ್ಲಕ್ಷ್ಯದ ಆರೋಪದ ಮೇರೆಗೆ ಜಿಲ್ಲಾಡಳಿತವು ಮಘರ್, ಔರಿಯಾ ಮತ್ತು ಇಬ್ರಾಹಿಂಪುರ ಪ್ರದೇಶಗಳ ಮೂವರು ಚೌಕಿದಾರರನ್ನು ಅಮಾನತುಗೊಳಿಸಿದೆ. ಅಲ್ಲದೆ ಐದು ಪೊಲೀಸ್ ಸಿಬ್ಬಂದಿಗೆ ಕಾರಣ ಕೇಳಿ ನೋಟಿಸ್ ಜಾರಿಗೊಳಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹರಿಯಾಣ: ನಾಯಬ್ ಸೈನಿ ಪ್ರಮಾಣ

13 ಶಾಸಕರಿಗೆ ಸಚಿವ ಸ್ಥಾನ • ಪ್ರಧಾನಿ ಮೋದಿ, ಕೇಂದ್ರ ಸಚಿವರು ಸೇರಿ ಹಲವು ಗಣ್ಯರು ಭಾಗಿ

ಚಂಡೀಗಢ (ಪಿಟಿಐ): ಇತರ ಹಿಂದುಳಿದ ವರ್ಗಗಳ (ಒಬಿಸಿ) ನಾಯಕ ನಾಯಬ್ ಸಿಂಗ್ ಸೈನಿ (54) ಅವರು ಗುರುವಾರ ಹರಿಯಾಣದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಈ ಮೂಲಕ ಅವರು ಸತತ ಎರಡನೇ ಬಾರಿಗೆ ಮುಖ್ಯಮಂತ್ರಿ ಹುದ್ದೆಗೆ ಏರಿದರು.

ವಾಲ್ಮೀಕಿ ಜಯಂತಿ ದಿನದಂದು ಇಲ್ಲಿನ ದಸರಾ ಮೈದಾನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ, ರಾಜ್ಯಪಾಲ ಬಂಡಾರು ದತ್ತಾತ್ರೇಯ ಅವರು ಸೈನಿ ಅವರಿಗೆ ಅಧಿಕಾರದ ಗೋಪ್ಯತೆ ಬೋಧಿಸಿದರು. ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಬಿಜೆಪಿಯ ಹಲವು ನಾಯಕರು ಮತ್ತು ಸಹಸ್ರಾರು ಜನರು ಈ ಕ್ಷಣಕ್ಕೆ ಸಾಕ್ಷಿಯಾದರು.

ಸಚಿವರಾಗಿ ಪ್ರಮಾಣ: ಶಾಸಕರಾದ ಅನಿಲ್ ವಿಜ್, ಕ್ರಿಶನ್ ಲಾಲ್ ಪನ್ವಾರ್, ರಾವ್ ನರಬೀರ್ ಸಿಂಗ್, ಮಹಿಪಾಲ್ ಧಂಡಾ, ವಿಪುಲ್ ಗೋಯೆಲ್, ಅರವಿಂದ್ ಶರ್ಮಾ, ಶ್ಯಾಮ್ ಸಿಂಗ್ ರಾಣಾ, ರಣಬೀರ್ ಗಂಗ್ವಾ, ಕುಮಾರ್ ಬೇಡಿ, ಮಹಿಳಾ ಶಾಸಕರಾದ ಶೃತಿ ಚೌಧರಿ, ಆರತಿ ಸಿಂಗ್ ರಾವ್ ಅವರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಹರಿಯಾಣ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ನಾಯಬ್ ಸಿಂಗ್ ಸೈನಿ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ನಮಿಸಿದರು ಪಿಟಿಐ ಚಿತ್ರ

ಶಾಸಕರಾದ ರಾಜೇಶ್ ನಾಗರ್, ಗೌರವ್ ಗೌತಮ್ ಅವರು ಸ್ವತಂತ್ರ ಖಾತೆಯ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಹರಿಯಾಣ ಸಂಪುಟದಲ್ಲಿ ಮುಖ್ಯಮಂತ್ರಿ ಸೇರಿ ಒಟ್ಟು 14 ಸಚಿವರಿಗೆ ಅವಕಾಶವಿದೆ.

ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ್ ಸಿಂಗ್, ನಿತಿನ್ ಗಡ್ಕರಿ, ಚಿರಾಗ್ ಪಾಸ್ವಾನ್, ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಬಿಜೆಪಿ ಮತ್ತು ಎನ್‌ಡಿಎ ಆಳ್ವಿಕೆಯಿರುವ ರಾಜ್ಯಗಳ ಮುಖ್ಯಮಂತ್ರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಪ್ರಮಾಣ ವಚನ ಸ್ವೀಕರಿಸುವುದಕ್ಕೂ ಮುನ್ನ ಸೈನಿ ಅವರು ವಾಲ್ಮೀಕಿ ಭವನ, ಗುರುದ್ವಾರ ಮತ್ತು ಪಂಚಕುಲದ ಮಾನಸಾ ದೇವಿ ದೇಗುಲಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು.

ಪ್ರಣಾಳಿಕೆ ಪೂರ್ಣ ಜಾರಿ: ಸುದ್ದಿಗಾರರ ಜತೆ ಮಾತನಾಡಿದ ಸೈನಿ, 'ನಾವು 2014 ಮತ್ತು 2019ರ ಸಂಕಲ್ಪ ಪತ್ರದಲ್ಲಿ (ಪ್ರಣಾಳಿಕೆ) ಘೋಷಿಸಿದ್ದ ಕಾರ್ಯಕ್ರಮಗಳನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಿದ್ದೇವೆ. ಅದೇ ರೀತಿ ಈ ಬಾರಿಯ ಸಂಕಲ್ಪ ಪತ್ರವನ್ನು ಅನುಷ್ಠಾನಗೊಳಿಸುತ್ತೇವೆ' ಎಂದರು.

ಹರಿಯಾಣ ವಿಧಾನಸಭೆಯ 90 ಕ್ಷೇತ್ರಗಳಿಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿ 48 ಸ್ಥಾನಗಳನ್ನು ಗೆಲ್ಲುವ ಮೂಲಕ ಬಹುಮತ ಪಡೆದಿತ್ತು. ಹಿಸಾರ್ ಶಾಸಕಿ ಸಾವಿತ್ರಿ ಜಿಂದಾಲ್ ಸೇರಿದಂತೆ ಮೂವರು ಪಕ್ಷೇತರ ಶಾಸಕರು ಬಿಜೆಪಿಗೆ ಬೆಂಬಲ ಘೋಷಿಸಿದ್ದಾರೆ.

ಹರಿಯಾಣದಲ್ಲಿ ಈ ವರ್ಷದ ಮಾರ್ಚ್‌ನಲ್ಲಿ ಮನೋಹರ್ ಲಾಲ್ ಖಟ್ಟರ್ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ, ಸೈನಿ ಅವರಿಗೆ ಅವಕಾಶ ಮಾಡಿಕೊಡಲಾಗಿತ್ತು.

ತಡೆ ನೀಡಲು 'ಸುಪ್ರೀಂ' ನಕಾರ

ನವದೆಹಲಿ (ಪಟಿಐ): ಹರಿಯಾಣ ಮುಖ್ಯಮಂತ್ರಿಯಾಗಿ ನಾಯಬ್ ಸಿಂಗ್ ಸೈನಿ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ತಡೆ ನೀಡುವಂತೆ ಕೋರಿ ಸಲ್ಲಿಕೆ ಆಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಗುರುವಾರ ವಜಾಗೊಳಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನೊಳಗೊಂಡ ಪೀಠವು, 'ಇದೆಂಥಾ ಮನವಿ? ಇದನ್ನು ನಾವು ವಜಾಗೊಳಿಸುತ್ತೇವೆ' ಎಂದು ಹೇಳಿತು.

ಅರ್ಜಿದಾರರ ಪರ ಹಾಜರಿದ್ದ ವಕೀಲರು, ಹರಿಯಾಣದ ಚುನಾವಣೆಯ ಮತ ಎಣಿಕೆ ಸಂದರ್ಭದಲ್ಲಿ ಕೆಲವು ಇವಿಎಂಗಳಲ್ಲಿ ವ್ಯತ್ಯಾಸಗಳು ಕಂಡುಬಂದಿವೆ. ಕೆಲವು ಇವಿಎಂಗಳಲ್ಲಿ ಶೇ 99ರಷ್ಟು ಬ್ಯಾಟರಿ ಚಾರ್ಜ್ ಇತ್ತು ಎಂದು 20 ದೂರುಗಳು ಆಯೋಗಕ್ಕೆ ಸಲ್ಲಿಕೆಯಾಗಿವೆ ಎಂದು ತಿಳಿಸಿದರು.

ಅರ್ಜಿದಾರರ ಮನವಿಯನ್ನು ತಿರಸ್ಕರಿಸಿದ ಪೀಠ, 'ಚುನಾಯಿತ ಸರ್ಕಾರ ಪ್ರಮಾಣ ವಚನ ಸ್ವೀಕರಿಸುವುದನ್ನು ನಾವು ಹೇಗೆ ತಡೆಯಬಹುದು' ಎಂದು ಪ್ರಶ್ನಿಸಿತು.

ಅಸ್ಸಾಂನಲ್ಲಿ ಹಳಿತಪ್ಪಿರುವ ಲೋಕಮಾನ್ಯ ತಿಲಕ್ ಎಕ್ಸ್‌ಪ್ರೆಸ್ ಪಿಟಿಐ ಚಿತ್ರ

ಹಳಿ ತಪ್ಪಿದ 'ತಿಲಕ್' ಎಕ್ಸ್‌ಪ್ರೆಸ್ ರೈಲು

ನವದೆಹಲಿ (ಪಿಟಿಐ): ಅಗರ್ತಲಾ–ಮುಂಬೈ ನಡುವೆ ಸಂಚರಿಸುವ ಲೋಕಮಾನ್ಯ ತಿಲಕ್ ಎಕ್ಸ್‌ಪ್ರೆಸ್ ರೈಲು ಗುರುವಾರ ಮಧ್ಯಾಹ್ನ 3.55ರ ವೇಳೆಗೆ ಅಸ್ಸಾಂನ ಡಿಬಾಲೊಂಗ್ ಬಳಿ ಹಳಿ ತಪ್ಪಿದೆ ಎಂದು ರೈಲ್ವೆ ವಕ್ತಾರರು ತಿಳಿಸಿದ್ದಾರೆ.

ರೈಲಿನ ಎಂಜಿನ್, 'ಪವರ್ ಕಾರ್' ಸೇರಿದಂತೆ ಒಟ್ಟು ಎಂಟು ಕೋಚ್ ಹಳಿ ತಪ್ಪಿದ್ದು, ಯಾವುದೇ ಸಾವು ನೋವುಗಳು ಸಂಭವಿಸಿಲ್ಲ ಎಂದು ಈಶಾನ್ಯ ರೈಲ್ವೆ ವಲಯದ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ (ಸಿಪಿಆರ್‌ಒ) ಹೇಳಿದ್ದಾರೆ. ಲಾಮ್‌ಡಿಂಗ್ ವಿಭಾಗದ ಲಾಮ್‌ಡಿಂಗ್– ಬದರ್‌ಪುರ್ ಮಾರ್ಗ ದಲ್ಲಿ ಈ ಅವಘಡ ಸಂಭವಿಸಿದೆ. ರಕ್ಷಣಾ ತಂಡಗಳು ರಕ್ಷಣಾ ಕಾರ್ಯದಲ್ಲಿ ನಿರತವಾಗಿದ್ದು, ಈ ಮಾರ್ಗದಲ್ಲಿ ರೈಲು ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಮದರಸಾಗಳಲ್ಲಿ ಸಂಸ್ಕೃತ ಪಾಠ: ಚಿಂತನೆ

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡದ 400 ಮದರಸಾಗಳಲ್ಲಿ ಮಕ್ಕಳಿಗೆ ಸಂಸ್ಕೃತ ಪಾಠ ಆರಂಭಿಸಲು ಅಲ್ಲಿನ ಮದರಸಾ ಮಂಡಳಿ ಉದ್ದೇಶಿಸಿದೆ. ಸಂಸ್ಕೃತ ಪಾಠವು ಐಚ್ಛಿಕವಾಗಿರಲಿದೆ' ಎಂದೂ ಮಂಡಳಿ ಹೇಳಿದೆ.

'ಹಲವು ದಿನಗಳಿಂದ ಈ ಚಿಂತನೆ ನಡೆದಿದೆ. ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರಕ್ಕೆ ಈ ಕುರಿತು ಪ್ರಸ್ತಾವ ಸಲ್ಲಿಸಲು ತಯಾರಿಯನ್ನೂ ಮಾಡಿಕೊಳ್ಳಲಾಗುತ್ತಿದೆ. ಆಧುನಿಕ ಶಿಕ್ಷಣ ಪದ್ಧತಿಯೊಂದಿಗೆ ಸರಿಸಮನಾಗಿ ಮದರಸಾಗಳಲ್ಲೂ ಮಕ್ಕಳಿಗೆ ಶಿಕ್ಷಣ ದೊರೆಯಬೇಕು ಎನ್ನುವ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರ ಆಶಯದಂತೆ ಈ ಯೋಜನೆ ರೂಪಿಸಲಾಗಿದೆ' ಎಂದು ಮಂಡಳಿತ ಮುಖ್ಯಸ್ಥ ಮುಫ್ತಿ ಶಮೂನ್ ಖಾಸ್ಮಿ ಗುರುವಾರ ತಿಳಿಸಿದರು.

'ಎನ್‌ಸಿಇಆರ್‌ಟಿ ಪಠ್ಯವನ್ನು ಮದರಸಾಗಳಲ್ಲಿ ಪರಿಚಯಿಸಿದ ಬಳಿಕ, ವಿದ್ಯಾರ್ಥಿಗಳ ತೇರ್ಗಡೆ ಪ್ರಮಾಣವು ಶೇ 96ರಷ್ಟಾಗಿದೆ. ಮದರಸಾಗಳಲ್ಲಿ ಶಿಕ್ಷಣ ಪಡೆಯುತ್ತಿರುವ ಮಕ್ಕಳಲ್ಲಿ ಪ್ರತಿಭೆಗೆ ಕೊರತೆಯಿಲ್ಲ ಎನ್ನುವುದನ್ನು ಈ ಪ್ರಮಾಣವು ಸಾಬೀತು ಮಾಡಿದೆ. ಈಗ ಸಂಸ್ಕೃತವನ್ನು ಕಲಿಸಿದರೆ ಕೂಡ ನಮ್ಮ ಮಕ್ಕಳು ಅದನ್ನು ಸರಿಯಾಗಿ ಕಲಿತುಕೊಳ್ಳುತ್ತಾರೆ' ಎಂದು ಅಭಿಪ್ರಾಯಪಟ್ಟರು.

'ಆಧುನಿಕ ಮದರಸಾ' ಎಂಬ ಪರಿಕಲ್ಪನೆ: ಮದರಸಾಗಳಲ್ಲಿ ಸಂಸ್ಕೃತ ಪರಿಚಯಿಸುವ ಕುರಿತು ಉತ್ತರಾಖಂಡದ ವಕ್ಫ್ ಬೋರ್ಡ್ ಮುಖ್ಯಸ್ಥ ಶಾಬಾದ್ ಶಮ್ಸ್ ಪ್ರತಿಕ್ರಿಯಿಸಿ, 'ಮದರಸಾ ಮಂಡಳಿಯು ಇಂಥ ಯೋಜನೆಯನ್ನು ಜಾರಿ ಮಾಡಲು ಯಾಕೆ ವಿಳಂಬ ಮಾಡುತ್ತಿದೆ ಎಂದು ತಿಳಿಯುತ್ತಿಲ್ಲ. ಯಾವುದೇ ತಡೆಯಿಲ್ಲದೆ ಇಂಥ ಯೋಜನೆಗಳಿಗೆ ರಾಜ್ಯ ಸರ್ಕಾರವು ಅನುಮತಿ ನೀಡುತ್ತದೆ' ಎಂದರು.

'ಕೇವಲ ಧಾರ್ಮಿಕ ಪಠ್ಯಕ್ಕೆ ಮಾತ್ರವೇ ಮಕ್ಕಳನ್ನು ಸೀಮಿತಗೊಳಿಸದೆ, ಇತರ ಎಲ್ಲ ಮಕ್ಕಳು ಹೋಗುವ ಶಾಲೆಗಳಲ್ಲಿ ಕಲಿಸುವಂಥ 'ಸಾಮಾನ್ಯ ಶಿಕ್ಷಣ'ವನ್ನು ಅಭ್ಯಾಸ ಮಾಡುವ ಅವಕಾಶವಿರುವ 'ಆಧುನಿಕ ಮದರಸಾ'ಗಳನ್ನು ರೂಪಿಸಬೇಕು ಎನ್ನುವ ಯೋಜನೆಯನ್ನು ವಕ್ಫ್ ಬೋರ್ಡ್ 2022ರಲ್ಲಿಯೇ ರೂಪಿಸಿದೆ' ಎಂದರು.

'ಭಾರತ್ ಮಾತಾ ಕಿ ಜೈ' ಘೋಷಣೆಯೊಂದಿಗೆ ರಾಷ್ಟ್ರಧ್ವಜಕ್ಕೆ 21 ಬಾರಿ ವಂದಿಸಲು ಸೂಚನೆ

ಜಬಲ್‌ಪುರ(ಮಧ್ಯಪ್ರದೇಶ)(ಪಿಟಿಐ): ಪಾಕಿಸ್ತಾನ ಪರ ಘೋಷಣೆ ಕೂಗಿದ ಆರೋಪ ಎದುರಿಸುತ್ತಿರುವ ವ್ಯಕ್ತಿಗೆ ಜಾಮೀನು ನೀಡಿರುವ ಮಧ್ಯಪ್ರದೇಶ ಹೈಕೋರ್ಟ್, 'ಭಾರತ್ ಮಾತಾಕಿ ಜೈ' ಘೋಷಣೆಯೊಂದಿಗೆ ಭೋಪಾಲ್ ಪೊಲೀಸ್ ಠಾಣೆಯಲ್ಲಿ ರಾಷ್ಟ್ರ ಧ್ವಜಕ್ಕೆ 21 ಬಾರಿ ವಂದನೆ ಸಲ್ಲಿಸಬೇಕು ಎಂದು ನಿರ್ದೇಶಿಸಿದೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಡಿ.ಕೆ.ಪಾಲೀವಾಲ್,'ಪ್ರಕರಣದ ವಿಚಾರಣೆ ಪೂರ್ಣಗೊಳ್ಳುವವರೆಗೆ ತಿಂಗಳಲ್ಲಿ ಎರಡು ಬಾರಿ ಈ ನಿರ್ದೇಶನದಂತೆ ನಡೆದುಕೊಳ್ಳಬೇಕು' ಎಂದು ಮಂಗಳವಾರ ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

'ಆರೋಪಿಯು ತಿಂಗಳ ಪ್ರತಿ ಮೊದಲ ಹಾಗೂ ನಾಲ್ಕನೇ ಮಂಗಳವಾರ ಪೊಲೀಸ್ ಠಾಣೆಗೆ ತೆರಳಿ, ರಾಷ್ಟ್ರ ಧ್ವಜಾರೋಹಣ ವೇಳೆ 21 ಬಾರಿ 'ಭಾರತ್ ಮಾತಾ ಕಿ ಜೈ' ಘೋಷಣೆ ಕೂಗಿ, ತ್ರಿವರ್ಣ ಧ್ವಜಕ್ಕೆ ಗೌರವ ಸಲ್ಲಿಸಬೇಕು' ಎಂದು ನ್ಯಾಯಮೂರ್ತಿ ಪಾಲೀವಾಲ್ ನಿರ್ದೇಶಿಸಿದ್ದಾರೆ.

'ತಾನು ಜನಿಸಿದ ಹಾಗೂ ವಾಸ ಮಾಡುತ್ತಿರುವ ದೇಶದ ಬಗ್ಗೆ ಹೆಮ್ಮೆ ಮತ್ತು ತನ್ನ ಹೊಣೆಗಾರಿಕೆ ಕುರಿತು ಅರಿವು ಮೂಡಿಸುವಂತಹ ಕೆಲ ಷರತ್ತುಗಳನ್ನು ವಿಧಿಸಿ, ವಿಚಾರಣಾ ನ್ಯಾಯಾಲಯವು ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬಹುದು' ಎಂದು ಸೂಚಿಸಿದ್ದಾರೆ.

ಪಾಕಿಸ್ತಾನ ಪರ ಘೋಷಣೆ ಕೂಗಿದ ಆರೋಪದಡಿ ಫೈಜಲ್ ಅಲಿಯಾಸ್ ಫೈಜಾನ್ ಎಂಬುವವರ ವಿರುದ್ಧ ಭೋಪಾಲ್‌ನ ಮಿಸ್ರೋದ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದು, ಅವರನ್ನು ಮೇನಲ್ಲಿ ಬಂಧಿಸಲಾಗಿತ್ತು.

ಸುದ್ದಿ 2 ನಿಮಿಷ

ಮುಂಗಡ ಬುಕ್ಕಿಂಗ್ ಅವಧಿ ಕಡಿತ

ನವದೆಹಲಿ (ಪಿಟಿಐ): 'ರೈಲಿನಲ್ಲಿ ಪ್ರಸ್ತುತ ಮುಂಗಡವಾಗಿ ಸೀಟು ಕಾಯ್ದಿರಿಸಿಕೊಳ್ಳುವ ಅವಧಿಯು 120 ದಿನಗಳವರೆಗೆ ಇದೆ. ಆದರೆ, ನವೆಂಬರ್ 1ರಿಂದ ಈ ಅವಧಿಯನ್ನು 60 ದಿನಗಳಿಗೆ ಕಡಿತಗೊಳಿಸಲಾಗುವುದು' ಎಂದು ರೈಲ್ವೆ ಮಂಡಳಿ ಗುರುವಾರ ಹೇಳಿದೆ. ಈ ಬದಲಾವಣೆಯನ್ನು ಯಾವ ಕಾರಣಕ್ಕಾಗಿ ಮಾಡಲಾಗಿದೆ ಎಂದು ಮಂಡಳಿ ಸ್ಪಷ್ಟಪಡಿಸಿಲ್ಲ.



'ಅಕ್ಟೋಬರ್ 31ರವರೆಗಿನ ಎಲ್ಲ ಬುಕ್ಕಿಂಗ್‌ಗಳು ಹಳೆಯ ಮಾದರಿಯಲ್ಲಿಯೇ ಇರಲಿವೆ. ಜೊತೆಗೆ, ತಾಜ್ ಎಕ್ಸ್‌ಪ್ರೆಸ್, ಗೋಮ್ತಿ ಎಕ್ಸ್‌ಪ್ರೆಸ್‌ನಂಥ ರೈಲುಗಳಲ್ಲಿ ಈಗಾಗಲೇ ಮುಂಗಡ ಬುಕ್ಕಿಂಗ್ ಅವಧಿಯು ಕಡಿಮೆ ಇದೆ. ಇಂಥ ರೈಲುಗಳ ಮುಂಗಡ ಬುಕ್ಕಿಂಗ್ ಅವಧಿಗಳಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದು ಮಂಡಳಿ ಹೇಳಿದೆ.

'ವಿದೇಶಿ ಪ್ರವಾಸಿಗರಿಗೆ ಒಂದು ವರ್ಷ ಮೊದಲೇ ಬುಕ್ಕಿಂಗ್ ಮಾಡುವ ಅವಕಾಶ ಇದೆ. ಈ ಅವಧಿಯಲ್ಲಿಯೂ ಯಾವುದೇ ಬದಲಾವಣೆಯಿಲ್ಲ' ಎಂದೂ ಹೇಳಿದೆ. 2015ರ ಮಾರ್ಚ್‌ಗೂ ಮೊದಲು ಮುಂಗಡ ಸೀಟು ಕಾಯ್ದಿಸಿಕೊಳ್ಳುವ ಅವಧಿಯು 60 ದಿನಗಳೇ ಇತ್ತು. ಆ ನಂತರ 120 ದಿನಗಳಿಗೆ ಬದಲಾವಣೆ ಮಾಡಲಾಗಿತ್ತು.

ಸಲ್ಮಾನ್ ಕೊಲೆಗೆ ಸಂಚು: ಬಿಷ್ಣೋಯಿ ಗ್ಯಾಂಗ್‌ನ ಒಬ್ಬನ ಸೆರೆ

ಮುಂಬೈ (ಪಿಟಿಐ): ಬಾಲಿವುಡ್ ನಟ ಸಲ್ಮಾನ್ ಖಾನ್ ಕೊಲೆಗೆ ಸಂಚು ರೂಪಿಸಿದ್ದ ಆರೋಪದ ಮೇರೆಗೆ ನವಿ ಮುಂಬೈ ಪೊಲೀಸರು ಬಿಷ್ಣೋಯಿ ಗ್ಯಾಂಗ್‌ನ ಸದಸ್ಯ ಸುಖ ಅಲಿಯಾಸ್ ಸುಖಬೀರ್ ಬಲ್ಬೀರ್ ಸಿಂಗ್ ಅನ್ನು ಬಂಧಿಸಿದ್ದಾರೆ.

ಹರಿಯಾಣದ ಪಾಣಿಪತ್‌ನಿಂದ ಸುಖಬೀರ್ ಅನ್ನು ಬುಧವಾರ ಬಂಧಿಸಲಾಗಿದೆ. ಆರೋಪಿಯನ್ನು ನವಿ ಮುಂಬೈಗೆ ಕರೆ ತಂದ ಬಳಿಕ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗುವುದು ಎಂದು ಗುರುವಾರ ಪೊಲೀಸರು ಹೇಳಿದ್ದಾರೆ.

ಸಲ್ಮಾನ್‌ಖಾನ್ ಕೊಲ್ಲಲು ಬಿಷ್ಣೋಯಿ ಗ್ಯಾಂಗ್‌ನ ಸದಸ್ಯರಿಗೆ ಸುಪಾರಿ ನೀಡಲಾಗಿತ್ತು ಎಂಬ ಆರೋಪವಿದೆ ಎಂದು ಅವರು ಹೇಳಿದ್ದಾರೆ.

ಪಾಕಿಸ್ತಾನದಲ್ಲಿ ನೆಲೆಸಿರುವ ಶಸ್ತ್ರಾಸ್ತ್ರ ಪೂರೈಕೆದಾರ ಡೋಗರ್ ಜತೆ ಸುಖಬೀರ್ ಸಿಂಗ್ ಸಂಪರ್ಕದಲ್ಲಿದ್ದ. ಸಿಂಗ್ ಮತ್ತು ಬಿಷ್ಣೋಯಿ ಗ್ಯಾಂಗ್ ಸದಸ್ಯರು ಎಕೆ-47, ಎಂ16 ಮತ್ತು ಎಕೆ92 ರೀತಿಯ ಶಸ್ತ್ರಾಸ್ತ್ರಗಳನ್ನು ಪಾಕಿಸ್ತಾನದಿಂದ ಪಡೆದು, ಸಲ್ಮಾನ್ ಹತ್ಯೆಗೆ ಸಂಚು ರೂಪಿಸಲು ಯೋಜಿಸಿದ್ದರು ಎಂದು ಅಧಿಕಾರಿ ವಿವರಿಸಿದ್ದಾರೆ.

ಎನ್‌ಸಿಪಿ ನಾಯಕ ಮತ್ತು ಮಾಜಿ ಸಚಿವ ಬಾಬಾ ಸಿದ್ದೀಕಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ನವಿ ಮುಂಬೈ ಪೊಲೀಸರು ಸುಖಬೀರ್ ಸಿಂಗ್ ಅವರನ್ನು ವಿಚಾರಣೆಗೆ ಒಳಪಡಿಸಲಿದ್ದಾರೆ ಎಂದೂ ಅವರು ತಿಳಿಸಿದ್ದಾರೆ.

ಈ ವರ್ಷದ ಏಪ್ರಿಲ್ 24ರಂದು ಸಲ್ಮಾನ್ ಖಾನ್ ಹತ್ಯೆಗೆ ಸಂಚು ರೂಪಿಸಿದ್ದಕ್ಕಾಗಿ ಪೊಲೀಸರು 18 ಆರೋಪಿಗಳು ಮತ್ತು ಬಿಷ್ಣೋಯಿ ಗ್ಯಾಂಗ್‌ನ ಇತರರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

'ಅನುಮಾನದ ಆಧಾರದಲ್ಲಿ ಶಿಕ್ಷೆ ನೀಡಲಾಗದು'

ನವದೆಹಲಿ (ಪಿಟಿಐ): ಮಗಳನ್ನು ಹಾಗೂ ಕುಟುಂಬದ ಇತರ ಸದಸ್ಯರನ್ನು ಕೊಲೆ ಮಾಡಿದ ಆರೋಪದ ಅಡಿಯಲ್ಲಿ ಮರಣ ದಂಡನೆಗೆ ಗುರಿಯಾಗಿದ್ದ ಪುಣೆಯ ವಿಶ್ವಜಿತ್ ಅವರನ್ನು ಸುಪ್ರೀಂಕೋರ್ಟ್ ಗುರುವಾರ ದೋಷಮುಕ್ತಗೊಳಿಸಿದೆ.

ಅನುಮಾನ ಒಂದನ್ನೇ ಆಧಾರವಾಗಿ ಇರಿಸಿಕೊಂಡು ಶಿಕ್ಷೆ ವಿಧಿಸಲು ಅವಕಾಶ ಇಲ್ಲ ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಕೆ.ವಿ. ವಿಶ್ವನಾಥನ್ ಅವರು ಇದ್ದ ತ್ರಿಸದಸ್ಯ ಪೀಠವು ಹೇಳಿದೆ.



ಶಿಕ್ಷೆಗೆ ಗುರಿಯಾಗಿದ್ದ ವ್ಯಕ್ತಿಯು ತನ್ನ ಪತ್ನಿ ಮತ್ತು ತಾಯಿಯ ಜೊತೆ ಮತ್ತೆ ಮತ್ತೆ ಜಗಳ ತೆಗೆಯುತ್ತಿದ್ದುದನ್ನು ಕಂಡಿದ್ದಾಗಿ ನೆರೆಮನೆಯ ವ್ಯಕ್ತಿಯೊಬ್ಬರು ನೀಡಿದ್ದ ಸಾಕ್ಷ್ಯವನ್ನು ಪೀಠವು ತಿರಸ್ಕರಿಸಿದೆ. 'ಶಂಕೆಯು ಅದೆಷ್ಟೇ ಪ್ರಬಲವಾಗಿದ್ದರೂ, ಅದು ಸಕಾರಣದ ಅನುಮಾನದ ಆಚೆಗೆ ಪುರಾವೆಯ ಸ್ಥಾನವನ್ನು ಪಡೆದುಕೊಳ್ಳುವುದಿಲ್ಲ. ಇದು ಕಾನೂನಿನ ಅಡಿಯಲ್ಲಿ ಒಪ್ಪಿತ ವಿಚಾರ. ಆರೋಪಿಯನ್ನು ಶಂಕೆ, ಅನುಮಾನದ ಆಧಾರದಲ್ಲಿಯೇ ಶಿಕ್ಷೆಗೆ ಗುರಿಪಡಿಸಲಾಗದು. ಸಕಾರಣದ ಅನುಮಾನದ ಆಚೆಗೆ ಅಪರಾಧ ಸಾಬೀತಾಗದೆ ಇದ್ದರೆ, ಆರೋಪಿಯನ್ನು ಅಮಾಯಕ ಎಂದೇ ಪರಿಗಣಿಸಬೇಕಾಗುತ್ತದೆ' ಎಂದು ಪೀಠ ವಿವರಿಸಿದೆ.

ಅಪರಾಧ ನಡೆದ ಆರು ದಿನಗಳ ನಂತರ ನೆರೆಮನೆಯ ವ್ಯಕ್ತಿಯ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ ಎಂಬುದನ್ನು ಕೋರ್ಟ್ ಗುರುತಿಸಿದೆ. ಅಲ್ಲದೆ, ಆ ವ್ಯಕ್ತಿಯ ಹೇಳಿಕೆಗೆ ಪೂರಕವಾಗಿ ಬೇರೆ ಯಾರೂ ಹೇಳಿಕೆ ನೀಡಿಲ್ಲ ಎಂದು ಹೇಳಿದೆ. ಅಲ್ಲದೆ, ನೆರೆಮನೆಯ ವ್ಯಕ್ತಿಯ ಹೇಳಿಕೆಯು ಆತ ಅಪರಾಧ ಕೃತ್ಯವನ್ನು ನೇರವಾಗಿ ಕಂಡಿದ್ದ ಎಂಬುದನ್ನು ಸಾಬೀತು ಮಾಡುವುದಿಲ್ಲ ಎಂದೂ ಕೋರ್ಟ್ ಹೇಳಿದೆ.

ಮಹಾರಾಷ್ಟ್ರ: ನಾಯಕರನ್ನು ಒಗ್ಗೂಡಿಸುವುದು ಹೈಕಮಾಂಡ್ ಮುಂದಿರುವ ಸವಾಲು

ಜಾತಿ ಸಮೀಕರಣ: ಕಾಂಗ್ರೆಸ್‌ಗೆ ಸತ್ವ ಪರೀಕ್ಷೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಳೆದೊಂದು ವರ್ಷದಿಂದ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವು ಕೊನೆಯ ಕ್ಷಣದಲ್ಲಿ ಕೈಚೆಲ್ಲಿದ್ದೇ ಹೆಚ್ಚು.

ಮಧ್ಯಪ್ರದೇಶ ಹಾಗೂ ಛತ್ತೀಸಗಢದಲ್ಲಿ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ ಎಂದು ಭಾವಿಸಿದವರು ಸಾಕಷ್ಟು ಮಂದಿ. ಪಕ್ಷದ ನಾಯಕರ ಆಂತರಿಕ ಕಿತ್ತಾಟದಿಂದ ಆ ರಾಜ್ಯಗಳಲ್ಲಿ ಪಕ್ಷ ಸೋತಿತು. ಇದರ ಪಟ್ಟಿಗೆ ಇತ್ತೀಚಿನ ಸೇರ್ಪಡೆ ಹರಿಯಾಣ. ಹರಿಯಾಣದಲ್ಲಿ ಮತ್ತೆ ಅಧಿಕಾರಕ್ಕೆ ಏರುವ ಬಗ್ಗೆ ಬಿಜೆಪಿಗೂ ವಿಶ್ವಾಸ ಇರಲಿಲ್ಲ. 'ಕೈ' ಪಾಳಯದ ಹಿರಿಯ ಕಟ್ಟಾಳುಗಳ ಕಚ್ಚಾಟದ ಲಾಭ ಪಡೆದ ಕಮಲ ಪಾಳಯ ಮತ್ತೆ ಗೆದ್ದಿತು.

ಇದೀಗ, ಮಹಾರಾಷ್ಟ್ರ ಚುನಾವಣೆಯ ಸರದಿ. ಮಹಾರಾಷ್ಟ್ರದಲ್ಲಿ ಕಾಂಗ್ರೆಸ್‌ನಲ್ಲಿ ಹಿರಿಯ ನಾಯಕರ ದೊಡ್ಡ ದಂಡೇ ಇದೆ. ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳು ಮೂರು–ನಾಲ್ಕು ಮಂದಿ ಇದ್ದಾರೆ. ಈ ನಾಯಕರನ್ನು ಒಗ್ಗೂಡಿಸಿ ಪಕ್ಷವನ್ನು ಚುನಾವಣೆಗೆ ಅಣಿಗೊಳಿಸುವುದು ಹೈಕಮಾಂಡ್ ಮುಂದಿರುವ ಪ್ರಮುಖ ಸವಾಲು. ಸೋಲುವುದನ್ನೇ ಛಾತಿ ಮಾಡಿಕೊಂಡಿರುವ 'ಕೈ' ಪಾಲಿಗೆ ಈ ಚುನಾವಣೆ ಸತ್ವ ಪರೀಕ್ಷೆ ಇದ್ದಂತೆ.

ವಿಧಾನಸಭಾ ಚುನಾವಣೆ ಗೆಲ್ಲಲು ಬಿಜೆಪಿ ಹಾಗೂ ಶಿವಸೇನಾ (ಶಿಂದೆ ಬಣ) ಮುಖ್ಯವಾಗಿ ಒಬಿಸಿ ಮತಗಳ ಮೇಲೆ ಕಣ್ಣಿಟ್ಟಿವೆ. ಇತ್ತೀಚಿನ ವರ್ಷಗಳಲ್ಲಿ ದಲಿತರ, ಮುಸ್ಲಿಮರ ಹಾಗೂ ಮರಾಠರ ಮತಗಳನ್ನು ಕಾಂಗ್ರೆಸ್ ಪಕ್ಷವು ನೆಚ್ಚಿಕೊಂಡಿದೆ.

ಮುಂಬೈನ ಅಂಗಡಿಯೊಂದರಲ್ಲಿ ವಿವಿಧ ಪಕ್ಷಗಳ ಚಿಹ್ನೆವುಳ್ಳ ಶಾಲುಗಳನ್ನು ಮಾರಾಟಕ್ಕಿಡಲಾಗಿದೆ ಪಿಟಿಐ ಚಿತ್ರ

ಪ್ರಜಾ ಮತ
ಜನತಂತ್ರದ ಹಬ್ಬ

ವಿಧಾನಸಭಾ ಚುನಾವಣೆ ಘೋಷಣೆಯಾದ ಬೆನ್ನಲ್ಲೇ, ರಾಜ್ಯಕ್ಕೆ ವೀಕ್ಷಕರನ್ನಾಗಿ 13 ಹಿರಿಯ ನಾಯಕರನ್ನು ಕಾಂಗ್ರೆಸ್ ನಿಯೋಜಿಸಿದೆ. ಜಾತಿ ಲೆಕ್ಕಾಚಾರದ ಆಧಾರದಲ್ಲಿ ಈ ನೇಮಕ ಮಾಡಲಾಗಿದೆ. ಈ ಪಟ್ಟಿಯಲ್ಲಿ ಕರ್ನಾಟಕದ ಗೃಹ ಸಚಿವ ಜಿ.ಪರಮೇಶ್ವರ, ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, ಮಾಜಿ ಮುಖ್ಯಮಂತ್ರಿಗಳಾದ ಅಶೋಕ್ ಗೆಹಲೋತ್, ಭೂಪೇಶ್ ಬಘೇಲ್, ಚರಣ್‌ಜಿತ್ ಸಿಂಗ್ ಚನ್ನಿ, ಮಾಜಿ ಉಪಮುಖ್ಯಮಂತ್ರಿಗಳಾದ ಸಚಿನ್ ಪೈಲಟ್, ಟಿ.ಎಸ್.ಸಿಂಗ್‌ದೇವ್ ಸೇರಿದ್ದಾರೆ.

'ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಎರಡು ವಿಷಯಗಳ ಬಗ್ಗೆ ಗಂಭೀರವಾಗಿ ಗಮನ ಹರಿಸಬೇಕು. ಇಲ್ಲದಿದ್ದರೆ, ಮಹಾರಾಷ್ಟ್ರದಲ್ಲಿಯೂ ಹರಿಯಾಣದ ರೀತಿಯಲ್ಲಿ ಹೊಡೆತ ಬೀಳುವ ಸಾಧ್ಯತೆ ಇದೆ' ಎಂದು ರಾಜಕೀಯ ವಿಶ್ಲೇಷಕರು ಎಚ್ಚರಿಸುತ್ತಾರೆ. ಮಾಲಿ, ಧಂಗಾರ್, ವಂಜಾರಿಯಂತಹ ಹಿಂದುಳಿದ ಸಮುದಾಯಗಳು ದಶಕಗಳಿಂದ ಬಿಜೆಪಿ ಬೆನ್ನಿಗೆ ನಿಂತಿವೆ. ಈ ಸಮುದಾಯಗಳ ಮತ ಬ್ಯಾಂಕ್ ಬಲಪಡಿಸಲು ಬಿಜೆಪಿ ಆಕ್ರಮಣಕಾರಿ ಪ್ರಚಾರ ನಡೆಸುತ್ತಿದೆ. ಹರಿಯಾಣದಲ್ಲಿ ಬಿಜೆಪಿ ಗೆಲುವಿನಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಪ್ರಮುಖ ಪಾತ್ರ ವಹಿಸಿತ್ತು. ಹರಿಯಾಣದ ಮಾದರಿಯಲ್ಲಿ ಮಹಾರಾಷ್ಟ್ರಕ್ಕೂ ಸ್ವಯಂಸೇವಕರ ದೊಡ್ಡ ಪಡೆಯನ್ನು ಪ್ರಚಾರಕ್ಕೆ ಕಳುಹಿಸಿಕೊಟ್ಟಿದೆ.

ಇನ್ನೊಂದು, ಮನೋಜ್ ಜಾರಂಗೆ ನೇತೃತ್ವದಲ್ಲಿ ನಡೆದ ಮರಾಠ ಮೀಸಲಾತಿ ಚಳವಳಿಯು ಚುನಾವಣೆ ಮೇಲೆ ಯಾವ ರೀತಿ ಪರಿಣಾಮ ಬೀರುತ್ತದೆ ಎಂಬುದು. 'ಮರಾಠ ಸಮುದಾಯಕ್ಕೆ ಒಬಿಸಿ ಸ್ಥಾನಮಾನ ನೀಡಬೇಕು ಎಂಬುದು ಜಾರಂಗೆ ಅವರ ಪ್ರಮುಖ ಬೇಡಿಕೆ.

ಒಂದು ವೇಳೆ ಮರಾಠರಿಗೆ ಮೀಸಲಾತಿ ಭರವಸೆ ನೀಡಿದರೆ ಕುಣಬಿ ಸಮುದಾಯದವರು ಮುನಿಸಿಕೊಳ್ಳುವ ಸಾಧ್ಯತೆ ಇದೆ. ಅಲ್ಲದೆ, ಚುನಾವಣೆಗೆ ಅಭ್ಯರ್ಥಿಗಳನ್ನು ಕಣಕ್ಕಿಳಿಸುವುದಾಗಿ ಜಾರಂಗೆ ಈಗಾಗಲೇ ಪ್ರಕಟಿಸಿದ್ದಾರೆ. ಇದರಿಂದಾಗಿ, ಮರಾಠವಾಡ ವಿಭಾಗದಲ್ಲಿ ಪಕ್ಷಕ್ಕೆ ಪ್ರಮುಖ ಸವಾಲು ಎದುರಾಗುವ ಸಾಧ್ಯತೆ ಇದೆ' ಎಂದು ಕಾಂಗ್ರೆಸ್‌ನ ಹಿರಿಯ ನಾಯಕರೊಬ್ಬರು ವಿಶ್ಲೇಷಿಸಿದರು.

'ಇನ್ನೊಂದೆಡೆ, ಚುನಾವಣಾ ಮೈತ್ರಿ ಸಂಬಂಧ ಜಾರಂಗೆ ಅವರು ಎಐಎಂಐಎಂ ನಾಯಕರೊಂದಿಗೆ ಮಾತುಕತೆ ಆರಂಭಿಸಿದ್ದಾರೆ. ಈ ಕೂಟದ ಮೈತ್ರಿಯಿಂದ ಹೊಡೆತ ಬೀಳುವುದು ಕಾಂಗ್ರೆಸ್ ಮತಬುಟ್ಟಿಗೆ. ಈ ಮೈತ್ರಿಕೂಟವು ಶೇ 2–3ರಷ್ಟು ಮತ ಸೆಳೆದರೂ ಅದರ ಪರಿಣಾಮ ದೊಡ್ಡದಾಗಿರಲಿದೆ' ಎಂದು ಅವರು ಅಭಿಪ್ರಾಯಪಟ್ಟರು.

ಲೋಕಸಭಾ ಫಲಿತಾಂಶದ ಕನವರಿಕೆಯಲ್ಲಿ

ಲೋಕಸಭಾ ಚುನಾವಣೆಯಲ್ಲಿ ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ 13 ಕ್ಷೇತ್ರಗಳಲ್ಲಿ ಜಯ ಗಳಿಸಿತ್ತು. ಶಿವಸೇನಾ (ಉದ್ಧವ್ ಠಾಕ್ರೆ ಬಣ) 9ರಲ್ಲಿ ಹಾಗೂ ಎನ್‌ಸಿಪಿ (ಶರದ್ ಪವಾರ್ ಬಣ) 8 ಕ್ಷೇತ್ರಗಳಲ್ಲಿ ಗೆದ್ದಿದ್ದವು. ರಾಜ್ಯದ 48 ಲೋಕಸಭಾ ಕ್ಷೇತ್ರಗಳ ಪೈಕಿ 30 ಕ್ಷೇತ್ರಗಳು 'ಮಹಾ ವಿಕಾಸ ಅಘಾಡಿ' ಮೈತ್ರಿಕೂಟದ ಪಾಲಾಗಿತ್ತು. ಈ ಚುನಾವಣೆಯಲ್ಲಿ 78 ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗೆ ಮುನ್ನಡೆ ಸಿಕ್ಕಿತ್ತು. ಶಿವಸೇನಾ ಹಾಗೂ ಎನ್‌ಸಿಪಿ 54 ಹಾಗೂ 48ರಲ್ಲಿ ಮುನ್ನಡೆ ಗಳಿಸಿದ್ದವು. ಅಂದರೆ, ರಾಜ್ಯದ 288 ವಿಧಾನಸಭಾ ಕ್ಷೇತ್ರಗಳ ಪೈಕಿ ಮೈತ್ರಿಕೂಟಕ್ಕೆ 180 ಕ್ಷೇತ್ರಗಳಲ್ಲಿ ಅಧಿಕ ಮತ ಸಿಕ್ಕಿತ್ತು. ಹರಿಯಾಣದಲ್ಲೂ ಲೋಕಸಭಾ ಚುನಾವಣೆಯಲ್ಲಿ ಇದೇ ರೀತಿ ಆಗಿತ್ತು. ಆದರೆ, ಹರಿಯಾಣದ ಅನಿರೀಕ್ಷಿತ ಫಲಿತಾಂಶದಿಂದ ಕಾಂಗ್ರೆಸ್ ಕಂಗೆಟ್ಟಿದೆ. ಲೋಕಸಭಾ ಚುನಾವಣೆಯ ಫಲಿತಾಂಶ ವಿಧಾನಸಭೆಯಲ್ಲಿ ಮರುಕಳಿಸುತ್ತದೆ ಎಂಬ 'ಗ್ಯಾರಂಟಿ' ಪಕ್ಷದ ನಾಯಕರಿಗಿಲ್ಲ.

ದಲಿತರು, ಮುಸ್ಲಿಮರು, ಕುಣಬಿ (ಇತರ ಹಿಂದುಳಿದ ವರ್ಗದವರು) ಹಾಗೂ ಮರಾಠ ಸಮುದಾಯಗಳು ಕೈ ಹಿಡಿದಿದ್ದರಿಂದ ಕಾಂಗ್ರೆಸ್ ಲೋಕಸಭಾ ಚುನಾವಣೆಯಲ್ಲಿ ಗಮನಾರ್ಹ ಸಾಧನೆ ಮಾಡಿತ್ತು.

ಲೋಕಸಭಾ ಚುನಾವಣೆಯಲ್ಲಿ ಮರಾಠವಾಡ ಪ್ರದೇಶದಲ್ಲಿ ಕೇಸರಿ ಪಾಳಯ ಒಂದೇ ಒಂದು ಸೀಟು ಗೆದ್ದಿರಲಿಲ್ಲ. ಕಾಂಗ್ರೆಸ್ ಹಾಗೂ ಉದ್ಧವ್ ಠಾಕ್ರೆ ಬಣ ತಲಾ ಮೂರರಲ್ಲಿ, ಶರದ್ ಪವಾರ್ ಬಣ ಒಂದರಲ್ಲಿ ಗೆದ್ದಿದ್ದವು. ಔರಂಗಾಬಾದ್ ಎನ್‌ಸಿಪಿ (ಶಿಂದೆ ಬಣ) ಪಾಲಾಗಿತ್ತು. ಕಾಂಗ್ರೆಸ್‌ಗೆ ಮರಾಠರ, ದಲಿತರ ಮತ ಉಳಿಸಿಕೊಳ್ಳುವುದು ದೊಡ್ಡ ಸವಾಲಾಗಿದೆ.



'ಸೆ.6ಎ' ಸಿಂಧುತ್ವ ಎತ್ತಿ ಹಿಡಿದ 'ಸುಪ್ರೀಂ'

ಒಂದನೇ ಪುಟದಿಂದ...

'ಅಸ್ಸಾಂ ಒಪ್ಪಂದವು ಅಕ್ರಮ ವಲಸೆ ಸಮಸ್ಯೆಗೆ ಕಂಡುಕೊಂಡ ರಾಜಕೀಯ ಪರಿಹಾರವಾದರೆ, ಸೆಕ್ಷನ್ 6ಎ ಶಾಸನಾತ್ಮಕ ಪರಿಹಾರವಾಗಿದೆ' ಎಂದು ಸಿಜೆಐ ಚಂದ್ರಚೂಡ್ ಹೇಳಿದರು.

'ಇತರ ದೇಶಗಳಿಂದ ಭಾರತಕ್ಕೆ ವಲಸೆ ಬರುವುದನ್ನು ತಗ್ಗಿಸಬೇಕು ಹಾಗೂ ಅದಾಗಲೇ ವಲಸೆ ಬಂದಿರುವವರಿಗೆ ಸಂಬಂಧಿಸಿದ ಸಮಸ್ಯೆ ನಿವಾರಣೆ ಮಾಡುವ ಉದ್ದೇಶದಿಂದ ಸೆಕ್ಷನ್ 6ಎ ಅನ್ನು ಸೇರಿಸಲಾಗಿದೆ' ಎಂದು ತಾವೇ ಬರೆದ ತೀರ್ಪಿನಲ್ಲಿ ಸಿಜೆಐ ಹೇಳಿದ್ದಾರೆ.

ನ್ಯಾಯಮೂರ್ತಿಗಳಾದ ಸುಂದ್ರೇಶ್ ಹಾಗೂ ಮನೋಜ್ ಮಿಶ್ರಾ ಅವರು ಸಿಜೆಐ ಅವರ ಅಭಿಪ್ರಾಯವನ್ನು ಅನುಮೋದಿಸಿದ್ದಾರೆ. 'ಸೆಕ್ಷನ್ 6ಎ'ದ ಸಿಂಧುತ್ವ ಎತ್ತಿ ಹಿಡಿದಿದ್ದರೂ, ನ್ಯಾಯಮೂರ್ತಿ ಸೂರ್ಯಕಾಂತ್ ಪ್ರತ್ಯೇಕ ತೀರ್ಪು ಬರೆದಿದ್ದಾರೆ.

ಸ್ವಯಂ ಸೇವಾ ಸಂಸ್ಥೆಗಳಾದ ಅಸ್ಸಾಂ ಪಬ್ಲಿಕ್ ವರ್ಕ್ಸ್, ಅಸ್ಸಾಂ ಸನ್ಮಿಲಿತ ಮಹಾಸಂಘ ಹಾಗೂ ಇತರರು ಸೇರಿದಂತೆ 17 ಅರ್ಜಿಗಳನ್ನು ನ್ಯಾಯಪೀಠ ವಿಚಾರಣೆ ನಡೆಸಿ, ತೀರ್ಪು ನೀಡಿದೆ.

'ದುರ್ಬಳಕೆ ಸಾಧ್ಯತೆ'

'ಸೆಕ್ಷನ್ 6ಎ, ವಲಸಿಗರಿಗೆ ಪೌರತ್ವ ನೀಡುವ ಮುಕ್ತ ಅವಕಾಶ ನೀಡುತ್ತದೆ. ದಾಖಲೆಗಳನ್ನು ತಿರುಚಿ ಪೌರತ್ವ ಪಡೆಯಲು ಸಾಧ್ಯತೆಗಳಿರುವ ಕಾರಣ ಈ ಸೆಕ್ಷನ್‌ನ ದುರುಪಯೋಗವಾಗಲಿದೆ' ಎಂದು ಭಿನ್ನ ತೀರ್ಪು ನೀಡಿರುವ ನ್ಯಾಯಮೂರ್ತಿ ಜೆ.ಬಿ.ಪಾರ್ದೀವಾಲಾ ಪ್ರತಿಪಾದಿಸಿದ್ದಾರೆ.

'ಅಸ್ಸಾಂ ಪ್ರವೇಶಿಸಿದ್ದಕ್ಕೆ ಸಂಬಂಧಿಸಿ ತಪ್ಪು ದಿನಾಂಕ ನಮೂದು, ಭ್ರಷ್ಟ ಅಧಿಕಾರಿಗಳಿಂದ ಸುಳ್ಳು ಮಾಹಿತಿಗಳನ್ನು ಒಳಗೊಂಡ ಸರ್ಕಾರಿ ದಾಖಲೆಗಳ ಸೃಷ್ಟಿ, ವಂಶಾವಳಿ ಕುರಿತು ತಪ್ಪ ಮಾಹಿತಿ ನೀಡುವುದು ಸೇರಿದಂತೆ ವಿವಿಧ ರೀತಿಯ ನಕಲಿ ವಿವರಗಳನ್ನು ನೀಡಿ ಪೌರತ್ವ ಪಡೆಯುವುದಕ್ಕೆ ಈ ಸೆಕ್ಷನ್ ದಾರಿ ಮಾಡಿಕೊಡುತ್ತದೆ' ಎಂದು 127 ಪುಟಗಳ ಪ್ರತ್ಯೇಕ ತೀರ್ಪಿನಲ್ಲಿ ಹೇಳಿದ್ದಾರೆ.

'ನಕಲಿ ದಾಖಲೆಗಳ ಸೃಷ್ಟಿ ಸಾಧ್ಯವಿರುವುದರಿಂದ ಅಸ್ಸಾಂನತ್ತ ಮತ್ತಷ್ಟು ವಲಸೆಗೆ ಈ ಸೆಕ್ಷನ್ ಉತ್ತೇಜನ ನೀಡುತ್ತದೆ. ವರ್ಷಗಳು ಕಳೆದಂತೆ ಸರ್ಕಾರದ ಬಳಿ ದಾಖಲೆಗಳು ಹಾನಿಗೆ ಒಳಗಾಗುತ್ತವೆ ಇಲ್ಲವೇ ನಾಶವಾಗುತ್ತವೆ. ಇದರಿಂದ, ವಲಸಿಗರು ಅಸ್ಸಾಂ ಪ್ರವೇಶ ಮಾಡಿರುವ ಕುರಿತ ದಿನಾಂಕ ಮತ್ತಿತರ ವಿವರಗಳ ಪರಾಮರ್ಶೆ ಕಷ್ಟವಾಗುತ್ತದೆ' ಎಂದೂ ಪ್ರತಿಪಾದಿಸಿದ್ದಾರೆ.

ಎಎಎಸ್‌ಯು ಸ್ವಾಗತ;ಎಎಸ್‌ಎಂ ಅಸಮಾಧಾನ

ಗುವಾಹಟಿ/ನವದೆಹಲಿ: ಪೌರತ್ವ ಕಾಯ್ದೆಯ ಸೆಕ್ಷನ್ 6ಎ ಹಾಗೂ ಕಟ್ ಆಫ್ ದಿನಾಂಕ ನಿಗದಿ ಕುರಿತು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿಗೆ ಗುರುವಾರ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಆಲ್ ಅಸ್ಸಾಂ ಸ್ಟುಡೆಂಟ್ಸ್ ಯೂನಿಯನ್ (ಎಎಎಸ್‌ಯು), ಆಲ್ ಅಸ್ಸಾಂ ಮೈನಾರಿಟಿ ಸ್ಟುಡೆಂಟ್ಸ್ ಯೂನಿಯನ್ (ಎಎಎಂಎಸ್‌ಯು), ಎಐಯುಡಿಎಫ್, ಎಜೆಪಿ, ವಿರೋಧ ಪಕ್ಷಗಳಾದ ಕಾಂಗ್ರೆಸ್ ಹಾಗೂ ಟಿಎಂಸಿ ತೀರ್ಪನ್ನು ಸ್ವಾಗತಿಸಿವೆ.

ಅಸ್ಸಾಂನ ಆಡಳಿತಾರೂಢ ಪಕ್ಷ ಬಿಜೆಪಿ ಈ ವಿಚಾರವಾಗಿ ಎಚ್ಚರಿಕೆ ಹೆಜ್ಜೆಯನ್ನಿಡಲು ಮುಂದಾಗಿದೆ.

'ಅಸ್ಸಾಂನ ಮೂಲನಿವಾಸಿಗಳ ಹಿತರಕ್ಷಣೆ ಮುಖ್ಯ. ಈ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಚಿಂತನೆ ನಡೆಸಲಾಗುವುದು' ಎಂದು ಬಿಜೆಪಿ ಮುಖಂಡ ಹಾಗೂ ಸಚಿವ ಜಯಂತ ಮಲ್ಲ ಬರುವಾ ಹೇಳಿದ್ದಾರೆ.

'ಸುಪ್ರೀಂ ಕೋರ್ಟ್‌ನ ಈ ತೀರ್ಪು, ಐತಿಹಾಸಿಕ ಅಸ್ಸಾಂ ಒಪ್ಪಂದ ಏರ್ಪಡಲು ಹಿಂದಿರುವ ತರ್ಕವನ್ನು ಮರುಸ್ಥಾಪನೆ ಮಾಡಿದಂತಾಗಿದೆ' ಎಂದಿರುವ ಎಎಎಸ್‌ಯು, 'ಸರ್ಕಾರ ತಕ್ಷಣವೇ ಈ ಒಪ್ಪಂದವನ್ನು ಅನುಷ್ಠಾನಗೊಳಿಸಬೇಕು' ಎಂದು ಒತ್ತಾಯಿಸಿದೆ.

'ಸುಪ್ರೀಂ ಕೋರ್ಟ್ ತೀರ್ಪು ದುರದೃಷ್ಟಕರ' ಎಂದು ಮೂಲ ಅರ್ಜಿದಾರ ಸಂಸ್ಥೆಯಾದ ಅಸ್ಸಾಂ ಸನ್ಮಿಲಿತ ಮಹಾಸಂಘ (ಎಎಸ್‌ಎಂ) ಹೇಳಿದೆ.

'ಈ ತೀರ್ಪಿನಿಂದಾಗಿ ಅಸ್ಸಾಂ ರಾಜ್ಯವು ಅಕ್ರಮ ವಲಸಿಗರ ತಾಣವಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದೆ.

ಕಳಪೆ ಬ್ಯಾಟಿಂಗ್‌ಗೆ ಕುಸಿದ ಭಾರತ ತಂಡ • ಮ್ಯಾಟ್ ಹೆನ್ರಿ, ವಿಲಿಯಮ್ಸ್ ಓ ರೂರ್ಕಿ ಬಿರುಗಾಳಿ ಬೌಲಿಂಗ್

ಹಿಟ್‌ಮ್ಯಾನ್ ಬಳಗ 46ಕ್ಕೆ ಆಲೌಟ್

ಮುಖ್ಯಾಂಶಗಳು

- ಕ್ರೀಡಾಂಗಣದಲ್ಲಿ ಸೇರಿದ್ದ ಸುಮಾರು 8,000 ಪ್ರೇಕ್ಷಕರು
- ಟೆಸ್ಟ್ ಕ್ರಿಕೆಟ್‌ನಲ್ಲಿ 100ನೇ ವಿಕೆಟ್ ಗಳಿಸಿದ ಹೆನ್ರಿ
- ಗುರುವಾರ ಬೆಳಿಗ್ಗೆ ಮಂದಬೆಳಕು ಇದ್ದ ಕಾರಣ ಫ್ಲಡ್‌ಲೈಟ್‌ಗಳ ಬಳಕೆ

ರೋಹಿತ್ ಶರ್ಮಾ

• ಗಿರೀಶ ದೊಡ್ಡಮನಿ

ಬೆಂಗಳೂರು: ಭಾರತ ತಂಡದ ಕ್ರಿಕೆಟ್ ಪ್ರೇಮಿಗಳು ಬುಧವಾರ ದಿನವಿಡೀ ಮಳೆ ನಿಲ್ಲಲಿ, ಆಟ ನಡೆಯಲಿ ಎಂದು ಆಶಿಸಿದ್ದರು. ಆದರೆ ಗುರುವಾರ ಅದೇ ಅಭಿಮಾನಿಗಳು 'ಹುಯ್ಯೋ ಹುಯ್ಯೋ ಮಳೆರಾಯ' ಎಂದು ಹಾರೈಸುವ ಸ್ಥಿತಿ ನಿರ್ಮಾಣವಾಯಿತು. ಒಂದೊಮ್ಮೆ ಇಡೀ ದಿನ ಮಳೆ ಸುರಿದಿದ್ದರೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾರತ ತಂಡವು ಕೇವಲ 46 ರನ್‌ಗಳಿಗೆ ಆಲೌಟ್ ಆಗುವುದು ತಪ್ಪುತ್ತಿತ್ತೋ ಏನೋ? ಆದರೆ ಕಾರ್ಮೋಡ ಗಳಿದ್ದರೂ ಮಳೆ ಬರಲಿಲ್ಲ. ಮಂದಬೆಳಕು ಓಡಿಸಲು ಪ್ರಜ್ವಲಿಸಿದ ಫ್ಲೈಡ್‌ಲೈಟ್ ಬೆಳಕಲ್ಲಿ ಟಾಸ್ ಗೆದ್ದ ರೋಹಿತ್ ಶರ್ಮಾ ಬಳಗ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಕಳಪೆ ಬ್ಯಾಟಿಂಗ್ ಮಾಡಿತು.ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತ ತಂಡವು ತನ್ನ ಮೂರನೇ ಅತಿ ಕಡಿಮೆ ಮೊತ್ತ ದಾಖಲಿಸುವಂತಾಯಿತು. ಅಲ್ಲದೇ ಸ್ವದೇಶದಲ್ಲಿ ದಾಖಲಿಸಿದ ಅತ್ಯಂತ ಕಡಿಮೆ ಸ್ಕೋರ್ ಕೂಡ ಇದಾಯಿತು.

'ಬ್ಯಾಟಿಂಗ್ ಅಯ್ಕೆ ಮಾಡಿಕೊಂಡಿದ್ದು ನನ್ನ ಲೋಪ' ಎಂದು ರೋಹಿತ್ ಪತ್ರಿಕಾಗೋಷ್ಠಿಯಲ್ಲಿ ತಪ್ಪೊಪ್ಪಿಕೊಂಡೂ ಆಯಿತು. ಕಿವೀಸ್ ಬಳಗದ ಮೂವರು ವೇಗಿಗಳು ಕೇವಲ 31.2 ಓವರ್‌ಗಳಲ್ಲಿ ಆತಿಥೇಯ ಬ್ಯಾಟರ್‌ಗಳನ್ನು ಕಟ್ಟಿಹಾಕಿದರು. ಉದ್ಯಾನ ನಗರಿಯ ಕ್ರಿಕೆಟ್ ಪ್ರೇಮಿಗಳ ಕಣ್ಮಣಿಗಳಾದ ವಿರಾಟ್ ಕೊಹ್ಲಿ ಮತ್ತು ಕೆ.ಎಲ್. ರಾಹುಲ್ ಸೇರಿದಂತೆ ಐವರು ಸೊನ್ನೆ ಸುತ್ತಿದರು. ತಾಳ್ಮೆರಹಿತ ಆಟ ಹಾಗೂ ಹೊಡೆತಗಳ ಆಯ್ಕೆಯಲ್ಲಿ ಎಡವಿದ್ದು ಬ್ಯಾಟರ್‌ಗಳಿಗೆ ಮುಳುವಾಯಿತು. ಶಿಸ್ತುಬದ್ಧ ಬೌಲಿಂಗ್ ಮಾಡಿದ ಕಿವೀಸ್ ತಂಡದ ವೇಗಿ ಮ್ಯಾಟ್ ಹೆನ್ರಿ ಐದು ವಿಕೆಟ್‌ಗಳ ಗೊಂಚಲು ಗಳಿಸಿದರು. ಇದೇ ಮೊದಲ ಬಾರಿ ಭಾರತ ಪ್ರವಾಸಕ್ಕೆ ಬಂದಿರುವ 23 ವರ್ಷದ ಹುಡುಗ ವಿಲಿಯಮ್ಸ್ ಓ ರೂರ್ಕಿಯ (22ಕ್ಕೆ4) ಸ್ವಿಂಗ್ ಎಸೆತಗಳ ಮುಂದೆ ಬ್ಯಾಟರ್‌ಗಳು ತಡಬಡಾಯಿಸಿದರು.

ಬಿಸಿಲು ಮೆಲ್ಲಗೇ ಏರುತ್ತಿದ್ದಾಗ ಇನಿಂಗ್ಸ್ ಆರಂಭಿಸಿದ ಪ್ರವಾಸಿ ತಂಡದ ಬ್ಯಾಟರ್‌ಗಳು ಲೀಲಾಜಾಲವಾಗಿ ಬ್ಯಾಟ್ ಬೀಸಿದರು. 12.2 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ ಭಾರತದ ಲೆಕ್ಕ ಚುಕ್ತಾ ಮಾಡಿದರು. ಡೇವೊನ್ ಕಾನ್ವೆ (91; 105ಎಸೆತ) ಶತಕದ ಸನಿಹ ಎಡವಿದರೂ ತಂಡಕ್ಕೆ ಉತ್ತಮ ಅಡಿಪಾಯ ಹಾಕಿದರು. ಇದರಿಂದಾಗಿ ದಿನದಾಟದ ಮುಕ್ತಾಯಕ್ಕೆ ಕಿವೀಸ್ ತಂಡವು 50 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 180 ರನ್ ಗಳಿಸಿತು. ರಚಿನ್ ರವೀಂದ್ರ (ಬ್ಯಾಟಿಂಗ್ 22) ಮತ್ತು ಡ್ಯಾರಿಲ್ ಮಿಚೆಲ್ (ಬ್ಯಾಟಿಂಗ್ 14) ಕ್ರೀಸ್‌ನಲ್ಲಿದ್ದಾರೆ. ಭಾರತದ ಮೂವರು ಸ್ಪಿನ್ನರ್‌ಗಳಾದ ಕುಲದೀಪ್ ಯಾದವ್, ರವೀಂದ್ರ ಜಡೇಜ ಮತ್ತು ಆರ್. ಅಶ್ವಿನ್ ತಲಾ ಒಂದು ವಿಕೆಟ್ ಪಡೆದರು. ಆದರೆ ಫೀಲ್ಡಿಂಗ್ ಲೋಪಗಳು ಹೆಚ್ಚಿದ್ದವು. ಕೆ.ಎಲ್. ರಾಹುಲ್ ಮತ್ತು ರೋಹಿತ್ ಶರ್ಮಾ ಅವರು ಸ್ಲಿಪ್ ನಲ್ಲಿ ಫೀಲ್ಡಿಂಗ್ ಮಾಡುವಾಗ ತಲಾ ಒಂದು ಕ್ಯಾಚ್ ಕೈಬಿಟ್ಟರು.

ಮಳೆ ನಿಂತು ಹೋದ ಮೇಲೆ.. ಪಂದ್ಯದ ಮೊದಲ ದಿನದಾಟವು ಸಂಪೂರ್ಣವಾಗಿ ಮಳೆಗೆ ಆಹುತಿಯಾಗಿತ್ತು. ಆದರೆ ಎರಡನೇ ದಿನದಾಟದ ಮಧ್ಯದಲ್ಲಿ ಮಳೆಯಿಂದಾಗಿ ಕೇವಲ ಅರ್ಧಗಂಟೆಯ ಆಟ ಸ್ಥಗಿತವಾಗಿತ್ತು. ಈ ಮಳೆ ಸುರಿಯುವ ಮುನ್ನ 13 ರನ್‌ಗಳಿಗೆ 3 ವಿಕೆಟ್‌ಗಳು (ರೋಹಿತ್, ವಿರಾಟ್ ಮತ್ತು ಸರ್ಫರಾಜ್) ಪತನವಾದವು. ಪಂತ್ ಮತ್ತು ಜೈಸ್ವಾಲ್ ಕ್ರೀಸ್‌ನಲ್ಲಿದ್ದರು. ಮಳೆ ನಿಂತ ನಂತರ ಮತ್ತೆ ಆಟ ಆರಂಭವಾಯಿತು. ಕೇವಲ 33 ರನ್‌ಗಳ ಅಂತರದಲ್ಲಿ 7 ವಿಕೆಟ್‌ಗಳು ಪತನವಾದವು.

ಈ ನಡುವೆ ಜೈಸ್ವಾಲ್ (13; 63ಎ) ಮತ್ತು ರಿಷಭ್ ಪಂತ್ (20; 49ಎ) ಇವರಿಬ್ಬರು ಮಾತ್ರ ಎರಡಂಕಿ ದಾಟಿದ ಬ್ಯಾಟರ್‌ಗಳಾದರು. ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 21 ರನ್ ಸೇರಿಸಿದರು. ಇನಿಂಗ್ಸ್‌ನಲ್ಲಿ ಜೈಸ್ವಾಲ್ (102ನಿಮಿಷ) ಉಳಿದೆಲ್ಲರಿಗಿಂತ ಅತಿ ಹೆಚ್ಚು ಸಮಯ ಕ್ರೀಸ್‌ನಲ್ಲಿದ್ದರು!

ಭಾರತದ ಇಡೀ ಇನಿಂಗ್ಸ್‌ನಲ್ಲಿ ದಾಖಲಾಗಿದ್ದು ಕೇವಲ 4 ಬೌಂಡರಿಗಳು ಮಾತ್ರ. ಪಂತ್ ಎರಡು ಮತ್ತು ಜೈಸ್ವಾಲ್ ಒಂದು ಬೌಂಡರಿ ದಾಖಲಿಸಿದರು. ತಂಡಕ್ಕೆ ಮೊದಲ ಬೌಂಡರಿ ದಾಖಲಾಗಿದ್ದು 13ನೇ ಓವರ್‌ನಲ್ಲಿ ಪಂತ್ ಮೂಲಕ. ಕೊನೆಯ ಹಂತದಲ್ಲಿ ಮೊಹಮ್ಮದ್ ಸಿರಾಜ್ (ಔಟಾಗದೆ 4) ಗಳಿಸಿದ ಬೌಂಡರಿ ಆಕರ್ಷಕವಾಗಿತ್ತು.

ಐದು ವಿಕೆಟ್ ಗಳಿಸಿದ ನ್ಯೂಜಿಲೆಂಡ್ ತಂಡದ ಬೌಲರ್ ಮ್ಯಾಟ್ ಹೆನ್ರಿ ಸಂಭ್ರಮ
ಪ್ರಜಾವಾಣಿ ಚಿತ್ರಗಳು: ಎಸ್‌.ಕೆ. ದಿನೇಶ್

ಬ್ಯಾಟಿಂಗ್ ಆಯ್ಕೆ ನನ್ನ ನಿರ್ಧಾರ: ರೋಹಿತ್

ಬೆಂಗಳೂರು: 'ನನ್ನ ತಂಡವು ಕೇವಲ 46 ರನ್‌ಗಳ ಕನಿಷ್ಠ ಮೊತ್ತಕ್ಕೆ ಕುಸಿದಿದ್ದು ಅತೀವ ಬೇಸರ ತರಿಸಿದೆ. ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ನಿರ್ಧಾರ ನನ್ನದೇ ಆಗಿತ್ತು. ಒಂದು ವರ್ಷದಲ್ಲಿ ಕೆಲವೇ ಕೆಲವು ಕೆಟ್ಟ ನಿರ್ಧಾರಗಳು ಅರಿವಿಲ್ಲದೇ ಆಗಿಬಿಡುತ್ತವೆ'–

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯದ ಎರಡನೇ ದಿನದಾಟದ ನಂತರ ಸುದ್ದಿಗೋಷ್ಠಿಗೆ ಬಂದ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರು ಹೇಳಿದ ಮಾತುಗಳಿವು. ಭಾರತ ತಂಡವು ಸ್ವದೇಶದಲ್ಲಿ ಅತ್ಯಂತ ಕಡಿಮೆ ಮೊತ್ತಕ್ಕೆ ಆಲೌಟ್ ಆಗಿದ್ದರ ಕುರಿತು ಬೇರೆ ಯಾವುದೇ ಕಾರಣಗಳನ್ನೂ ಅವರು ಕೊಡಲಿಲ್ಲ. ಎಲ್ಲ ಹೊಣೆಯನ್ನೂ ತಮ್ಮ ಮೇಲೆಳೆದುಕೊಂಡರು.

'ಪಿಚ್ ಅಂದಾಜು ಮಾಡುವಲ್ಲಿ ತಪ್ಪಾಯಿತು. ಅಂಕಣದಲ್ಲಿ ಹುಲ್ಲು ಗರಿಕೆಗಳು ಇಲ್ಲ ಅನಿಸಿದ್ದರಿಂದ ಮೊದಲ ಒಂದು ಅವಧಿಯಲ್ಲಿ ಬ್ಯಾಟಿಂಗ್ ಕಷ್ಟವಾಗಬಹುದು. ನಂತರ ಚೆಂಡು ತಿರುಗಲು ಆರಂಭಿಸುತ್ತದೆ ಎಂದು ಅಂದಾಜು ಮಾಡಿದ್ದೆವು. ಭಾರತದಲ್ಲಿ ಆಡುವಾಗ ಮೊದಲ ಅವಧಿಯಲ್ಲಿ ಯಾವಾಗಲೂ ಬ್ಯಾಟಿಂಗ್ ಮಾಡುವುದು ಕಷ್ಟವೇ. ಒಮ್ಮೆ ಪಿಚ್ ಹದಗೊಂಡಿತೆಂದರೆ ಸ್ಪಿನ್ನರ್‌ಗಳ ಆಟ ಶುರುವಾಗುತ್ತದೆ. ಆದ್ದರಿಂದ ಮೂವರು ಸ್ಪಿನ್ನರ್ (ಕುಲದೀಪ್ ಯಾದವ್ ಸೇರಿ) ಗಳೊಂದಿಗೆ ಕಣಕ್ಕಿಳಿದಿದ್ದೇವೆ' ಎಂದರು.

'ಜವಾಬ್ದಾರಿಯನ್ನು ಹೊತ್ತುಕೊಳ್ಳಲು ಅನುಭವಿ ಆಟಗಾರರು ತಾವೇ ಮುಂದು ಬರುತ್ತಿರುವುದು ತಂಡದ ಹಿತದೃಷ್ಟಿಯಿಂದ ಒಳ್ಳೆಯದು. ಆದ್ದರಿಂದ ವಿರಾಟ್ ಕೊಹ್ಲಿ ಅವರು ಮೂರನೇ ಕ್ರಮಾಂಕದಲ್ಲಿ ಆಡಲು ಬಂದರು. ಅದು ಅವರ ಸಹಮತದೊಂದಿಗೇ ಆದ ಬದಲಾವಣೆ. ಪಂತ್ ಮತ್ತು ರಾಹುಲ್ ಕ್ರಮವಾಗಿ 5 ಮತ್ತು 6ನೇ ಸ್ಥಾನ-ದಲ್ಲಿದ್ದಾರೆ. ನಾಲ್ಕನೇ ಸ್ಥಾನದಲ್ಲಿ ಸರ್ಫರಾಜ್ ಖಾನ್ ಇದ್ದಾರೆ. ರಾಹುಲ್ ಅವರಿಗೆ 6ನೇ ಸ್ಥಾನದಲ್ಲಿ ತಮ್ಮ ಸಾಮರ್ಥ್ಯ ತೋರುವ ಅವಕಾಶ ಸಿಕ್ಕಿದೆ' ಎಂದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್
ಭಾರತ 46 (31.2 ಓವರ್‌ಗಳಲ್ಲಿ)
ಜೈಸ್ವಾಲ್ ಸಿ ಪಟೇಲ್ ಬಿ ರೂರ್ಕಿ 13 (63ಎ, 4x1)
ರೋಹಿತ್ ಬಿ ಸೌಥಿ 2 (16ಎ)
ವಿರಾಟ್ ಸಿ ಫಿಲಿಪ್ಸ್ ಬಿ ರೂರ್ಕಿ 0 (9ಎ)
ಸರ್ಫರಾಜ್ ಸಿ ಕಾನ್ವೆ ಬಿ ಹೆನ್ರಿ 0 (3ಎ)
ರಿಷಭ್ ಸಿ ಲೇಥಮ್ ಬಿ ಹೆನ್ರಿ 20 (49ಎ, 4x2)
ರಾಹುಲ್ ಸಿ ಬ್ಲಂಡೆಲ್ ಬಿ ರೂರ್ಕಿ 0 (6ಎ)
ಜಡೇಜ ಸಿ ಪಟೇಲ್ ಬಿ ಹೆನ್ರಿ 0 (6ಎ)
ಅಶ್ವಿನ್ ಸಿ ಫಿಲಿಪ್ಸ್ ಬಿ ಹೆನ್ರಿ 0 (1ಎ)
ಕುಲದೀಪ್ ಸಿ ಸಬ್ ಬ್ರೇಸ್‌ವೆಲ್ ಬಿ ಹೆನ್ರಿ 2 (17ಎ)
ಬೂಮ್ರಾ ಸಿ ಹೆನ್ರಿ ಬಿ ರೂರ್ಕಿ 1 (3ಎ)
ಸಿರಾಜ್ ಔಟಾಗದೇ 4 (16ಎ, 4x1)
ಇತರೆ: 4 (ಲೆಗ್‌ಬೈ 1, ಲೋಬಾಲ್ 1, ವೈಡ್ 2)
ವಿಕೆಟ್ ಪತನ: 1-9 (ರೋಹಿತ್ ಶರ್ಮಾ, 6.3), 2-9 (ವಿರಾಟ್ ಕೊಹ್ಲಿ, 8.6), 3-10 (ಸರ್ಫರಾಜ್ ಖಾನ್, 9.4), 4-31 (ಯಶಸ್ವಿ ಜೈಸ್ವಾಲ್, 20.5), 5-33 (ಕೆ. ಎಲ್. ರಾಹುಲ್ , 22.4), 6-34 (ರವೀಂದ್ರ ಜಡೇಜ, 23.5), 7-34 (ರವಿಚಂದ್ರನ್ ಅಶ್ವಿನ್, 23.6), 8-39 (ರಿಷಭ್ ಪಂತ್, 25.3), 9-40 (ಜಸ್‌ಪ್ರೀತ್ ಬೂಮ್ರಾ, 26.2), 10-46 (ಕುಲದೀಪ್ ಯಾದವ್, 31.2)
ಬೌಲಿಂಗ್: ಟಿಮ್ ಸೌಥಿ 6-4-8-1, ಮ್ಯಾಟ್ ಹೆನ್ರಿ 13.2-3-15-5, ವಿಲಿಯಂ ಓ ರೂರ್ಕಿ 12-6-22-4
ನ್ಯೂಜಿಲೆಂಡ್: 3ಕ್ಕೆ 180 (50 ಓವರ್‌ಗಳಲ್ಲಿ)
ಟಾಮ್ ಲೇಥಮ್ ಎಲ್‌ಬಿಡಬ್ಲ್ಯು ಕುಲದೀಪ್ 15 (49ಎ, 4x3)
ಕಾನ್ವೆ ಬಿ ಅಶ್ವಿನ್ 91 (105ಎ, 4x11, 6x3)
ಯಂಗ್ ಸಿ ಕುಲದೀಪ್ ಬಿ ಜಡೇಜ 33 (73ಎ, 4x5)
ರಚಿನ್ ರವೀಂದ್ರ ಔಟಾಗದೇ 22 (34ಎ, 4x2)
ಡ್ಯಾರಿಲ್ ಮಿಚೆಲ್ ಔಟಾಗದೇ 14 (39ಎ, 4x1)
ಇತರೆ: 5 (ಬೈ 4, ಲೆಗ್‌ಬೈ 1)
ವಿಕೆಟ್ ಪತನ: 1-67 (ಟಾಮ್ ಲೇಥಮ್, 17.1), 2-142 (ವಿಲ್ ಯಂಗ್, 36.3), 3-154 (ಡೇವೊನ್ ಕಾನ್ವೆ, 39.1)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 10-4-23-0, ಮೊಹಮ್ಮದ್ ಸಿರಾಜ್ 7-1-21-0, ರವಿಚಂದ್ರನ್ ಅಶ್ವಿನ್ 11-1-46-1, ಕುಲದೀಪ್ ಯಾದವ್ 12-1-57-1, ರವೀಂದ್ರ ಜಡೇಜ 10-0-28-1

ಟೆಸ್ಟ್ ಇನಿಂಗ್ಸ್‌ನಲ್ಲಿ ಭಾರತದ ಕನಿಷ್ಠ ಮೊತ್ತ

ಸ್ಕೋರ್	ಓವರ್	ಇನಿಂಗ್ಸ್	ಎದುರಾಳಿ	ತಾಣ	ವರ್ಷ
36	21.2	3	ಆಸ್ಟ್ರೇಲಿಯಾ	ಅಡಿಲೇಡ್	2020
42	17	3	ಇಂಗ್ಲೆಂಡ್	ಲಾರ್ಡ್ಸ್	1974
46	31.2	1	ನ್ಯೂಜಿಲೆಂಡ್	ಬೆಂಗಳೂರು	2024
58	21.3	2	ಆಸ್ಟ್ರೇಲಿಯಾ	ಬ್ರಿಸ್ಟೇನ್	1947
58	21.4	2	ಇಂಗ್ಲೆಂಡ್	ಮ್ಯಾಂಚೆಸ್ಟರ್	1952

ಇನಿಂಗ್ಸ್‌ನಲ್ಲಿ ಸೊನ್ನೆ ಸುತ್ತಿದ ಬ್ಯಾಟರ್‌ಗಳ ಸಂಖ್ಯೆ (ಭಾರತ)

ಬ್ಯಾಟರ್	ಎದುರಾಳಿ	ತಾಣ	ವರ್ಷ	ಇನಿಂಗ್ಸ್
6	ಇಂಗ್ಲೆಂಡ್	ಮ್ಯಾಂಚೆಸ್ಟರ್	2014	1
6	ದಕ್ಷಿಣ ಆಫ್ರಿಕಾ	ಕೇಪ್‌ಟೌನ್	2024	2
5	ಆಸ್ಟ್ರೇಲಿಯಾ	ಅಡಿಲೇಡ್	1948	3
5	ಇಂಗ್ಲೆಂಡ್	ಲೀಡ್ಸ್	1952	3
5	ನ್ಯೂಜಿಲೆಂಡ್	ಮೊಹಾಲಿ	1999	1
5	ನ್ಯೂಜಿಲೆಂಡ್	ಬೆಂಗಳೂರು	2024	1

ಪಂತ್‌ಗೆ ಗಾಯ

ವಿಕೆಟ್‌ಕೀಪಿಂಗ್ ಮಾಡುವ ಸಂದರ್ಭದಲ್ಲಿ ಚೆಂಡು ಬಡಿದು ರಿಷಭ್ ಪಂತ್ ಗಾಯಗೊಂಡರು. 37ನೇ ಓವರ್‌ನಲ್ಲಿ ರವೀಂದ್ರ ಜಡೇಜ ಹಾಕಿದ ಎಸೆತವು ತಿರುವು ಪಡೆದು ಬ್ಯಾಟರ್ ಡೆವೊನ್ ಕಾನ್ವೆ ಅವರನ್ನು ಬೀಟ್ ಮಾಡಿ ಹಿಂದೆ ಸಾಗಿತು. ಅದನ್ನು ಹಿಡಿತಕ್ಕೆ ಪಡೆಯಲು ರಿಷಭ್ ಯತ್ನಿಸಿದರು. ಆದರೆ ಚೆಂಡು ಅವರ ಮೊಣಕಾಲಿಗೆ (ಪ್ಯಾಡ್ ಕವರ್ ಆಗಿರಲಿಲ್ಲ) ಬಡಿಯಿತು.

ಅವರು ಈ ಹಿಂದೆ ರಸ್ತೆ ಅಪಘಾತದಲ್ಲಿ ಗಾಯಗೊಂಡು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಕಾಲಿನ ಭಾಗಕ್ಕೇ ಚೆಂಡು ಬಡಿದಿರುವು ದರಿಂದ ಅಪಾರ ನೋವು ಅನುಭವಿಸಿದರು. ಇದರಿಂದ ಅವರು ನೆಲಕ್ಕೊರಗಿದರು. ಕೂಡಲೇ ಧಾವಿಸಿದ ಫಿಸಿಯೊ ಪ್ರಥಮ ಚಿಕಿತ್ಸೆ ನೀಡಿದರು.

ಆದರೆ ನೋವು ಶಮನವಾಗದ ಕಾರಣ, ಅವರನ್ನು ಡ್ರೆಸಿಂಗ್ ರೂಮ್‌ಗೆ ಕರೆದೊಯ್ಯಲಾಯಿತು. ಅವರು ನೆರವು ಸಿಬ್ಬಂದಿಯ ಆಸರೆಯೊಂದಿಗೆ ಕುಂಟುತ್ತಲೇ ಮೈದಾನ ತೊರೆದರು. ಅವರ ಬದಲಿಗೆ ಧ್ರುವ ಜುರೇಲ್ ಕೀಪಿಂಗ್ ನಿರ್ವಹಿಸಿದರು.

ದಿನದಾಟದ ನಂತರ ಪತ್ರಿಕಾಗೋಷ್ಠಿಯಲ್ಲಿ ರಿಷಭ್ ಗಾಯದ ಕುರಿತು ಮಾಹಿತಿ ನೀಡಿದ ನಾಯಕ ರೋಹಿತ್ ಶರ್ಮಾ, 'ರಿಷಭ್ ಗಾಯಗೊಂಡಿರುವುದು ದುರದೃಷ್ಟಕರ. ಅವರಿಗೆ ವೈದ್ಯಕೀಯ ತಂಡವು ಚಿಕಿತ್ಸೆ ನೀಡುತ್ತಿದೆ. ನಾಳೆ ಬೆಳಿಗ್ಗೆ ಸ್ಥಿತಿ ಪರಿಶೀಲಿಸಿದ ನಂತರ ಅವರು ಕಣಕ್ಕಿಳಿಯುವ ಬಗ್ಗೆ ನಿರ್ಧರಿಸಲಾಗುವುದು' ಎಂದರು.

ದಾಖಲೆ ಮುರಿದ ಗಂಭೀರ್!

ನ್ಯೂಜಿಲೆಂಡ್ ಎದುರಿನ ಟೆಸ್ಟ್‌ನಲ್ಲಿ ಭಾರತ ತಂಡವು 46 ರನ್‌ಗಳಿಗೆ ಆಲೌಟ್ ಆಗುತ್ತಿದ್ದಂತೆಯೇ ಸಾಮಾಜಿಕ ಜಾಲತಾಣಗಳಲ್ಲಿ ಟೀಕೆ, ಟ್ರೋಲ್‌ಗಳ ಮಹಾಪೂರವೇ ಉಕ್ಕಿ ಹರಿಯಿತು. ಅದರಲ್ಲೂ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರನ್ನು ಗುರಿಯಾಗಿಸಿಕೊಂಡ ಮೀಮ್‌ಗಳು, ಸಂದೇಶಗಳು ಹೆಚ್ಚು ಹರಿದಾಡಿದವು.

ಪ್ರಮುಖವಾಗಿ 2017ರ ಐಪಿಎಲ್ ಟೂರ್ನಿಯಲ್ಲಿ ವಿರಾಟ್ ಕೊಹ್ಲಿ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಕೋಲ್ಕತ್ತ ನೈಟ್ ರೈಡರ್ಸ್ ಎದುರು 49 ರನ್‌ಗಳಿಗೆ ಆಲೌಟ್ ಆಗಿದ್ದ ಪಂದ್ಯದ ಕುರಿತಾಗಿತ್ತು. ಗಂಭೀರ್, ಆರ್‌ಸಿಬಿಯ ತವರೂರಿನಲ್ಲಿಯೇ ಆ ದಾಖಲೆ ಮುರಿದರು ಎಂಬ ವ್ಯಂಗ್ಯ ಹರಿದಾಡಿತು. ಈಡನ್ ಗಾರ್ಡನ್‌ನಲ್ಲಿ ನಡೆದಿದ್ದ ಆ ಪಂದ್ಯದಲ್ಲಿ ಕೆಕೆಆರ್ ತಂಡಕ್ಕೆ ಗಂಭೀರ್ ನಾಯಕರಾಗಿದ್ದರು.

ಆಸ್ಟ್ರೇಲಿಯಾ ಮಣಿಸಿ ಸೆಮಿಗೆ ದಕ್ಷಿಣ ಆಫ್ರಿಕಾ

ದುಬೈ (ಎಎಫ್‌ಪಿ): ಆ್ಯನೆಕಿ ಬಾಷ್ ಅವರ ಬಿರುಸಿನ ಅಜೇಯ 74 ರನ್‌ಗಳ (48ಎ, 4x8, 6x1) ನೆರವಿನಿಂದ ದಕ್ಷಿಣ ಆಫ್ರಿಕಾ ತಂಡ ಗುರುವಾರ ಎಂಟು ವಿಕೆಟ್‌ಗಳಿಂದ ಆಸ್ಟ್ರೇಲಿಯಾ ತಂಡವನ್ನು ಸೋಲಿಸಿ ಮಹಿಳೆಯರ ಟಿ20 ವಿಶ್ವಕಪ್ ಫೈನಲ್‌ಗೆ ಲಗ್ಗೆಯಿಟ್ಟಿತು. ಸತತ ಎರಡನೇ ಬಾರಿ ಹರಿಣಗಳ ತಂಡ ಫೈನಲ್ ತಲುಪಿತು.

ಮೊದಲು ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಆಸ್ಟ್ರೇಲಿಯಾ ತಂಡವನ್ನು, ದಕ್ಷಿಣ ಆಫ್ರಿಕಾ ಬೌಲರ್‌ಗಳು 5 ವಿಕೆಟ್‌ಗೆ 134 ರನ್‌ಗಳಿಗೆ ನಿಯಂತ್ರಿಸಿದರು. ಉತ್ತರವಾಗಿ ದಕ್ಷಿಣ ಆಫ್ರಿಕಾ ಇನ್ನೂ 16 ಎಸೆತಗಳಿರುವಂತೆ ನಿರಿಕ್ಷೆಗಿಂತ ಸುಲಭವಾಗಿ (2 ವಿಕೆಟ್‌ಗೆ 135) ಗುರಿತಲುಪಿತು.

ತಾಜ್ಮಿನ್ ಬ್ರಿಟ್ಸ್ (15) ನಿರ್ಗಮನದ ನಂತರ, ಆರಂಭ ಆಟಗಾರ್ತಿ ಲಾರಾ ವೊಲ್ವಾರ್ಟ್ (42, 37ಎ, 4x3, 6x1) ಜೊತೆಗೂಡಿದ ಆ್ಯನೆಕಿ ಎರಡನೆ ವಿಕೆಟ್‌ಗೆ 96 ರನ್ (65 ಎಸೆತ) ಸೇರಿಸಿ ತಂಡವನ್ನು ಗೆಲುವಿನ ಹಾದಿಯಲ್ಲಿ ಮುನ್ನಡೆಸಿದರು.

ಇದಕ್ಕೆ ಮೊದಲು, ಅಯಾಬೊಂಗ ಖಾಕಾ (24ಕ್ಕೆ2) ನೇತೃತ್ವದಲ್ಲಿ ಶಿಸ್ತುಬದ್ಧ ದಾಳಿ ಪ್ರದರ್ಶಿಸಿದ ದಕ್ಷಿಣ ಆಫ್ರಿಕಾ ಬೌಲರ್‌ಗಳು ಪ್ರಬಲ ಆಸ್ಟ್ರೇಲಿಯಾ ತಂಡವನ್ನು ಕಟ್ಟಿಹಾಕಿದ್ದರು. ಬೆತ್ ಮೂನಿ (44, 42ಎ, 4x2) ಮತ್ತು ಪ್ರಭಾರಿ ನಾಯಕಿ ತಹ್ಲಿಯಾ ಮೆಕ್‌ಗ್ರಾತ್ (27, 32ಎ) ಅವರು ಮೂರನೇ ವಿಕೆಟ್‌ಗೆ 55 ಎಸೆತಗಳಲ್ಲಿ 50 ರನ್ ಸೇರಿಸಿ ತಂಡಕ್ಕೆ ಚೇತರಿಕೆ ನೀಡಿದರು.

ತಹ್ಲಿಯಾ ನಿರ್ಗಮನದ ನಂತರ ಎಲಿಸ್ ಪೆರಿ (31, 23ಎ) ರನ್ ವೇಗ ಸ್ವಲ್ಪ ಹೆಚ್ಚಿಸಿದರು.

ಸ್ಕೋರುಗಳು: ಆಸ್ಟ್ರೇಲಿಯಾ: 20 ಓವರುಗಳಲ್ಲಿ 5 ವಿಕೆಟ್‌ಗೆ 134 (ಬೆತ್ ಮೂನಿ 44, ತಹ್ಲಿಯಾ ಮೆಕ್‌ಗ್ರಾತ್ 27, ಎಲಿಸ್ ಪೆರಿ 31, ಫೋಬಿ ಲಿಚ್‌ಫೀಲ್ಡ್ ಔಟಾಗದೇ 16; ಅಯಾಬೊಂಗ ಖಾಕಾ 24ಕ್ಕೆ2); ದಕ್ಷಿಣ ಆಫ್ರಿಕಾ: 17.2 ಓವರುಗಳಲ್ಲಿ 2 ವಿಕೆಟ್‌ಗೆ 135 (ಲಾರಾ ವೊಲ್ವಾರ್ಟ್ 42, ಆ್ಯನೆಕಿ ಬಾಷ್ ಔಟಾಗದೇ 74; ಅನ್ನಾಬೆಲ್ ಸದರ್‌ಲ್ಯಾಂಡ್ 26ಕ್ಕೆ2). ಪಂದ್ಯದ ಆಟಗಾರ್ತಿ: ಆ್ಯನೆಕಿ ಬಾಷ್

ಗೆಲುವಿನ ಸಂಭ್ರಮದಲ್ಲಿ ದಕ್ಷಿಣ ಆಫ್ರಿಕಾ ತಂಡದ ಆ್ಯನೆಕಿ ಬಾಷ್ ಮತ್ತು ಕ್ಲೋಯ್ ಟ್ರಯಾನ್ –ಎಎಫ್‌ಪಿ ಚಿತ್ರ

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2024

ರಣಜಿ ಟ್ರೋಫಿ 'ಸಿ' ಗುಂಪಿನ ಪಂದ್ಯ ಇಂದಿನಿಂದ • ಮಳೆಯಾಟ ಸಾಧ್ಯತೆ

ಮಯಂಕ್ ಪಡೆಗೆ ಕೇರಳ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಧ್ಯಪ್ರದೇಶ ವಿರುದ್ಧ ಈ ಬಾರಿಯ ರಣಜಿ ಟ್ರೋಫಿ ಅಭಿಯಾನ ಆರಂಭಿಸಿರುವ ಕರ್ನಾಟಕ ಮಳೆಯಿಂದಾಗಿ ಅಪೂರ್ಣಗೊಂಡ ಪಂದ್ಯದಲ್ಲಿ ಒಂದು ಪಾಯಿಂಟ್ ಅಷ್ಟೇ ಪಡೆದಿದೆ. ಶುಕ್ರವಾರ ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುವ 'ಸಿ' ಗುಂಪಿನ ಎರಡನೇ ಪಂದ್ಯದಲ್ಲಿ ಕರ್ನಾಟಕ ತಂಡವು ಕೇರಳ ತಂಡವನ್ನು ಎದುರಿಸಲಿದ್ದು, ಮಳೆಯ ಮುನ್ಸೂಚನೆ ಈ ಪಂದ್ಯಕ್ಕೂ ಇದೆ.

ಇಂದೋರ್‌ನಲ್ಲಿ ನಡೆದ ಮೊದಲ ಪಂದ್ಯದಲ್ಲಿ ಮಳೆಯಿಂದಾಗಿ ಮೊದಲ ಇನಿಂಗ್ಸ್ ಪೂರ್ಣ ಗೊಂಡಿರಲಿಲ್ಲ. ಎರಡನೇ ದಿನ ಆಟವೇ ನಡೆದಿರಲಿಲ್ಲ. ಮಂದಬೆಳಕು, ತೇವಗೊಂಡಿದ್ದ ಪಿಚ್‌ನಿಂದವೂ ಸಾಕಷ್ಟು ಅವಧಿ ನಷ್ಟವಾಗಿತ್ತು. ಬೆಂಗಳೂರಿನಲ್ಲಿ ಗುರುವಾರ ಬಿಸಿಲು ಕಾಣಿಸಿದ್ದು, ತಂಡ ಸ್ವಲ್ಪ ನಿಟ್ಟುಸಿರುಬಿಡುವಂತೆ ಮಾಡಿದೆ.

ಬುಧವಾರ, ಆಲೂರಿನ ಕ್ರೀಡಾಂಗಣದ ಹೊರಾಂಗಣ ಮತ್ತು ಪ್ರಾಕ್ಟೀಸ್ ಪಿಚ್‌ಗಳು ತೇವಗೊಂಡಿದ್ದವು. 'ಆಡುವ ಪಿಚ್ ಸುಸ್ಥಿತಿಯಲ್ಲಿದೆ. ಆದರೆ ಔಟ್‌ಫೀಲ್ಡ್‌ನ ಕೆಲಭಾಗ ತೇವಗೊಂಡಿದೆ. ಬಿಸಿಲು ಬಿದ್ದು ಪಂದ್ಯ ಸಕಾಲಕ್ಕೆ ಆರಂಭವಾಗಬಹುದೆಂಬ ವಿಶ್ವಾಸದಲ್ಲಿದ್ದೇವೆ' ಎಂದು ಕರ್ನಾಟಕ ತಂಡದ ಕೋಚ್ ಯರೇ ಗೌಡ 'ಪ್ರಜಾವಾಣಿ'ಗೆ ತಿಳಿಸಿದರು.



ಮಯಂಕ್

ಇನ್ನೊಂದು ಕಡೆ ಕೇರಳ, ತಿರುವಂತಪುರ ಸಮೀಪದ ತುಂಬಾದಲ್ಲಿ ನಡೆದ ಮೊದಲ ಪಂದ್ಯದಲ್ಲಿ ಪಂಜಾಬ್ ತಂಡವನ್ನು ಎಂಟು ವಿಕೆಟ್‌ಗಳಿಂದ ಸೋಲಿಸಿ ಉತ್ತಮ ಆರಂಭ ಮಾಡಿದೆ. ಅನುಭವಿ ವೇಗದ ಬೌಲರ್ ಪ್ರಸಿದ್ಧ ಕೃಷ್ಣ ಅವರು ಭಾರತ ತಂಡದ ಮೀಸಲು ಆಟಗಾರ ರಾಗಿದ್ದು, ಈ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ. ವಿದ್ವತ್ ಕಾವೇರಪ್ಪ ಅವರೂ ಗಾಯಾಳಾಗಿ ಕೆಲವು ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ. ಹೀಗಾಗಿ ತಂಡವು ಬೌಲಿಂಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಲು ಶ್ರಮ ಹಾಕಬೇಕಾಗಿದೆ.

ಮಧ್ಯಪ್ರದೇಶ ವಿರುದ್ಧ ಬೌಲರ್‌ಗಳೂ ಪರಿಣಾಮ-ಕಾರಿಯಾಗಿರಲಿಲ್ಲ. ಇದರಿಂದ ಆತಿಥೇಯರು 3 ವಿಕೆಟ್ ಬೇಗನೇ ಕಳೆದುಕೊಂಡರೂ ಚೇತರಿಸಿಕೊಡು 425 ರನ್‌ಗಳ (8 ವಿಕೆಟ್‌ಗೆ ಡಿಕ್ಲೇರ್) ದೊಡ್ಡಮೊತ್ತ ಗಳಿಸಲು ಸಾಧ್ಯವಾಯಿತು.

ಮೊದಲ ಪಂದ್ಯದಲ್ಲಿ ನಾಯಕ ಮಯಂಕ್ ಅಗರವಾಲ್, ಉಪನಾಯಕ ಮನೀಷ್ ಪಾಂಡೆ ಮತ್ತು ದೇವದತ್ತ ಪಡಿಕ್ಕಲ್ ಬೇಗ ನಿರ್ಗಮಿಸಿದ್ದರು. ಆರಂಭ ಆಟಗಾರನಾಗಿ ಬಡ್ತಿ ಪಡೆದ ನಿಕಿನ್ ಜೋಸ್ (99) ಮತ್ತು ಆಲ್‌ರೌಂಡರ್ ಶ್ರೇಯಸ್ ಗೋಪಾಲ್ (60) ಕುಸಿತ ತಡೆದಿದ್ದರು.

ಇನ್ನೊಂದೆಡೆ ಸಚಿನ್ ಬೇಬಿ ಸಾರಥ್ಯದ ಕೇರಳ ತಂಡಕ್ಕೆ ಭಾರತ ತಂಡದ ಆಟಗಾರ ಸಂಜು ಸ್ಯಾಮ್ಸನ್ ಸೇರ್ಪಡೆಯಿಂದ ಬಲವರ್ಧಿಸಲಿದೆ. ಹೈದರಾಬಾದಿ-ನಲ್ಲಿ ಇತ್ತೀಚೆಗಷ್ಟೆ ಬಾಂಗ್ಲಾ ವಿರುದ್ಧ ಟಿ20 ಪಂದ್ಯದಲ್ಲಿ ಮಿಂಚಿನ ಶತಕ ಬಾರಿಸಿದ್ದ ಸಂಜು, ಈ ಬಾರಿ ದುಲೀಪ್ ಟ್ರೋಫಿಯಲ್ಲೂ ಗಮನಾರ್ಹ ಆಟವಾಡಿದ್ದಾರೆ.

ವಿದರ್ಭ ತಂಡದಿಂದ ವಲಸೆ ಬಂದಿರುವ ಆದಿತ್ಯ ಸರ್ವಟೆ, ಪಂಜಾಬ್ ವಿರುದ್ಧದ ಪಂದ್ಯದಲ್ಲಿ 9 ವಿಕೆಟ್ ಪಡೆದು ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಮಧ್ಯಪ್ರದೇಶದಿಂದ ಕೆಲ ವರ್ಷಗಳ ಹಿಂದೆ ವಲಸೆ ಬಂದ ಆಲ್‌ರೌಂಡರ್ ಜಲಜ್ ಸಕ್ಸೆನಾ, ತಮಿಳುನಾಡಿನಿಂದ ಈ ವರ್ಷ ಸೇರ್ಪಡೆಯಾಗಿರುವ ಆಲ್‌ರೌಂಡರ್ ಬಾಬಾ ಅಪರಾಜಿತ್ ಜೊತೆ ಸರ್ವಟೆ ಸೇರಿ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಪಂದ್ಯ ಆರಂಭ: ಬೆಳಿಗ್ಗೆ 9.30

ಪ್ರೊ ಕಬಡ್ಡಿ ಲೀಗ್ ಇಂದಿನಿಂದ: ಬುಲ್ಸ್‌ಗೆ ತೆಲುಗು ಟೈಟನ್ಸ್ ಎದುರಾಳಿ

ಮುತ್ತಿನ ನಗರಿಯಲ್ಲಿ 'ದಕ್ಷಿಣ ಡರ್ಬಿ'

• ಬಸವರಾಜ ದಳವಾಯಿ

ಹೈದರಾಬಾದ್: 'ಡುಬ್ಕಿ ಕಿಂಗ್' ಪ್ರದೀಪ್ ನರ್ವಾಲ್ ಸಾರಥ್ಯದಲ್ಲಿ ಹೊಸ ಹುರುಪಿ-ನಲ್ಲಿರುವ ಬೆಂಗಳೂರು ಬುಲ್ಸ್ ತಂಡವು ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ ಶುಭಾರಂಭದ ನಿರೀಕ್ಷೆಯಲ್ಲಿದೆ. ಇಲ್ಲಿಯ ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣ ದಲ್ಲಿ ಶುಕ್ರವಾರದಿಂದ ನಡೆಯುವ 11ನೇ ಆವೃತ್ತಿಯ ಲೀಗ್, ಕಬಡ್ಡಿ ಪ್ರಿಯರಿಗೆ ರಸದೌತಣ ಉಣಬಡಿಸಲಿದೆ.

ಒಟ್ಟು ಮೂರು ನಗರಗಳಲ್ಲಿ ಲೀಗ್ ಹಂತದ 132 ಪಂದ್ಯಗಳು ಆಯೋಜನೆ ಯಾಗಿವೆ. ಮೊದಲ ಲೆಗ್ ಪಂದ್ಯಗಳು ಇಲ್ಲಿ ಅಕ್ಟೋಬರ್ 18ರಿಂದ ನವೆಂಬರ್ 9ರವರೆಗೆ ನಡೆಯಲಿವೆ. ಎರಡನೇ ಲೆಗ್ ನೊಯ್ಡಾದಲ್ಲಿ ನವೆಂಬರ್ 10ರಿಂದ ಡಿಸೆಂಬರ್ 1ರವರೆಗೆ ನಡೆಯಲಿವೆ. ಮೂರನೇ ಲೆಗ್, ಡಿಸೆಂಬರ್ 3ರಿಂದ 24ರವರೆಗೆ ಪುಣೆಯ ಬಾಲೆವಾಡಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ನಿಗದಿಯಾಗಿದೆ. ಪ್ಲೇ ಆಫ್ ಪಂದ್ಯಗಳ ವೇಳಾಪಟ್ಟಿ ಇನ್ನೂ ಪ್ರಕಟವಾಗಿಲ್ಲ.

ಮಶಾಲ್ ಸ್ಪೋರ್ಟ್ಸ್ ಆಯೋಜಕತ್ವ ದಲ್ಲಿ ರೌಂಡ್ ರಾಬಿನ್ ಮಾದರಿಯಲ್ಲಿ ನಡೆಯುವ ಟೂರ್ನಿಯಲ್ಲಿ 12 ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ. ಲೀಗ್ ಹಂತ 'ಡಬಲ್ ಹೆಡರ್' (ದಿನಕ್ಕೆ ಎರಡು ಪಂದ್ಯ) ಆಗಿರಲಿದೆ.

ಟೈಟನ್ಸ್ ಸವಾಲು: ಮೊದಲ ಹಣಾಹಣಿಯಲ್ಲಿ ಬುಲ್ಸ್ ತಂಡಕ್ಕೆ ತೆಲುಗು ಟೈಟನ್ಸ್ ಎದುರಾಳಿಯಾಗಿದೆ.

ಟೂರ್ನಿಯ ಎರಡನೇ ಆವೃತ್ತಿಯಲ್ಲಿ ಬೆಂಗಳೂರು ಬುಲ್ಸ್ ಮೂಲಕವೇ ಪ್ರೊ ಕಬಡ್ಡಿಗೆ ಪದಾರ್ಪಣೆ ಮಾಡಿದ್ದ ರೈಡರ್ ಪ್ರದೀಪ್ ನರ್ವಾಲ್ ಈ ಬಾರಿ ತಂಡಕ್ಕೆ ಟ್ರೋಫಿ ಗೆಲ್ಲಿಸಿಕೊಡುವ ಭರವಸೆಯಲ್ಲಿ-ದ್ದಾರೆ. ರೈಡಿಂಗ್‌ನಲ್ಲಿ ಅವರಿಗೆ ಅಜಿಂಕ್ಯ ಪವಾರ್, ಸುಶೀಲ್, ಜತಿನ್ ಹಾಗೂ ಜೈಭಗವಾನ್ ಸಾಥ್ ನೀಡಲಿದ್ದಾರೆ.

ಹೈದರಾಬಾದ್‌ನಲ್ಲಿ ಗುರುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದ ಪ್ರೊ ಕಬಡ್ಡಿ ಲೀಗ್‌ನ 12 ತಂಡಗಳ ನಾಯಕರು. (ಮುಂದಿನ ಸಾಲು) ಎಡದಿಂದ ಜೈದೀಪ್ ದಹಿಯಾ (ಹರಿಯಾಣ ಸ್ಟೀಲರ್ಸ್), ಅಸ್ಲಂ ಇನಾಂದಾರ್ (ಪುಣೇರಿ ಪಲ್ಟನ್), ನೀರಜ್ (ಗುಜರಾತ್ ಜೈಂಟ್ಸ್), ಅರ್ಜುನ್ ದೇಸ್ವಾಲ್ (ಜೈಪುರ ಪಿಂಕ್ ಪ್ಯಾಂಥರ್ಸ್), ಸಾಗರ್ (ತಮಿಳ್ ತಲೈವಾಸ್), ಫಜಲ್ ಅತ್ರಾಚಲಿ (ಬೆಂಗಾಲ್ ವಾರಿಯರ್ಸ್). (ಹಿಂದಿನ ಸಾಲು) ಶುಭಂ ಶಿಂಧೆ (ಪಟ್ನಾ ಪೈರೇಟ್ಸ್), ಸುನಿಲ್ ಕುಮಾರ್ (ಯು ಮುಂಬಾ), ಪ್ರದೀಪ್ ನರ್ವಾಲ್ (ಬೆಂಗಳೂರು ಬುಲ್ಸ್), ಪವನ್ ಸೆಹ್ರಾವತ್ (ತೆಲುಗು ಟೈಟನ್ಸ್), ಸುರೇಂದರ್ ಗಿಲ್ (ಯುಪಿ ಯೋಧಾಸ್), ನವೀನ್ ಕುಮಾರ್ (ದಬಾಂಗ್ ಡೆಲ್ಲಿ)

ನಾಯಕರ ಬಲಾಬಲ

ಪ್ರದೀಪ್ ನರ್ವಾಲ್	ಬೆಂಗಳೂರು ಬುಲ್ಸ್
ಒಟ್ಟು ಯಶಸ್ವಿ ರೈಡ್	1,279
ಒಟ್ಟು ರೇಡ್ ಪಾಯಿಂಟ್ಸ್	1,690
ಪವನ್ ಸೆಹ್ರಾವತ್	ತೆಲುಗು ಟೈಟನ್ಸ್
ಒಟ್ಟು ಯಶಸ್ವಿ ರೈಡ್	921
ಒಟ್ಟು ರೇಡ್ ಪಾಯಿಂಟ್ಸ್	1,189

ಇಂದಿನ ಪಂದ್ಯ

Vs ಬೆಂಗಳೂರು ಬುಲ್ಸ್ – ತೆಲುಗು ಟೈಟನ್ಸ್ – ರಾತ್ರಿ 8.00 ರಿಂದ

Vs ದಬಾಂಗ್ ಡೆಲ್ಲಿ – ಯು ಮುಂಬಾ – ರಾತ್ರಿ 9.00 ರಿಂದ

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್

ರಕ್ಷಣಾ ವಿಭಾಗದಲ್ಲಿ ಸೌರಭ್ ನಂದಾಲ್ ಬುಲ್ಸ್ ತಂಡದ ದೊಡ್ಡ ಬಲ. ಆದಿತ್ಯ ಪವಾರ್ ಕೂಡ ಎದುರಾಳಿ ರೈಡರ್‌ಗಳನ್ನು ಕಟ್ಟಿಹಾಕುವ ಸಾಮರ್ಥ್ಯ ಉಳ್ಳವರು. ಟೂರ್ನಿಯ ಆರನೇ ಆವೃತ್ತಿಯಲ್ಲಿ ಚಾಂಪಿಯನ್ ಆಗಿದ್ದ ಬೆಂಗಳೂರು ಮತ್ತೊಮ್ಮೆ ಟ್ರೋಫಿಗೆ ಮುತ್ತಿಕ್ಕುವ ಕಾತುರದಲ್ಲಿದೆ. ಅನುಭವಿ ಕೋಚ್ ರಣಧೀರ್ ಸಿಂಗ್ ತರಬೇತಿಯೂ ತಂಡದ ನೆರವಿಗಿದೆ.

ತೆಲುಗು ಟೈಟನ್ಸ್ ಕೂಡ ಎದುರಾಳಿಗೆ ಕಠಿಣ ಸವಾಲು ಒಡ್ಡುವ ಸಾಧ್ಯತೆಯಿದೆ. ಈ ಹಿಂದೆ ಬುಲ್ಸ್ ತಂಡದಲ್ಲಿ ಆಡಿದ್ದ ಸ್ಟಾರ್ ರೈಡರ್ ಪವನ್ ಸೆಹ್ರಾವತ್ ಈ ಬಾರಿ ಟೈಟನ್ಸ್ ತಂಡವನ್ನು ಮುನ್ನಡೆಸು-ತ್ತಿದ್ದಾರೆ. ಮಂಜೀತ್, ಚೇತನ್ ಸಾಹು, ಓಂಕಾರ್ ಪಾಟೀಲ್, ಆಶಿಶ್ ನರ್ವಾಲ್ ಪ್ರಮುಖ ರೈಡರ್‌ಗಳು. ರಕ್ಷಣಾ ವಿಭಾಗದಲ್ಲಿ ಇರಾನ್‌ನ ಮೊಹಮ್ಮದ್ ಮಲಕ್, ಅಂಕಿತ್, ಕೃಷ್ಣನ್ ಬಲ ತಂಡಕ್ಕಿದೆ. ಆ ತಂಡವು ಚೊಚ್ಚಲ ಟ್ರೋಫಿಯ ನಿರೀಕ್ಷೆಯಲ್ಲಿದೆ.

ದಿನದ ಇನ್ನೊಂದು ಪಂದ್ಯದಲ್ಲಿ ದಬಾಂಗ್ ಡೆಲ್ಲಿ– ಯು ಮುಂಬಾ ಮುಖಾಮುಖಿಯಾಗಲಿವೆ.

ಸಂಕ್ಷಿಪ್ತ ಸುದ್ದಿ

ಭಾರತಕ್ಕೆ ಮಣಿದ ಪಾಕ್

ಕಠ್ಮಂಡು (ಪಿಟಿಐ): ಭಾರತ ತಂಡ, ಸ್ಯಾಫ್ ಮಹಿಳೆಯರ ಫುಟ್‌ಬಾಲ್ ಚಾಂಪಿಯನ್‌ಷಿಪ್ 'ಎ' ಗುಂಪಿನ ಪಂದ್ಯದಲ್ಲಿ ಗುರುವಾರ ಪಾಕಿಸ್ತಾನ ತಂಡವನ್ನು 5–2 ಗೋಲುಗಳಿಂದ ಸೋಲಿಸಿ ತನ್ನ ಅಭಿಯಾನವನ್ನು ಭರ್ಜರಿಯಾಗಿ ಆರಂಭಿಸಿತು.

ದಶರಥ ಕ್ರೀಡಾಂಗಣದಲ್ಲಿ ಸಾಂಪ್ರದಾಯಿಕ ಎದುರಾಳಿಗಳ ನಡುವೆ ನಡೆದ ಪಂದ್ಯದಲ್ಲಿ ಐದು ಬಾರಿಯ ಚಾಂಪಿಯನ್ ತಂಡ ವಿರಾಮದ ವೇಳೆಗೆ 4–1 ಗೋಲುಗಳಿಂದ ಮುಂದಿತ್ತು. ಗ್ರೇಸ್ ಡಾಂಗ್‌ಮೀ (ಎರಡು ಗೋಲು), ಮನಿಷಾ, ಬಾಲಾ ದೇವಿ, ಜ್ಯೋತಿ ಚೌಹಾನ್ ಭಾರತ ಪರ ಗೋಲು ಗಳಿಸಿದರು. ಸುಹಾ ಹಿರಾನಿ ಮತ್ತು ಕಯ್ಲಾ ಮೇರಿ ಸಿದ್ದೀಖ್ ಪಾಕ್ ಪರ ಚೆಂಡನ್ನು ಗುರಿ ತಲುಪಿಸಿದರು.

ಭಾರತ ತಂಡದ ಆಟಗಾರ್ತಿ ಆಶಾಲತಾ ದೇವಿ ಅವರಿಗೆ ಇದು ನೂರನೇ ಪಂದ್ಯವೆನಿಸಿತು. ಗಂಗೊಮ್ ಬಾಲಾ ದೇವಿ ಅವರು ಅಂತರರಾಷ್ಟ್ರೀಯ ಪಂದ್ಯಗಳಲ್ಲಿ 50 ಗೋಲುಗಳನ್ನು ಪೂರೈಸಿದರು.

ಗಂಗೂಲಿ ನೇಮಕ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಸೌರವ್ ಗಂಗೂಲಿ ಅವರನ್ನು ಜೆಎಸ್‌ಡಬ್ಲ್ಯು ಸ್ಪೋರ್ಟ್ಸ್‌ನ ಕ್ರಿಕೆಟ್ ನಿರ್ದೇಶಕರಾಗಿ ಗುರುವಾರ ನೇಮಕ ಮಾಡಲಾಗಿದೆ.

ಐಪಿಎಲ್ ಮತ್ತು ಡಬ್ಲ್ಯುಪಿಎಲ್ ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡಗಳ ಜೊತೆ ದಕ್ಷಿಣ ಆಫ್ರಿಕಾದ ಎಸ್‌ಎ20 ಫ್ರಾಂಚೈಸಿಯಾದ ಪ್ರಿಟೋರಿಯಾ ಕ್ಯಾಪಿಟಲ್ಸ್ ಫ್ರಾಂಚೈಸಿ ಈ ಜೆಎಸ್‌ಡಬ್ಲ್ಯು ಸ್ಪೋರ್ಟ್ಸ್ ವ್ಯಾಪ್ತಿಯಲ್ಲಿದೆ. ಇವುಗಳ ಮೇಲ್ವಿಚಾರಣೆಯ ಪಾತ್ರವನ್ನು ಗಂಗೂಲಿ ವಹಿಸಲಿದ್ದಾರೆ.

ಕ್ವಾರ್ಟರ್‌ಗೆ ಸಿಂಧು

ಒಡೆನ್ಸ್ (ಪಿಟಿಐ): ಹಿನ್ನಡೆಯಿಂದ ಚೇತರಿಸಿಕೊಂಡ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು, ವಿಶ್ವದ ಏಳನೇ ಕ್ರಮಾಂಕದ ಆಟಗಾರ್ತಿ ಹಾನ್ ಹ್ಯು ಮೇಲೆ ಜಯಗಳಿಸಿ ಡೆನ್ಮಾರ್ಕ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್‌ಫೈನಲ್‌ಗೆ ಮುನ್ನಡೆದರು.

ಗುರುವಾರ ನಡೆದ ಎರಡನೇ ಸುತ್ತಿನ ಪಂದ್ಯದಲ್ಲಿ 18ನೇ ಕ್ರಮಾಂಕದ ಸಿಂಧು 18–21, 21–12, 21–16 ರಿಂದ ಮಾಜಿ ವಿಶ್ವ ಚಾಂಪಿಯನ್ ಹಾನ್ ಹ್ಯು ಅವರನ್ನು ಹಿಮ್ಮೆಟ್ಟಿಸಿದರು. ಪಂದ್ಯ 63 ನಿಮಿಷ ನಡೆಯಿತು.

ಈ ಟೂರ್ನಿಯಲ್ಲಿ ಸಿಂಧು ಅವರನ್ನು ಬಿಟ್ಟರೆ ಸಿಂಗಲ್ಸ್, ಡಬಲ್ಸ್‌ನಲ್ಲಿ ಭಾರತದ ಉಳಿದ ಸ್ಪರ್ಧಿಗಳು ಹೊರ-ಬಿದ್ದಿದ್ದಾರೆ.

EXCLUSIVE LINEN CLUB SHOWROOM

Maharaja Signal, Koramangala Ph: 080-68319495 I 100 Feet Rd., Indiranagar Ph: 080-41121392 I Banashankari Ph: 8048520789 I Kodigehalli Main Road, Ph: 9686766505 I Jayanagar 5th Block, Ph: 080-42058308 I J P Nagar 3rd Phase, Ph: 080-42126230 I Kalyan Nagar, Ph: 080-49795533 I Magadi Main road, Byadarahalli, Ph: 080-29916591 I MG Road, Near Joyalukas Ph: 080-41475443 I Malleswaram, Ph: 080-23566677 I Nagarbhavi 2nd Stage, Ph: 080-29912343 I Basaveshwar Nagar, Ph: 080-41573683 I B.V.K. Iyengar Road, Ph: 080-40993705 I KR Puram, Ph: 9606200369 I Kodathi Gate, Sarjapura Road Ph: 9108565471

LINEN FABRICS I LINEN ETHNIC WEAR I LINEN SHIRTS I LINEN TROUSERS I LINEN JACKETS I BESPOKE TAILORING

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) - 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9342432157; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **MALLESHWARAM:** 8971887792; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com